ಮಂಗಳೂರು

ಶನಿವಾರ, 9 ಮೇ 2026

ಸಂಪುಟ 48, ಸಂಚಿಕೆ 51, ಪುಟಗಳು 16+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಿಎಸ್‌ವೈಗೆ ಅದ್ದೂರಿ ಸ್ವಾಗತ

ಕೋಟೆನಾಡಿನಲ್ಲಿ ಇಂದು ಯಡಿಯೂರಪ್ಪ ಅಭಿಮಾನೋತ್ಸವ

• ಪುಟ ೨

ಕಿರುಸುದ್ದಿ

ಪಡುಮಲೆಯಲ್ಲಿ ಇಂದು ಪ್ರಶ್ನಾ ಚಿಂತನೆ

ಪುತ್ತೂರು: ಪಡುಮಲೆಯ 'ಪಿರಾಜೆ'ಯ ಪುಣ್ಯ ಮಣ್ಣಿನಲ್ಲಿ ಶ್ರೀ ಆದಿನಾಗಬ್ರಹ್ಮ ಮೊಗೇರ್ಕಳ ಸಾಂಸ್ಕೃತಿಕ ಅಧ್ಯಯನ ಟ್ರಸ್ಟ್ ಮತ್ತು ಕೋಟಿ–ಚೆನ್ನಯ ಜನ್ಮಸ್ಥಳ ಮೂಲಸ್ಥಾನ ಟ್ರಸ್ಟ್ ಪಡುಮಲೆ ಇವರ ಸಹಭಾಗಿತ್ವದಲ್ಲಿ ದೇಯಿ ಬೈದೇದಿ ಮೂಲಸ್ಥಾನ ಹಾಗೂ ನಾಗ ಬೆರ್ಮೆರ ಮೂಲ ಸ್ಥಾನ ಪಡುಮಲೆಯಲ್ಲಿ ಮೇ 9ರಂದು ಪ್ರಶ್ನಾ ಚಿಂತನೆಯನ್ನು ಹಮ್ಮಿಕೊಳ್ಳಲಾಗಿದೆ. ಪುತ್ತೂರು ತಾಲೂಕು ನಿಡ್ಪಳ್ಳಿ ಗ್ರಾಮದ ಕೆಂಪು ಕೇಪುಲಾಜೆ ನಾಗಬ್ರಹ್ಮ ದೇವಸ್ಥಾನ ಮತ್ತು ಮೊಗೇರ್ಕಳ ದೈವಸ್ಥಾನ ನಿರ್ಮಾಣದ ಕೆಲಸ ವನ್ನು ಈಗಾಗಲೇ ಪ್ರಶ್ನಾ ಚಿಂತನೆಯಲ್ಲಿ ದೈವಜ್ಞ ರು ತಿಳಿಸಿದಂತೆ ನಡೆಸಿ ಆರು ಜಿಲ್ಲೆಗಳ ಮೊಗೇರ ಬಾಂಧವರ ಸಹಕಾರ ದೊಂದಿಗೆ ನಿರ್ಮಾಣದ ಕಾರ್ಯ ನಡೆಯುತ್ತಿದೆ. ಇದೇ ಸಂದರ್ಭ ದೈವ ಸಂಕಲ್ಪದಂತೆ ಈ ಮೊದಲು ಸ್ವರ್ಣ ಪ್ರಶ್ನಾ ಚಿಂತನೆಗೆ ತೊಡಗುವ ಸಂದರ್ಭದಲ್ಲಿ ಬ್ರಹ್ಮರ ಗುಂಡ ಸ್ಥಳಕ್ಕೆ ಸಂಬಂಧಿಸಿದಂತೆ ಪೂರ್ವ ಭಾಗದಲ್ಲಿ ಮುದ್ದ– ಕಳಲರನ್ನು ಚಿತೆಗೆ ಅರ್ಪಿಸಿದ (ಸಮಾಧಿ ಇರುವ) ಒಂದು ಜಾಗದ ಬಗ್ಗೆ ಉಲ್ಲೇಖಿಸಲಾಗಿತ್ತು. ದೈವಜ್ಞರು ತಿಳಿಸಿದ ಲಕ್ಷಣಗಳ ಪ್ರಕಾರ ಮುಂದೆ ಒಂದು ದಿನ ಆ ಜಾಗದ ವಿಶೇಷತೆ ವೈಶಿಷ್ಟಗಳು ಪ್ರಶ್ನಾ ಚಿಂತನೆಯ ಪ್ರಕಾರ ತಿಳಿಯಬೇಕಾದ ಅವಶ್ಯಕತೆ ಇದೆ ಎಂದು ತಿಳಿದು ಬಂದಿರುವುದರಿಂದ ಈ ಪ್ರಶ್ನಾ ಚಿಂತನೆ ಇರಿಸಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾದಕ ವಸ್ತು ಸೇವನೆ: ಆರೋಪಿ ಸೆರೆ

ಮಂಗಳೂರು: ಪಾಂಡೇಶ್ವರ ಠಾಣಾ ವ್ಯಾಪ್ತಿಯ ಗೋರಿಗುಡ್ಡೆ ಪರಿಸರದಲ್ಲಿ ಮಾದಕ ವಸ್ತು ಸೇವನೆ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಗೋರಿಗುಡ್ಡೆ ನಿವಾಸಿ ಸುನೀಲ್ (33) ಎಂದು ಗುರುತಿಸಲಾಗಿದೆ. ಪೊಲೀಸರು ಮಾದಕ ವಸ್ತು ಸೇವನೆಯ ನಶೆಯಲ್ಲಿದ್ದ ಆತನನ್ನು ವಿಚಾರಣೆಗೆ ಒಳ ಪಡಿಸಿದಾಗ, ಆತನ ಮಾತುಗಳು ತೊದಲುತ್ತಿದ್ದು, ಬಾಯಿಯಿಂದ ಅಮಲು ಪದಾರ್ಥ ಸೇವನೆ ಮಾಡಿದ ವಾಸನೆ ಬಂದಿದೆ. ಬಳಿಕ ಆತ ಮಾದಕ ವಸ್ತು ಸೇವನೆ ಮಾಡಿರುವ ಬಗ್ಗೆ ಒಪ್ಪಿಕೊಂಡಿದ್ದಾನೆ. ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ದೃಢಪಟ್ಟಿದೆ. ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕರಾವಳಿಯ ಪ್ರಸಿದ್ಧ ಗೃಹೋದ್ಯಮಿಗಳು ಒಂದೆಡೆ ಸೇರಿದ್ದಾರೆ. ತಮ್ಮ ಕೈ ರುಚಿಯ ತಿನಿಸುಗಳನ್ನು ಇಲ್ಲಿ ಗ್ರಾಹಕರಿಗಾಗಿ ನೀಡುತ್ತಿದ್ದಾರೆ. ಹಲಸಿನ ಹಣ್ಣಿನ ಸೋಳ್ಪಿ, ಜಾಮ್, ಉಪ್ಪಿನಕಾಯಿ, ಮಾವಿನ ಹಣ್ಣಿನ ಸ್ವೀಟ್, ಉಪ್ಪಿನಕಾಯಿ, ಹುಣಸೆಹುಳಿ ಚಟ್ನಿ ಸೇರಿದಂತೆ ಹತ್ತಾರು ಬಗೆಯ ತಿಂಡಿ ತಿನಿಸುಗಳು ಲಭ್ಯವಿವೆ. ಕೇರಳದಿಂದ ಹಲಸಿನ 70 ಖಾದ್ಯಗಳು ಮೇಳದ ವಿಶೇಷ ಆಕರ್ಷಣೆಯಾಗಿದೆ. ಬೃಹತ್ ಫಲಭರಿತ ಮಾವು ಮೇಳದ ಆಕರ್ಷಣೆಯನ್ನು ಇಮ್ಮಡಿಗೊಳಿಸಿವೆ.

ಮೂಡುಬಿದಿರೆ ವಿದ್ಯಾಗಿರಿಯ ಕೃಷಿ ಸಿರಿ ವೇದಿಕೆಯಲ್ಲಿ ಕರಾವಳಿಯ ಗೃಹೋದ್ಯಮಿಗಳ ಸಂಗಮ

ಹಪ್ಪಳ, ಉಪ್ಪಿನಕಾಯಿ, ಕಡುಬು, ಅತಿರಸ

ಹರೀಶ್ ಕೆ.ಆದೂರು

ದಿಗಂತ ವಿಶೇಷ



ಕರಾವಳಿ ಭಾಗದ ಹವ್ಯಕ ಬ್ರಾಹ್ಮಣ ಶೈಲಿಯ ಹಲಸಿನ ಸೊಳೆಯ ಉಂಡಲಕಾಳು, ಹಲಸಿನ ಹಪ್ಪಳ, ಅಕ್ಕಿ ಬೆಲ್ಲದ ಅತಿರಸ, ಅಪ್ಪೆಮಿಡಿ ಉಪ್ಪಿನಕಾಯಿ, ಮರಗೆಣಸಿನ ಹಪ್ಪಳ, ಬಾಯಲ್ಲಿ ನೀರೂರಿಸುವ ಹಲಸಿನ ಹಣ್ಣಿನ ಕಡುಬು, ಕೊಟ್ಟಿಗೆ, ಕ್ಷೀರ, ಜಾಮ್, ಸೋಳ್ಪಿ ಹೀಗೆ ವೈವಿಧ್ಯಮಯ ಖಾದ್ಯಗಳು, ಹಲಸಿನ ಉತ್ಪನ್ನಗಳು, ಮಾವಿನ ಸಿಹಿಗಳು... ಸಂಪೂರ್ಣ ಸಾವಯವ ಉತ್ಪನ್ನಗಳು, ಬೆಲ್ಲದ ಸಿಹಿ ತಿನಿಸುಗಳು...

ಇವೆಲ್ಲವೂ ಒಂದೇ ಸೂರಿನಡಿಯಲ್ಲಿ ಗ್ರಾಹಕರಿಗೆ ಮೂರು ದಿನಗಳ ಕಾಲ ಲಭ್ಯವಾಗುತ್ತಿದೆ. ಈಗಾಗಲೇ ಮೂಡುಬಿದರೆಯೂ ಸೇರಿದಂತೆ ದೂರದೂರುಗಳಿಂದ ಗ್ರಾಹಕರು ಹಿಂಡು ಹಿಂಡಾಗಿ ಬಂದು ಖರೀದಿಯಲ್ಲಿ ಮುಗಿಬೀಳುತ್ತಿದ್ದಾರೆ. ಆತ್ಮಪರೂಪದ ಹಲಸಿನ ತಳಿಗಳು, ಘಮ ಘಮಿಸುವ ಹಲಸಿನ ಹಣ್ಣುಗಳು, ಬಾಯಲ್ಲಿ ನೀರೂರಿಸುವ ಖಾದ್ಯಗಳು, ರಸಭರಿತ ಮಾವಿನ ಹಣ್ಣುಗಳು ಮೇಳದ ಮುಖ್ಯ ಆಕರ್ಷಣೆಯಾಗಿವೆ.

ಭಾನುವಾರದ ತನಕ ಮೇಳ

ಮೂಡುಬಿದಿರೆಯ ವಿದ್ಯಾಗಿರಿಯಲ್ಲಿರುವ ಕೃಷಿ ಸಿರಿ ವೇದಿಕೆಯಲ್ಲಿ ಬೃಹತ್ ಹಲಸು ಮೇಳ ಆರಂಭಗೊಂಡಿದೆ. ಭಾನುವಾರದ ತನಕ ಮೇಳ ನಡೆಯಲಿದೆ. ಹಲವು ವರುಷಗಳಿಂದ ಆಳ್ವಾಸ್ ಸಮೂಹ ಸಂಸ್ಥೆ ಆಯೋಜಿಸುವ ಹಲಸು ಮೇಳದಲ್ಲಿ ಭಾಗವಹಿಸಲು ಯುವ ಉದ್ಯಮಿಗಳು, ಗ್ರಾಹಕರು ಮುಗಿಬೀಳುತ್ತಿದ್ದಾರೆ. ಸುಮಾರು ಎಂಭತ್ತು ವೈವಿಧ್ಯಮಯ ಮಳಿಗೆಗಳು ಈಗಾಗಲೇ ಕಾರ್ಯಾರಂಭಗೊಂಡಿವೆ. ಎಲ್ಲ ಮಳಿಗೆಗಳಿಗೂ ಉತ್ತಮ ಬೇಡಿಕೆ. ಹಲಸು, ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳು ಸೇರಿದಂತೆ ಗೃಹೋತ್ಪನ್ನಗಳ ಜೊತೆ ಜೊತೆಗೆ ಇತರ ಮಳಿಗೆಗಳೂ ಇವೆ. ನಾರಿಯರಿ ಪ್ರೀತಿಪಾತ್ರವಾಗುವ ಸೀರೆ, ಉಡುಗೆ, ಆಭರಣಗಳ ಮಳಿಗೆಗಳೂ ಇವೆ. ಈ ಕಾರಣಕ್ಕಾಗಿಯೇ ಸಹಜವಾಗಿ ಜನರು ಆಕರ್ಷಿತರಾಗುತ್ತಾರೆ.

ಭಟ್ ಎಂಡ್ ಭಟ್ ಮಳಿಗೆ

ಭಟ್ ಎಂಡ್ ಭಟ್ ಯೂ ಟ್ಯೂಬ್ ಖ್ಯಾತಿಯ ಸುದರ್ಶನ್ ಭಟ್ ಅವರು ತಮ್ಮ ಮಳಿಗೆ ತೆರೆದಿದ್ದಾರೆ. ಯೂ ಟ್ಯೂಬ್ ಮೂಲಕ ಗ್ರಾಮೀಣ ಸೊಗಡಿನ ಅಡುಗೆ ವೈವಿಧ್ಯವನ್ನು ಪರಿಚಯಿಸಿದ್ದರು. ವೈವಿಧ್ಯಮಯ ದೇಸೀ ತಿಂಡಿಗಳ ಮೂಲಕ ಇವರ ಮಳಿಗೆ ಜನಾಕರ್ಷಣೆ ಪಡೆಯುತ್ತಿತ್ತು.

ಸೀರೆಗಳು ಇವೆ

ಇಷ್ಟೇ ಅಲ್ಲದೆ ಮೇಳದಲ್ಲಿ ಪಾರಂಪರಿಕ ಇಳಕಲ್ ಮತ್ತು ಖಾದಿ ಸೀರೆಗಳು, ಮಣ್ಣಿನ ಆಭರಣಗಳು, ಬಿದಿರಿನ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳ ಮಳಿಗೆಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ. ಕೃಷಿ ಆಸಕ್ತರಿಗಾಗಿ ಹಲಸು, ಮಾವು ಹಾಗೂ ಹೂವಿನ ಗಿಡಗಳ ಮಾರಾಟವೂ ಏರ್ಪಡಿಸಲಾಗಿದೆ. ಮೇಳಕ್ಕೆ ಸಾಂಸ್ಕೃತಿಕ ಕಳೆ ನೀಡಲು ಭಜನಾ ಸಪ್ತಸ್ವರ ಭಜನಾ ಸ್ಪರ್ಧೆ, ವಾಯ್ಸ್ ಆಫ್ ಬೆದ್ರ ಸಂಗೀತ ಸ್ಪರ್ಧೆ ಹಾಗೂ ಅಡುಗೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸಣ್ಣ ಉದ್ಯಮಿಗಳಿಗೆ ಮತ್ತು ಗೃಹ ಉತ್ಪನ್ನ ತಯಾರಕರಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವ ಉದ್ದೇಶದಿಂದ ಹಮ್ಮಿಕೊಂಡ ಈ ಮೇಳ ಆರಂಭದಲ್ಲೇ ಯಶಸ್ಸು ಪಡೆದಿದೆ.

ಅದ್ಭುತ ಸಂಘಟನಾ ಕಾರ್ಯ



ಇದಪ್ಪಾ ಸಂಘಟನೆ ಎಂದರೆ!. ಹೌದು ಮೇಳ ಯಶಸ್ವಿಯಾಗಬೇಕಾದರೆ ಏಕ ವ್ಯಕ್ತಿ ಪ್ರಯತ್ನಕ್ಕಿಂತ ಹಲವು ಸಂಘಟನೆಗಳ ಸಹಕಾರ ಇರುವುದು ಮುಖ್ಯ. ಇದೇ ಉದ್ದೇಶಕ್ಕಾಗಿ, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದ್ಭುತ ಕಾರ್ಯವನ್ನು ಮಾಡಲಾಗಿದೆ. ಮೇಳದ ಯಶಸ್ಸಿಗಾಗಿ ಸ್ಥಳೀಯ ಹಲವಾರು ಪ್ರಮುಖ ಸಂಘ ಸಂಸ್ಥೆಗಳು ಕೈ ಜೋಡಿಸಿವೆ. ರೋಟರಿ ಕ್ಲಬ್ ಮೂಡುಬಿದಿರೆ, ರೋಟರಿ ಟೆಂಪಲ್ ಟೌನ್ ಮೂಡುಬಿದಿರೆ, ರೋಟರಿ ಮಿಡ್ ಟೌನ್ ಮೂಡುಬಿದಿರೆ, ಇನ್ನರ್ ವ್ಹೀಲ್ ಮೂಡುಬಿದಿರೆ ಹಾಗೂ ಲಯನ್ಸ್ ಕ್ಲಬ್ ಮೂಡುಬಿದಿರೆ ಈ ಕಾರ್ಯಕ್ರಮಕ್ಕೆ ಸಹಕಾರ ನೀಡುತ್ತಿವೆ. ಇದರೊಂದಿಗೆ ಯುವವಾಹಿನಿ ಮೂಡುಬಿದಿರೆ ಘಟಕ, ಜವನೆರ್ ಬೆದ್ರ ಫೌಂಡೇಶನ್ ಮೂಡುಬಿದಿರೆ, ನೇತಾಜಿ ಬ್ರಿಗೇಡ್ ಮೂಡುಬಿದಿರೆ ಹಾಗೂ ಬೆದ್ರ ಫ್ರೆಂಡ್ಸ್ ಮೂಡುಬಿದಿರೆ ಸಂಸ್ಥೆಗಳು ಕೂಡಾ ಸಾಥ್ ನೀಡಿವೆ. ಸರ್ವೋದಯ ಫ್ರೆಂಡ್ಸ್ ಮೂಡುಬಿದಿರೆ, ತ್ರಿಶೂಲ್ ಫ್ರೆಂಡ್ಸ್ ಮೂಡುಬಿದಿರೆ, ಮಾರಿಗುಡಿ ಫ್ರೆಂಡ್ಸ್ ಮೂಡುಬಿದಿರೆ, ದೊಡ್ಡನೆ ಫ್ರೆಂಡ್ಸ್ ಮೂಡುಬಿದಿರೆ, ಪುತ್ತಿಗೆ ಫ್ರೆಂಡ್ಸ್ ಮೂಡುಬಿದಿರೆ ಹಾಗೂ ಬೆಟ್ಕೇರಿ ಫ್ರೆಂಡ್ಸ್ ಮೂಡುಬಿದಿರೆ ಸಂಘಟನೆಗಳು ಮೇಳದೊಂದಿಗೆ ಸಹಕರಿಸುತ್ತಿವೆ.

ಕ್ರೀಡಾ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಎಂ ಬಿ ಇಲೆವೆನ್ ಮೂಡುಬಿದಿರೆ, ಫ್ರೆಂಡ್ಸ್ ಇಲೆವೆನ್ ಮೂಡುಬಿದಿರೆ ಹಾಗೂ ಬೋಲ್ಟು ಚಾರಿಟೇಬಲ್ ಟ್ರಸ್ಟ್ ಮೂಡುಬಿದಿರೆ ಸಂಘಟನೆಗಳ ಬೆಂಬಲವೂ ಮೇಳಕ್ಕೆ ಲಭಿಸಿದೆ. ದಕ್ಷಿಣ ಕನ್ನಡ ಜಿಲ್ಲಾ ಶಾಮಿಯಾನ ಮಾಲಕರ ಸಂಘ ಮೂಡುಬಿದಿರೆ, ನವಚೇತನ ಸೇವಾ ಬಳಗ ಮೂಡುಬಿದಿರೆ, ಬಂಟರ ಸಂಘ ಮಹಿಳಾ ಘಟಕ ಮೂಡುಬಿದಿರೆ ಮತ್ತು ಪ್ರೆಸ್ ಕ್ಲಬ್ ಮೂಡುಬಿದಿರೆ ಸಂಸ್ಥೆಗಳು ಮೇಳಕ್ಕೆ ಅಗತ್ಯವಿರುವ ಸಹಕಾರ ಒದಗಿಸಿವೆ. ಇದಲ್ಲದೆ ಆಟೋ ಡ್ರೈವರ್ಸ್ ಅಸೋಸಿಯೇಷನ್ ಮೂಡುಬಿದಿರೆ, ಮೊಬೈಲ್ ರಿಟೇಲರ್ಸ್ ಮೂಡುಬಿದಿರೆ, ಲಾಡಿ ಫ್ರೆಂಡ್ಸ್ ಮೂಡುಬಿದಿರೆ, ಹೊಸಕನಸು ಸೇವಾ ಟ್ರಸ್ಟ್ ನೆಲ್ಲಿಂಗಾಡಿ ಹಾಗೂ ನಮೋ ಫ್ರೆಂಡ್ಸ್ ನೆಲ್ಲಿಂಗಾಡಿ ಸಂಸ್ಥೆಗಳು ಈ ಮೇಳದ ಯಶಸ್ಸಿಗೆ ಸಹಕಾರ ನೀಡುತ್ತಿವೆ.

ಇಂದು ಇರ್ದೆಯಲ್ಲಿ ಶನೈಶ್ಚರ ಕಲ್ಲೋಕ್ತ ಪೂಜೆ, ಎಳ್ಳುಗಂಟು ದೀಪ ಸೇವೆ | ಭಜನಾ ಸಂಕೀರ್ತನೆ

ಧರ್ಮಸಭೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್



ಪುತ್ತೂರು: ಭಗತ್ ಸೇವಾ ಯುವಶಕ್ತಿ ಉಪ್ಪಳಿಗೆ ಇದರ ಆಶ್ರಯದಲ್ಲಿ ಮೂರನೇ ವರ್ಷದ ಸಾಮೂಹಿಕ ಶ್ರೀ ಶನೈಶ್ಚರ ಕಲ್ಲೋಕ್ತ ಪೂಜೆ, ಎಳ್ಳುಗಂಟು ದೀಪ ಸೇವೆ ಹಾಗೂ ಧರ್ಮ ಸಭೆಯು ಮೇ 9ರಂದು ಬೈಲಾಡಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ದ್ವಾರದ ಬಳಿಯ ಮೈದಾನದಲ್ಲಿ ನಡೆಯಲಿದೆ.

ಬೆಳಗ್ಗೆ 5 ಗಂಟೆಯಿಂದ ಕಾರ್ಯಕ್ರಮಗಳು ಪ್ರಾರಂಭಗೊಳ್ಳಲಿದ್ದು ತಹಶೀಲ್ದಾರ್ ಅಜಿತ್ ರೈ ಸೊರಕೆ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕ ಅನಂತರಾಮ ಮಡಕುಳ್ಳಾಯ ಮತ್ತು ಪುರೋಹಿತ ರಾಧಾಕೃಷ್ಣ ಭಟ್ ಕಕ್ಕೂರು ಅವರ ಪೌರೋಹಿತ್ಯದಲ್ಲಿ ಶ್ರೀ ಶನೈಶ್ಚರ ಪೂಜೆ ಹಾಗೂ ಎಳ್ಳುಗಂಟು ದೀಪ ಸೇವೆಯು ಪ್ರಾರಂಭಗೊಳ್ಳಲಿದೆ. ಇದೇ ಸಂದರ್ಭದಲ್ಲಿ ಸಿದ್ಧಿಧಾತ್ರಿ ಮಹಿಳಾ ಭಜನಾ ಮಂಡಳಿಯವರಿಂದ ಭಜನಾ ಸಂಕೀರ್ತನೆ ನಡೆಯಲಿದೆ.

ನಂತರ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಬೊಟ್ಯಾಡಿ ದೀಪ ಪ್ರಜ್ವಲಿಸಲಿ ದ್ದಾರೆ. ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಆಗಮಿಸಲಿದ್ದಾರೆ. ಸಂಜೆ 6 ಗಂಟೆಯಿಂದ ಝೀ ಕನ್ನಡದ ಸರಿಗಮಪ ಖ್ಯಾತಿಯ ಪುಟಾಣಿಗಳಾದ ಜ್ಞಾನ ಗುರುರಾಜ್ ಮತ್ತು ಆರ್ಯ ಸಿಂಚನಾ ಹಾಗೂ ಸ್ಥಳೀಯ ಪ್ರತಿಭೆಗಳಾದ ಏಹಾನ್ ಲೋಹಿತ್ ಹಾಗೂ ವಿಷ್ಣ ಏಕತಡ್ಕ ಇವರಿಂದ ಭಕ್ತಿಸುಧೆ, 7.45ರಿಂದ ಗಾನನೃತ್ಯ ಅಕಾಡೆಮಿಯವರಿಂದ ಭರತನಾಟ್ಯಂ ನಡೆಯಲಿದೆ. ರಾತ್ರಿ 8 ಗಂಟೆಗೆ ಧರ್ಮ ಸಭೆ ನಡೆಯಲಿದ್ದು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾ ನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ಅಧ್ಯಕ್ಷತೆ ವಹಿಸಲಿ ದ್ದಾರೆ. ಮುಖ್ಯ ಅಭ್ಯಾಗತರಾಗಿ ಮೈಸೂರು ಸಂಸ್ಥಾನದ ಮಹಾರಾಜ, ಮೈಸೂರಿನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಾರಿ ನಿರ್ದೇಶನಾಲಯದ ವಕೀಲ ರಾಜಾರಾಮ ಸೂರ್ಯಂಬೈಲು ಆಗಮಿಸಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಕರ್ನಾಟಕದ ಪ್ರಾಂತ ಪಿ.ಎಸ್. ಸಹಕಾರ್ಯವಾಹ ಪ್ರಕಾಶ್ ಬೌದ್ಧಿಕ್ ನಡೆಸಿ ಕೊಡಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆಯ ಬಳಿಕ ಚಾ ಪರ್ಕ ಕಲಾವಿದರು ಕುಡ್ಲ ಅಭಿನಯದಲ್ಲಿ 'ಎಲ್ಲಾ ಗ್ಯಾರಂಟಿ ಅತ್' ಹಾಸ್ಯಮಯ ನಾಟಕ ನಡೆಯಲಿದೆ ಎಂದು ಭಗತ್ ಸಿಂಗ್ ಸೇವಾ ಯುವಶಕ್ತಿಯ ಪ್ರಕಟಣೆ ತಿಳಿಸಿದೆ.

ಗಣತಿದಾರರಿಗೆ ನಿಖರ ಮಾಹಿತಿ ನೀಡಲು ಸೂಚನೆ

ಮಂಗಳೂರು: ಭಾರತ ಜನಗಣತಿ 2027ರ ಅಂಗವಾಗಿ ಮೊದಲ ಹಂತದ ಮನೆ ಪಟ್ಟಿ ಮತ್ತು ಮನೆ ಗಣತಿ ಕ್ಷೇತ್ರ ಕಾರ್ಯಾಚರಣೆಯು ಮೇ 15 ರವರೆಗೆ ನಡೆಯಲಿದೆ. ಈ ನಿಟ್ಟಿನಲ್ಲಿ ಗಣತಿ ಕಾರ್ಯಕ್ಕೆ ನಿಯೋಜಿಸಲಾದ ಗಣತಿದಾರರು ಮನೆ ಮನೆ ಭೇಟಿ ನೀಡಿದಾಗ ನಾಗರಿಕರು ನಿಖರವಾದ ಮಾಹಿತಿಯನ್ನು ನೀಡಿ ಜನಗಣತಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಪ್ರಸ್ತುತ ಚಾಲನೆಯಲ್ಲಿರುವ ಮೊದಲ ಹಂತದ ಗಣತಿ ಕಾರ್ಯವು ಮುಕ್ತಾಯ ಹಂತಕ್ಕೆ ಸಮೀಪಿಸುತ್ತಿದೆ. ಆದುದರಿಂದ ಈ ವರೆಗೆ ಗಣತಿದಾರರು ನಿಮ್ಮ ಮನೆಗೆ ಭೇಟಿ ನೀಡದಿದ್ದರೆ ಅಥವಾ ನಿಮ್ಮ ಮನೆಯ ಗಣತಿ ಕಾರ್ಯ ನಡೆಯದಿದ್ದಲ್ಲಿ ಗಣತಿ ಮಾಡಿಸಿಕೊಳ್ಳುವ ಸಲುವಾಗಿ ಪಾಲಿಕೆಯ ಸಹಾಯವಾಣಿ ಸಂಖ್ಯೆ: 0824 2220332 ಅಥವಾ ವಾಟ್ಸಪ್ ಸಂಖ್ಯೆ: 9449007722 ಸಂಪರ್ಕಿಸುವಂತೆ ಮಂಗಳೂರು ಮಹಾನಗರಪಾಲಿಕೆಯ ಆಯುಕ್ತರು ಹಾಗೂ ಪ್ರಧಾನ ಜನಗಣತಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಲ್ಲಿಗುಡ್ಡೆ ಪ್ರದೇಶಕ್ಕೆ ಎರಡು ದಿನಕ್ಕೊಮ್ಮೆಯೂ ನೀರಿಲ್ಲ | ಎತ್ತರದ ಪ್ರದೇಶಕ್ಕೆ ಬರುತ್ತಿಲ್ಲ ನೀರು

ಬಜಾಲ್: ರೇಷನಿಂಗ್ ಬಳಿಕ ನೀರಿನ ಸಮಸ್ಯೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: 'ನಮ್ಮಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಕೊರತೆ ಇರಲಿಲ್ಲ. ಆದರೆ, ನೀರು ಪೂರೈಕೆಗೆ ಮಂಗಳೂರು ಮಹಾನಗರ ಪಾಲಿಕೆ ರೇಷನಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಎರಡು ದಿನಕ್ಕೊಮ್ಮೆ ನೀರು ನೀಡಿದರೂ ಸಮರ್ಪಕವಾಗಿ ಪೂರೈಕೆ ಮಾಡಬೇಕು...'

ಇದು ಮನಪಾ ಬಜಾಲ್ ವಾರ್ಡ್ ಜನತೆಯ ಮನವಿ.

ಸಂಪೂರ್ಣ ಗ್ರಾಮೀಣ ಪ್ರದೇಶದ ಲಕ್ಷಣವನ್ನು ಒಳಗೊಂಡ, ಎತ್ತರ ತಗ್ಗು ಪ್ರದೇಶಗಳಿರುವ ಬಜಾಲ್ ವಾರ್ಡ್‌ನಲ್ಲಿ ನೀರು ಪೂರೈಕೆ ರೇಷನಿಂಗ್ ಆರಂಭವಾಗುವವರೆಗೆ ನೀರಿನ ಸಮಸ್ಯೆ ಅಷ್ಟಾಗಿ ಇರಲಿಲ್ಲ. ಆದರೆ, ರೇಷನಿಂಗ್ ಆರಂಭಗೊಂಡ ಬಳಿಕ ಗುಡ್ಡ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ ಎಂಬ ದೂರುಗಳಿವೆ. ಜಲ್ಲಿಗುಡ್ಡೆ, ಶಾಂತಿನಗರ, ಕಟ್ಟಪುಣಿ ಪ್ರದೇಶಗಳಿಗೆ ರೇಷನಿಂಗ್ ನಂತರ ನೀರಿನ ಕೊರತೆ ಉಂಟಾಗಿದೆ.

ಜಲ್ಲಿಗುಡ್ಡೆ, ಜಯನಗರ, ಸೊನ್ನಳಿಕೆ, ಪಳ್ಳಕೆರೆ, ಕಲ್ಲಗುಡ್ಡೆ, ಕಟ್ಟಪುಣಿ, ಕೊಪ್ಪಲ, ಕಾನಕೆರೆ, ಪಡುಬೀಡು, ಬಜಾಲ್ ಪಡ್ಪು, ಕಲ್ಲಕಟ್ಟ, ಬಜಾಲ್ ನಂತೂರು, ಶಾಂತಿನಗರ, ಫೈಸಲ್‌ನಗರ, ಆದರ್ಶನಗರ ಪ್ರದೇಶಗಳನ್ನು ಒಳಗೊಂಡಿರುವ ಈ ವಾರ್ಡ್‌ನಲ್ಲಿ ಗುಡ್ಡ ಪ್ರದೇಶಗಳು ಅಧಿಕ. ಈ ವಾರ್ಡ್‌ಗೆ ಪಡೀಲು ಹಾಗೂ ಬಜಾಲ್ ಉಲ್ಲಾಸನಗರ ಟ್ಯಾಂಕ್‌ಗಳಿಂದ ನೀರು ಪೂರೈಕೆ ಆಗುತ್ತಿದೆ. ಬಜಾಲ್ ಉಲ್ಲಾಸನಗರ ಟ್ಯಾಂಕ್‌ನಿಂದ ಜಲ್ಲಿಗುಡ್ಡೆ, ಕಟ್ಟಪುಣಿ, ಬಜಾಲ್ ಪಡ್ಪು, ಕಲ್ಲಗುಡ್ಡೆ, ಫೈಸಲ್‌ನಗರ, ಶಾಂತಿನಗರ, ಬಜಾಲ್ ನಂತೂರು, ಸೊನ್ನಳಿಕೆ, ಜಯನಗರ ಒಂದು ಭಾಗಕ್ಕೆ ನೀರು ನೀಡಲಾಗುತ್ತಿದೆ. ಜಲ್ಲಿಗುಡ್ಡೆಗೆ ಮಾತ್ರ ಎರಡು ದಿನಕ್ಕೊಮ್ಮೆ ನೀರು ಬರುತ್ತಿತ್ತು. ಪಡೀಲು ಟ್ಯಾಂಕ್‌ನಿಂದ ಆದರ್ಶನಗರ, ಜಯನಗರದ ಒಂದು ಭಾಗಕ್ಕೆ ನೀರು ಬರುತ್ತಿದೆ. ರೇಷನಿಂಗ್ ಆರಂಭಗೊಂಡ ಬಳಿಕ ಮಧ್ಯಾಹ್ನ 2ರಿಂದ ರಾತ್ರಿ 1 ಗಂಟೆಯವರೆಗೆ ನೀರು ಪೂರೈಕೆಗೆ ಸಮಯ ನಿಗದಿಯಾಗಿದೆ. ಆದರೆ, ದಿನ ಬಿಟ್ಟು ದಿನ ನೀರು ಸರಬರಾಜು ಆಗುವ ಕಾರಣ ಪೈಪ್‌ಲೈನ್‌ನಲ್ಲಿ ನೀರು ಖಾಲಿಯಾಗಿ ಎತ್ತರದ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ರೇಷನಿಂಗ್ ವ್ಯವಸ್ಥೆ ಆರಂಭಗೊಂಡ ಬಳಿಕ ಜನರು ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದು, ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ತಲುಪುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ನೀರಿನ ಕೊರತೆ ಕಾಣಿಸಿಕೊಂಡುವ ಪ್ರದೇಶಗಳು ಎತ್ತರದ ಸ್ಥಳಗಳಾಗಿದ್ದು, ಇಲ್ಲಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುವುದು ಸಾಧ್ಯವಿಲ್ಲ. ಜಯನಗರ, ಬಜಾಲ್ ಪಡ್ಪು, ಫೈಸಲ್‌ನಗರದಲ್ಲಿ ಸಾರ್ವಜನಿಕ ಬಾವಿಗಳಿದ್ದು, ನೀರು ಬಳಸಲಾಗುತ್ತಿದೆ. ಕಲ್ಲಕಟ್ಟ ಪಾಂಡೇಲುಗುಡ್ಡ ಪ್ರದೇಶದಲ್ಲಿ ಬಾವಿ ನೀರನ್ನೇ ಪೈಪ್‌ಲೈನ್ ಮೂಲಕ ಒದಗಿಸಲಾಗುತ್ತಿದೆ.

ಬಜಾಲ್ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ.50ರಷ್ಟು ಪೂರ್ಣಗೊಂಡಿದೆ. ಕಾಮಗಾರಿಗಾಗಿ ಅಗೆದ ಬಳಿಕ ಸಮರ್ಪಕವಾಗಿ ಹೊಂಡಗಳನ್ನು ಮುಚ್ಚಲಾಗಿದೆ. ಜಲಸಿರಿ ಪೈಪ್‌ಲೈನ್‌ನಲ್ಲಿ ನೀರಿನ ಸಂಪರ್ಕ ಆಗಿಲ್ಲ.




ಬಜಾಲ್ ವಾರ್ಡ್‌ನಲ್ಲಿ ತಡೆಗೋಡೆ ಕಾಮಗಾರಿ ನಡೆದಿದೆ.

ಶೇ.30ರಷ್ಟು ಭಾಗಕ್ಕೆ ಒಳಚರಂಡಿ ವ್ಯವಸ್ಥೆ ಇಲ್ಲ

ಬಜಾಲ್ ವಾರ್ಡ್‌ನಲ್ಲಿ ಎರಡು ವೆಟ್ ವೆಲ್‌ಗಳಿದ್ದು, 2013ಕ್ಕೆ ಅಳವಡಿಸಲಾಗದ ಯುಜಿಡಿ ಪೈಪ್‌ಲೈನ್ ಸಂಪರ್ಕ ಒಂದು ಭಾಗಕ್ಕೆ ಮಾತ್ರ ಆಗಿದೆ. ಶೇ.30ರಷ್ಟು ಪ್ರದೇಶಕ್ಕೆ ಇದುವರೆಗೆ ಒಳಚರಂಡಿ ವ್ಯವಸ್ಥೆಯೇ ಆಗಿಲ್ಲ. ಇಲ್ಲಿ ಟಾಯ್ಲೆಟ್ ಪಿಟ್‌ಗಳಿವೆ. ಗುಡ್ಡ ಪ್ರದೇಶವಾದ ಕಾರಣ ಇಲ್ಲಿಗೆ ಯುಜಿಡಿ ಪೈಪ್‌ಲೈನ್ ಅಳವಡಿಕೆ ಸವಾಲಾಗಿದೆ. ರಸ್ತೆ ಮೇಲ್ಭಾಗದಲ್ಲಿದ್ದು, ಮನೆಗಳು ಕೆಳಭಾಗದಲ್ಲಿರುವ ಸ್ಥಳಗಳಲ್ಲಿ ಒಳಚರಂಡಿ ಪೈಪ್‌ಲೈನ್ ಅಳವಡಿಕೆ ಸಾಧ್ಯವಾಗುತ್ತಿಲ್ಲ. ಕೆಲವೆಡೆ ಖಾಸಗಿ ಜಾಗದಲ್ಲಿ ಯುಜಿಡಿ ಪೈಪ್‌ಲೈನ್ ಹಾಕಲು ಜಾಗದ ಮಾಲಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕೊಡಕ್ಕಲ್‌ನಿಂದ ಆಗಮಿಸುವ ರಾಜಕಾಲುವೆ ಕುವೆಂಜ, ಬಜಾಲ್‌ನಂತೂರು ಮೂಲಕ ನೇತ್ರಾವತಿ ನದಿ ಸೇರುತ್ತಿದೆ. ಇನ್ನೊಂದು ರಾಜಕಾಲುವೆ ಬಜಾಲ್, ಕೊಪ್ಪಲ ಮೂಲಕ ನೇತ್ರಾವತಿ ನದಿ ಸೇರುತ್ತಿದೆ. ಪ್ರಸ್ತುತ ರಾಜಕಾಲುವೆಗಳ ಹೂಳು ತೆಗೆಯಲಾಗುತ್ತಿದೆ.

ವಿಲೇವಾರಿಯಾಗುತ್ತಿಲ್ಲ ಕಸ

ಬಜಾಲ್ ವಾರ್ಡ್‌ನಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಕಸದ ಸಮಸ್ಯೆ ಇದೆ. ಇಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲ. ಬಜಾಲ್‌ಪಡ್ಪು, ಜಯ ನಗರ, ಆದರ್ಶನಗರ ಮುಂತಾದ ಪ್ರದೇಶಗಳಲ್ಲಿ ರಸ್ತೆ ಬದಿ ಕಸ ಎಸೆಯಲಾಗುತ್ತಿದ್ದು, ಕಸ ವಿಲೇವಾರಿ ಮಾಡುವವರು ಪ್ರತಿದಿನ ಬರುತ್ತಿಲ್ಲ. ಇದರಿಂದಾಗಿ ಸಮಸ್ಯೆ ಉಂಟಾಗಿದೆ.



"ಬಜಾಲ್ ವಾರ್ಡ್‌ನಲ್ಲಿ ಈ ಹಿಂದೆ ನೀರಿನ ಸಮಸ್ಯೆ ಇರಲಿಲ್ಲ. ಆದರೆ, ಮನಪಾ ವತಿಯಿಂದ ನೀರು ಪೂರೈಕೆಗೆ ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿ ಎತ್ತರದ ಸ್ಥಳಗಳಿಗೆ ನೀರು ಬರುತ್ತಿಲ್ಲ ಎಂದು ದೂರುಗಳು ಕೇಳಿಬರುತ್ತಿವೆ. ನೀರಿನ ರೇಷನಿಂಗ್ ಮಾಡಲೇಬೇಕಿದ್ದರೆ ಎರಡು ದಿನಕ್ಕೊಮ್ಮೆ ಸಮರ್ಪಕವಾಗಿ ನೀರು ಪೂರೈಕೆ ಆಗಬೇಕಿದೆ. ಈ ವಾರ್ಡ್ ಗುಡ್ಡ ಪ್ರದೇಶ ಒಳಗೊಂಡದ್ದು, ಗುಡ್ಡ ಕುಸಿತ ತಡೆಯಲು ಬಜಾಲ್ ಪಡ್ಪು, ಪಾಂಡೇಲುಗುಡ್ಡ, ಆದರ್ಶನಗರ, ಶಾಂತಿನಗರ, ಫೈಸಲ್‌ನಗರ ಮುಂತಾದ ಕಡೆಗಳಲ್ಲಿ ತಡೆಗೋಡೆ ನಿರ್ಮಿಸಲಾಗಿದೆ. ಎಕೆಲ್‌ಮಾರ್-ಪಡುಬೀಡು ರಸ್ತೆಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಫೈಸಲ್ ನಗರ, ಆದರ್ಶನಗರ, ಜಯನಗರ, ಜಲ್ಲಿಗುಡ್ಡೆ ಕ್ರಾಸ್ ರೋಡ್ ಮುಂತಾದೆಡೆ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಬಜಾಲ್ ಪಡ್ಪು ಆರೋಗ್ಯ ಕೇಂದ್ರ ಅಭಿವೃದ್ಧಿಪಡಿಸಲಾಗಿದ್ದು, ಜನರು ಬಹಳಷ್ಟು ಉಪಯೋಗ ಪಡೆಯುತ್ತಿದ್ದಾರೆ. ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 2ರಡಿ 3.56 ಕೋಟಿ ರೂ. ವೆಚ್ಚದಲ್ಲಿ ಜಲ್ಲಿಗುಡ್ಡೆ ಮುಖ್ಯರಸ್ತೆ ಅಗಲೀಕರಣ ಆಗಲಿದೆ. ಪಳ್ಳಕೆರೆ -ಬಜಾಲ್ ಪಡ್ಪು ಮುಖ್ಯರಸ್ತೆ 1.11 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ಆಗಲಿದೆ. ಕಟ್ಟಪುಣಿ ರಸ್ತೆ 22.66 ಲಕ್ಷ ರೂ. ವೆಚ್ಚ, ಗಣಪತಿ ಕಟ್ಟೆ ರಸ್ತೆ 20.91 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಯಾಗಲಿದೆ. ಸ್ಟೇಟ್‌ಬ್ಯಾಂಕ್-ಬಜಾಲ್‌ಪಡ್ಪು ನಡುವೆ ಕೆಎಸ್‌ಆರ್‌ಟಿಸಿ ಬಸ್ ಆರಂಭಿಸಲಾಗಿದೆ.

■ ಅಶ್ರಫ್, ಬಜಾಲ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

"ನೀರಿನ ರೇಷನಿಂಗ್ ವ್ಯವಸ್ಥೆ ಜಾರಿಗೊಂಡ ಬಳಿಕ ಕಳೆದ ಸೋಮವಾರದಿಂದ ನಮ್ಮಲ್ಲಿಗೆ ನೀರು ಬರುತ್ತಿಲ್ಲ. ನಮ್ಮ ಮನೆ ಎತ್ತರದ ಪ್ರದೇಶವಾಗಿರುವ ಕಾರಣ ಮನಪಾ ಪೈಪ್‌ಲೈನ್‌ನಲ್ಲಿ ನೀರು ತಲುಪುತ್ತಿಲ್ಲ. ಟ್ಯಾಂಕರ್ ಮೂಲಕವೂ ನಮ್ಮಲ್ಲಿಗೆ ನೀರು ತರಿಸಿ ಕೊಳ್ಳುವುದು ಕಷ್ಟಸಾಧ್ಯ. ನಿತ್ಯ ಬಳಕೆಗೆ ನೀರಿಗಾಗಿ ಏನು ಮಾಡಬೇಕು ಎಂಬುದೇ ತೋಚುತ್ತಿಲ್ಲ. ನಮಗೆ ನೀರು ಪೂರೈಸಲು ಮನಪಾ ಅಧಿಕಾರಿಗಳು ದಯವಿಟ್ಟು ಕ್ರಮ ಕೈಗೊಳ್ಳಬೇಕು.

■ ಯಶೋಧಾ, ಜಲ್ಲಿಗುಡ್ಡೆ ನಿವಾಸಿ

ಮಂಗಳೂರು
ಶನಿವಾರ, 9 ಮೇ 2026
ಸಂಪುಟ 48, ಸಂಚಿಕೆ 51, ಪುಟಗಳು 16+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನಾಳೆ ಅಸ್ಸಾಂ ಮುಖ್ಯಮಂತ್ರಿ ಆಯ್ಕೆ |೧೦ ದಕ್ಷಿಣ ಭಾರತದಲ್ಲಿ ಮಳೆ ಮುನ್ನೆಚ್ಚರಿಕೆ |೧೦ ದೇಶಗಳ ನಡುವಿನ ಪಾಲುದಾರಿಕೆ ಮುಖ್ಯ |೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಶ್ರವಣ

ದಿನದ ಮಾತು

ಹಾವಿನ ಬಾಯಲ್ಲಿ ಅಮೃತವನು ಮತ್ತು ಸೇನಾ ವೃತ್ತಿಯಲ್ಲಿ ಸುಖವನ್ನು ಹುಡುಕುವವರು ಹುಚ್ಚರು.
▲ಮುಕ್ತಿ ರಾಮೇಶ್ವರ ಶತಕ

ಚೆಹ್ನೆಗಳ ಒಳನೋಟ

ಪೂರ್ಣ ಪರಿಪೂರ್ಣ
◆ಪೂರ್ಣಪ್ರಜ್ಞ ಬೇಳೂರು
◆ಪುಟ ೬

ಕಿರುಸುದ್ದಿ

ವೇಣುಗೋಪಾಲ್ ಕೇರಳ ಮುಖ್ಯಮಂತ್ರಿ?

◆**ಕೇರಳಂ:** ಕೇರಳಂನಲ್ಲಿ ಕಾಂಗ್ರೆಸ್ ಸರ್ಕಾರದ ಕಸರತ್ತು ಮುಂದುವರಿದಿವೆ. ಎಐಸಿಸಿ ವೀಕ್ಷಕರಾದ ಅಜಯ್ ಮಾಕೇನ್ ಮತ್ತು ಮುಕುಲ್ ವಾಸ್ನಿಕ್ ಅವರು ಶಾಸಕರ ಅಭಿಪ್ರಾಯ ಪಡೆದು, ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವರದಿ ನೀಡಿದ್ದಾರೆ. ಮೂಲಗಳು ಹೇಳಿರುವಂತೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಆಪ್ತ ಕೆ.ಸಿ.ವೇಣುಗೋಪಾಲ್ ಅವರೇ ಮುಖ್ಯಮಂತ್ರಿಯಾಗುವುದು ಬಹುತೇಕ ಖಚಿತ ಎಂದು ಹೇಳಲಾಗಿದೆ. ಮುಂದಿನ ವಾರ ಪ್ರಮಾಣ ವಚನ ಸ್ವೀಕಾರ ಮಾಡುವ ಸಾಧ್ಯತೆಗಳಿವೆ.

ಮದುವಣಗಿತ್ತಿಯಂತೆ ಶೃಂಗಾರಗೊಂಡ ಚಿತ್ರದುರ್ಗ
◆ಪುಟ ೫

ಹಂಟಾವೈರಸ್ ಆಗುತ್ತಾ ಇನ್ನೊಂದು ಕೋವಿಡ್?
◆ಪುಟ ೧೦

ಜನತೆ ಪರವಾಗಿ ಮೋದಿಗೆ ಆರ್.ಅಶೋಕ ಅಭಿನಂದನೆ
◆ಪುಟ ೫

ಸೈಬರ್ ಅಪರಾಧ ಹೆಚ್ಚಳ: ಎನ್‌ಸಿಆರ್
◆ಪುಟ ೫

ಶೀಘ್ರ ಸಚಿವ ಸಂಪುಟ ವಿಸ್ತರಣೆ: ಸಲೀಂ
◆ಪುಟ ೫

ಉಮೇಶ್ ಮೇಟಿ, ಸಮರ್ಥ್ ಶಾಮನೂರು ಪ್ರಮಾಣವಚನ
◆ಪುಟ ೫

ನೈರುತ್ಯ ರೈಲ್ವೆ ಬಡ್ತಿ ಪರೀಕ್ಷೆ ಕನ್ನಡದಲ್ಲಿ ನಡೆಸಿ: ನಿಖಿಲ್
◆ಪುಟ ೫

ಆಟೋಮೇಷನ್‌ನಿಂದ ಸಕಾಲ ಸೇವೆಗೆ ವೇಗ
◆ಪುಟ ೫

ಬದಲಾವಣೆ ಗೊಂದಲ ನಿವಾರಿಸಿ: ಸಚಿವ ಸತೀಶ
◆ಪುಟ ೫

‘ಘಟನೋತ್ತರ ಆದೇಶಕ್ಕಾಗಿ ಕಡತ ಮಂಡಿಸಿ’ ಎನ್ನುತ್ತಿದ್ದ ಬಿಎಸ್ವೈ

▶ ಪ್ರತಾಪ ಸಿಂಹ, ಮಾಜಿ ಸಂಸದ



ಅವತ್ತು 2008, ಮೇ 30. ಹೆಗಲ ಮೇಲೆ ಹಸಿರು ಶಾಲು ಹಾಕಿಕೊಂಡು, ನಾನು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ... ಎನ್ನುತ್ತಾ ಅವರು ಪ್ರಮಾಣವಚನ ಸ್ವೀಕರಿಸುತ್ತಿದ್ದರೆ ವಿಧಾನಸೌಧದ ಎದುರು ಸೇರಿದ್ದ ಹತ್ತಾರು ಸಾವಿರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು, ಟೀವಿ ಮುಖಾಂತರ ವೀಕ್ಷಿಸುತ್ತಿದ್ದ ಲಕ್ಷಾಂತರ ಬಿಜೆಪಿ ಕಟ್ಟಾಳುಗಳು, ಹಿತೈಷಿಗಳು ತಾವೇ ಮುಖ್ಯಮಂತ್ರಿಯಾದೆವೇನೋ ಎಂಬಂತೆ ಸಂಭ್ರಮಿಸುತ್ತಿದ್ದರು. 2007ರಲ್ಲಿ ಎಂಟೇ ದಿನಕ್ಕೆ ಅಧಿಕಾರ ಕಳೆದುಕೊಂಡ ನೋವಿಗೆ ಅವತ್ತು ಮುಲಾಮು ಹಚ್ಚಿದಂತಿತ್ತು. ಪ್ರಮಾಣವಚನ ಸಮಾರಂಭಕ್ಕೆ ಈಗಿನ ಹೆಮ್ಮೆಯ ಪ್ರಧಾನಿ



ನರೇಂದ್ರ ಮೋದಿ, ಆಡ್ವಾಣಿ, ಪ್ರಕಾಶ್ ಸಿಂಗ್ ಬಾದಲ್, ವೆಂಕಯ್ಯನಾಯ್ಡು ಸೇರಿದಂತೆ ಎಲ್ಲ ಗಣ್ಯಮಾನ್ಯರು ಬಂದಿದ್ದರು. ಉತ್ತರ ಭಾರತಕ್ಕೆ ಸೀಮಿತವಾಗಿದ್ದ ಬಿಜೆಪಿ ಮೊದಲ ಬಾರಿಗೆ ಯಡಿಯೂರಪ್ಪನವರ ಮೂಲಕ ದಕ್ಷಿಣದಲ್ಲಿ ಅಧಿಕಾರ ಹಿಡಿದಿತ್ತು. ಮುಖ್ಯಮಂತ್ರಿಯಾದ ನಂತರ ಯಾರಾದರೂ ಕಾರ್ಯಕರ್ತರು ಯಾವುದಾದರೂ ಕೆಲಸ, ಮನವಿ ಹಿಡಿದುಕೊಂಡು ಹೋದರೆ ಘಟನೋತ್ತರ ಆದೇಶಕ್ಕಾಗಿ ಕಡತ ಮಂಡಿಸುವುದು, ಬಿಎಸ್‌ವೈ' ಎಂದು ಸಹಿ ಹಾಕುವಂಥ ದಾಢಸಿತನ ತೋರಿದರು!

ಮೂಗಿನ ತುದಿಯೇ ಕೋಪ, ಪೆಟ್ಟು ಬಿದ್ದರೂ ಆಶ್ಚರ್ಯವಿಲ್ಲ, ಮೂಡು ನೋಡಿ ಮಾತನಾಡಬೇಕು. ಆದರೆ ರಾಜಕೀಯಕ್ಕೆ ಇವೆಲ್ಲ ಪೂರಕ ಅಂಶಗಳಲ್ಲ. ಆದರೂ ಹುಟ್ಟು ಕೋಪಿಷ್ಟನೊಬ್ಬ ಹೇಗೆ ಅಪ್ಪಾಜಿಯಾದರು ಎಂದರೆ ಅವರು ಶೀಘ್ರ ಕೋಪಿಯೇ ಹೊರತು ದೀರ್ಘ ದ್ವೇಷಿಯಲ್ಲ. ಕೋಪ ತಣಿದ ಕೂಡಲೇ ಕರೆಸಿ ಉಪ್ಪಿಟ್ಟು ತಿನ್ನಿಸಿ, ಕೆಲಸ ಮಾಡಿಕೊಟ್ಟು ಕಳುಹಿಸುತ್ತಿದ್ದರು. ಸಾರ್ವಜನಿಕವಾಗಿ ಅವರಲ್ಲಿ ಕಾಣುತ್ತಿದ್ದ ಸಿಟ್ಟು ಸಾತ್ವಿಕವಾಗಿರುತ್ತಿತ್ತು.

ನಮ್ಮ ಕಾರ್ಯಕರ್ತರು ಯಡಿಯೂರಪ್ಪನವರು ಚುನಾವಣಾ ರಾಜಕಾರಣದಿಂದ ಹಿಂದೆ ಸರಿದು ರಾಜಕೀಯ ಸಂಧ್ಯಾ ಕಾಲದಲ್ಲಿದ್ದರೂ ಇವತ್ತಿಗೂ ಅವರನ್ನು ಪ್ರೀತಿಸುವುದಕ್ಕೆ, ಗೌರವಿಸುವುದದಕ್ಕೆ ಇಂಥ ಅಸಂಖ್ಯ ಉದಾಹರಣೆಗಳೇ ಕಾರಣ. ಇಂಥ ಉದಾಹರಣೆಗಳಿಂದಲೇ ಕಾರ್ಯಕರ್ತರು ಅವರನ್ನು ಯಡಿಯೂರಪ್ಪ ಸಾಹೇಬರು ಅನ್ನುವುದನ್ನು ಬಿಟ್ಟು ಅಪ್ಪಾಜಿ' ಎನ್ನಲಾರಂಭಿಸಿದರು. ಮೂಗಿನ ತುದಿಯೇ ಕೋಪ, ಪೆಟ್ಟು ಬಿದ್ದರೂ ಆಶ್ಚರ್ಯವಿಲ್ಲ, ಮೂಡು ನೋಡಿ ಮಾತನಾಡಬೇಕು. ಆದರೆ ರಾಜಕೀಯಕ್ಕೆ ಇವೆಲ್ಲ ಪೂರಕ ಅಂಶಗಳಲ್ಲ.

➡ಪುಟ ೭

ಕೋಟೆನಾಡಿನಲ್ಲಿ ಇಂದು ಯಡಿಯೂರಪ್ಪ ಅಭಿಮಾನೋತ್ಸವ

ಬಿಎಸ್‌ವೈಗೆ ಅದ್ದೂರಿ ಸ್ವಾಗತ



◆**ಚಿತ್ರದುರ್ಗ:** ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜಕಾರಣದ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಾರ್ವಜನಿಕ ಜೀವನದಲ್ಲಿ 50 ಸಂವತ್ಸರಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಕೋಟೆನಾಡಿನಲ್ಲಿ ಬಿಎಸ್‌ವೈ ಅಭಿಮಾನೋತ್ಸವ ಆಯೋಜಿಸಲಾಗಿದೆ. ಇದಕ್ಕಾಗಿ ಶುಕ್ರವಾರ ಪುರ ಪ್ರವೇಶ ಮಾಡಿದ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಶುಕ್ರವಾರ ಸಂಜೆ 6 ಗಂಟೆಗೆ ಹೊಳಲ್ಕೆರೆ ರಸ್ತೆಯ ಚಂದ್ರವಳ್ಳಿ ವೃತ್ತಕ್ಕೆ ಆಗಮಿಸಿದ ಯಡಿಯೂರಪ್ಪ ಅವರನ್ನು ಪುಷ್ಪವೃಷ್ಟಿಯೊಂದಿಗೆ ನೂರಾರು ಮಹಿಳೆಯರು ಪೂರ್ಣಕುಂಭದ ಸ್ವಾಗತ ಕೋರಿದರು. ಬಳಿಕ ಅವರು ಗೋಪೂಜೆ ನೆರವೇರಿಸಿದರು. ಯಡಿಯೂರಪ್ಪ ಅವರಿಗೆ ಹಸಿರು ಶಾಲು ಹೊದೆಸಿ ಗೌರವಿಸಲಾಯಿತು. ತರುವಾಯ ಅವರನ್ನು ಪುಷ್ಪಾಲಂಕೃತ ಸಾರೋಟಿನಲ್ಲಿ ಕುಳ್ಳಿರಿಸಿ, ನಗರದ ಪ್ರಮುಖ ರಸ್ತೆಗಳ ಮೂಲಕ ಮದಕರಿ ವೃತ್ತದವರೆಗೆ ಭವ್ಯ ಮೆರವಣಿಗೆಯಲ್ಲಿ ಕರೆ ತರಲಾಯಿತು.



➡ಪುಟ ೭

ಜನತೆ ತೋರುತ್ತಿರುವ ಪ್ರೀತಿ ವಿಶ್ವಾಸಕ್ಕೆ ನಾನು ಆಭಾರಿಯಾಗಿದ್ದೇನೆ. 2028ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಅಭಿನಂದನೋತ್ಸವವು ರಣಕಹಳೆಯಾಗಿದೆ.
■ **ಬಿ.ಎಸ್. ಯಡಿಯೂರಪ್ಪ,** ಮಾಜಿ ಮುಖ್ಯಮಂತ್ರಿ

10 ಲಕ್ಷಕ್ಕೂ ಅಧಿಕ ಜನರ ನಿರೀಕ್ಷೆ

ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ರಾಜ್ಯದಾದ್ಯಂತ ಸುಮಾರು 10 ಲಕ್ಷಕ್ಕೂ ಅಧಿಕ ಜನರು ಆಗಮಿಸುವ ನಿರೀಕ್ಷೆ ಇದೆ. ವಿವಿಧ ಜಿಲ್ಲೆಗಳಿಂದ ಆಗಮಿಸಲು ವಾಹನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಎಲ್ಲಿಯೂ ವ್ಯವಸ್ಥೆಯಲ್ಲಿ ಲೋಪವಾಗದಂತೆ ಸ್ಥಾನೀಯವಾಗಿ ಜವಾಬ್ದಾರಿ ನೀಡಲಾಗಿದೆ.

ಅಂಬಾಸಿಡರ್ ಕಾರು ಆಕರ್ಷಣೆ ◆ಪುಟ ೭

ಒಂದೂವರೆ ದಶಕದ ಟಿಎಂಸಿ ಆಡಳಿತ ಅಂತ್ಯ ಇಂದು ಮುಖ್ಯಮಂತ್ರಿ ಆಗಿ ಪ್ರಮಾಣವಚನ

ಬಂಗಾಳದಲ್ಲಿ ಇನ್ಮುಂದೆ ಸುವೇಂದು ಆಡಳಿತ

- ರಾಜ್ಯಪಾಲರಿಗೆ ಸರ್ಕಾರ ರಚನೆ ಹಕ್ಕು ಮಂಡನೆ
- ಭಯದ ಯುಗ ಮುಗಿದಿದೆ, ಈಗ ಭರವಸೆಯ ಆಡಳಿತ: ಸುವೇಂದು
- ಒಳನುಸುಳುವಿಕೆ, ಜಾನುವಾರು ಕಳ್ಳಸಾಗಣೆಗೆ ತಡೆ: ಅಮಿತ್ ಶಾ
- ತಮ್ಲುಕ್‌ನಿಂದ ಕೊಲ್ಕತಾವರೆಗೆ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ



◆**ಕೋಲ್ಕತಾ:** ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ಸುವೇಂದು ಅಧಿಕಾರಿಯನ್ನು ಆಯ್ಕೆ ಮಾಡಲಾಗಿದೆ. 15 ವರ್ಷಗಳ ತೃಣಮೂಲ ಕಾಂಗ್ರೆಸ್ ಆಡಳಿತಕ್ಕೆ ತೆರೆ ಎಳೆದಿರುವ ಬಿಜೆಪಿ, ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಲಿದೆ.

ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಡೆದ ಬಿಜೆಪಿ ಶಾಸಕಾಂಗ ಸಭೆಯಲ್ಲಿ ಸುವೇಂದು ಅಧಿಕಾರಿಯನ್ನು ಏಕಮತದಿಂದ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಗಿದ್ದು, ಬಳಿಕ ಅವರು ರಾಜ್ಯಪಾಲ ಆರ್.ಎನ್.ರವಿಯನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಶನಿವಾರ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯಲಿರುವ ಭವ್ಯ ಸಮಾರಂಭದಲ್ಲಿ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ➡ಪುಟ ೭

ಬಿಜೆಪಿ ಸರ್ಕಾರದ ಪ್ರಮುಖ ಆದ್ಯತೆಗಳು

- ಅಕ್ರಮ ನುಸುಳುವಿಕೆ, ಜಾನುವಾರು ಕಳ್ಳಸಾಗಣೆಗೆ ತಡೆ
- ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ನ್ಯಾಯಾಂಗ ಆಯೋಗ
- ಮಹಿಳಾ ಸುರಕ್ಷತೆಗೆ ವಿಶೇಷ ಕ್ರಮ
- ಹಿಂಸಾಚಾರಮುಕ್ತ ಚುನಾವಣೆ
- ಕೇಂದ್ರ-ರಾಜ್ಯ ಡಬಲ್ ಎಂಜಿನ್ ಅಭಿವೃದ್ಧಿ ಮಾದರಿ
- ಸೋನಾರ್ ಬಾಂಗ್ಲಾ ನಿರ್ಮಾಣಕ್ಕೆ ವಿಶೇಷ ಯೋಜನೆಗಳು

ಡಿಎಂಕೆ–ಎಐಎಡಿಎಂಕೆ ಮೈತ್ರಿ ದೂರ

ಬಹುಮತದ ವಿಜಯ!

◆**ಚೆನ್ನೈ:** ಅತಂತ್ರ ಫಲಿತಾಂಶದಿಂದಾಗಿ ಸರ್ಕಾರ ರಚನೆಗೂ ಅವಕಾಶ ಸಿಗದೆ ಮೂರು ದಿನಗಳಿಂದ ಒತ್ತಡಕ್ಕೆ ಸಿಲುಕಿದ್ದ ನಟ–ರಾಜಕಾರಣಿ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ(ಟಿವಿಕೆ)ನ ದಾರಿ ಸುಗಮವಾಗಿದೆ. ಸಣ್ಣ ಪಕ್ಷಗಳ ಬೆಂಬಲದೊಂದಿಗೆ 118ಕ್ಕೂ ಅಧಿಕ ಶಾಸಕರ ಬೆಂಬಲವನ್ನು ಪಡೆದ ವಿಜಯ್ ಶುಕ್ರವಾರ ರಾಜ್ಯಪಾಲ ಆರ್. ವಿ.ಅರ್ಲೇಕರ್‌ರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. 2026ರ ವಿಧಾನಸಭೆ ಚುನಾವಣೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತಿ ದೊಡ್ಡ ಏಕಪಕ್ಷವಾಗಿ ಹೊರಹೊಮ್ಮಿದ್ದರೂ, ಸ್ಪಷ್ಟ ಬಹುಮತದಿಂದ 10 ಸ್ಥಾನಗಳಷ್ಟು ದೂರ ಉಳಿದಿತ್ತು. ಡಿಎಂಕೆ 59, ಕಾಂಗ್ರೆಸ್ 5, ಎಐಎಡಿಎಂಕೆ 47 ಹಾಗೂ ಬಿಜೆಪಿ ಕೇವಲ ಒಂದು ಸ್ಥಾನಕ್ಕೆ ಸೀಮಿತವಾಗಿದ್ದವು.



➡ಪುಟ ೭

116 ಶಾಸಕರ ಬೆಂಬಲ ಮಾತ್ರ

ಸರ್ಕಾರ ರಚನೆ ಗೊಂದಲಗಳ ಮಧ್ಯೆ, ವಿಜಯ್‌ಗೆ ಇನ್ನೂ 116 ಶಾಸಕರ ಬೆಂಬಲ ಮಾತ್ರ ಸಿಕ್ಕಿದೆ ಎಂದೇ ಹೇಳಲಾಗುತ್ತಿದೆ. ವಿಸಿಕೆ, ಐಯುಎಂಎಲ್ ಪಕ್ಷಗಳ ಶಾಸಕರ ಬೆಂಬಲ ಪತ್ರ ಇನ್ನೂ ಸಿಕ್ಕಿಲ್ಲ. ಹೀಗಾಗಿ, ವಿಜಯ್, ಗವರ್ನರ್ ಬಳಿ ಸಮಯ ಕೋರಿ ಬಂದಿದ್ದಾರೆ ಎಂದು ಹೇಳಲಾಗಿದೆ. ಈ ಎರಡೂ ಪಕ್ಷಗಳ ಬೆಂಬಲ ಸಿಕ್ಕ ಮೇಲೆ ರಾಜಭವನ ಪ್ರಮಾಣವಚನ ಸ್ವೀಕಾರ ದಿನಾಂಕ ನಿರ್ಧಾರ ಮಾಡಿ ಅಧಿಕೃತ ಪ್ರಕಟಣೆ ಹೊರಡಿಸಲಿದೆ ಎನ್ನಲಾಗಿದೆ.

ಸೂರ್ಯಕಾಂತಿಗೆ ಬೆಂಬಲ ಬೆಲೆ: ಕ್ವಿಂಟಾಲ್‌ಗೆ ₹7,721

◆**ಬೆಂಗಳೂರು:** ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 2025–26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ 7,721 ರೂ. ದರದಲ್ಲಿ ಖರೀದಿಗೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಆದೇಶಿಸಿದ್ದಾರೆ. ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಿರ್ದೇಶಿಸಿದ್ದಾರೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳವನ್ನು ರಾಜ್ಯ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ನೇಮಕ ಮಾಡಲಾಗಿದೆ. ➡ಪುಟ ೭

ಕೊನೆಗೂ ಪೊಲೀಸ್ ಬಲೆಗೆ ಬಿದ್ದ ನಿದಾ

◆**ಮುಂಬೈ:** ಹಲವು ವಾರಗಳಿಂದ ತಲೆಮರೆಸಿಕೊಂಡಿದ್ದ ನಾಸಿಕ್‌ನ ಟಿಸಿಎಸ್ ಘಟಕದಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಜಾಲದ ಪ್ರಮುಖ ಆರೋಪಿ ನಿದಾ ಖಾನ್‌ಳನ್ನು ನಾಸಿಕ್ ಪೊಲೀಸರು ಬಂಧಿಸಿದ್ದಾರೆ. ಛತ್ರಪತಿ ಸಂಭಾಜಿನಗರ ಜಿಲ್ಲೆನಲ್ಲಿ ಹಲವು ವಾರಗಳ ಕಾಲ ಗುಪ್ತ ಕಣ್ಗಾವಲು ಮತ್ತು ಹಿಂಬಾಲಿಸಿದ ಬಳಿಕ, ನಿದಾಳನ್ನು ಪೊಲೀಸರು ಬಂಧಿಸಿದ್ದಾರೆ.



➡ಪುಟ ೭

ರೈತ, ನೇಕಾರರ ಕಣ್ಮಣಿ, ಜನಸಾಗರದ ಪ್ರೀತಿಯ ನಾಯಕ

ಛಲದಂಕ ಮಲ್ಲ ಯಡಿಯೂರಪ್ಪ



ಯಡಿಯೂರಪ್ಪನವರ ಭಾಷಣಕ್ಕೆ ಕಾಯುತ್ತಿದ್ದ ಜನ

ಯಡಿಯೂರಪ್ಪನವರು ಪ್ರವಾಸ ಮಾಡುತ್ತಿದ್ದ ಸಂದರ್ಭದಲ್ಲಿ ಬಾಗಲಕೋಟೆ, ವಿಜಯಪುರ ಜಿಲ್ಲೆಯ ಜನ ಮಳೆ ಬಿಸಿಲು ಎನ್ನದೇ, ಒಮ್ಮೊಮ್ಮೆ ರಾತ್ರಿ 12 ಗಂಟೆವರೆಗೂ ಸಹಸ್ರಾರು ಸಂಖ್ಯೆಯಲ್ಲಿ ಜನರು ಕಾಯ್ದು ಭಾಷಣ ಕೇಳಿದ್ದಕ್ಕೂ ನಾನೇ ಸಾಕ್ಷಿ ಆಗಿರುವೆ. 1993 ಇಸ್ವಿಯಲ್ಲಿ ಬಾಗೇವಾಡಿ ತಾಲೂಕಿನ ವಂದಾಲ ಗ್ರಾಮದಲ್ಲಿ 11 ಜನ ನೇಕಾರರು ಅವಶ್ಯಕ ನೂಲು ಪೂರೈಕೆಯಾಗದ ಕಾರಣ, ಸಂಬಳ ವಿಳಂಬ ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರದ ವಿರುದ್ಧ ಆಮರಣ ಉಪವಾಸ ಕೈಕೊಂಡು ಎಂಟು ದಿವಸಗಳಾದ ಸಂದರ್ಭದಲ್ಲಿ ರಾತ್ರಿ, ಒಂದು ಗಂಟೆಗೆ ಅಲ್ಲಿಗೆ ಹೋಗಿ ಅವರಿಗೆ ಪಾನೀಯ ಕುಡಿಸಿ ಉಪವಾಸ ಕೈಬಿಡುವಂತೆ ಒತ್ತಾಯಿಸಿ ಮಾತನಾಡಿದ ದೃಶ್ಯ ಇನ್ನೂ ನನ್ನ ಕಣ್ಣೆದುರು ಹಸಿರಾಗಿದೆ.

ಅವರು ಆಗ ಆಡಿದ ಮಾತು ಆಮರಣ ಸತ್ಯಾಗ್ರಹ ಕುಳಿತಿರುವ ನಿಮಗೆ ಬುದ್ಧಿ ಗಿದ್ದಿ ಇದೆಯಾ? ಈ ಸರ್ಕಾರ ಬಡವರ ಪಾಲಿಗೆ, ನೇಕಾರರ ಪಾಲಿಗೆ, ಇದ್ದು ಸತ್ತಂತಿದೆ! ನೀವು ಸತ್ತರೂ ಕೂಡ ನಿಮ್ಮ ಉಪವಾಸ ಬಿಡಿಸಲು ಯಾರೂ ಕೂಡ ಇಲ್ಲಿಗೆ ಬರುವವರಿಲ್ಲ! ನಿಮ್ಮ ಈ ಹೋರಾಟ ಬೋರಗಲ್ಲಿಗೆ ನೀರುಣಿಸಿದಂತೆ ಎಂದು ಅವರನ್ನು ಉಪವಾಸ ಬಿಡಿಸಿದ ತೀಕ್ಷ್ಣ ಮಾತುಗಳು ಜವಾಬ್ದಾರಿಯ ನಾಯಕನಂತೆ ನಮ್ಮೆಲ್ಲರಿಗೂ ಮನವರಿಕೆ ಆದವು.

ಅವರು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರುವ ಸಂದರ್ಭಗಳಲ್ಲಿ ಮಾಜಿ ಶಾಸಕರಾದಂತಹ ಶ್ರೀಕಾಂತ್ ಕುಲಕರ್ಣಿ ಅವರು ಸದ್ಯ ರಾಜ್ಯಸಭೆ ಸದಸ್ಯರಾದ ನಾರಾಯಣ ಭಾಂಡಗೆಯವರು ಇನ್ನಿತರ ಮುಖಂಡರು ಇರುತ್ತಿದ್ದರು. ಅವರ ನಿರಂತರ ಜಿಲ್ಲೆಯ ಪ್ರವಾಸ ಮತ್ತು ಜಿಲ್ಲೆಯ ಸಮಸ್ಯೆಗಳ ಕುರಿತಂತೆ ವಿಧಾನಸಭೆಯ ಒಳಗೆ ಮತ್ತು ಹೊರಗೆ ಬಾಗಲಕೋಟೆ ವಿಜಯಪುರ ಜಿಲ್ಲೆಗಳಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದ ಹೋರಾಟಗಳಿಂದಾಗಿಯೇ ನನ್ನಂಥ ಅನೇಕ ಸಾಮಾನ್ಯ ಕಾರ್ಯಕರ್ತರು ನಾಯಕರಾಗಿ ಹೊರಹೊಮ್ಮಿದ್ದು ವಾಸ್ತವ ಸಂಗತಿ. ಅವರ ಮತ್ತು ದಿವಂಗತ ಅನಂತ್ ಕುಮಾರವರ, ಹೋರಾಟಗಳ ಫಲದಿಂದಾಗಿ ಅಲ್ಲದೆ ಆದರಣಿಯ ಡಿ.ಎಚ್ ಶಂಕರಮೂರ್ತಿ, ಡಾ. ತಂಗಾ ಇನ್ನಿತರ ನಾಯಕರ ಮಾರ್ಗದರ್ಶನದಿಂದಾಗಿಯೇ ಬಿಜೆಪಿ ಸಾರ್ವಜನಿಕರ ಪಾರ್ಟಿಯಾಗಿ ಹೊರಹೊಮ್ಮಿದ್ದು ಕೂಡ ಅಷ್ಟೇ ಸತ್ಯ ಒಂದು ಸಾರಿ ನಮ್ಮ ಅವಳಿ ಜಿಲ್ಲೆಗಳಲ್ಲಿ ವಿಧಾನಸಭೆಯ 15ಕ್ಕೆ 14 ಸೀಟುಗಳು ಗೆಲ್ಲಲು ಅವರ ಪ್ರೇರಣೆಯಿಂದ ತಯಾರಾದ ಕಾರ್ಯ ಕರ್ತರ ದೊಡ್ಡ ಪಡೆಯೊಂದಿಗೆ ಬಿ.ಎಸ್.ವೈರವರ ಸಮರ್ಪಿತ, ದೂರದರ್ಶಿತ್ವದ, ಕಾರ್ಯ ವೈಖರಿಯೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿನ್ನೆಲೆ ಮತ್ತು ಭಾರತೀಯ ಜನಸಂಘದ ಕುಟುಂಬದಿಂದ ಬಂದ ವ್ಯಕ್ತಿ ನಾನಾದ ಕಾರಣ ಬಿಜೆಪಿ ಹುಟ್ಟಿದ ಆರಂಭದಿಂದ ಪಾರ್ಟಿಯ ಮಂಡಲ ಉಪಾಧ್ಯಕ್ಷ ನಂತರ ಮಂಡಲ ಅಧ್ಯಕ್ಷ ಹೀಗೆ ಪದಾಧಿಕಾರಿ ನಾನಾಗಿದ್ದೆ. 1983ರಲ್ಲಿ 18 ಜನ ಬಿಜೆಪಿಯ ಶಾಸಕರು ಆಯ್ಕೆಯಾಗಿದ್ದರು.

ಅವರಲ್ಲಿ ಅಖಂಡ ವಿಜಯಪುರ-ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯಲ್ಲಿ ವಿಜಯಪುರದ ಶಾಸಕ ದಿವಂಗತ ಚಂದ್ರಶೇಖರ್ ಗಚ್ಚಿನಮಠ ಮತ್ತು ಗುಳೇದಗುಡ್ಡದ ಶಾಸಕ ಮಲ್ಲಿಕಾರ್ಜುನ ಬನ್ನಿಯವರ ಒಡನಾಟ ಬಹಳಷ್ಟು ಇತ್ತು. ಅವರ ಒಡನಾಟದಿಂದ ಮತ್ತು ವೃತ್ತಿಯಿಂದ ವಕೀಲನಾದ ಕಾರಣಕ್ಕಾಗಿ ಬೆಂಗಳೂರಿಗೆ ಹೋಗಿ ಬರುತ್ತಿದ್ದೆ. ರಾಜಕೀಯದ ಆಸಕ್ತಿಯಿಂದಾಗಿ ಅವರಿಬ್ಬರ ಜೊತೆಗೆ ವಿಧಾನಸೌಧಕ್ಕೆ ಹೋಗಿ ಬರುತ್ತಿದ್ದೆ. ಅಧಿವೇಶನ ನಡೆಯುವ ಸಂದರ್ಭದಲ್ಲಿ ಬಹಳ ಸಾರಿ ವಿಧಾನಸಭೆಯ ಮೊಗಶಾಲೆಯಲ್ಲಿ ಅವರ ಜೊತೆ ಕುಳಿತು ಮಾತನಾಡುವ ಹರಟೆ ಹೊಡೆಯುವ ಅವಕಾಶ ನಾನು ಮಾಡಿಕೊಂಡಿದ್ದೆ.

ಆ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಅಧಿವೇಶನದ ಕಾರ್ಯ ಕಲಾಪಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತಂತೆ ರೈತ ನೇಕಾರರ ಸಮಸ್ಯೆಗಳ ಕುರಿತಂತೆ ಎಳೆ ಎಳೆಯಾಗಿ ಬಿಡಿಸಿ ಹೇಳುವ ವೈಖರಿ, ಮಾತಿನಲ್ಲಿ ಆಕ್ರೋಶ ಸಭೆಯ ಸದಸ್ಯರೆಲ್ಲರೂ ನಿಬ್ಬೆರಗಾಗಿ ಆಲಿಸುವಂತೆ ಮಾಡುವ ರೀತಿ ಬಹುತೇಕ ಸದಸ್ಯರು ಅಸೂಯೆ ಪಡುವಂತೆ ಮಾಡುತ್ತಿತ್ತು. ಇದನ್ನು ನಾನು ಪ್ರತ್ಯಕ್ಷವಾಗಿ ಪ್ರೇಕ್ಷಕರ ಗ್ಯಾಲರಿಯಲ್ಲಿಯೂ ಕುಳಿತು ನೋಡಿದ್ದೇನೆ.

ಯಡಿಯೂರಪ್ಪನವರ ಭಾಷಣದಲ್ಲಿ ಕಂಡು ಬರುತ್ತಿದ್ದ ಸಿಟ್ಟಿನಲ್ಲಿಯೂ ಪ್ರಾಮಾಣಿಕತೆ, ವಾಸ್ತವಿಕತೆ ಸ್ಪಷ್ಟತೆ ಮತ್ತು ಆದರತೆಯ ದಾಟಿಯಿಂದ ಕೇಳುಗರ ಮನ ತಟ್ಟುತ್ತಿತ್ತು. ಅಂದಿನಿಂದಲೇ ನಾನು ಅವರ ಅಭಿಮಾನಿಯಾಗಿದ್ದೆ. 1989ರಲ್ಲಿ ಬಾಗಲಕೋಟೆ ವಿಧಾನ ಸಭೆಗೆ ಅವರ ಒತ್ತಾಯದಿಂದಲೇ ಸ್ಪರ್ಧೆ ಮಾಡಿದಾಗ ಅವರು ರಾಜ್ಯಾಧ್ಯಕ್ಷರಾಗಿದ್ದರು.

ಮತ್ತೊಮ್ಮೆ 1991ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ದಿವಂಗತ ಜನತಾದಳದ ರಾಮಕೃಷ್ಣ ಹೆಗಡೆಯವರ ವಿರುದ್ಧ ಸ್ಪರ್ಧೆ ಮಾಡಲು ಬಿಜೆಪಿಯಿಂದ ನಾನೊಲ್ಲೆ ತಾನೊಲ್ಲೆ ಎಂದು ಯಾರೂ ಸ್ಪರ್ಧೆ ಗಿಳಿಯಲು ಒಪ್ಪದಿದ್ದಾಗ ದಿವಂಗತ ಅನಂತಕುಮಾರರೊಂದಿಗೆ ಚರ್ಚಿಸಿ ಜಾಣ್ಮೆಯಿಂದ ನನ್ನನ್ನೇ ಸ್ಪರ್ಧೆಗಿಳಿಯಲು ಪುಸಲಾಯಿಸಿದ್ದು ಕೂಡ ಒಂದು ಇತಿಹಾಸ.



ಯಡಿಯೂರಪ್ಪನವರೆ ನನಗೆ ಮಾರ್ಗದರ್ಶಕ


1992ರಲ್ಲಿ ಅಖಂಡ ವಿಜಯಪುರ ಜಿಲ್ಲೆಯ ಬಿಜೆಪಿಯ ಅಧ್ಯಕ್ಷನಾದ ನಂತರ ಮೇಲಿಂದ ಮೇಲೆ ಪಾರ್ಟಿಯ ಮೀಟಿಂಗ್ ಗಳಿಗೆ ಬೆಂಗಳೂರಿಗೆ ಹೋಗಿ ಬರುವ ಜವಾಬ್ದಾರಿ ನನ್ನದಾಗಿತ್ತು. ಪ್ರತಿ ಸಭೆಯಲ್ಲಿಯೂ ಕೂಡ ಅವರ ಮಾತನ್ನು ಕೇಳಬೇಕೆಂಬ ತುಡಿತ ನನ್ನಲ್ಲಿ ಮನೆ ಮಾಡಿತ್ತು. ಮೇಲಿಂದ ಮೇಲೆ ರೈತರ ಬೆಳೆ ಹಾನಿ ಅವರ ದುಸ್ಥಿತಿಯ ಕುರಿತು ವರ್ಣಿಸುವಾಗ ಮತ್ತು ಒಮ್ಮೊಮ್ಮೆ ದೀನದಲಿತರ ಬದುಕಿನ ಕುರಿತಂತೆ, ಅವರು ತಮ್ಮ ಗುಡಿಸಲಿನಲ್ಲಿ ಪಡುತ್ತಿರುವ ತೊಂದರೆಗಳ ಕುರಿತಂತೆ ವರ್ಣಿಸುವಾಗ ನನ್ನ ಹೃದಯ ಕೂಡ ಭಾರವಾಗುತ್ತಿತ್ತು. ಕಾರ್ಯಕರ್ತರಾಗಿ ಅವರ ಸೇವೆಗೆ, ಸಹಾಯಕ್ಕೆ, ಅವರ ಪರವಾಗಿ ಹೋರಾಟ ಹಮ್ಮಿಕೊಳ್ಳಲು ಅವರ ನೆರವಿಗೆ ಧಾವಿಸಿ ಹೋಗಬೇಕೆನ್ನುವ ಅವರ ಮಾತಿನ ಛಾಟಿ ಎಲ್ಲರಿಗೂ ಜವಾಬ್ದಾರಿಯ ಜಾಗೃತಿ ಮೂಡಿಸುತ್ತಿತ್ತು. ಆವಾಗಿನಿಂದ ಅವರ ಕಟ್ಟಾ ಅಭಿಮಾನಿಯಾಗಿ ಅವರು ಹೇಳಿದ ದಾಟಿಯಲ್ಲಿಯೇ, ದೀನದಲಿತರ ಬಗ್ಗೆ ನನ್ನಲ್ಲಿ ಹುದುಗಿದ್ದ ಮಾನವೀಯ ಅಂತಃಕರಣ ಇಮ್ಮಡಿಯಾಗಿ ಜಾಗೃತವಾಗುತ್ತಾ ಬಂದಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ ಎಂದು ನನ್ನ ವಿನೀತ ಭಾವನೆ.

ಯಡಿಯೂರಪ್ಪನವರ ಕಾಲದಲ್ಲಿ ಕೃಷ್ಣೆ ಪ್ರಗತಿ

ಅವರು ರಾಜಾಧ್ಯಕ್ಷರಿರಲಿ ಇಲ್ಲದೆ ಇರಲಿ ಬಿಜೆಪಿಯ ತವರು ಜಿಲ್ಲೆಗಳಾದ ದಕ್ಷಿಣ ಕನ್ನಡ ಶಿವಮೊಗ್ಗ ಜಿಲ್ಲೆಗಳನ್ನು ಬಿಟ್ಟರೆ ಉತ್ತರ ಕರ್ನಾಟಕದ ಬಾಗಲಕೋಟೆ ವಿಜಯಪುರ ಜಿಲ್ಲೆಗಳಿಗೆ ಸುತ್ತಿದ್ದೆ ಹೆಚ್ಚು. ಏಕತಾ ಯಾತ್ರೆಯ ಸಂದರ್ಭ, ರಾಮ ಮಂದಿರ ಹೋರಾಟದ ಸಂದರ್ಭಗಳಲ್ಲಿ, ರೈತ ನೇಕಾರರ ಹೋರಾಟಗಳ ಸಂದರ್ಭದಲ್ಲಿ ಅಲ್ಲದೆ ಆಗ ಬಚಾವತ್ ಐ ತೀರ್ಪಿನಂತೆ 2000 ಇಸ್ವಿಯ ಒಳಗಡೆ ಕರ್ನಾಟಕವು ತನ್ನ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲೇಬೇಕು ಇಲ್ಲದಿದ್ದ ಪಕ್ಷದಲ್ಲಿ ಆ ನೀರನ್ನು ಬೇರೆ ರಾಜ್ಯಗಳಿಗೆ ಹಂಚಲಾಗುವುದು ಎಂಬ ಶರತ್ತು ಐತೀರ್ಪಿನಲ್ಲಿ ಇದ್ದಾಗಲೂ ಕೂಡ ಆಗಿನ ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಪೂರ್ತಿಗಾಗಿ ಅಗತ್ಯ ಅನುದಾನ ನೀಡದೆ ವಿಳಂಬ ನೀತಿ ಅನುಸರಿಸುತ್ತಿದ್ದ, ಯೋಜನೆಯಲ್ಲಿ ಸಂತ್ರಸ್ಥರಾಗುತ್ತಿದ್ದ ರೈತರಿಗೆ ಯೋಗ್ಯ ಪರಿಹಾರ ಧನ ವಿತರಣೆ ಮಾಡದೇ ಇರುವ ಹಾಗೂ ಮುಳುಗಡೆಯಲ್ಲಿ ಬಂದ ಬಾಗಲಕೋಟೆ ಮತ್ತು ನೂರಾರು ಹಳ್ಳಿಗಳ ಸಂತ್ರಸ್ತರಿಗೆ ಯೋಗ್ಯ ಪುನರವಸತಿ ಸೌಲಭ್ಯ ನೀಡುವಲ್ಲಿ ತೋರುತ್ತಿದ್ದ ಸರ್ಕಾರದ ತಾತ್ಸಾರ ಮನೋಭಾವನೆ ಇವೆಲ್ಲವೂ ಕುರಿತಂತೆ ಆ ವರ್ಷಗಳಲ್ಲಿ ಸರ್ಕಾರದ ಮೇಲೆ ಒತ್ತಡ ಹೇರುವ ದಿಸೆಯಲ್ಲಿ ಮೇಲಿಂದ ಮೇಲೆ ಹೋರಾಟಗಳನ್ನು ಕೂಡ ಹಮ್ಮಿಕೊಳ್ಳಲಾಗುತ್ತಿತ್ತು. ಆ ಕಾರಣದಿಂದಾಗಿ ಆಲಮಟ್ಟಿಯಲ್ಲಿ ಹಮ್ಮಿಕೊಂಡ ಹೋರಾಟ ಒಂದರಲ್ಲಿ ನೂರಾರು ಕಾರ್ಯಕರ್ತರೊಡಗೂಡಿ ಯಡಿಯೂರಪ್ಪನವರ ಜೊತೆಗೆ ಪೊಲೀಸರ ಅತಿಥಿ ಕೂಡ ನಾನಾಗಿದ್ದೆ. ಅವರ ಆಡಳಿತದ ಅವಧಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಪ್ರಗತಿ ಬಹಳ ಕಂಡಿದೆ.







ಯಡಿಯೂರಪ್ಪನವರ ಪರಿಶ್ರಮಕ್ಕೆ ಬೇರೆ ಯಾರು ಸಾಟಿ ಇಲ್ಲ

ಯಾರು ಏನೇ ಹೇಳಲಿ ಕರ್ನಾಟಕದ ಭಾರತೀಯ ಜನತಾ ಪಕ್ಷದ ಇತಿಹಾಸದಲ್ಲಿ ಮಾನ್ಯ ಯಡಿಯೂರಪ್ಪನವರ ಪರಿಶ್ರಮಕ್ಕೆ ಸಾಟಿಯಾದ ಬೇರೆ ವ್ಯಕ್ತಿ ಇಲ್ಲ ಅನ್ನುವುದು ಕೂಡ ಅಷ್ಟೇ ದಿಟವಾದ ಸಂಗತಿ, ಯಾರೂ ಕೂಡ ಅಲ್ಲಗಳೆಯಲು ಅಸಾಧ್ಯವಾದ ಸಂಗತಿ. ಇಂಥ ಮಹಾನ್ ನಾಯಕನ ಸಾರ್ವಜನಿಕ ಸೇವೆಯ ಸಮರ್ಪಿತ 50 ವಸಂತಗಳ ಪೂರೈಕೆಯ ಹಿನ್ನೆಲೆಯಲ್ಲಿ ಹಮ್ಮಿಕೊಂಡಂತ ಅಭಿನಂದನೋತ್ಸವ, ಅಭಿಮಾನೋತ್ಸವ ಯಶಸ್ವಿಯಾಗಲಿ ಎಂಬುದೇ ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತನ ಮನದಾಳದ ಮಾತು.

ಲೇಖಕರು: ■ ಪಿ.ಎಚ್.ಪೂಜಾರ, ವಿಧಾನ ಪರಿಷತ್ ಸದಸ್ಯ
(ಬಾಗಲಕೋಟೆಯ ಎರಡು ಅವಧಿಯ ಶಾಸಕ)

ಬದಲಾವಣೆ ಗೊಂದಲ ನಿವಾರಿಸಿ: ಸಚಿವ ಸತೀಶ

• **ದಾವಣಗೆರೆ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗೆಗಿನ ಗೊಂದಲವನ್ನು ಕಾಂಗ್ರೆಸ್ ಹೈಕಮಾಂಡ್ ಆದಷ್ಟು ಬೇಗ ಬಗೆಹರಿಸಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್ ಬಯಸಿದರೆ 5 ವರ್ಷ ತಾವೇ ಸಿಎಂ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದು, ಸಿಎಂ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಲು ಆಗಲ್ಲ. ಪಕ್ಷದಲ್ಲಿ ಗೊಂದಲ ಇರುವುದು ನಿಜ. ಯಾರು ಮುಖ್ಯಮಂತ್ರಿಯಾಗುತ್ತಾರೋ ಇಲ್ಲವೋ ಗೊತ್ತಿಲ್ಲ. ಶೀಘ್ರವೇ ದೆಹಲಿಯಲ್ಲಿ ನಡೆಯುವ ಸಭೆಯಲ್ಲಿ ಗೊಂದಲ ಬಗೆಹರಿಸಬೇಕು ಎಂಬುದು ನಮ್ಮ ಮನವಿಯಾಗಿದೆ ಎಂದರು.

ಸಿಎಂ ಕುರ್ಚಿ ವಿಚಾರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಸರು ಮುನ್ನೆಲೆಗೆ ಬಂದ ವಿಚಾರ ಗೊತ್ತಿಲ್ಲ. ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವಂತೆ ಕೆಲವರು ಆಗ್ರಹಿಸುತ್ತಿದ್ದಾರೆ. ಅದೆಲ್ಲಾ ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಮ್ಮ ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ, ಕಾದು ನೋಡೋಣ. ಯಾರಿಗೆ ಯಾವ ಸ್ಥಾನ ನೀಡಬೇಕು ಎಂಬುದನ್ನು ವರಿಷ್ಠರು ಸೂಕ್ತ ಸಮಯದಲ್ಲಿ ತೀರ್ಮಾನಿಸುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

> **ಚಿತ್ರದುರ್ಗದಲ್ಲಿ ಮೇ 9ರಂದು ಯಡಿಯೂರಪ್ಪ ಅಭಿನಂದನೋತ್ಸವ ಮಾಡುತ್ತಿದ್ದು, ಯಡಿಯೂರಪ್ಪನವರಿಗೆ ಒಳ್ಳೆಯದಾಗಲಿ. ಬಿ.ಎಸ್.ವೈ ಹೋರಾಟಗಾರರು. ಬಹಳ ಕೆಳ ಹಂತದಿಂದ ಇಲ್ಲಿವರೆಗೆ ಬಂದಿದ್ದಾರೆ. ರಾಜಕೀಯವೇ ಬೇರೆ, ಪಕ್ಷಗಳೇ ಬೇರೆ. ಆದರೆ, ವೈಯಕ್ತಿಕವಾಗಿ ಒಬ್ಬ ಹೋರಾಟಗಾರನಾಗಿ ಇಷ್ಟೆಲ್ಲಾ ಬೆಳೆದಿರುವ ಯಡಿಯೂರಪ್ಪನವರಿಗೆ ನಾನು ಅಭಿನಂದಿಸುತ್ತೇನೆ.**
> ■ **ಸತೀಶ್ ಜಾರಕಿಹೊಳಿ, ಸಚಿವ**

ಸ್ವಾಗತ



ಚಿತ್ರದುರ್ಗದಲ್ಲಿ ಶುಕ್ರವಾರ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೂ ಮುನ್ನ ಪುರ ಪ್ರವೇಶ ಮಾಡಿದ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದರಾದ ಗೋವಿಂದ ಕಾರಜೋಳ, ಬಿ.ವೈ.ರಾಘವೇಂದ್ರ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಮಾಜಿ ಸಚಿವರಾದ ಶ್ರೀರಾಮುಲು, ಬಿ.ಸಿ. ಪಾಟೀಲ್, ಜಿ. ಜನಾರ್ಧನ್ ರೆಡ್ಡಿ ಇದ್ದರು.

ಜನತೆ ಪರವಾಗಿ ಮೋದಿಗೆ ಆರ್.ಅಶೋಕ ಅಭಿನಂದನೆ

• **ಬೆಂಗಳೂರು:** ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿಗೆ ಪಶ್ಚಿಮ ಬಂಗಾಲ ಸೇರಿ ವಿವಿಧ ರಾಜ್ಯಗಳಲ್ಲಿ ದೊಡ್ಡ ಗೆಲುವು ತಂದು ಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರು ಮೇ.10 ರಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ. ಅವರಿಗೆ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.



ಮೋದಿ ಅವರ ಸ್ವಾಗತ ಸಂಬಂಧ ಎಚ್‌ಎಎಲ್ ಬಳಿ ಪೂರ್ವ ತಯಾರಿ ವೀಕ್ಷಿಸಿದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ವಿಮಾನ ನಿಲ್ದಾಣಕ್ಕೆ ಬರುವ ಪ್ರಧಾನಿ ಅವರು ಇಲ್ಲಿ 30 ನಿಮಿಷಗಳ ಕಾಲ ಭಾಷಣ ಮಾಡುತ್ತಾರೆ ಎಂದು. ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ರೇಷ್ಮೆ ಶಾಲು ಹೊದಿಸಿ ಗೌರವಿಸುತ್ತೇವೆ. ಸುಮಾರು 15 ರಿಂದ 20 ಸಾವಿರ ಜನರು ಆಗಮಿಸಲಿದ್ದಾರೆ ಎಂದು ತಿಳಿಸಿದರು. ಮಾಜಿ ಸಚಿವ ಅರವಿಂದ ಲಿಂಬಾವಳಿ, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ಇದ್ದರು.

ಮೇ 18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2

• **ಬೆಂಗಳೂರು:** 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ -2 ಅನ್ನು ಮೇ 18 ರಿಂದ 25 ರವರೆಗೆ ರಾಜ್ಯಾದ್ಯಂತ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ವತಿಯಿಂದ ಎಲ್ಲ ಪೂರ್ವಸಿದ್ಧತೆ ಮಾಡಿಕೊಂಡಿದೆ. ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಕ್ಕೆ 1,14,444 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, 358 ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದೆ. ಪರೀಕ್ಷೆ 2 ಅನ್ನು ಹಿಂದಿನ ವರ್ಷಗಳಂತೆ ವ್ಯವಸ್ಥಿತವಾಗಿ ಮತ್ತು ಪಾರದರ್ಶಕತೆಯಿಂದ ನಡೆಸಲಾಗುವುದು. ಪರೀಕ್ಷಾ ಪೂರ್ವದಲ್ಲಿ ಹಾಗೂ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಸಂಬಂಧಿತ ವದಂತಿಗಳ ವಿರುದ್ಧ ಆಗತ್ಯ ಕಾನೂನು ಕ್ರಮಕೈಗೊಳ್ಳುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಿರುಸುದ್ದಿ

ಸಿಂಡಿಕೇಟ್ ಸದಸ್ಯರ ನಾಮ ನಿರ್ದೇಶನ

• **ಬೆಂಗಳೂರು:** ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯರನ್ನಾಗಿ ಐವರನ್ನು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ನಾಮ ನಿರ್ದೇಶನ ಮಾಡಿದ್ದಾರೆ. ಸಾಮಾನ್ಯ ವರ್ಗದಿಂದ ಎಸ್.ಬಿ. ರಾಜಣ್ಣ ಇತರೆ ಹಿಂದುಳಿದ ವರ್ಗದಿಂದ ರಮೇಶ್ ಆರ್. ಬಡ್ನೂರ್ ಮತ್ತು ಧ್ರುವ ರಾಜಣ್ಣ ಹೊನ್ನಪ್ಪನವರ್, ಪರಿಶಿಷ್ಟ ಜಾತಿಯಿಂದ ಲೋಕೇಶ್ ಕೆ.ಜಿ. ಮತ್ತು ಪರಿಶಿಷ್ಟ ಜಾತಿ ಮಹಿಳಾ ಕೋಟಾದಿಂದ ಪದ್ಮಾವತಿ ಎಚ್. ಮಾನೆ ಅವರನ್ನು ನೇಮಿಸಲಾಗಿದೆ. ಈ ಸದಸ್ಯರ ಅಧಿಕಾರವಧಿ ಮೂರು ವರ್ಷ ಅಥವಾ ಸಿಂಡಿಕೇಟ್‌ನ ಪುನರ್ ರಚನೆ ಆಗುವವರೆಗೆ ಇರಲಿದೆ ಎಂದು ರಾಜ್ಯಪಾಲರ ಆದೇಶ ತಿಳಿಸಿದೆ. ರಾಜ್ಯ ಸರ್ಕಾರವು ಸಲ್ಲಿಸಿದ್ದ ಹೆಸರುಗಳನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡಿದ್ದಾರೆ.



ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ ಗುಂಡೂರಾವ್

• **ಮಂಗಳೂರು:** ಕೇರಳದಲ್ಲಿ ಸರ್ಕಾರ ರಚನೆಯಾದ ಬಳಿಕ ಕರ್ನಾಟಕದಲ್ಲಿಯೂ ಸಚಿವ ಸಂಪುಟ ವಿಸ್ತರಣೆ ಬಗ್ಗೆ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ. ಈ ನಡುವೆ ಯಾರು ಯಾವ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂಬುದು ನನಗೆ ತಿಳಿದಿಲ್ಲ. ಪಕ್ಷದ ವರಿಷ್ಠರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಚಿವ ಸಂಪುಟವನ್ನು ಮೂರು ವರ್ಷದ ಬಳಿಕ ವಿಸ್ತರಣೆ ಮಾಡುವ ತೀರ್ಮಾನ ಈಗಾಗಲೇ ಇದೆ. ವರಿಷ್ಠರ ತೀರ್ಮಾನದಂತೆ ಎಲ್ಲವೂ ಆಗಲಿದೆ ಎಂದರು. ಪಂಚ ರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್ ಗಮನಾರ್ಹ ಸಾಧನೆ ತೋರಿದೆ. ರಾಜ್ಯದ ಉಪಚುನಾವಣೆಯಲ್ಲಿಯೂ ಪಕ್ಷಕ್ಕೆ ಉತ್ತಮ ಫಲಿತಾಂಶ ದೊರಕಿದೆ. ಕೇರಳದಲ್ಲಿಯೂ ಜಯವಾಗಿದ್ದು, ಪಕ್ಷಕ್ಕೆ ಜನ ಮತ್ತಷ್ಟು ಶಕ್ತಿ ತುಂಬಿದ್ದಾರೆ ಎಂದವರು ಹೇಳಿದರು. ಈ ತಿಂಗಳ 15ಕ್ಕೆ ಸಿಹಿಯ ಸುದ್ದಿ ಬರುತ್ತದೆ ಎಂದು ಡಿ.ಕೆ. ಸುರೇಶ್ ಅವರು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಯಾರೂ ಯಾವುದೇ ದಿನಾಂಕ ನಿಗದಿ ಮಾಡಲು ಆಗದು. ಅಂತಿಮವಾಗಿ ಕೇಂದ್ರದ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ. ಅವರ ಸಮಯ, ಮುಹೂರ್ತವನ್ನು ನಾವು ತೀರ್ಮಾನ ಮಾಡಲು ಆಗದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಮೇಟಿ, ಶಾಮನೂರು ಪ್ರಮಾಣವಚನ

• **ಬೆಂಗಳೂರು:** ಬಾಲಗಕೋಟೆ ಹಾಗೂ ದಾವಣಗೆರೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಜಯಶೀಲರಾಗಿರುವ ಉಮೇಶ ಹುಲ್ಲಪ್ಪ ಮೇಟಿ ಹಾಗೂ ಸಮರ್ಥ್ ಶಾಮನೂರು ಅವರು ಸೋಮವಾರ ಬೆಳಗ್ಗೆ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸೋಮವಾರ ಬೆಳಗ್ಗೆ 10 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ 334ರ ಸಂಖ್ಯೆಯ ಕೊಠಡಿಯಲ್ಲಿ ಸಭಾಧ್ಯಕ್ಷರಾದ ಯು.ಟಿ. ಖಾದರ್ ಅವರಿಂದ ಪ್ರಮಾಣ ವಚನವನ್ನು ಸ್ವೀಕರಿಸಲಿದ್ದಾರೆ.

ರೈತರ ಬೆಳವಣಿಗೆಗೆ ಸಹಕಾರ ನೀಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸಹಕಾರ ಕ್ಷೇತ್ರದಿಂದ ಪ್ರಗತಿ

• **ಬೆಂಗಳೂರು:** ಯಾವ ಕ್ಷೇತ್ರವೂ ಸಹಕಾರ ಕ್ಷೇತ್ರದಿಂದ ಹೊರತಾಗಿರಲು ಸಾಧ್ಯವಿಲ್ಲ. ರೈತರ ಬೆಳವಣಿಗೆಗೆ ಸಹಕಾರ ಇಲಾಖೆ ಕಾರ್ಯ ನಿರ್ವಹಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರ ನೂತನ ಆಡಳಿತ ಕಚೇರಿ ಸಹಕಾರ ಸಮೃದ್ಧಿ ಸೌಧವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, 2023 ರಲ್ಲಿ ಕಟ್ಟಡಕ್ಕೆ ಭೂಮಿ ಪೂಜೆಯನ್ನು ನಾವೆ ನೆರವೇರಿಸಿದ್ದು, ಮೂರು ವರ್ಷಗಳಲ್ಲಿ 19.43 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ ಎನ್ನುವುದು ಸಂತಸದ ವಿಚಾರ ಎಂದರು.

ನೆಹರೂ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಒಂದು ಊರಿನಲ್ಲಿ ಒಂದು ಶಾಲೆ, ಪಂಚಾಯತಿ ಮತ್ತು ಸಹಕಾರ ಸಂಘ ಇರಲೇ ಬೇಕು. ಆಗ ಮಾತ್ರ ಆ ಊರಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದಿದ್ದರು. ಪ್ರಸ್ತುತ ಹಾಲಿನ ಸೊಸೈಟಿಗಳಾದ ನಂತರ ಪ್ರತಿ ಊರಿನಲ್ಲಿ ಇದು ಸಾಧ್ಯವಾಗಿದೆ ಎಂದರು.

ರೈತರ ಬೆಳವಣಿಗೆ: ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ ಎಂಬ ಸಹಕಾರಿ ತತ್ವದಡಿ ರಾಜ್ಯ ಅಭಿವೃದ್ಧಿಯಾಗುತ್ತಿದೆ. ರೈತರ ಬೆಳವಣಿಗೆಗೆ ಸಹಕಾರ ಇಲಾಖೆ ಕಾರ್ಯ ನಿರ್ವಹಿಸಬೇಕು. ಶೇ 60 ರಷ್ಟು ಜನ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದು, ಗ್ರಾಮದ ಜನರಿಗೆ ಅಗತ್ಯ ಸೌಲಭ್ಯಗಳನ್ನು ಸಹಕಾರಿ ಸಂಘಗಳ ಮೂಲಕ ನೀಡಲಾಗುತ್ತಿದೆ ಎಂದು ತಿಳಿಸಿದರು.

ಉತ್ತರ ಕರ್ನಾಟಕದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಬೇಕು: ಹಾಲಿನ ಸೊಸೈಟಿಗಳು ಬಂದ ನಂತರ ರೈತರ ಪರಿಸ್ಥಿತಿ ಉತ್ತಮವಾಗಿದ್ದು ಒಂದು ಕೋಟಿ ಲೀಟರ್ ಹಾಲು ದಿನವೊಂದಕ್ಕೆ ಉತ್ಪಾದನೆಯಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಬೇಕು. ಅತ್ಯಂತ ಲಾಭ ದಾಯಕವಾದ ಉಪ ಕಸುಬಾಗಿ ಸಹಕಾರ ಕ್ಷೇತ್ರದಿಂದ ಸಾಧ್ಯವಾಗಿದೆ ಎಂದು ತಿಳಿಸಿದರು.



> ರೈತರ ಬೆಳವಣಿಗೆಗೆ ಸಹಕಾರ ಇಲಾಖೆ ಕಾರ್ಯ ನಿರ್ವಹಿಸಬೇಕು. ಸಹಕಾರ ಸೌಧದಲ್ಲಿ ಸೇವೆ ಉತ್ತಮವಾಗಿರಲಿ.
> ■ **ಸಿದ್ದರಾಮಯ್ಯ, ಮುಖ್ಯಮಂತ್ರಿ**

> ರಾಜ್ಯದ ಸಕ್ಕರೆ ಕಾರ್ಖಾನೆಗಳು ಇವತ್ತು ಜೀವಂತವಾಗಿದ್ದರೆ ಅದಕ್ಕೆ ಡಿಸಿಸಿ ಬ್ಯಾಂಕ್‌ಗಳ ಸಹಕಾರವೇ ಕಾರಣ. ಸಹಕಾರ ಕ್ಷೇತ್ರವು ಸಮಾಜದ ಪರ್ಯಾಯ ಆರ್ಥಿಕತೆಯಾಗಿ ಬೆಳೆಯಬೇಕು.
> ■ **ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ**

ಅನ್ಯಾಯವಾಗಬಾರದು: ಡಿ.ಕೆ.ಶಿವಕುಮಾರ್

ಸರ್ಕಾರವು ರೈತರಿಗಾಗಿ ನೀಡುವ ಶೂನ್ಯ ಬಡ್ಡಿ ದರದ ಸಾಲವನ್ನು ಕೆಲವು ಸೊಸೈಟಿ ಕಾರ್ಯದರ್ಶಿಗಳು ರೈತರಿಗೆ ತಲುಪಿಸದೆ, ತಮ್ಮದೇ ಹೆಸರಿನಲ್ಲಿ ಪಡೆದು ಮೀಟರ್ ಬಡ್ಡಿಗೆ ಬಿಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಸಾಮಾನ್ಯ ಜನರಿಗಿಂತಲೂ ಕೆಲವು ಸಹಕಾರ ಸಂಘದ ಅಧಿಕಾರಿಗಳು ಹೆಚ್ಚಿನ ಆಸ್ತಿ ಪಾಸ್ತಿ ಮಾಡುತ್ತಿರುವುದರ ಹಿಂದೆ ದೊಡ್ಡ ಅವ್ಯವಹಾರ ಅಡಗಿದೆ. ಹಾಲಿನ ಸೊಸೈಟಿಗಳಲ್ಲಿ ಅಳತೆ ಮತ್ತು ಫ್ಯಾಟ್ ವಿಚಾರದಲ್ಲಿ ಮೋಸ ಮಾಡಲಾಗುತ್ತಿದೆ. ರೈತರು ಕಷ್ಟಪಟ್ಟು ಬೆವರು ಸುರಿಸಿ ಹಾಲು ಕೊಡುತ್ತಾರೆ, ಅವರಿಗೆ ಅನ್ಯಾಯವಾಗಬಾರದು. ಸಹಕಾರ ಇಲಾಖೆಯ ರಿಜಿಸ್ಟ್ರಾರ್ , ಡಿಆರ್ ಮಟ್ಟದ ಅಧಿಕಾರಿಗಳು ಇಂತಹ ಅಕ್ರಮಗಳ ಮೇಲೆ ಕಣ್ಣಿಡಬೇಕು. ರೈತರಿಗೆ ಮೋಸವಾಗದಂತೆ ತಡೆಯುವುದು ಅಧಿಕಾರಿಗಳ ಜವಾಬ್ದಾರಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಸಿದರು.

ಸೈಬರ್ ಅಪರಾಧ ಹೆಚ್ಚಳ: ಎನ್‌ಸಿಆರ್

• **ಬೆಂಗಳೂರು:** ತಂತ್ರಜ್ಞಾನದ ರಾಜಧಾನಿ ಎಂದು ಕರೆಸಿಕೊಳ್ಳುವ ಬೆಂಗಳೂರು ಈಗ ಸೈಬರ್ ಅಪರಾಧಗಳ ಕೇಂದ್ರವಾಗಿಯೂ ಬದಲಾಗುತ್ತಿದೆಯೇ ಎಂಬ ಆತಂಕ ಎದುರಾಗಿದೆ. ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) 2024ರ ವರದಿಯಲ್ಲಿ ತಿಳಿದು ಬಂದಿದೆ.

ಸೈಬರ್ ಅಪರಾಧ ಪ್ರಕರಣಗಳಲ್ಲಿ ಬೆಂಗಳೂರು ಇಡೀ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ವಿಶೇಷವೆಂದರೆ, ಕರ್ನಾಟಕದಲ್ಲಿ ದಾಖಲಾಗುವ ಒಟ್ಟು ಸೈಬರ್ ಪ್ರಕರಣಗಳ ಪೈಕಿ ಮುಕ್ಕಾಲು ಭಾಗದಷ್ಟು ಪ್ರಕರಣಗಳು ಬೆಂಗಳೂರು ನಗರವೊಂದರಲ್ಲೇ ದಾಖಲಾಗಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಏರಿಕೆಯ ಹಾದಿಯಲ್ಲಿ ಸೈಬರ್ ವಂಚನೆ ಜಾಲ: ಕರ್ನಾಟಕದಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಏರುಗತಿಯಲ್ಲಿದೆ. 2024ರಲ್ಲಿ ರಾಜ್ಯದಲ್ಲಿ ಒಟ್ಟು 21,993 ಸೈಬರ್ ಪ್ರಕರಣ ದಾಖಲಾಗಿದ್ದು, 2023ರಲ್ಲಿ ಈ ಸಂಖ್ಯೆ 21,889 ಇತ್ತು. ಇಡೀ ರಾಜ್ಯದ ಪ್ರಕರಣಗಳಲ್ಲಿ ಬೆಂಗಳೂರಿನದ್ದೇ ಸಿಂಹ ಪಾಲು ಇದ್ದು, 2024ರಲ್ಲಿ ನಗರದಲ್ಲಿ 17,561 ಪ್ರಕರಣಗಳು ದಾಖಲಾಗಿವೆ. ದೇಶದ ಇತರ ಮೆಟ್ರೋ ನಗರಗಳಿಗೆ ಹೋಲಿಕೆ ಮಾಡಿದಾಗ ಬೆಂಗಳೂರಿನಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಿದೆ.

ಮುಂಬೈ ಹೈದರಾಬಾದ್‌ಗಿಂತಲೂ ಬೆಂಗಳೂರು ಮುಂದಕ್ಕೆ: ಸೈಬರ್ ಅಪರಾಧಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನಗಳಲ್ಲಿ ದೇಶದ ಇತರ ಪ್ರಮುಖ ನಗರಗಳಿವೆ. ಮುಂಬೈ 4,939 ಪ್ರಕರಣಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಹೈದರಾಬಾದ್ 4,009 ಪ್ರಕರಣಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಚೆನ್ನೈ, ಪುಣೆ ಮತ್ತು ಲಕ್ನೋ ನಗರಗಳಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಬೆಂಗಳೂರಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಇದೆ. ಬೆಂಗಳೂರಿನಲ್ಲಿ ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಒಟ್ಟು 5,096 ವ್ಯಕ್ತಿಗಳು ಶಿಕ್ಷೆಗೊಳಗಾಗಿದ್ದಾರೆ ಎಂದು ವರದಿಯಿಂದ ತಿಳಿದುಬಂದಿದೆ.

ಬಾಕಿ ಉಳಿದಿವೆ ಸಾವಿರಾರು ಪ್ರಕರಣಗಳು: ನಗರದಲ್ಲಿ ದಾಖಲಾದ ಪ್ರಕರಣಗಳ ಪೈಕಿ ಕೇವಲ 3,632 ಪ್ರಕರಣಗಳು ಮಾತ್ರ ಇತ್ಯರ್ಥಗೊಂಡಿದ್ದು, ಇನ್ನೂ 13,929 ಪ್ರಕರಣಗಳು ತನಿಖಾ ಹಂತದಲ್ಲೇ ಬಾಕಿ ಉಳಿದಿರುವುದು ಆತಂಕ ಮೂಡಿಸಿದೆ.

ಬಹುತೇಕ ಪ್ರಕರಣಗಳು ಆನ್‌ಲೈನ್ ಹಣಕಾಸು ವಂಚನೆ ಬಳಸಿಕೊಂಡು ನಡೆಯುವ ಅಪರಾಧಗಳಾಗಿವೆ. ಡಿಜಿಟಲ್ ಲೋಕದ ವಂಚನೆಗಳಲ್ಲಿ ಆರೋಪಿಗಳ ಪತ್ತೆ ಹಚ್ಚುವಲ್ಲಿ ಎದುರಾಗುತ್ತಿರುವ ತಾಂತ್ರಿಕ ಸವಾಲುಗಳು ಮತ್ತು ಸಾಕ್ಷ್ಯಾಧಾರಗಳ ಕೊರತೆ ಪ್ರಕರಣಗಳ ವಿಳಂಬಕ್ಕೆ ಕಾರಣ ಎನ್ನಲಾಗಿದೆ.

ಆಟೋಮೇಷನ್‌ನಿಂದ ಸಕಾಲ ಸೇವೆಗೆ ವೇಗ

• **ಬೆಂಗಳೂರು:** ಸಕಾಲ ಗ್ಯಾರಂಟಿ ಸೇವೆಯನ್ನು ನಿಗದಿತ ಸಮಯಕ್ಕೆ ನೀಡಲು ಕೆಲವು ಸೇವೆಗಳನ್ನು ಆಟೋಮೇಷನ್ (ಡಿಜಟಲೀಕರಣ) ಮಾಡಬೇಕು. ಇದರಿಂದ ಜನರಿಗೆ ಸೇವೆ ಶೀಘ್ರ ಲಭ್ಯ, ವಿಳಂಬಕ್ಕೆ ವಿರಾಮ ಮತ್ತು ಶೋಷಣೆಯಿಂದ ಮುಕ್ತಿ ಸಿಗಲಿದೆ ಎಂದ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ಸಕಾಲ ಸೇವೆಗಳ ಅಡಿಯಲ್ಲಿ ನೀಡಲಾಗುತ್ತಿರುವ ಕೃಷಿ, ಸಾರಿಗೆ, ಶಿಕ್ಷಣ ಹಾಗೂ ಆದಾಯ ತೆರಿಗೆ ಇಲಾಖೆಗಳ ಇ-ಆಡಳಿತಕ್ಕೆ ಮತ್ತಷ್ಟು ವೇಗ ತುಂಬುವ ಮತ್ತು ಲಂಚಮುಕ್ತಗೊಳಿಸುವ ಸಂಬಂಧ ಶುಕ್ರವಾರ ತಮ್ಮ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಚಿವರು ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಆಸ್ತಿ ನೋಂದಣಿಯಲ್ಲಿ ಆಧಾರ್, ಪ್ಯಾನ್ ಕಾರ್ಡ್, ಪಾಸ್ ಪೋರ್ಟ್ ಈ 3 ದಾಖಲೆಗಳಲ್ಲಿ ಒಂದನ್ನು ಕಡ್ಡಾಯ ಮಾಡಿದ್ದೇವೆ. ವೃತ್ತಿಪರ ತೆರಿಗೆ ಸಹ ಕುಟುಂಬಕ್ಕೆ ಜೋಡಣೆ ಆಗಬೇಕು ಎಂದು ಸಚಿವರು ಅಭಿಪ್ರಾಯಪಟ್ಟರು.

ಆ್ಯಪ್ ಮೂಲಕ ಹೊರಗುತ್ತಿಗೆ ನೌಕರರ ಸಂಬಳ

ಸಕಾಲ ಸೇವೆ ನಿಗದಿತ ಸಮಯಕ್ಕೆ ಸಿಗಬೇಕು ಎಂದರೆ ಸಕಾಲಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಯ ಸೇವೆಯ ಬಗೆಗಿನ ಡೇಟಾ ಬೆರಳ ತುದಿಯಲ್ಲಿರಬೇಕು. ಹೀಗಾಗಿ ಕಳೆದ ಎರಡೂವರೆ ವರ್ಷದಿಂದ ನಿರಂತರವಾಗಿ ಸಕಾಲ ಕುಟುಂಬ ಡೇಟಾಬೇಸ್ ಅಪ್‌ಡೇಟ್ ಮಾಡಲಾಗುತ್ತಿದೆ. ಸಕಾಲದಲ್ಲಿ ಹತ್ತಾರು ಇಲಾಖೆಗಳಿದ್ದು ಹಲವು ಸೇವೆಗಳನ್ನು ಹೊರಗುತ್ತಿಗೆಗೆ ನೀಡಲಾಗಿದೆ. ಹೊರಗುತ್ತಿಗೆ ನೌಕರರ ಸಂಬಳವನ್ನು ಕುಟುಂಬ ಆ್ಯಪ್ ಮೂಲಕ ನೀಡುವಂತಾಗಬೇಕು ಎಂದರು.

ಶೀಘ್ರ ಸಂಪುಟ ವಿಸ್ತರಣೆ: ಸಲೀಂ

• **ಹುಬ್ಬಳ್ಳಿ:** ಇದೇ ತಿಂಗಳಲ್ಲಿ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ. ನನಗೂ ಸಚಿವ ಸ್ಥಾನ ಸಿಗವ ಭರವಸೆ ಇದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ ಚುನಾವಣೆ ಹಿನ್ನೆಲೆ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿದೆ. ಆದಷ್ಟು ಬೇಗ ಹೈಕಮಾಂಡ್ ಮಾಡಲಿದೆ ಎಂದರು.

ಬಿಜೆಪಿ ಮತಗಳ್ಳತನದ ಬಗ್ಗೆ ಹಿಂದಿನಿಂದಲೂ ಕಾಂಗ್ರೆಸ್ ಆರೋಪ ಮಾಡುತ್ತಿದೆ. ಶೃಂಗೇರಿ ಕ್ಷೇತ್ರದಲ್ಲಿ ಚುನಾವಣೆ ಮರು ಎಣಿಕೆಯಲ್ಲಿ ಮತ್ತೊಮ್ಮೆ ಅದು ಸಾಬೀತಾಗಿದೆ. ಮರು ಎಣಿಕೆಯಲ್ಲಿ ದೊಡ್ಡ ಷಡ್ಯಂತ್ರ ನಡೆದಿದೆ. 2023 ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ರಾಜೇಗೌಡರ 201 ಮತಗಳಿಂದ ಗೆಲವು ದಾಖಲಿಸಿದ್ದರು. ಬಿಜೆಪಿ ನ್ಯಾಯಾಲಯ ಮೊರೆ ಹೋಗಿದ್ದರು.

ಚುನಾವಣಾಧಿಕಾರಿಗಳು ಸರಿಯಾಗಿ ಮಾಹಿತಿ ನೀಡದ ಕಾರಣ ಮರು ಮತ ಎಣಿಕೆಗೆ ನ್ಯಾಯಾಲಯ ಆದೇಶಿಸಿದೆ. ಮರು ಮತ ಎಣಿಕೆ ಸಮಯದಲ್ಲಿ ತಿದ್ದುಪಡಿ ಮಾಡಿ ಬಿಜೆಪಿ ಮತಗಳ್ಳತನ ಮಾಡಿದೆ. ಪಕ್ಷದ ಕಾನೂನು ತಂಡ ಈ ಬಗ್ಗೆ ಚರ್ಚೆ ಮಾಡುತ್ತಿದೆ. ಮುಂದೆ ಹೋರಾಟ ಮಾಡುತ್ತೇವೆ ಎಂದು ಹೇಳಿದರು.

ಬಾಗಲಕೋಟೆ ಹಾಗೂ ದಾವಣಗೆರೆ ಉಪ ಚುನಾವಣೆ 2028 ಚುನಾವಣೆಯ ದಿಕ್ಸೂಚಿ ಎಂದು ಬಿಜೆಪಿ ಅವರು ಹೇಳಿಕೊಂಡಿದ್ದರು.



ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲವು ಸಾಧಿಸಿದೆ. ಕಾಂಗ್ರೆಸ್ 2028 ರಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ. ಜನ ಪರ ಆಡಳಿತ ಹಾಗೂ ಗ್ಯಾರಂಟಿಗಳ ನೀಡಿದ ಹಿನ್ನೆಲೆ ರಾಜ್ಯ ಜನರು ಕಾಂಗ್ರೆಸ್ ಗೆಲ್ಲಿಸುವ ಮೂಲಕ ಇನಷ್ಟು ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ ಎಂದರು. ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ.

ಭ್ರಷ್ಟಾಚಾರ ಬಗ್ಗೆ ಧ್ವನಿ ಎತ್ತಿದ್ದರಿಂದ 2023 ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ಈಗ ಬಿಜೆಪಿಗೆ ಟೀಕೆ ಮಾಡುವ ಯಾವ ನೈತಿಕತೆಯು ಇಲ್ಲ ಎಂದು ಕಿಡಿಕಾರಿದರು. ಕಾಂಗ್ರೆಸ್ ಮುಖಂಡರಾದ ಸದಾನಂದ ಡಂಗನವರ, ಚಂದ್ರಶೇಖರ ಚುಟ್ಟಲ, ಅಲ್ತಾಪ ಕಿತ್ತೂರ, ಬಸವರಾಜ ಬಿ ಇದ್ದರು.

ರಾಜ್ಯಪಾಲರ ಅಸಮಾಧಾನ

• **ಬೆಂಗಳೂರು:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ರಾಜ್ಯಪಾಲರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಕೂಡಲೇ ಈ ಆದೇಶವನ್ನು ವಾಪಸ್ ಪಡೆಯುವಂತೆ ಸೂಚನೆ ನೀಡಿದ್ದಾರೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಖುಷ್ಬೂ ಜಿ. ಚೌಧರಿ ಅವರಿಗೆ ಈ ಸಂಬಂಧ ಪತ್ರ ಬರೆದಿದ್ದಾರೆ. ಮಾರ್ಚ್ ಕೊನೆಯ ವಾರದಲ್ಲಿ ಕೆಎಸ್‌ಒಯುನ ಸಭಾಂಗಣದಲ್ಲಿ ಪ್ರಜ್ಞಾ ಪ್ರವಾಹ ಸಂಸ್ಥೆಯು ಕಾರ್ಯಕ್ರಮವೊಂದನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ರಾಜ್ಯಪಾಲರು, ಕೇಂದ್ರದ ಶಿಕ್ಷಣ ಸಚಿವರು ಖುದ್ದು ಭಾಗವಹಿಸಿದ್ದರೆ, ಉಪರಾಷ್ಟ್ರಪತಿಗಳು ವರ್ಚುವಲ್ ಆಗಿ ಪಾಲ್ಗೊಂಡಿದ್ದರು. ಆದರೆ, ಈ ಕಾರ್ಯಕ್ರಮದ ಆಯೋಜನೆಯಲ್ಲಿ ಮುಕ್ತ ವಿಶ್ವವಿದ್ಯಾಲಯ ಕುಲಪತಿ ಶಿಷ್ಟಾಚಾರ ಪಾಲನೆ ಮಾಡಿಲ್ಲ, ಹಣಕಾಸಿನ ದುರುಪಯೋಗ ನಡೆದಿದೆ ಎಂದು ಆರೋಪಿಸಿ ಕಾರ್ಯಕ್ರಮವನ್ನು ರದ್ದು ಮಾಡುವಂತೆ ಉನ್ನತ ಶಿಕ್ಷಣ ಇಲಾಖೆ ಸೂಚಿಸಿತ್ತು.

ಅಲ್ಲದೇ, ಕುಲಪತಿಗಳಿಗೆ ಶೋಕಾಸ್ ನೋಟಿಸ್ ನೀಡಿದ್ದು ಮಾತ್ರವಲ್ಲದೆ ವಿಶ್ವವಿದ್ಯಾಲಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಬ್ಯಾಂಕ್‌ಗಳಿಗೆ ಪತ್ರ ಬರೆದಿತ್ತು. ಆದರೆ, ಮುಕ್ತ ವಿಶ್ವವಿದ್ಯಾಲಯ ಉನ್ನತ ಶಿಕ್ಷಣ ಇಲಾಖೆಯ ಸೂಚನೆಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇದೀಗ ಉನ್ನತ ಶಿಕ್ಷಣ ಇಲಾಖೆಗೆ ಇನ್ನೊಂದು ಪತ್ರ ಬರೆದಿರುವ ರಾಜ್ಯಪಾಲರು, ವಿಶ್ವವಿದ್ಯಾಲಯದಲ್ಲಿ ಯಾವುದೇ ಅಕ್ರಮಗಳು ನಡೆದಿದ್ದರೂ, ಅದರ ತನಿಖೆಯನ್ನು ಕಾನೂನುಬದ್ಧವಾಗಿ ನಡೆಸಬೇಕು. ಅದನ್ನು ಬಿಟ್ಟು ಇಡೀ ವಿಶ್ವವಿದ್ಯಾಲಯದ ಆರ್ಥಿಕ ವ್ಯವಹಾರವನ್ನೇ ಸ್ಥಗಿತಗೊಳಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ. ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವುದು ಒಂದು ಅಪಕ್ವ ಮತ್ತು ಅತಿರೇಕದ ಕ್ರಮ. ಇದು ವಿಶ್ವವಿದ್ಯಾಲಯದ ದೈನಂದಿನ ಕಾರ್ಯಚಟುವಟಿಕೆಗಳಿಗೆ ದೊಡ್ಡ ಅಡ್ಡಿಯಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದರಿಂದ ವಿವಿಯ ಸಿಬ್ಬಂದಿಗಳಿಗೆ ವೇತನ ಪಾವತಿ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಣೆ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗಿದೆ ಎಂದು ಪತ್ರದಲ್ಲಿ ಸೂಚಿಸಲಾಗಿದೆ.

ನೈರುತ್ಯ ರೈಲ್ವೆ ಬಡ್ತಿ ಪರೀಕ್ಷೆ ಕನ್ನಡದಲ್ಲಿ ನಡೆಸಿ: ನಿಖಿಲ್

• **ಬೆಂಗಳೂರು:** ನೈರುತ್ಯ ರೈಲ್ವೆ ವಲಯದ ಬಡ್ತಿ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲೂ ನಡೆಸುವಂತೆ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.



ಪ್ರಸ್ತುತ ನೈರುತ್ಯ ರೈಲ್ವೆ ಇಲಾಖಾ ಬಡ್ತಿ ಪರೀಕ್ಷೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ನಡೆಸಲಾಗುತ್ತಿದೆ. ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಕರ್ನಾಟಕದ ಬಹುಭಾಗ ಬರುವುದರಿಂದ, ಇಲ್ಲಿನ ಕನ್ನಡಿಗ ಉದ್ಯೋಗಿಗಳಿಗೆ ಮಾತೃಭಾಷೆ ಕನ್ನಡದಲ್ಲೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದರೆ ಹೆಚ್ಚು ಅನುಕೂಲವಾಗಲಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಆಗಸ್ಟ್ 2024ರಲ್ಲಿ ರೈಲ್ವೆ ಮಂಡಳಿ ಹೊರಡಿಸಿರುವ ಆದೇಶದ ಪ್ರಕಾರ, ಎಲ್ಲಾ ವಲಯ ರೈಲ್ವೆಗಳಲ್ಲಿ ಇಲಾಖಾ ಪರೀಕ್ಷೆಗಳನ್ನು ಹಿಂದಿ, ಇಂಗ್ಲಿಷ್ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲೂ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಈ ಆದೇಶದ ಅನುಸಾರ ನೈರುತ್ಯ ರೈಲ್ವೆಯಲ್ಲೂ ಕನ್ನಡದಲ್ಲಿ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಕೋರಿದ್ದಾರೆ. ರೈಲ್ವೆ ಇಲಾಖೆಯ ಮುಂದಿನ ಎಲ್ಲಾ ಪರೀಕ್ಷೆಗಳಲ್ಲೂ ಕನ್ನಡಕ್ಕೆ ಅವಕಾಶ ಕಲ್ಪಿಸುವುದರಿಂದ ನಮ್ಮ ರಾಜ್ಯದ ಉದ್ಯೋಗಿಗಳಿಗೆ ಬಡ್ತಿ ಅವಕಾಶ ಗಳು ಹೆಚ್ಚಲಿವೆ. ಕೇಂದ್ರ ಸಚಿವರು ಪರಿಶೀ ಲಿಸಿ, ಕನ್ನಡದಲ್ಲೂ ಪರೀಕ್ಷೆನಡೆಸಲು ಸೂಕ್ತ ನಿರ್ದೇಶನ ನೀಡಬೇಕು ಎಂದು ನಿಖಿಲ್ ಮನವಿ ಮಾಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ನಗರದಲ್ಲಿ ವಿವಿಧ ನಾಯಕರ ಬೃಹತ್ ಬ್ಯಾನರ್

ಮದುವಣಗಿತ್ತಿಯಂತೆ ಶೃಂಗಾರಗೊಂಡ ಚಿತ್ರದುರ್ಗ

▸ **ಎಂ.ಜೆ. ತಿಪ್ಪೇಸ್ವಾಮಿ**

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪನವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಇಂದು ನಗರದ ಶ್ರೀಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಳಿಯ ವಿಶಾಲವಾದ ಮೈದಾನದಲ್ಲಿ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಹಿನ್ನೆಲೆಯಲ್ಲಿ ವೇದಿಕೆ ಸೇರಿದಂತೆ ನಗರದ ವಿವಿಧೆಡೆಗಳಲ್ಲಿ ಅಲಂಕಾರ ಮಾಡಲಾಗಿದೆ. ಇದರಿಂದ ಇಡೀ ನಗರವೇ ಮದುವಣಗಿತ್ತಿಯಂತೆ ಶೃಂಗಾರಗೊಂಡಿದೆ.

ಕಾರ್ಯಕ್ರಮ ನಡೆಯುವ ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ವಿವಿಧ ನಾಯಕರ ಬೃಹತ್ ಗಾತ್ರದ ಬ್ಯಾನರ್‌ಗಳನ್ನು ಹಾಕಲಾಗಿದೆ. ಇದರಿಂದ ಕಾರ್ಯಕ್ರಮ ನಡೆಯುವ ಮೈದಾನ ಬಗೆ ಬಗೆಯ ಬಣ್ಣಗಳಿಂದ ರಾರಾಜಿಸುತ್ತಿದೆ.



ಇದಲ್ಲದೇ ಕಾರ್ಯಕ್ರಮದ ಮೈದಾನಕ್ಕೆ ಆಗಮಿಸುವ ಮಾರ್ಗದಲ್ಲಿ ಮುಖ್ಯದ್ವಾರ ನಿರ್ಮಿಸಲಾಗಿದೆ. ಈ ದ್ವಾರದ ಇಕ್ಕೆಲಗಳಲ್ಲಿ ರಾಷ್ಟ್ರ, ರಾಜ್ಯ ನಾಯಕರು ಸೇರಿದಂತೆ ಸ್ಥಳೀಯ ನಾಯಕರ ಬೃಹತ್ ಗಾತ್ರದ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ಅದರಂತೆ ಕಾರ್ಯಕ್ರಮದ ವೇದಿಕೆಗೆ ಬರುವ ಮಾರ್ಗದ ಹೆದ್ದಾರಿಗಳಲ್ಲಿ ಸ್ಥಳೀಯ ಮುಖಂಡರು, ಅಭಿಮಾನಿಗಳು ತಮ್ಮ ತಮ್ಮ ನೆಚ್ಚಿನ ನಾಯಕರ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳನ್ನು ಅಳವಡಿಸಿದ್ದಾರೆ. ಮಾರ್ಗದುದ್ದಕ್ಕೂ ಇಂತಹ ಅಸಂಖ್ಯಾತ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ.

ವೇದಿಕೆ ಕಾರ್ಯಕ್ರಮ ಮೈದಾನದಿಂದ ಹಿಡಿದು ದಾವಣಗೆರೆಗೆ ಸಾಗುವ ಮಾರ್ಗದ ಸೀಬಾರ ಗುತ್ತಿನಾಡು ಗ್ರಾಮದವರೆಗೆ, ಅದರಂತೆ ಬೆಂಗಳೂರು ಮಾರ್ಗದ ಕಣಿವೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ತಮ್ಮ ತಮ್ಮ ನಾಯಕರ ಅಭಿಮಾನದ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ. ಜತೆಗೆ ಮಾರ್ಗದುದ್ದಕ್ಕೂ ಕೇಸರಿ ಬಣ್ಣದ ಬಟ್ಟೆಯಲ್ಲಿ ಬಂಟಿಂಗ್ಸ್‌ಗಳನ್ನು ಮಾಡಿ ಕಟ್ಟಲಾಗಿದೆ. ಅಲ್ಲಲ್ಲಿ ಓಂ ಗುರುತಿನ ಚಿಹ್ನೆಯುಳ್ಳ ಕೇಸರಿ ಭಾವುಟಗಳನ್ನು ಅಳವಡಿಸಲಾಗಿದೆ.

ನಗರ ವ್ಯಾಪ್ತಿಯಲ್ಲಿ ಹೊಳಲ್ಕೆರೆ ರಸ್ತೆಯ ಕನಕ ವೃತ್ತದಿಂದ ನಗರದ ಮುಖ್ಯರಸ್ತೆ ಸೇರಿದಂತೆ ಚಳ್ಳಕೆರೆ ಗೇಟ್‌ವರೆಗೆ ಬಗೆ ಬಗೆಯ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಭಾವುಗಳನ್ನು ಅಳವಡಿಸಿ ಸಿಂಗರಿಸಲಾಗಿದೆ. ಅದರಂತೆ ಸ್ಥಳೀಯ ಮುಖಂಡರು, ಅಭಿಮಾನಿಗಳು ತಮ್ಮ ನಾಯಕರ ಜತೆ ತಮ್ಮ ಭಾವಚಿತ್ರಗಳುಳ್ಳ ಫ್ಲೆಕ್ಸ್‌ಗಳನ್ನು ಸಿದ್ದಪಡಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದ್ದಾರೆ. ಅದರಂತೆ ನಗರದ ಗಾಂಧೀ ವೃತ್ತದಿಂದ ದಾವಣಗೆರೆ ರಸ್ತೆಯಲ್ಲಿನ ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿಯವರ ನಿವಾಸದ ಎದುರು ಹಾಗೂ ಜೆಎಂಐಟಿ ವೃತ್ತದಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ.

ನಗರದ ಗಾಂಧಿ ವೃತ್ತದಲ್ಲಿ ಬೃಹತ್ ಗಾತ್ರದ ಫ್ಲೆಕ್ಸ್‌ಗಳನ್ನು ತಯಾರಿಸಿ ಎತ್ತರದ ಪ್ರದೇಶದಲ್ಲಿ ಹಾಕಲಾಗಿದೆ. ಇದರಿಂದ ಈ ಮಾರ್ಗದಲ್ಲಿ ಸಾಗುವ ಜನರನ್ನು ಇವು ಆಕರ್ಷಿಸುತ್ತಿವೆ. ಅದರಂತೆ ಪ್ರವಾಸಿ ಮಂದಿರ ವೃತ್ತ, ಮದಕರಿ ನಾಯಕ ವೃತ್ತ, ಚಳ್ಳಕೆರೆ ಟೋಲ್ ಗೇಟ್‌ನಲ್ಲಿ ಸಾಕಷ್ಟು ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ನಗರದ ಜಿಲ್ಲಾಧಿಕಾರಿ ಕಚೇರಿ ವೃತ್ತದ ಮಧ್ಯ ಭಾಗದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ ಹಾಗೂ ಸಂಸದ ಗೋವಿಂದ ಕಾರಜೋಳ ಚಿತ್ರವಿರುವ ಬೃಹತ್ ಗಾತ್ರದ ಫ್ಲೆಕ್ಸ್ ಅಳವಡಿಸಲಾಗಿದೆ.

ಸಂಪಾದಕೀಯ

ತಮಿಳ್ನಾಡಿನ ರಾಜಕೀಯ ವರಸೆಗಳು

ತಮಿಳ್ನಾಡು ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಕೆಲವು ದಿನಗಳ ಕಳೆದರೂ ಸರಕಾರ ರಚನೆಯ ಪ್ರಕ್ರಿಯೆ ಅತಂತ್ರ ಸ್ಥಿತಿಯಲ್ಲಿ ಮುಂದುವರಿದುದು ವಿಪರ್ಯಾಸ. ಈ ಅತಂತ್ರ ಸ್ಥಿತಿಗೆ ಅತ್ಯಧಿಕ ದೊಡ್ಡ ಪಕ್ಷವಾಗಿ ಉದಿಸಿದ ತಮಿಳಗ ವೆಟ್ರಿ ಕಳಗಂ (ಟಿವಿಕೆ)ನ ರಾಜಕೀಯ ಅನನುಭವವು ಕಾರಣವಾಗಿರುವಂತೆಯೆ, ಕೆಲವು ರಾಜಕೀಯ ಪಕ್ಷಗಳ ಅವಕಾಶವಾದಿತನವೂ ಕಾರಣವಾಗಿರುವುದೂ ನಿಜ. ಮೊದಲೆರಡು ಬಾರಿ ರಾಜ್ಯಪಾಲರನ್ನು ಭೇಟಿಯಾದ ಟಿವಿಕೆ ಮುಖಂಡ



ವಿಜಯ್‌ರವರು ದೊಡ್ಡ ಪಕ್ಷವಾಗಿ ಸರಕಾರ ರಚಿಸುವ ಅಹವಾಲು ಮಂಡಿಸುವ ಬದಲಾಗಿ, ಕಾಂಗ್ರೆಸ್ ಬೆಂಬಲದೊಂದಿಗೆ 'ಸಮ್ಮಿಶ್ರ ಸರಕಾರ' ರಚಿಸುವ ಅಹವಾಲು ಮಂಡಿಸುವ ಮೂಲಕ ತಾಂತ್ರಿಕ ದೋಷವೆಸಗಿದ್ದೇ ರಾಜ್ಯಪಾಲರು ಅವರಿಗೆ ಸರಕಾರ ರಚನೆಯ ಅವಕಾಶ ನಿರಾಕರಿಸಲು ಕಾರಣವಾಗಿತ್ತು. ಸಮ್ಮಿಶ್ರ ಸರಕಾರವೆಂದ ಮೇಲೆ ವಿಜಯ್ ಪೂರ್ಣ ಬಹುಮತದ 118 ಶಾಸಕರ ಹೆಸರನ್ನು ನೀಡುವುದು ಅನಿವಾರ್ಯವಾಗಿತ್ತು. ಇದನ್ನರಿಯದೆ ಕೆಲವರು ರಾಜ್ಯಪಾಲರು ಕೇಂದ್ರ ಸರಕಾರದ ಆಣತಿಯಂತೆ ನಡಕೊಳ್ಳುತ್ತಿದ್ದಾರೆ, ಉದ್ದೇಶಪೂರ್ವಕವಾಗಿ ವಿಜಯ್‌ಗೆ ಸರಕಾರ ರಚಿಸಲು ಅವಕಾಶ ನಿರಾಕರಿಸುತ್ತಿದ್ದಾರೆ ಎಂಬ ಆರೋಪ ಹೊರಿಸಿದ್ದು ಮಾತ್ರ ಅಂಥವರ ಪೂರ್ವಗ್ರಹಕ್ಕೆ ನಿದರ್ಶನ.

ತಮಿಳ್ನಾಡಿನ ಅತಂತ್ರ ಸ್ಥಿತಿಯು ಕೆಲವು ರಾಜಕೀಯ ಪಕ್ಷಗಳ ಸಿದ್ಧಾಂತರಾಹಿತ್ಯಕ್ಕೆ, ಅವಕಾಶವಾದಿತನಕ್ಕೆ ಕೂಡಾ ಕನ್ನಡಿ ಹಿಡಿದಿದೆ. ಕಾಂಗ್ರೆಸ್ ಪಕ್ಷವು ಅಧಿಕಾರದಾಹದಿಂದ ಮೂರು ದಶಕಗಳ ಡಿಎಂಕೆ ಸಖ್ಯವನ್ನು ತಕ್ಷಣ ತೊರೆದು ಟಿವಿಕೆ ಬೆಂಬಲಿಸಿದ್ದಂತೂ ತುಚ್ಚ ವರ್ತನೆ. ಇಂಡಿ ಕೂಟದ ಬಹುತೇಕ ಎಲ್ಲ ಪಕ್ಷಗಳೂ ಕಾಂಗ್ರೆಸ್‌ನ ಈ ವರ್ತನೆಯನ್ನು ಟೀಕಿಸಿವೆ. ಅಧಿಕಾರಕ್ಕಾಗಿ ಕಾಂಗ್ರೆಸ್ ವಿಶ್ವಾಸದ್ರೋಹ ಎಸಗಲು ಹಿಂದೆ ಮುಂದೆ ನೋಡುವುದಿಲ್ಲವೆಂಬುದು ಇದರಿಂದ ಮತ್ತೆ ಸಾಬೀತಾಗಿದೆ. ಇದೇವೇಳೆ, ಡಿಎಂಕೆ ಮತ್ತು ಎಡಿಎಂಕೆಗಳು ಕೂಡಾ ತಾವೇ ಜತೆಗೂಡಿ ಸರಕಾರ ರಚಿಸಲು ತೆರೆಮರೆಯಲ್ಲಿ ಮಾತುಕತೆ ನಡೆಸಿದವೆಂಬ ವಿಚಾರ ಕೂಡಾ ಅವೆರಡು ಪಕ್ಷಗಳ ಅವಕಾಶವಾದಿತನವನ್ನು ಬಯಲಿಗೆಳೆದಿದೆ.

ಡಿಎಂಕೆ ಕೂಟದಲ್ಲಿದ್ದ ಸಿಪಿಐ, ಸಿಪಿಎಂ ಮತ್ತು ವಿಸಿಕೆಗಳು ಇದೀಗ ಸರಕಾರ ರಚನೆಗೆ ಟಿವಿಕೆಯನ್ನು ಬೆಂಬಲಿಸುವ ಪ್ರಸ್ತಾವ ಮೂಡಿಬಂದಿದೆ. ಈ ಪಕ್ಷಗಳು ಜತೆಗೂಡಿದರೆ ಟಿವಿಕೆ ಸರಕಾರ ರಚನೆಗೆ ಬೇಕಾಗುವ ಬಲ ದೊರಕಬಲ್ಲುದೇನೋ. ಆದರೆ ಅಲ್ಲಿಂದಲ್ಲಿಗೆ ಪಡೆಯುವ ಈ ಬಹುಮತದಿಂದ ಮತ್ತು ಇಂತಹ ಅವಕಾಶವಾದಿ ರಾಜಕೀಯ ಮೈತ್ರಿಯಿಟ್ಟುಕೊಂಡು ರಾಜಕೀಯ ಅನನುಭವಿ ವಿಜಯ್‌ರವರು ಸ್ಥಿರ ಸರಕಾರ ನೀಡಬಲ್ಲರೆ? ಅದೇ ಮುಖ್ಯ ಪ್ರಶ್ನೆ.

ಚಿಹ್ನೆಗಳ ಒಳನೋಟ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹಸ್ತ ಸಾಮುದ್ರಿಕಾದಲ್ಲಿ ಹಸ್ತದ ಮೇಲಿರುವ ಗುಂಡಿಗಳು ಅಥವಾ ಚುಕ್ಕೆಗಳನ್ನು ಅಡಚಣೆಯ ಸಂಕೇತವೆಂದು ಪರಿಗಣಿಸುತ್ತಾರೆ. ಅದೇ ರೀತಿ ಸೂರ್ಯ ರೇಖೆಯ ಮೇಲೆ ಈ ರೀತಿ ಚಿಹ್ನೆಗಳು ಇದ್ದರೆ ಅದನ್ನು ಹಠಾತ್ ಅಡ್ಡಿಯನ್ನು ಮಾಡುವ ಸೂಚನೆ ಎಂದು ಪರಿಗಣಿಸುತ್ತಾರೆ. ಅದು ಸೂರ್ಯ ರೇಖೆಯ ಮೇಲೆ ಯಾವ ಜಾಗದಲ್ಲಿದೆ ಎನ್ನುವುದರ ಮೇಲೆ ಯಾವ ವಯಸ್ಸಿನಲ್ಲಿ ಅಡ್ಡಿ ಬರುತ್ತದೆ ಎಂದು ಕಂಡು ಹಿಡಿಯಲಾಗುತ್ತದೆ. ಆಯಾ ವಯಸ್ಸಿನಲ್ಲಿ ಹೆಸರು ಮತ್ತು ಹಣ ಎರಡಕ್ಕೂ ಪೆಟ್ಟು ಬೀಳುತ್ತದೆ. ಅಂದರೆ ಅಪಘಾತ, ಅಪವಾದ, ಕೋರ್ಟ್ ಕೇಸ್, ಉದ್ಯೋಗ ನಷ್ಟ ಹೀಗೆ ಯಾವುದಾದರೊಂದು ಗ್ಯಾರೆಂಟಿ.

ಗುಂಡಿಯು ಕಪ್ಪು ಅಥವಾ ಕಂದು ಬಣ್ಣವಾಗಿದ್ದರೆ: ಶಸ್ತ್ರಚಿಕಿತ್ಸೆ, ದೈಹಿಕ ಅಪಾಯ, ಆರೋಗ್ಯ ಸಮಸ್ಯೆಯಿಂದ ದೀರ್ಘಕಾಲ ಬಳಲುವಿಕೆ ಹೀಗೆಲ್ಲಾ ಆಗುತ್ತದೆ.

ಕೆಂಪು ಗುಂಡಿಯಾದರೆ: ಜಗಳ ಅಥವಾ ಕೋಪದಿಂದ ತೆಗೆದುಕೊಂಡ ಕ್ರಮದಿಂದಾಗಿ ಕೀರ್ತಿನಾಶ, ಜೈಲುವಾಸ, ಪೋಲೀಸ್ ಅಥವಾ ಕಾನೂನಿನ ತೊಡಕುಗಳು ಉಂಟಾಗುತ್ತವೆ. ಬಿಳಿಗುಂಡಿಯಾದರೆ; ಮಾನಸಿಕ ಒತ್ತಡ, ಅವಕಾಶದಿಂದ ವಂಚಿತರಾಗುವುದು, ಚಿಂತೆಯ ಹೆಚ್ಚಳ.

ಗುಂಡಿ ಆಳವಾಗಿದ್ದರೆ ಅಪಾಯ ಹೆಚ್ಚು ಕಾಲ ಇರುತ್ತದೆ. ಚೇತರಿಸಿಕೊಳ್ಳಲು ತುಂಬಾ ಸಮಯ ಬೇಕಾಗುತ್ತದೆ. ಗುಂಡಿ ಸಣ್ಣದಾಗಿದ್ದರೆ, ಚೇತರಿಸಿಕೊಳ್ಳಲು ಅವಕಾಶವಿರುತ್ತದೆ. ಸಣ್ಣ ತೊಂದರೆಗಳು ಬರುತ್ತಲೇ ಇರುತ್ತವೆ. ಗುಂಡಿಯ ಮುಂದೆಯೂ ಸೂರ್ಯ ರೇಖೆ ಇದೆಯಾ ಇಲ್ಲವಾ ಎನ್ನುವುದನ್ನು ನೋಡಬೇಕು. ಮುಂದುವರೆದು ಹೊಳಪಿನಿಂದ ಕೂಡಿದ್ದರೆ ಮುಂದೆ ಭವಿಷ್ಯ ಚೆನ್ನಾಗಿಯೇ ಇದೆ ಎನ್ನಬಹುದು. ಸ್ಪಷ್ಟವಾಗಿ ನೇರವಾಗಿದ್ದರೆ, ತೊಡಕುಗಳಿಂದ ಪಾಠ ಕಲಿತು ಸರಿಯಾಗಿದ್ದೀರಿ ಎನ್ನಬಹುದು. ಗುಂಡಿಯ ಬಳಿಕ ತೆಳುವಾದ ರೇಖೆ ಇದ್ದರೆ ನಿಮ್ಮ ವೃತ್ತಿ ಬದಲಾಗುತ್ತದೆ. ಅಥವಾ ಸ್ಥಗಿತವೇ ಆಗಬಹುದು.ದ್ವೀಪ ಮತ್ತು ಗುಂಡಿ ಎರಡೂ ಇದ್ದರೆ ನಿಮ್ಮ ಚೈತನ್ಯವೆಲ್ಲಾ ದಿನೇ ದಿನೇ ಸೋರುತ್ತಾ ಬರುತ್ತದೆ. ತೀವ್ರವಾದ ಏಟು ಬೀಳುತ್ತದೆ, ಅದು ಸಾವಿಗೂ ಕಾರಣವಾಗಬಹುದು. ಅದೇ ಗುಂಡಿಯ ಸುತ್ತಾ ಚೌಕ ಇದ್ದರೆ, ದೊಡ್ಡ ಅಪಾಯದಿಂದ ಪಾರಾಗುತ್ತೀರಿ. ಅಥವಾ ತ್ರಿಕೋನವಿದ್ದರೆ, ಅದು ಎಂತಹಾ ಅಪಾಯವಾದರೂ ನಿಮ್ಮ ಬುದ್ಧಿಶಕ್ತಿಯಿಂದ ಪಾರಾಗುತ್ತೀರಿ. ಗುಂಡಿ ಇದ್ದ ವಯಸ್ಸಿನಲ್ಲಿ ಎಚ್ಚರಿಕೆಯಿಂದ ಇರಬೇಕು. ದೊಡ್ಡ ಹೂಡಿಕೆ, ಸಾಲವನ್ನು ಯಾರೆಂದವರಿಗೆ ನೀಡುವುದು, ಹೊಸ ಪಾಲುದಾರಿಕೆ ಇವೆಲ್ಲಾ ಬೇಡ. ವಾದವಂತೂ ಮಾಡಲೇಬಾರದು. ರೇಖೆಯ ಸ್ಥಳ, ಗುಂಡಿಯ ಇರುವ ಸ್ಥಳ ಮತ್ತು ಅದರ ಆಳ, ತೀಕ್ಷ್ಣತೆ, ವ್ಯಾಪ್ತಿ ಇವುಗಳನ್ನು ಅವಲಂಬಿಸಿದೆ. ಒಟ್ಟಾರೆ ಗುಂಡಿ ಮತ್ತು ಚುಕ್ಕೆ ಇದ್ದವರು ಮನೆಯಲ್ಲಿ ಅಪ್ಪ ಅಮ್ಮ ಇಬ್ಬರಿಗೂ ಒಟ್ಟಿಗೇ ನಮಸ್ಕಾರ ಮಾಡಿ. ಮಾಣಿಕ್ಯ ಧರಿಸಬಹುದು. ಸೂರ್ಯನಮಸ್ಕಾರ ಮಾಡಿ. ಭಾನುವಾರ ಕೆಂಪು ವಸ್ತ್ರವನ್ನು ದಾನ ಮಾಡಿ.

ಮಚ್ಚೆ ಇದ್ದರೆ!

ಯಾವುದೇ ಮಚ್ಚೆಯ ಫಲವು ಅದು ಇರುವ ಸ್ಥಳ ಮತ್ತು ಬಣ್ಣವನ್ನು ಅವಲಂಬಿಸಿದೆ. ಮಚ್ಚೆಯು ದೋಷದ ಚಿಹ್ನೆ. ಕೀರ್ತಿ ಮತ್ತು ಹಣಕಾಸಿನ ಅಡ್ಡಿಯನ್ನು ಮಾಡುತ್ತದೆ. ಕಪ್ಪು ಮಚ್ಚೆ ಇದ್ದರೆ ಅತ್ಯಂತ ಎಚ್ಚರಿಕೆ ಇರಬೇಕು. ಅಂತಹಾ ವ್ಯಕ್ತಿಗಳಿಗೆ ಅವರಿವರೆನ್ನದೇ ಒಳಗೆ ನುಗ್ಗುವುದೇ ಕೆಲಸ. ಮತ್ತು ತಾವು ಹೇಳಬೇಕಾದ್ದನ್ನು ಒಟ್ಟಾರೆ ಹೇಳುವುದು, ಮತ್ತು ಅದರಿಂದ ಆಗುವ ಅನಾಹುತವನ್ನು ಸರಿಪಡಿಸಲಾಗದು. ಮತ್ತು ಹೃದಯದ ಸಮಸ್ಯೆ, ಕಣ್ಣಿನ ಸಮಸ್ಯೆ ಮತ್ತು ರಕ್ತದೊತ್ತಡದಿಂದ ಬಳಲುವಿಕೆ ಉಂಟಾಗುತ್ತದೆ.

ಕೆಂಪು ಅಥವಾ ಕಂದು ಮಚ್ಚೆ: ಕೋಪದಿಂದ, ಆತುರದ ನಿರ್ಧಾರದಿಂದ ಅಪಾರ ಹಾನಿ ಬದುಕಿಗೆ ಮತ್ತು ಇನ್ನಿತರರಿಗೆ ಉಂಟಾಗುತ್ತದೆ. ಜಗಳ, ಪಾಲು, ಹಿಸ್ಸೆ, ಇವೆಲ್ಲಾ ಆಗಿಯೇ ಆಗುತ್ತದೆ. ಆದರೆ ಮತ್ತೆ ಎಲ್ಲವೂ ಸರಿಹೋಗುತ್ತದೆ.

ಹಸಿರು ನೀಲಿ ಮಚ್ಚೆ: ಅಪರೂಪದ ಮಚ್ಚೆ ಇದು. ವಿಷದಿಂದ ಇಂತಹವರಿಗೆ ತುಂಬಾ ದೊಡ್ಡ ತೊಂದರೆ ಆಗುತ್ತದೆ. ಯಾವುದೇ ಕೆಲಸಗಳನ್ನು ಮಾಡಲು ಆಗುವುದಿಲ್ಲ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ವ್ಯವಹಾರದಲ್ಲಿ ಮೋಸವಾಗುತ್ತದೆ. ಆಮೇಲೆ ಒಂದೊಮ್ಮೆ ಅವರಿಗೆ ಸಿಕ್ಕರೂ ಅದು ಉಳಿಯುವುದಿಲ್ಲ.

ಎದ್ದು ಕಾಣುವ ಅಥವಾ ಮಾಂಸದ ಮಚ್ಚೆ: ದೋಷ ಅತ್ಯಂತ ಹೆಚ್ಚು. ಜೀವನ ಪೂರ್ತಿ ಅದೇ ಕಲೆಯೊಂದಿಗೆ ಬದುಕಲೇ ಬೇಕು.

ಮಚ್ಚೆಯು ಯಾವ ಜಾಗದಲ್ಲಿ ಇದೆ ಎನ್ನುವುದು ಸಹಾ ಮುಖ್ಯ. ಸೂರ್ಯ ರೇಖೆಯ ಆರಂಭದಲ್ಲಿ ಅಂದರೆ ಮಣಿಕಟ್ಟಿನ ಬುಡದಲ್ಲಿ ಮಚ್ಚೆ ಇದ್ದರೆ, ತಂದೆಯಿಂದ ತೊಂದರೆ ಅಂದರೆ ತಂದೆಯೇ ಅಂತಹವರಿಗೆ ಓದಲು ತೊಂದರೆ ನೀಡುತ್ತಾರೆ. ಹಣ ಕೊಡದೇ ಸತಾಯಿಸುತ್ತಾರೆ. ಹೀಗಾಗಿ ಅವರು ಬೇರೆ ಕಡೆ ಹಣ ಸಾಲ ಮಾಡಿ ಕೆಟ್ಟ ಹೆಸರು ಬರುತ್ತದೆ. ಸೂರ್ಯ ರೇಖೆಯ ಮಧ್ಯದಲ್ಲಿ ಮಚ್ಚೆ ಇದ್ದರೆ, ವೃತ್ತಿ, ವ್ಯಾಪಾರ ಅಥವಾ ಉದ್ಯೋಗದಲ್ಲಿ ತೊಂದರೆ. ನಷ್ಟವೂ ಆಗಬಹುದು. ಅಪವಾದ ಬರಬಹುದು. ಸೂರ್ಯರೇಖೆಯ ತುದಿಯಲ್ಲಿ ಅಂದರೆ ಸೂರ್ಯ ಪರ್ವತದಲ್ಲಿ ಮಚ್ಚೆ ಇದ್ದರೆ, ಮಕ್ಕಳು ಅವರನ್ನು ಮನೆಯಿಂದ ಹೊರಹಾಕುತ್ತಾರೆ. ಗಳಿಸಿದ ಆಸ್ತಿ, ಹಣ ಎಲ್ಲವೂ ಹೊರಟು ಹೋಗುತ್ತದೆ. ಅವಮಾನ, ಕಳಂಕ ಹೀಗೆ ಸಹಿಸಲಾಗದ ನೋವು ಉಂಟಾಗುತ್ತದೆ. ಮಚ್ಚೆ ಒಮ್ಮೆ ಬಂದ ಮೇಲೆ ಎಂದಿಗೂ ಉಳಿಯುತ್ತದೆ. ಅದೇ ಗುಂಡಿ ಮಾಯವಾಗಲೂಬಹುದು.

ಪರಿಹಾರ

ಮಚ್ಚೆ ಇದ್ದಿದ್ದನ್ನು ತೆಗೆದು ಹಾಕಲು ತುಂಬಾ ಜನ ಪ್ರಯತ್ನಿಸುತ್ತಾರೆ. ಕೆಲವರು ಕೊಯ್ದುಕೊಳ್ಳುತ್ತಾರೆ. ಕೆಲವರು ಮಚ್ಚೆ ಇರುವ ಜಾಗವನ್ನೇ ಸುಡುತ್ತಾರೆ. ಈ ಕ್ರಮಗಳಿಂದ ಇನ್ನಷ್ಟು ದೊಡ್ಡ ಮಚ್ಚೆ ಅಲ್ಲಿ ಉಂಟಾಗುತ್ತದೆ. ಮಚ್ಚೆ ಬಳಿಕ ರೇಖೆಯು ಸಾರಾಗವಾಗಿ, ಸ್ಪಷ್ಟವಾಗಿ ಮುಂದುವರೆದರೆ ನೀವು ಎಲ್ಲಾ ಅವಮಾನ, ಕಳಂಕಗಳಿದ ದೂರವಾಗುತ್ತೀರಿ. ಹೊಸದಾಗಿ ಹೆಸರು ಗಳಿಸುತ್ತೀರಿ. ಒಂದೊಮ್ಮೆ ಮಚ್ಚೆಯ ಬಳಿಕ ರೇಖೆಯು ಮುಂದುವರೆದಿದ್ದರೆ, ನೀವು ಆ ಕ್ಷೇತ್ರವನ್ನೇ ಬಿಟ್ಟುಬಿಡಿ. ಸಣ್ಣ ಮತ್ತು ತೆಳ್ಳಗಿನ ಮಚ್ಚೆಗಳು ಅಪಾಯಕಾರಿಯಲ್ಲ. ಅವುಗಳನ್ನು ಮರೆತು ಬಿಡಿ. ಶುಭ ರೇಖೆಗಳು ಎಂತಹಾ ತೊಡಕುಗಲನ್ನು ನಿವಾರಿಸುತ್ತದೆ. ನನ್ನ ಅಪ್ಪನವರ ಗೆಳೆಯರೊಬ್ಬರಿಗೆ ಸೂರ್ಯ ಪರ್ವತದ ಮೇಲೆ ಮಚ್ಚೆ ಇತ್ತು; ಅವರ ಹೆಂಡತಿಗೆ ಆಯುಸ್ಸು ರೇಖೆಯ ಮೇಲೆ ಮಚ್ಚೆ ಇತ್ತು. ಪರಿಣಾಮ ಅಪ್ಪನವರ ಗೆಳೆಯರು ಅವರು ಮಾಡದ ಅಪರಾಧಕ್ಕೆ ಜೈಲು ಶಿಕ್ಷೆ ಅನುಭವಿಸಿದರು. ದೇಶ ದ್ರೋಹದ ಆರೋಪವನ್ನು ಹೊರೆಸಿದರು.

ಯಾವುದೇ ಮಚ್ಚೆಯ ಮೇಲೆ ಚೌಕ ಇದ್ದರೆ: ದೇವರೇ ನಿಮ್ಮನ್ನು ಮಚ್ಚೆಯ ದುಷ್ಟತನದಿಂದ ಕಾಪಾಡುತ್ತಾನೆ. ಒಂದೊಮ್ಮೆ ತ್ರಿಕೋನವು ಇದ್ದರೆ ನೀವು ನಿಮ್ಮದೇ ಬುದ್ಧಿ ಉಪಯೋಗಿಸಿ ಸಮಸ್ಯೆಯಿಂದ ಹೊರಬರುತ್ತೀರಿ. ಈ ಎರೆಡೂ ಚಿಹ್ನೆಗಳು ಯಾವಾಗಲೂ ನಿಮ್ಮನ್ನು ಕಾಪಾಡುತ್ತಲೇ ಇರುತ್ತವೆ. ದಿನಾಲೂ ಸೂರ್ಯನಿಗೆ ಅರ್ಘ್ಯ ಕೊಡಿ. ಆದಿತ್ಯ ಹೃದಯ ಪಾರಾಯಣ ಮಾಡಿ. ತಂದೆ ಮತ್ತು ಗುರುಗಳ ಸೇವೆ ಮಾಡಿ. ಉಪ್ಪು ತಿನ್ನುವುದನ್ನು ಕ್ರಮೇಣ ನಿಲ್ಲಿಸುತ್ತಾ ಬನ್ನಿ. ಯಾವುದಕ್ಕಾದರೂ ಸಹಿ ಹಾಕುವಾಗ ಗಮನವಿಟ್ಟು ನೋಡಿ ಸಹಿ ಹಾಕಿ.

ಯಾವ ಹಸ್ತದ ಸೂರ್ಯ ರೇಖೆಯನ್ನು ಪರಿಗಣಿಸಬೇಕು?

ಹಸ್ತ ಸಾಮುದ್ರಿಕಾದಲ್ಲಿ ಎಂದಿಗೂ ಒಂದೇ ಕೈ ನೋಡಿ ತೀರ್ಮಾನಿಸಬಾರದು. ಎರಡೂ ಕೈಗಳನ್ನೂ ನೋಡಬೇಕು. ಬಲಗೈ ಇಂದಿನ ಪ್ರಸ್ತುತ ಭವಿಷ್ಯ ಹೇಳಿದರೆ, ಎಡಗೈ ಹುಟ್ಟಿನಿಂದ ಬಂದ ಯೋಗಾವಳಿಯನ್ನು ತಿಳಿಸುತ್ತದೆ.

ಎಡಗೈ: ಇವರು ಜನ್ಮಜಾತವಾಗಿ ಪ್ರತಿಭಾವಂತರು. ಇವರನ್ನು ಪೂರ್ವ ಜನ್ಮದ ಪುಣ್ಯ ಅಥವಾ ಪಾಪದ ಫಲ ಆವರಿಸುತ್ತದೆ. ಅವರು ಇದನ್ನು ತಮ್ಮ ಕರ್ಮ ಎಂದು ಭಾವಿಸುತ್ತಾರೆ. ದೇವರ ಅನುಗ್ರಹ ಎಂದೂ ಸಹಾ ಹೇಳುತ್ತಾರೆ.

ಬಲಗೈ: ನಿಮ್ಮ ಸ್ವಂತದ ಪರಿಶ್ರಮದ ಫಲ. ನಿಮ್ಮ ಸಂಪಾದನೆ ಹೀಗೆ ಏನೆಲ್ಲಾ ಸ್ವಂತ ಪರಿಶ್ರಮದ ಫಲ ಎಂದು ಹೇಳಬಹುದು. ಮತ್ತು ಬಲಗೈ ಬಳಸುವವರ ಬಲಗೈಯನ್ನು ನೋಡಿ. ಎಡಗೈ ಬಳಸುವವರ ಎಡಗೈಯನ್ನೇ ಮೊದಲು ನೋಡಿ.

ಎರಡೂ ಕೈಗಳಲ್ಲಿ ಸೂರ್ಯ ರೇಖೆ ಸ್ಪಷ್ಟವಾಗಿ ಇದ್ದರೆ ರಾಜ ಯೋಗ ಖಾಯಂ. ಹುಟ್ಟಿನಿಂದ ಇಲ್ಲದಿದ್ದರೂ ಪರಿಶ್ರಮದಿಂದಲಾದರೂ ಬಂದೇ ಬರುತ್ತದೆ. ಎಡಗೈಯಲ್ಲಿ ಸೂರ್ಯರೇಖೆ ಇದ್ದು ಬಲಗೈಯಲ್ಲಿ ಇಲ್ಲದಿದ್ದರೆ; ಪ್ರತಿಭೆ ಇದ್ದೂ ಸೋಮಾರಿತನದಿಂದ, ತಪ್ಪು ನಿರ್ಧಾರಗಳಿಂದ ನಿಮ್ಮ ಭವಿಷ್ಯವನ್ನು ನೀವೇ ಹಾಳುಮಾಡಿಕೊಳ್ಳುತ್ತೀರಿ. ಅವಕಾಶ ನಿಮ್ಮ ಮನೆ ಬಾಗಿಲಿಗೇ ಬಂದರೂ ನೀವು ಬಾಗಿಲು ಕಿಟಕಿಗಳನ್ನೆಲ್ಲಾ ಹಾಕಿಯೇ ಇಟ್ಟಿರುತ್ತೀರಿ. ಬಲಗೈಲ್ಲಿ ಸೂರ್ಯರೇಖೆ ಇದ್ದು ಎಡಗೈಯಲ್ಲಿ ಇಲ್ಲದಿದ್ದರೆ; ಅಂತಹವರು ತಮ್ಮನ್ನೇ ತಾವು ರೂಪಿಸಿಕೊಂಡ ವ್ಯಕ್ತಿಯಾಗಿರುತ್ತಾರೆ. ಶೂನ್ಯದಿಂದ ಶಿಖರಕ್ಕೆ ಏರಿದಂತೆ ಏರುತ್ತಾರೆ. ನೀವು ಯಾವಾಗಲೂ ರೇಖೆಗಳನ್ನು ನೋಡುವಾಗ ಎರಡೂ ಕೈಗಳನ್ನು ನೋಡಿ. ಮತ್ತು ಒಂದಕ್ಕೊಂದು ಹೋಲಿಸಿ, ತರ್ಕ ಮಾಡಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ.

ಈ ಐದು ಗುಣಗಳು ನಮ್ಮಲ್ಲಿ ಅರಳಲಿ

ಶ್ಲೋಕ ಸಾಗರ



• ಡಾ.ಸೋಂದಾ ಭಾಸ್ಕರ ಭಟ್

ಮೈತ್ರೀ ದಯಾ ಕ್ಷಮಾ ಶ್ರದ್ಧಾ ವಿನಯಶ್ಚೇತಿ ಪಂಚ ತೇ ।
ಗುಣಾಸ್ತ್ವಾಂ ಮರ್ತ್ಯ ರಕ್ಷಂತಿ ಸಂಕಟೇಷ್ವಖಿಲೇಷ್ವಪಿ॥ -ಸುವಚನಶತಕಮ್

ಜೇನುಹುದು – ಎಂಬುದು ಶ್ಲೋಕಾರ್ಥ.

ಅಯ್ಯಾ ಮಾನವನೆ, ಸ್ನೇಹ, ಕರುಣೆ, ತಾಳ್ಮೆ , ಶ್ರದ್ಧೆ ಮತ್ತು ವಿನಯ ಎಂಬ ಐದು ಗುಣಗಳು ನಿನ್ನನ್ನು ಎಲ್ಲಾ ಸಂಕಟಗಳಲ್ಲೂ ಕಾಪಾಡುತ್ತವೆ – ಎಂಬುದು ಶ್ಲೋಕಾರ್ಥ

ಪ್ರಪಂಚದಲ್ಲಿ ಸಂಕಷ್ಟಕ್ಕೆ ಈಡಾಗದವರಿಲ್ಲ, ಒಂದಲ್ಲ ಒಂದು ಸಂದರ್ಭದಲ್ಲಿ ಎಲ್ಲರೂ ಸಂಕಷ್ಟಕ್ಕೀಡಾದವರೆ. ಸಂಕಷ್ಟ ಉಂಟಾಗುವುದು ವಿಶೇಷವೇನಲ್ಲ, ಆದರಿಂದ ಪಾರಾಗುವುದರಲ್ಲಿ ವಿಶೇಷವಿದೆ.

ಸಂಕಷ್ಟಕ್ಕೆ ಸಿಲುಕಬಾರದು, ತೊಂದರೆಯನ್ನು ಅನುಭವಿಸಬಾರದು, ಜೀವನವನ್ನು ಸುಖಮಯವಾಗಿ ಕಳೆಯಬೇಕು.... ಇತ್ಯಾದಿಯಾಗಿ ಎಲ್ಲರೂ ಯೋಚಿಸುತ್ತಾರೆ. ಆದರೆ ಅದು ಸಾಧ್ಯವಾಗಲಾರದ ವಿಷಯ. ಯಾವುದೇ ತೊಂದರೆ ತಾಪತ್ರಯಗಳು ಯಾರನ್ನೂ ಕೇಳಿ ಬರುವುದಿಲ್ಲ ಬರುವದಿದ್ದರೆ ತಡೆಯುವುದಕ್ಕೂ ಸಾಧ್ಯವಿಲ್ಲ. ಪರಿಸ್ಥಿತಿ ಹೀಗಿರುವಾಗ ನಿಜಕ್ಕೂ ಸಂಕಷ್ಟಗಳಲ್ಲಿ ನಮ್ಮನ್ನು ಕಾಪಾಡಬಹುದಾದ ಅಂಶಗಳು ಯಾವುವು ಎಂಬ ಪ್ರಶ್ನೆಗೆ ಕವಿಯು 5 ಗುಣಗಳನ್ನು ಉಲ್ಲೇಖಿಸಿ ಇವುಗಳನ್ನು ಸಿದ್ಧಿಸಿಕೊಂಡರೆ ಇವುಗಳೇ ನಮ್ಮನ್ನು ಕಾಪಾಡುತ್ತವೆ ಎಂಬುದಾಗಿ ಪ್ರಕೃತ ಶ್ಲೋಕದಲ್ಲಿ ಉಲ್ಲೇಖಿಸಿದ್ದಾನೆ. ಅವುಗಳೆಂದರೆ ಸ್ನೇಹ, ಕರುಣೆ, ತಾಳ್ಮೆ ಶ್ರದ್ಧೆ ಮತ್ತು ವಿನಯಗಳೆಂಬ ಪಂಚ ಗುಣಗಳು. ಸಂಕಷ್ಟ ಬರಬಾರದು, ಸಂಕಷ್ಟಗಳಿಂದ ಪಾರಾಗಬೇಕು ಎಂದು ಹಂಬಲಿಸುವವನು ತನ್ನ ಜೀವಿತದಲ್ಲಿ ಈ ಐದರತ್ತ ಗಮನಹರಿಸಬೇಕು ಹಾಗೂ ಅವುಗಳನ್ನು ಅಳವಡಿಸಿಕೊಳ್ಳಲು ನಿರಂತರ ಪ್ರಯತ್ನ ನಡೆಸಬೇಕು.

ಸ್ನೇಹದ ಮಹಿಮೆ ಎಲ್ಲರಿಗೂ ಗೊತ್ತು. ಉತ್ತಮ ಸ್ನೇಹಿತನನ್ನು ಹೊಂದಿದವನು, ಎಲ್ಲರೊಂದಿಗೆ ಸ್ನೇಹದಿಂದ ವ್ಯವಹರಿಸುವವನು ಬಹುತೇಕ ಕಷ್ಟದಿಂದ ಪಾರಾಗುತ್ತಾನೆ. ಕಷ್ಟಕ್ಕೆ ಸಿಲುಕಿದಾಗ ಆತ್ಮೀಯರು ಜೊತೆಯಲ್ಲಿ ನಿಂತು ಸಹಾಯ ಮಾಡುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ಉತ್ತಮ ಸ್ನೇಹಿತರನ್ನು ಹೊಂದಿರಬೇಕು. ಆತ್ಮೀಯರನ್ನು ಸಂಪಾದಿಸಿಕೊಳ್ಳಬೇಕು.

ಎರಡನೆಯದು ಕರುಣೆ. ಸಜ್ಜನರು ಎಲ್ಲರಿಗೂ ಕರುಣಾಳುಗಳಾಗಿ ಏನೊಂದು ಕಾರಣವಿಲ್ಲದಿದ್ದಾಗ್ಯೂ ಬಂಧುಗಳಂತೆ ವ್ಯವಹರಿಸುತ್ತಾರೆ. ಕರುಣೆ ಎಲ್ಲರನ್ನೂ ನಮ್ಮವರಂತೆ ತಿಳಿಯಲು ಕಾರಣವಾಗುತ್ತದೆ. ಕರುಣಾ ಗುಣವನ್ನು ಬೆಳೆಸಿಕೊಂಡಾಗ ಆ ಸದ್ಗುಣವೇ ಆಪತ್ತಿನಿಂದ ಪಾರು ಮಾಡುತ್ತದೆ.

ತಾಳ್ಮೆ ಎಲ್ಲರಲ್ಲೂ ಇರಬೇಕು. 'ತಾಳುವಿಕೆಗಿಂತನ್ಯ ತಪವು ಇಲ್ಲ' ಎಂಬ ದಾಸವಾಣಿಯೇ ತಾಳ್ಮೆಯ ಹಿರಿಮೆಯನ್ನು ಸಾರುತ್ತದೆ. ತಾಳಿದವನು ಬಾಳಿಯಾನು ಎಂಬ ನಾಡ್ನುಡಿ ತಾಳ್ಮೆಯ ಮಹತ್ವವನ್ನು ತಿಳಿಸುತ್ತದೆ. ಯಾವುದೇ ಕೆಲಸವನ್ನು ಕೈಗೊಳ್ಳುವಾಗಲೂ ತಾಳ್ಮೆಯಿಂದ ಇರಬೇಕು. ತಾಳ್ಮೆ ಎಲ್ಲಾ ಬಗೆಯ ಸಂಕಷ್ಟಗಳಿಗೂ ಪರಿಹಾರ ಮಾರ್ಗವನ್ನು ತೋರಿಸುತ್ತದೆ.

ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ನಮ್ಮ ಶ್ರದ್ಧೆ ಬಹುಬೇಗ ಫಲವನ್ನು ತಂದುಕೊಡುತ್ತದೆ. ಕಾಟಾಚಾರಕ್ಕೆ ಮಾಡಹೊರಟರೆ ತೊಂದರೆ ತಪ್ಪಿದ್ದಲ್ಲ.

ವಿನಯ ಎಲ್ಲರನ್ನೂ ಅಲಂಕರಿಸುತ್ತದೆ. ಅಷ್ಟೇ ಅಲ್ಲ ; ಎಲ್ಲವನ್ನೂ ತಂದುಕೊಡುತ್ತದೆ. 'ವಿನಯೇನ ವಿನಾ ಕಾ ಶ್ರೀಃ'' ವಿನಯವಿಲ್ಲದ ಯಾವ ಸಂಪತ್ತೂ ಶೋಭಿಸಲಾರದು. ಆ ವಿನಯವೇ ಶ್ರೇಷ್ಠ ಸಂಪತ್ತು. ವಿನಯವಂತನನ್ನು ಲೋಕ ಸದಾ ಗೌರವಿಸುತ್ತದೆ.

ಕವಿಯು ಉಲ್ಲೇಖಿಸಿದ ಈ ಐದು ಗುಣಗಳನ್ನು ನಮ್ಮದಾಗಿನ್ನಾಗಿಸಿಕೊಳ್ಳಲು ಪ್ರಯತ್ನಿಸಿ, ಸಂಕಷ್ಟವನ್ನು ಪರಿಹರಿಸಿಕೊಳ್ಳೋಣ. ಇವೇ ಸದಾ ನಮ್ಮನ್ನು ರಕ್ಷಿಸಬಲ್ಲವು.

ಪ.ಬಂಗಾಳ: ಆ ನರೇಂದ್ರನಿಂದ ಈ ನರೇಂದ್ರನವರೆಗೆ...

ಒಳನೋಟ

• ಹೆ.ಬಾ. ಮಲ್ಯ



'ಅದೋ, ಸುದೀರ್ಘ ರಾತ್ರಿ ಕಡೆಗಿಂದು ಕೊನೆಗಾಣುತ್ತಿದೆ. ಅನವೋದಯವಾಗುತ್ತಿದೆ. ಬಹುಕಾಲದ ನರಕಯಾತನೆ ಕಡೆಗೀಗ ಕೊನೆಗೊಳ್ಳುತ್ತಿದೆ. ಇದುವರೆಗೆ ಶವದಂತೆ ಬಿದ್ದಿದ್ದ ಶರೀರವಿಂದು ಸಚೇತನವಾಗುತ್ತಿದೆ. ಅದೋ ಕಿವಿ ಕೊಡಿ. ಸಿಡಿಲರವವೊಂದು ಕೇಳಿ ಬರುತ್ತಿದೆ. ಇತಿಹಾಸಪೂರ್ವದಿಂದ ಬಹು ಪುರಾತನ ಕಾಲ ಗರ್ಭದಿಂದ ಹೊರಹೊಮ್ಮಿ, ಪರ್ವತ ಶಿಖರಗಳಿಂದ ಮರುಧ್ವನಿಯಾಗಿ ಚಿಮ್ಮಿ, ಅರಣ್ಯಾರಣ್ಯ–ಗಿರಿಕಂದರಗಳಲ್ಲಿ ಸಂಚರಿಸಿ, ಬರಬರುತ್ತಾ ಪ್ರಬಲವಾಗಿ ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮೀ ಜನ ಕೋಟಿಯನ್ನು ಜಡನಿದ್ರೆಯಿಂದ ಬಡಿದೆಬ್ಬಿಸಿ ಜ್ಞಾನ, ಭಕ್ತಿ, ವೈರಾಗ್ಯ, ಸೇವಾತತ್ವಗಳನ್ನು ಉಚ್ಚ ಕಂಠಗಳಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ. ಹಿಮಾಲಯದಿಂದ ಬೀಸಿ ಬರುವ ಪುಣ್ಯ ಸಮೀರಣದಂತೆ ನಿರ್ಜೀವ ಅಸ್ಥಿ ಮಾಂಸಗಳಿಗೆ ಜೀವ ತುಂಬುತ್ತಿದೆ. ಜಡನಿದ್ರೆಯನ್ನು ಒದ್ದೋಡಿಸುತ್ತಿದೆ. ಕಾರ್ಯೋತ್ಸಾಹ, ಧೈರ್ಯ–ಸ್ಥೈರ್ಯಗಳನ್ನು ಉದ್ರೇಕಿಸುತ್ತಿದೆ. ನಮ್ಮೀ ಭರತಭೂಮಿಯು ಯುಗಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನು ತಡೆಯಬಲ್ಲವರ್‍ಯಾರು? ಇನ್ನಾಕೆ ನಿದ್ರಿಸುವುದಿಲ್ಲ. ಯಾವುದೇ ಶಕ್ತಿಯೂ ಆಕೆಯನ್ನು ಇನ್ನು ಅಡ್ಡಗಟ್ಟಲಾರದು. ಏಕೆಂದರೆ ಅದೋ ನೋಡಿ, ಮಹಾಕಾಳಿ ಮತ್ತೊಮ್ಮೆ ಎಚ್ಚೆತ್ತು ಮೈಕೊಡಹಿ, ಉಸಿರೆಳೆದು ಎದ್ದು ನಿಲ್ಲುತ್ತಿರುವಳು'

ಈ ಸಿಡಿಲವಾಣಿ 130 ವರ್ಷಗಳ ಹಿಂದೆ ಈ ಭೂಮಿಯ ಮೇಲೆ ನಡೆದಾಡಿದ್ದ, ಸಿಂಹಸದೃಶ ಭೀಮ ಸನ್ಯಾಸಿ ಸ್ವಾಮಿ ವಿವೇಕಾನಂದರ (ಪೂರ್ವಾಶ್ರಮದನರೇಂದ್ರ) ಕಂಚಿನಕಂಠದಿಂದಹೊರಹೊಮ್ಮಿದವೀರವಾಣಿ. ಇದನ್ನು ಕೇಳಿದ ಯಾವುದೇ ಭಾರತೀಯನಿಗೆ ರೋಮಾಂಚನವಾಗದೆ ಇರಲಾರದು. ಅದು ಅಂದು ಅವರ ಹೃದಯಾಂತರಾಳದ ಆಶಯವಾಗಿತ್ತು. ಮಾತ್ರವಲ್ಲ ಭವಿಷ್ಯವಾಣಿಯೂ ಆಗಿತ್ತು. ದೇಶದ ನವತರುಣ ಪೀಳಿಗೆಗೆ ಅವರ ಪ್ರೇರಣಾದಾಯಿ ಸಂದೇಶವೂ ಆಗಿತ್ತು. ಇಂದು ಹಿಂದುಗಳಲ್ಲಿ ಅದರಲ್ಲೂ ವಿಶೇಷವಾಗಿ ಇಂದಿನ ಪಶ್ಚಿಮ ಬಂಗಾಳದ ಹಿಂದುಗಳಲ್ಲಿ ಆಗುತ್ತಿರುವ ಜಾಗೃತಿಯ ಮುನ್ಸೂಚನೆಯನ್ನು ಅವರು ಅಂದೇ ಕಂಡಿದ್ದರು.

ಪಶ್ಚಿಮ ಬಂಗಾಳ ಇಂದು ಸಿಡಿದೆದ್ದಿದೆ. ಇತ್ತೀಚಿನ ವಿಧಾನಸಭಾ ಚುನಾವಣೆಯ ಯಶಸ್ಸು ಕೇವಲ ಭಾಜಪ ಪಕ್ಷಕ್ಕಷ್ಟೇ ಸೀಮಿತವಾದದ್ದಲ್ಲ. ಬಂಗಾಳದ ಸಮಸ್ತ ಹಿಂದುಗಳ ಯಶಸ್ಸಾಗಿದೆ. ಇಡೀ ಭಾರತಕ್ಕೆ, ಸಮಸ್ತ ಹಿಂದು ಸಮಾಜಕ್ಕೆ ಅದು ಹೊಸ ಹುರುಪು, ಹೊಸ ಭರವಸೆಯನ್ನು ನೀಡಿದೆ. ಬಂಗಾಳಿಗಳು ಕಳೆದ ನೂರಾರು ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದ ಹಿಂಸೆ, ಅತ್ಯಾಚಾರ, ದೌರ್ಜನ್ಯಗಳ ವಿರುದ್ಧ ಈ ಚುನಾವಣೆ ಉತ್ತರ ನೀಡಿದೆ. ಅವರ ''ಆಮಾರ್ ಸೋನಾರ್ ಬಾಂಗ್ಲಾ....'' (ನಮ್ಮ ಬಂಗಾರದ ಬಂಗಾಳ)ದ ಕನಸು ನನಸಾಗುವ ಸುವರ್ಣ ಕ್ಷಣ ಆಗಮಿಸಿದೆ. ಬಂಗಾಳದಲ್ಲಿ ಅದೆಷ್ಟೋ ಹೋರಾಟಗಳು ನಡೆದಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಬಂಗಾಳಿಗಳು ಮುಂಚೂಣಿಯಲ್ಲಿದ್ದರು. ಅದು ಕ್ರಾಂತಿಕಾರರ ತವರೂರಾಗಿತ್ತು ಎನ್ನಬಹುದು. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಜನ್ಮತಾಳಿದ್ದು 1985ರಲ್ಲಿ ಬಂಗಾಳದಲ್ಲಿ. ಸಂಘ ಸಂಸ್ಥಾಪಕ ಡಾಕ್ಟರ್ ಹೆಡಗೇವಾರರನ್ನೂ ಬಂಗಾಳ ಆಕರ್ಷಿಸಿತ್ತು. ಅವರು ವೈದ್ಯಕೀಯ ಶಿಕ್ಷಣ ಪಡೆಯಲು ಕೊಲ್ಕೊತ್ತಾಕ್ಕೆ ಹೋಗಿದ್ದು ನಿಜವಾಗಿ ಅಲ್ಲಿನ ಕ್ರಾಂತಿಕಾರ್ಯದ ಬಗ್ಗೆ ತಿಳಿದುಕೊಳ್ಳಲು.

ಸ್ವಾಮಿ ವೇವೇಕಾನಂದರು ದೇಹತ್ಯಾಗ ಮಾಡಿದ್ದಾಗ, 1902ರ ಹೊತ್ತಿಗೆ, ಡಾಕ್ಟರಜೀಗೆ 13 ವರ್ಷ ಪ್ರಾಯ. ಅವರು ಕೊಲ್ಕೊತ್ತಾದಲ್ಲಿದ್ದಾಗ ಕ್ರಾಂತಿಕಾರ್ಯದ ತಿಳಿವಳಿಕೆ ಜೊತೆಗೆ ಸ್ವಾಮಿ ವಿವೇಕಾನಂದರ ಚಿಂತನೆಗಳ ಪ್ರಭಾವವೂ ಅವರ ಮೇಲೆ ಖಂಡಿತ ಆಗಿರಲೇಬೇಕು. ಸ್ವಾಮಿ ವಿವೇಕಾನಂದರು ತರುಣರ ಪಡೆ ನಿರ್ಮಾಣ ಮಾಡಲು ಬಯಸಿದ್ದರು. ಅಂಥ ನೂರು ತರುಣರು ಸಿಕ್ಕಿದರೆ ಭಾರತದ ಚಿತ್ರವನ್ನೇ ಬದಲಾಯಿಸಬಲ್ಲೆ ಎನ್ನುತ್ತಿದ್ದರು. ಡಾಕ್ಟರಜೀ ಇದೇ ಸೂತ್ರವನ್ನು ಹಿಡಿದು ತರುಣರ ಸಂಘಟನೆ ಕಟ್ಟಿದರು. ಇಂದು ಸಂಘದ ತರುಣ ಸಂಘಟನೆ ವಿಶ್ವವ್ಯಾಪಿಯಾಗಿ, ಬಲಿಷ್ಠವಾಗಿ ಬೆಳೆದು ನಿಂತಿದೆ. 141 ವರ್ಷದ ಹಳೆಯ ಕಾಂಗ್ರೆಸ್ ಇಂದು ನಾಶದ ಅಂಚಿನಲ್ಲಿದೆ. ಸಂಘ ಕಳೆದ ನೂರು ವರ್ಷಗಳಲ್ಲಿ ಬಲಿಷ್ಠವಾಗಿ ಬೆಳೆದು ನಿಂತಿದೆ. ದೇಶದಲ್ಲಿ ಪರಿವರ್ತವನೆ ತರುವಲ್ಲಿ ಯಶಸ್ವಿಯಾಗಿದೆ. ನರೇಂದ್ರ ಮೋದಿಯಂಥ ಸಮರ್ಥ ಪ್ರಧಾನಿಯನ್ನು ದೇಶಕ್ಕೆ ನೀಡಿದೆ.

ಬಂಗಾಳ ಎಂದಾಗ ವಂದೇಮಾತರಂ ರಚಯಿತ ಬಂಕಿಂಚಂದ್ರ ಚಟರ್ಜಿ, ರವೀಂದ್ರನಾಥ ಟಾಗೋರ್, ಡಾ. ಶ್ಯಾಮಪ್ರಸಾದ್ ಮುಖರ್ಜಿ, ನೇತಾಜಿ ಸುಭಾಷ್‌ಚಂದ್ರ ಬೋಸ್, ವಿಜ್ಞಾನಿಗಳಾದ ಜಗದೀಶಚಂದ್ರ ಬೋಸ್, ಸತ್ಯೇಂದ್ರನಾಥ ಬೋಸ್, ರಾಮಕೃಷ್ಣ ಪರಮಹಂಸ, ಅರವಿಂದ ಘೋಷ್ ಮುಂತಾದ ದೇಶಭಕ್ತರು, ವಿಜ್ಞಾನಿಗಳು, ಆಧ್ಯಾತ್ಮಿಕ ಸಾಧಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ನೆನಪಾಗುತ್ತದೆ. ಮುಸ್ಲಿಂ ಆಕ್ರಮಣ, ಬ್ರಿಟಿಷ್ ಕುತಂತ್ರದಿಂದ ಬಂಗಾಳ ಅಸ್ಮಿತೆ (Identity) ಹಾಗೂ ಸ್ವಾಭಿಮಾನಕ್ಕೆ ಧಕ್ಕೆ ತಗುಲಿತ್ತು. ದೇಶವಿಭಜನೆಯ ಸಮಯದಲ್ಲಿ ಬಂಗಾಳ ವಿಭಜನೆ, ಲಕ್ಷಾಂತರ ಹಿಂದುಗಳ ಮಾರಣಹೋಮ, ಅತ್ಯಾಚಾರ ಎದುರಿಸಬೇಕಾಯಿತು. ಸ್ವಾತಂತ್ರ್ಯ ಬಂದ ನಂತರವೂ 30 ವರ್ಷ ಕಮ್ಯೂನಿಸ್ಟ್ ಆಡಳಿತದಿಂದ ದೌರ್ಜನ್ಯ, ಮಮತಾ ಬ್ಯಾನರ್ಜಿಯ 15 ವರ್ಷಗಳ ಆಡಳಿತದಲ್ಲಿ ಟಿ.ಎಂ.ಸಿ. ಹಾಗೂ ಬಾಂಗ್ಲಾ ನುಸುಳುಕೋರರಿಂದ ಇನ್ನಿಲ್ಲದ ದೌರ್ಜನ್ಯ ಅನುಭವಿಸಬೇಕಾಯಿತು. ಈ ಎಲ್ಲ ಆಕ್ರೋಶ ಬಂಗಾಳಿಗಳಲ್ಲಿ ಮಡುಗಟ್ಟಿತ್ತು. ಅದು ಈ ಚುನಾವಣೆ ಸಂದರ್ಭದಲ್ಲಿ ಸ್ಫೋಟಗೊಂಡಿತು. ಮೋದಿ ಅಲೆ ಕೇವಲ ಅಲೆಯಾಗಿ ಉಳಿಯದೆ ಪ್ರಚಂಡ ಸುನಾಮಿಯಾಗಿ ಅಪ್ಪಳಿಸಿದ ಹೊಡೆತಕ್ಕೆ ಮಮತಾ ದೀದಿ ಹಾಗೂ ಅವರ ಟಿ.ಎಂ.ಸಿ. ಪಕ್ಷ ಕೊಚ್ಚಿಕೊಂಡು ಹೋಯಿತು.

ಇದರ ಶ್ರೇಯಸ್ಸು ಮೋದಿ ಹಾಗೂ ಅಮಿತ್ ಷಾ ಅವರಿಗೆ ಸಲ್ಲಬೇಕು. ಜೊತೆಗೆ ಎಲೆ ಮರೆಕಾಯಿಯಂತೆ ಮನೆ ಮನೆ ಸಂಪರ್ಕ, ಕಾರ್ನರ್ ಮೀಟಿಂಗ್‌ಗಳ ಮೂಲಕ ಹಿಂದುಗಳಲ್ಲಿ ಜಾಗೃತಿ ಮೂಡಿಸಿದ ಸಂಘ ಕಾರ್ಯಕರ್ತರಿಗೆ, ಬಿಜೆಪಿ ಕಾರ್ಯಕರ್ತರಿಗೆ ಸಲ್ಲಬೇಕು. ಬಿಜೆಪಿ (ಹಿಂದಿನ ಜನಸಂಘ) ಪಕ್ಷವೂ ಪ್ರಾರಂಭವಾದದ್ದು 1951ರಲ್ಲಿ ಬಂಗಾಳದಲ್ಲಿ, ಡಾ. ಶ್ಯಾಮ ಪ್ರಸಾದ ಮುಖರ್ಜಿಯವರಿಂದ. ಅವರು ಮೊದಲು ಡಾ. ಹೆಡಗೆವಾರರನ್ನು ಸಂಪರ್ಕಿಸಿದ್ದರು. ಅವರ ಕಾಲಾನಂತರ ಗುರೂಜೀ ಗೋಳ್ವಲ್ಕರ್ ಅವರ ಮಾರ್ಗದರ್ಶನ ಪಡೆದು ಜನಸಂಘ ಸ್ಥಾಪಿಸಿದ್ದರು. ಸ್ವತಂತ್ರ ಭಾರತದ ಮೊದಲ ಚುನಾವಣೆಗಳಲ್ಲಿ ಜನಸಂಘ ಸಫಲವಾಗದಿದ್ದರೂ ಶ್ಯಾಮಪ್ರಸಾದ್ ಮುಖರ್ಜಿಯವರು ಹಾಗೂ ಇನ್ನೊಬ್ಬರು ಬಂಗಾಳದಿಂದ ಸಾಂಸದಿಕರಾಗಿ ಆಯ್ಕೆಯಾಗಿದ್ದರು. ನಡುಗಾಲ ಸರಕಾರದಲ್ಲಿ ಸಚಿವರಾಗಿದ್ದರು. ಆದರೆ ನೆಹರು ಹಾಗೂ ಕಾಂಗ್ರೆಸ್ಸಿನ ಮುಸ್ಲಿಂ ತುಷ್ಟೀಕರಣ ನೀತಿಯಿಂದ ಬೇಸತ್ತು ಹೊರಬಂದರು. ಜಮ್ಮು–ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದರು.

ಇನ್ನು ನೇತಾಜಿ ಸುಭಾಷ್‌ಚಂದ್ರ ಬೋಸರ ಸಶಸ್ತ್ರ ಹೋರಾಟದ ಬಗ್ಗೆ ಎಲ್ಲರಿಗೂ ಗೊತ್ತೇ ಇದೆ. ಆದರೆ ಸ್ವಾತಂತ್ರ್ಯಾನಂತರದ 75 ವರ್ಷಗಳವರೆಗೆ ಆಳಿದ ಕಾಂಗ್ರೆಸ್ ಪಕ್ಷ ಈ ಎಲ್ಲ ದೇಶಭಕ್ತರನ್ನು ಮೂಲೆಗೆ ತಳ್ಳಿ ಇತಿಹಾಸದ ಪುಟದಿಂದ ಮರೆ ಮಾಡಿತು. ಆದರೆ ಆರೆಸ್ಸೆಸ್ – ಬಿಜೆಪಿ ಬಲಿಷ್ಠವಾದಂತೆ ಈ ಎಲ್ಲ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮಹಾಪುರುಷರಿಗೆ ಯೋಗ್ಯವಾದ ಹಾಗೂ ಗೌರವ ಸ್ಥಾನ ಸಿಗಲಾರಂಭಿಸಿದೆ. ನೈಜ ಇತಿಹಾಸವನ್ನು ದೇಶವಾಸಿಗಳು ಅರಿಯತೊಡಗಿದ್ದಾರೆ. ಒಂದೊಮ್ಮೆ ಯುವಪೀಳಿಗೆಯ ಫ್ಯಾಷನ್ ಆಗಿದ್ದ ಕಮ್ಯೂನಿಸ್ಟ್ ಪಕ್ಷದ ಆಡಳಿತ ಭಾರತದಲ್ಲಿ ಯಾವ ರಾಜ್ಯದಲ್ಲೂ ಇಲ್ಲವಾಗಿದೆ. ಭಾರತ ಈಗ ಹೆಚ್ಚು –ಕಮ್ಮಿ ನಕ್ಸಲ್ ಮುಕ್ತವಾಗಿದೆ. ಪಂ.ಬಂಗಾಳವಲ್ಲದೆ ಈ ಚುನಾವಣೆಯಲ್ಲಿ ತಮಿಳ್ನಾಡಿನಲ್ಲಿ ಡಿಎಂಕೆ ಸೋಲು ಅನುಭವಿಸಿದೆ. ಮಮತಾ ಬ್ಯಾನರ್ಜಿ ಭವಾನಿಪುರದಲ್ಲಿ ಸೋತಂತೆ, ಸ್ಟಾಲಿನ್ ಕೂಡಾ ತನ್ನ ಕ್ಷೇತ್ರದಲ್ಲಿ ಸೋಲನ್ನನುಭವಿಸಿದ್ದಾರೆ. ಕೇರಳದಲ್ಲಿ ಮುಖ್ಯಮಂತ್ರಿ ಪಿಣರಾಯಿಯವರ ಸಿ.ಪಿ.ಎಂ. ಪಕ್ಷ ಸೋತಿದೆ. ಹೀಗೆ ಮೂರು ಮುಖ್ಯಮಂತ್ರಿಗಳು ತಮ್ಮ ಪಕ್ಷದೊಂದಿಗೆ ಮುಳುಗಿದ್ದು ಒಂದು ಇತಿಹಾಸವೇ ಎನ್ನಬೇಕು. ತಮಿಳ್ನಾಡು, ಕೇರಳಗಳಲ್ಲಿ ಭಾಜಪ ಅಧಿಕಾರ ಪಡೆಯಲು ಇನ್ನೂ ಒಂದೆರಡು ಚುನಾವಣೆಗಳು ಕಳೆಯಬೇಕು. ಈ ಎರಡೂ ರಾಜ್ಯಗಳಲ್ಲಿ ಬಿಜೆಪಿ ಒಂದು ಸ್ಥಾನವನ್ನೂ ಗಳಿಸಿರಲಿಲ್ಲ. ಆದರೆ ಈ ಬಾರಿ ಕೇರಳದಲ್ಲಿ 3 ಹಾಗೂ ತಮಿಳ್ನಾಡಿನಲ್ಲಿ ಒಂದು ಸೀಟು ಪಡೆದು ಅಲ್ಲೂ ತನ್ನ ಅಸ್ತಿತ್ವವನ್ನು ದಾಖಲು ಮಾಡಿದೆ. ತನ್ನ ವೋಟ್‌ಶೇರ್ ಹೆಚ್ಚಿಸಿಕೊಂಡಿದೆ. ಇದು ಶುಭಾರಂಭ ಎನ್ನಬಹುದು. ಇನ್ನು ಅಸ್ಸಾಂನಲ್ಲಿ ಮೊದಲೇ ಅಂದುಕೊಂಡಂತೆ ಹಿಮಂತ್ ಬಿಸ್ವಾ ಮೂರನೇ ಬಾರಿಗೆ ಪಕ್ಷವನ್ನು ಗೆಲ್ಲಿಸಿ ಮುಖ್ಯಮಂತ್ರಿಯಾಗಿದ್ದಾರೆ. ಆಡಳಿತ ವಿರೋಧಿ ಅಲೆ ಅವರಿಗೆ ತಟ್ಟಲಿಲ್ಲ. ಪುದುಚೇರಿಯಲ್ಲೂ ಬಿಜೆಪಿ ಮತ್ತೆ ಅಧಿಕಾರಕ್ಕೇರಿದೆ.

ಸಂವಿಧಾನದ ವಿಧಿ 370 ರದ್ದತಿಯಾದ ನಂತರ ಜಮ್ಮು–ಕಾಶ್ಮೀರದಲ್ಲಿ ಸೇನಾ ಪಡೆಗೆ ಮುಸ್ಲಿಂ ಭಯೋತ್ಪಾದನೆಯನ್ನು ಮಟ್ಟ ಹಾಕಲು ಸಂಪೂರ್ಣ ಅಧಿಕಾರ ಕೊಟ್ಟ ಮೇಲೆ ಅಲ್ಲಿನ ಪರಿಸ್ಥಿತಿ ಸುಧಾರಿಸಿದೆ. ಪ್ರಾಯಶಃ ಪ.ಬಂಗಾಳದಲ್ಲೂ ಅದೇ ರೀತಿ ಸೇನಾಪಡೆಯನ್ನು ನಿಯೋಜಿಸಿ ಮುಸ್ಲಿಂ ಹಿಂಸೆಯನ್ನು ಮಟ್ಟ ಹಾಕಿ ಪರಿಸ್ಥಿತಿ ಸುಧಾರಿಸಬೇಕಿದೆ. ಆಗ ಅಲ್ಲಿ ವಿಕಾಸ ಕಾರ್ಯಕ್ರಮಗಳ ಮೂಲಕ ಜನರ ಜೀವನ ಸುಧಾರಿಸಲು ಸಾಧ್ಯವಾದೀತು. ಎರಡು ತಿಂಗಳವರೆಗೆ ಅರೆಸೈನಿಕ ಪಡೆಯನ್ನು ಪ.ಬಂಗಾಳದಲ್ಲಿ ಇಡಲಾಗುವುದೆಂದು ಕೇಂದ್ರ ಸರಕಾರ ಹೇಳಿದೆ. ಕೇವಲ ಮೋದಿ, ಶಾ, ಸೈನಿಕ ಪಡೆಯಷ್ಟೇ ಅಲ್ಲದೆ, ಹಿಂದುಗಳೂ ಹಿಂಸೆ, ದೌರ್ಜನ್ಯದ ವಿರುದ್ಧ ಹೋರಾಡುವ ಕ್ಷಾತ್ರ ಪ್ರವೃತ್ತಿಯನ್ನು ಬೆಳೆಸಿಕೊಂಡು ತಮ್ಮ ಹಾಗೂ ತಮ್ಮ ಕುಟುಂಬ ಹಾಗೂ ಮೊಹಲ್ಲೆಯ ಆತ್ಮರಕ್ಷಣೆಗೆ ತಯಾರಾಗುವ ಅಗತ್ಯವಿದೆ. ಈಗಂತೂ ದುಷ್ಟ ಸರಕಾರ ಹೋಗಿ, ಶಿಷ್ಟ ಸರಕಾರ ಅಧಿಕಾರಕ್ಕೆ ಬಂದಿದೆ. ಜೊತೆಗೆ ಮಿಲಿಟರಿ ಪಡೆಯೂ ಇದೆ. ಹೆದರುವ ಅಗತ್ಯವಿಲ್ಲ. ಭಾರತದ ಇತರೆಡೆಯಂತೆಯೇ ಪ.ಬಂಗಾಳಕ್ಕೂ ಒಳ್ಳೆಯ ದಿನಗಳು ಬರಲಿವೆ.

ಪತ್ರ ಮಿತ್ರ

ಯಡಿಯೂರಪ್ಪನವರ ಕಾರ್ಯವೈಖರಿ!

2006ರಲ್ಲಿ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿ ಕೊಪ್ಪಳ ಜಿಲ್ಲಾ ಪ್ರವಾಸದಲ್ಲಿದ್ದ ಶ್ರೀ ಬಿ.ಎಸ್. ಯಾಡಿಯೂರಪ್ಪನವರಿಗೆ ಅಂದು ಎಬಿವಿಪಿಯ ರಾಜ್ಯ ಸಹಕಾರ್ಯದರ್ಶಿ ಹಾಗೂ ಕೊಪ್ಪಳ ಜಿಲ್ಲೆಯ ಜವಾಬ್ದಾರಿಯಲ್ಲಿದ್ದ ನಾನು ಸುಮಾರು 100 ಕ್ಕೂ ಹೆಚ್ಚಿನ ಎಬಿವಿಪಿಯ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳ ಜೊತೆ ಮಧ್ಯರಾತ್ರಿ ಸುಮಾರು 1 ಗಂಟೆಯ ಹೊತ್ತಿಗೆ ಅವರನ್ನು ಭೇಟಿಯಾದೆ. ಕೊಪ್ಪಳದ ಸರ್ಕಾರಿ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದ ಮೂಲಭೂತ ಸೌಕರ್ಯ ಹಾಗೂ 24 ಗಂಟೆಯ ವಿದ್ಯುತ್‌ಗೆ ಸೌಕರ್ಯ ಒದಗಿಸುವಂತೆ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿ ಕೂಡಲೇ ಸ್ಪಂದಿಸಿ ಕೊಪ್ಪಳ ಜಿಲ್ಲೆಯ ಆಗಿನ ಜಿಲ್ಲಾಧಿಕಾರಿ ನವೀನ್ ರಾಜ್ ಸಿಂಗ್ ಅವರಿಗೆ ಕೂಡಲೇ ಸಮಸ್ಯೆ ಬಗೆಹರಿಸಲು ತಿಳಿಸಿದರು. ಕೆಇಬಿ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಮರುದಿನ ಮುಂಜಾನೆ ಕಾಲೇಜಿಗೆ ಕಳುಹಿಸಿ 24 ಗಂಟೆಯ ವಿದ್ಯುತ್ ಒದಗಿಸುವುದು ಹಾಗೂ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರ ಜೊತೆ ಚರ್ಚಿಸಿ ಅಂದಾಜು ವೆಚ್ಚದ ವರದಿ ತಯಾರಿಸಿ ಬೆಂಗಳೂರಿನಲ್ಲಿ ಖುದ್ದಾಗಿ ಬಂದು ತಲುಪಿಸುವಂತೆ ಜಿಲ್ಲಾಧಿಕಾರಿಯವರಿಗೆ ಆದೇಶ ಮಾಡಿದರು. ಆ ಸಂದರ್ಭದಲ್ಲಿ ಹಣಕಾಸು ಖಾತೆಯ ಜವಾಬ್ದಾರಿ ಅವರ ಕೈಯಲ್ಲಿದ್ದ ಕಾರಣ ಕಾಲೇಜಿನ ಮೂಲಭೂತ ಸೌಕರ್ಯದ ಕೊರತೆಯನ್ನು ಬಗೆಹರಿಸಿ ಕೊಪ್ಪಳ ನಗರದ ದದೇಗಲ್ ಗ್ರಾಮದ ಕಾಲೇಜಿಗೆ 24 ಗಂಟೆಯ ವಿದ್ಯುತ್ ಒದಗಿಸಿದರು. ಇದು ಎಬಿವಿಪಿಯ ಸಂಘಟನೆಗೆ ಅವರು ಕೊಟ್ಟ ಗೌರವ. ಅತ್ಯಂತ ಕಿರಿಯ ವಿದ್ಯಾರ್ಥಿ ನಾಯಕನಾಗಿ ನಾನು ಸ್ವತಃ ಅನುಭವ ಪಟ್ಟಿರುವುದು. ಮಧ್ಯರಾತ್ರಿ ಬಂದರೂ ಯಾವುದೇ ಕೋಪ ತೋರದೆ ಖುಷಿಯಿಂದಲೇ ಸಮಸ್ಯೆಯನ್ನು ಬಗೆಹರಿಸಿದ ಧೀಮಂತ ನಾಯಕರು ಶ್ರೀ ಯಡಿಯೂರಪ್ಪನವರು.

ಇನ್ನೊಂದು ಘಟನೆ 2010ರಲ್ಲಿ ನಾನು ಎಬಿವಿಪಿಯ ವಿಜಯಪುರ ವಿಭಾಗ ಸಂಘಟನಾ ಕಾರ್ಯದರ್ಶಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ, ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಕುರಿತಂತೆ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ವಿಜಯಪುರದ ಅತಿಥಿ ಗೃಹದ ಆವರಣದಲ್ಲಿ ವಾಕಿಂಗ್ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಮನವಿ ಸಲ್ಲಿಸಲಾಯಿತು. ಸಿಇಟಿ ಬರೆದು ವೈದ್ಯಕೀಯ ಸೀಟು ವಂಚಿತೆಯಾಗಿದ್ದ ಬಡ ವಿದ್ಯಾರ್ಥಿನಿಗೆ ಬೇರೆ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವಂತೆ ಅವರಲ್ಲಿ ವಿನಂತಿ ಮಾಡಲಾಯಿತು. ಅದರಂತೆ ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವೈದ್ಯಕೀಯ ಕಾಲೇಜಿನಲ್ಲಿ ಸೀಟು ದೊರಕಿತು. ಆ ವಿದ್ಯಾರ್ಥಿನಿ ವೈದ್ಯಕೀಯದಲ್ಲಿ ಎಂಬಿಬಿಎಸ್, ಎಂಡಿ ಪದವಿ ಪೂರೈಸಿ ಇದೀಗ ಪ್ರಾಧ್ಯಾಪಕರಾಗಿ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂತಹ ಅನೇಕ ಒಳ್ಳೆಯ ಕೆಲಸವನ್ನು ಮಾಡಿರುವ ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ 50ನೇ ರಾಜಕೀಯ ಸಂವತ್ಸರದ ಸಂದರ್ಭದಲ್ಲಿ ಶುಭ ಹಾರೈಕೆಗಳು.

-ರಮೇಶ. ಕೆ
ನಿಕಟಪೂರ್ವ ರಾಜ್ಯ ಕಾರ್ಯದರ್ಶಿ, ಎಬಿವಿಪಿ
ಕರ್ನಾಟಕ ಹಾಗೂ ನಿಕಟಪೂರ್ವ ಸಿಂಡಿಕೇಟ್ ಸದಸ್ಯ,
ಮಂಗಳೂರು ವಿವಿ

ಚಿನ್ನದ ಹೆಸರಲ್ಲಿ ವಂಚನೆ

ಚಿನ್ನದ ಹೂಡಿಕೆಯ ಹೆಸರಿನಲ್ಲಿ ನಡೆಯುತ್ತಿರುವ ದಗಲ್ ಬಾಜಿಗಳು ಅತ್ಯಂತ ಸಂಕೀರ್ಣವೂ ಮತ್ತು ವ್ಯವಸ್ಥಿತವೂ ಆಗಿವೆ. ವಂಚಕರು ಮುಖ್ಯವಾಗಿ ಪೋಂಜಿ ಮಾದರಿಯ ಯೋಜನೆಗಳನ್ನು ಬಳಸಿ ಅಲ್ಪಾವಧಿಯಲ್ಲಿ ಹಣ ದುಪ್ಪಟ್ಟು ಮಾಡುವ ಆಮಿಷವೊಡ್ಡಿ ಆರಂಭದಲ್ಲಿ ನಂಬಿಕೆಗಳಿಸಿ ನಂತರ ಕೋಟ್ಯಂತರ ರೂಪಾಯಿಗಳೊಂದಿಗೆ ನಾಪತ್ತೆಯಾಗುತ್ತಿದ್ದಾರೆ. ಇತ್ತೀಚಿನ ಐಸಿಐಸಿಐ ಬ್ಯಾಂಕ್ ಹಗರಣದಲ್ಲಿ ಕಂಡುಬಂದಂತೆ ಅಸಲಿ ಚಿನ್ನದ ಬದಲಿಗೆ ನಕಲಿ ಚಿನ್ನದ ಪ್ಯಾಕೆಟ್‌ಗಳನ್ನು ಅಡವಿಟ್ಟು ರೂ.23 ಕೋಟಿ ಸಾಲ ಪಡೆಯುವಂತಹ ಲೋನ್ ಫ್ರಾಡ್ ಜಾಲಗಳು ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಅಲುಗಾಡಿಸುತ್ತಿವೆ. ಇದಲ್ಲದೆ ಅಸ್ತಿತ್ವದಲ್ಲಿಲ್ಲದ ಚಿನ್ನದ ಗಣಿಗಳಲ್ಲಿ ಹೂಡಿಕೆ ಅಥವಾ ಸುರಕ್ಷಿತ ಲಾಕರ್‌ನಲ್ಲಿ ಚಿನ್ನ ಇಟ್ಟಿರುವುದಾಗಿ ನಂಬಿಸುವ ಡಿಜಿಟಲ್ ಗೋಲ್ಡ್ ವಂಚನೆಗಳು ಹೆಚ್ಚಾಗುತ್ತಿವೆ. ಮಾರುಕಟ್ಟೆಯಲ್ಲಿ ಕೃತಕವಾಗಿ ಷೇರು ಬೆಲೆ ಏರಿಸಿ ಹೂಡಿಕೆದಾರರನ್ನು ಸೆಳೆಯುವ ಪಂಪ್ ಆ್ಯಂಡ್ ಡಂಪ್ ತಂತ್ರಗಳು ಮತ್ತು ನಕಲಿ ಸಾಲದ ಏಜೆಂಟರುಗಳು ದಾಖಲೆಗಳ ಹೆಸರಿನಲ್ಲಿ ಹಣ ಲೂಟಿ ಮಾಡುತ್ತಿರುವುದು ಸಾಮಾನ್ಯವಾಗಿದೆ. ದುರದೃಷ್ಟವಶಾತ್, ಈ ವಂಚಕ ಕಂಪನಿಗಳ ಹಿಂದೆ ಪ್ರಭಾವಿ ವ್ಯಕ್ತಿಗಳ ಕೈವಾಡವಿರುವುದರಿಂದ ಸಂತ್ರಸ್ತರು ತಮ್ಮ ಕಳೆದುಹೋದ ಹಣವನ್ನು ಮರಳಿ ಪಡೆಯಲು ಸಾಧ್ಯವಾಗದೆ ವರ್ಷಗಟ್ಟಲೆ ನ್ಯಾಯಾಲಯಗಳಿಗೆ ಅಲೆಯುತ್ತಿದ್ದಾರೆ.

-ಡಾ.ವಿಜಯಕುಮಾರ ಎಚ್.ಕೆ, ರಾಯಚೂರು

ಅಗೌರವದ ನಿರ್ಗಮನ

ಚುನಾವಣೆಗಳು ನಡೆದು ಅದರ ಫಲಿತಾಂಶ ಬಂದಾಗ ಜನಾದೇಶಕ್ಕೆ ಯಾರೇ ಆದರೂ ತಲೆಬಾಗಲೇಬೇಕು. ಸೋಲು, ಗೆಲವು ಇದ್ದದ್ದೇ. ಅದನ್ನು ಸಮಾನವಾಗಿ ಸ್ವೀಕರಿಸಬೇಕು. ಸೋತ ಬಳಿಕ ತಾನು ಸೋಲಲಿಲ್ಲವೆಂದು ಮೊಂಡುವಾದಕ್ಕೆ ಬಿದ್ದರೆ ಅದು ಸರಿಯಾದ ವರ್ತನೆಯಲ್ಲ. ಸಂವಿಧಾನಕ್ಕೆ, ಸಂಪ್ರದಾಯಕ್ಕೆ ಅಪಚಾರ ಮಾಡಿದಂತೆ.

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಟಿಎಂಸಿ ಪಕ್ಷ ಸೋತು, ಬಿಜೆಪಿ ಗೆದ್ದಿದೆ. ಬಹುಮತವಿರುವ ಪಕ್ಷಕ್ಕೆ ಸರಕಾರ ಮಾಡಲು ರಾಜ್ಯಪಾಲರು ಆಹ್ವಾನಿಸುವುದು ನಿಯಮ. ಅದೇ ನಿಯಮದಂತೆ ಮುಖ್ಯಮಂತ್ರಿ ಮಮತಾ ಅವರು ಹುದ್ದೆಗೆ ರಾಜೀನಾಮೆ ನೀಡಿ ಹೊಸ ಸರಕಾರ ರಚನೆಗೆ ಅವಕಾಶ ಕಲ್ಪಿಸಬೇಕಾಗಿತ್ತು. ಆದರೆ ಮಮತಾ ಬ್ಯಾನರ್ಜಿ ಹಾಗೆ ಮಾಡದೆ ಮೊಂಡು ಹಠಕ್ಕೆ ಬಿದ್ದರು. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ವರ್ತಿಸಿದರು. ತಾನು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲವೆಂದು ಪಟ್ಟುಹಿಡಿದರು.

ಚುನಾವಣೆ ಸರಿಯಾಗಿಲ್ಲ ಎಂಬುದು ಅವರ ದೂರಾಗಿದ್ದರೆ ಆ ಕುರಿತಂತೆ ಸಂವಿಧಾನದ ರೀತಿಯಲ್ಲೇ ಹೋರಾಟ ಮಾಡಲು ಅವಕಾಶವಿದೆ. ನ್ಯಾಯಾಲಯದ ಮೊರೆ ಹೋಗಬಹುದಾಗಿದೆ. ಧರಣಿ, ಹೋರಾಟ ಅವರಿಗೆ ಹೊಸದೇನಲ್ಲ, ಅದನ್ನು ಬಿಟ್ಟು ಮೊಂಡರಂತೆ ವರ್ತಿಸುವುದು ಸರಿಯಲ್ಲ. ರಾಜ್ಯಪಾಲರೀಗ ವಿಧಾನಸಭೆ ವಿಸರ್ಜಿಸಿದ್ದಾರೆ. ಮಮತಾರನ್ನು ಕತ್ತು ಹಿಡಿದು ದಬ್ಬಿದಂತಾಗಿದೆ. ಗೌರವದಿಂದ ನಿರ್ಗಮಿಸುವ ಬದಲಾಗಿ ಮಮತಾ ಅವರು ತಾವಾಗಿ ಇಂತಹ ಅರ್ಧಚಂದ್ರ ಪ್ರಯೋಗ ಆಹ್ವಾನಿಸಿದಂತಾಗಿದೆ.

-ಸತೀಶ ಕುಮಾರ್ ಕೊಂಚೆಗೇರಿ

ಬಂಗಾಳದಲ್ಲಿ ಇನ್ಮುಂದೆ ಸುವೇಂದು ಆಡಳಿತ

ಪುಟ 1 ➜ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಬಿಜೆಪಿ ಹಿರಿಯ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 294 ಸದಸ್ಯರ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದು ಐತಿಹಾಸಿಕ ಜಯ ಸಾಧಿಸಿದ್ದು, ಆಡಳಿತಾರೂಢ ತೃಣಮೂಲ ಕಾಂಗ್ರೆಸ್ 80 ಸ್ಥಾನಗಳಿಗೆ ಕುಸಿದಿದೆ. ಈ ಮೂಲಕ ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತಿದೆ.

ಶಾಸಕಾಂಗ ಸಭೆಯಲ್ಲಿ ನಿರ್ಧಾರ: ಕೋಲ್ಕತಾದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾರೀ ಉತ್ಸಾಹದ ವಾತಾವರಣ ನಿರ್ಮಾಣವಾಗಿತ್ತು. ಸಭೆಗೆ ಅಮಿತ್ ಶಾ ಅಧ್ಯಕ್ಷತೆ ವಹಿಸಿದ್ದರು. 'ಎಂಟು ಪ್ರಸ್ತಾವನೆಗಳು ಬಂದಿದ್ದರೂ ಎಲ್ಲದರಲ್ಲೂ ಸುವೇಂದು ಅಧಿಕಾರಿಯ ಹೆಸರೇ ಇತ್ತು. ಹೀಗಾಗಿ ಅವರನ್ನು ಏಕಮತದಿಂದ ಶಾಸಕಾಂಗ ಪಕ್ಷದ ನಾಯಕರಾಗಿ ಘೋಷಿಸುತ್ತೇನೆ' ಎಂದು ಅಮಿತ್ ಶಾ ಅಧಿಕೃತವಾಗಿ ಘೋಷಿಸಿದರು. ಘೋಷಣೆ ಹೊರಬಿದ್ದ ತಕ್ಷಣ ಸಭಾಂಗಣದಲ್ಲಿ ಬಿಜೆಪಿ ಶಾಸಕರು ಹಾಗೂ ಕಾರ್ಯಕರ್ತರು ಘೋಷಣೆ ಕೂಗಿ ಸಂಭ್ರಮಿಸಿದರು. ಸಭೆಯಲ್ಲಿ ಮಾತನಾಡಿದ ಸುವೇಂದು ಅಧಿಕಾರಿ, 'ಬಂಗಾಳದಲ್ಲಿ ಭಯದ ಯುಗ ಅಂತ್ಯಗೊಂಡಿದೆ. ಮೋದಿ ಹೇಳಿದಂತೆ ಈಗ ಭರವಸೆಯ ಯುಗ ಆರಂಭವಾಗಿದೆ' ಎಂದು ಹೇಳಿದರು. ಬಿಜೆಪಿ ಸರ್ಕಾರ ವೈಯಕ್ತಿಕ ಪ್ರಭುತ್ವದ ಆಧಾರದ ಮೇಲೆ ಅಲ್ಲ, ಸಮೂಹ ನಾಯಕತ್ವದ ತತ್ವದಡಿ ನಡೆಯಲಿದೆ ಎಂದರು.

ಬಿಜೆಪಿವರೆಗೆ ಸುವೇಂದು ಪಯಣ

ಒಮ್ಮೆ ಮಮತಾ ಬ್ಯಾನರ್ಜಿ ಅವರ ಅತ್ಯಂತ ಆಪ್ತ ಸಹಚರರಾಗಿದ್ದ ಸುವೇಂದು ಅಧಿಕಾರಿ, ನಂದಿಗ್ರಾಮ ಭೂಸ್ವಾಧೀನ ವಿರೋಧಿ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಬಳಿಕ ಟಿಎಂಸಿ ಸರ್ಕಾರದಲ್ಲಿ ಸಚಿವರಾಗಿದ್ದ ಅವರು, 2020ರಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ರಾಜ್ಯ ರಾಜಕೀಯದಲ್ಲಿ ದೊಡ್ಡ ಬದಲಾವಣೆಗೆ ಕಾರಣರಾದರು. ಆದರೆ, ಸುವೇಂದು ಅಧಿಕಾರಿಯವರ ರಾಜಕೀಯ ಜೀವನ ಕಾಂಗ್ರೆಸ್‌ನಿಂದ ಆರಂಭವಾಗಿ, ಬಳಿಕ ಟಿಎಂಸಿ ಸೇರಿದ್ದರು. 2021ರ ವಿಧಾನಸಭೆ ಚುನಾವಣೆಯಲ್ಲಿ ನಂದಿಗ್ರಾಮದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿ ರಾಜ್ಯ ರಾಜಕೀಯದ ಕೇಂದ್ರಬಿಂದುವಾಗಿದ್ದ ಸುವೇಂದು, ಕಳೆದ ಐದು ವರ್ಷಗಳಿಂದ ಬಿಜೆಪಿ ಪರ ಪ್ರಮುಖ ಪ್ರತಿಪಕ್ಷ ನಾಯಕನಾಗಿ ಕಾರ್ಯನಿರ್ವಹಿಸಿದ್ದರು.

ರಾಜ್ಯಪಾಲರ ಭೇಟಿ; ಸರ್ಕಾರ ರಚನೆಗೆ ಹಕ್ಕು ಮಂಡನೆ: ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಕೆಲವೇ ಗಂಟೆಗಳಲ್ಲಿ ಸುವೇಂದು ಅಧಿಕಾರಿ ರಾಜ್ಯಪಾಲ ಆರ್.ಎನ್. ರವಿಯನ್ನು ಲೋಕಭವನದಲ್ಲಿ ಭೇಟಿ ಮಾಡಿದರು. ಬಿಜೆಪಿ ರಾಜ್ಯ ಘಟಕದ ಪ್ರಮುಖ ನಾಯಕರು ಅವರೊಂದಿಗೆ ಇದ್ದರು.

ಸೂರ್ಯಕಾಂತಿಗೆ ಬೆಂಬಲ ಬೆಲೆ

ಪುಟ 1 ➜ ನೋಂದಣಿ ಅವಧಿಯನ್ನು 50 ದಿನ ಹಾಗೂ ಖರೀದಿ ಅವಧಿಯನ್ನು 60 ದಿನ ನಿಗದಿಪಡಿಸಲಾಗಿದ್ದು, ನೋಂದಣಿ ಜತೆ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳಿಗೆ ಸಚಿವ ಶಿವಾನಂದ ಪಾಟೀಲ ಸೂಚನೆ ನೀಡಿದ್ದಾರೆ. ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ತಾಂತ್ರಿಕ ಮತ್ತು ವೈಜ್ಞಾನಿಕ ಸೌಲಭ್ಯದಿಂದ ಕೂಡಿರುವ ಗೋದಾಮುಗಳನ್ನು ಹೊಂದಿರುವ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಖರೀದಿ ಕೇಂದ್ರಗಳನ್ನು ತೆರೆಯಬೇಕು. ನೋಂದಣಿ ಮತ್ತು ಖರೀದಿಯಲ್ಲಿ ಯಾವುದೇ ಸಮಸ್ಯೆಗಳಾಗದಂತೆ ಸಿದ್ಧತೆ ಮಾಡಿಕೊಂಡು ಪ್ರಕ್ರಿಯೆ ಆರಂಭಿಸಬೇಕು ಎಂದು ಸೂಚಿಸಿದ್ದಾರೆ.

ಯಡಿಯೂರಪ್ಪಗೆ ಅದ್ದೂರಿ ಸ್ವಾಗತ

ಪುಟ 1 ➜ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ್, ಸಂಸದ ಗೋವಿಂದ ಕಾರಜೋಳ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿ ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಶಾಸಕ ಮುನಿರತ್ನ, ಮಾಜಿ ಸಚಿವ ಶ್ರೀರಾಮುಲು ಯಡಿಯೂರಪ್ಪ ಅವರಿಗೆ ಸಾಥ್ ನೀಡಿದರು.

ಅಮಿತ್ ಶಾ ಆಗಮನ: ಬಿಎಸ್‌ವೈ ಅಭಿಮಾನೋತ್ಸವಕ್ಕಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆಗಮಿಸುತ್ತಿದ್ದಾರೆ. ಬೆಳಗ್ಗೆ 11ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಇದರಲ್ಲಿ ಬಿಜೆಪಿ ಮತ್ತು ಎನ್‌ಡಿಎ ನಾಯಕರ ಮಹಾದಂಡೇ ಭಾಗಿಯಾಗಲಿದೆ. ಸ್ಥಳೀಯ ಸಂಸದ ಮತ್ತು ಬಿಜೆಪಿ ಸಂಸದ ಗೋವಿಂದ ಕಾರಜೋಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಭಾಗಿಯಾಗಲಿದ್ದಾರೆ. ಉಳಿದಂತೆ ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಸಭೆ ಮತ್ತು ಪರಿಷತ್‌ನ ವಿಪಕ್ಷ ನಾಯಕರಾದ ಆರ್.ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿರಲಿದ್ದಾರೆ.

ಕಲಾ ತಂಡಗಳ ವೈಭವ: ಸುಮಾರು ಮೂರು ಕಿ.ಮೀ. ಸಾಗಿದ ಮೆರವಣಿಗೆಯುದ್ದಕ್ಕೂ ರೈತರು, ಮಹಿಳೆಯರ ಸಹಿತ ಸಹಸ್ರಾರು ಮಂದಿ ಸಾಗಿದರು. ನಾರಿ ಶಕ್ತಿ ವಂದನಾಗೆ ಬೆಂಬಲ ನೀಡುವ ಮಹಿಳೆಯರ ತಂಡ ಒನಕೆ ಹಿಡಿದು ಮೆರವಣಿಗೆಯಲ್ಲಿ ಸಾಗಿತು. ಸಾವಿರಾರು ರೈತರು ಕೈಯಲ್ಲಿ ನೇಗಿಲು ಹಿಡಿದು ರೈತ ಮುಖಂಡ ಯಡಿಯೂರಪ್ಪ ಅವರಿಗೆ ಗೌರವ ಸಲ್ಲಿಸಿದರು.

ಗೊರವರ ಕುಣಿತ, ಕಾಡುಗೊಲ್ಲರ ಕೋಲಾಟ, ಶಿವ ತಾಂಡವ, ವೀರಗಾಸೆ, ಪೂಜಾ ಕುಣಿತ, ಬಂಜಾರಿಗ ನೃತ್ಯ, ಪಟದ ಕುಣಿತ, ಡೊಳ್ಳು ಕುಣಿ, ಕೊಂಬು, ಕಹಳೆ, ಬ್ಯಾಂಡ್ ವಾದ್ಯಗಳೊಂದಿಗೆ 25ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜಾನಪದ ಕಲಾತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ಇವುಗಳೊಂದಿಗೆ ಯಡಿಯೂರಪ್ಪ ಅವರು ನಡೆದು ಬಂದ ಹಾದಿ, ಸಾಧನೆ ಹಾಗೂ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ನೀಡಲಾದ ಜನಪ್ರಿಯ ಯೋಜನೆಗಳಾದ ಭಾಗ್ಯಲಕ್ಷ್ಮಿ, ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆ, ಕೃಷಿ ಬಜೆಟ್ ಮೊದಲಾದವುಗಳನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿ ಬಂದವು.

ಬೃಹತ್ ಹಾರಗಳ ಅಭಿನಂದನೆ: ಯಡಿಯೂರಪ್ಪ ಅವರಿಗೆ ಬೃಹತ್ ಸೇಬಿನ ಹಾರವನ್ನು ಹಾಕುವ ಮೂಲಕ ಅಭಿನಂದಿಸಲಾಯಿತು. ಅಭಿಮಾನಿಗಳ ಪ್ರೀತಿಯ ಗೌರವ ಸ್ವೀಕರಿಸಿದ ಯಡಿಯೂರಪ್ಪ ಅವರು ಸೇಬುಗಳನ್ನು ಅಭಿಮಾನಿಗಳತ್ತ ಆಶೀರ್ವಾದ ರೂಪದಲ್ಲಿ ಎಸೆದರು. ಅಂಬೇಡ್ಕರ್ ವೃತ್ತದ ಬಳಿ ಜೈ ಭೀಮ್ ಸಂಘಟನೆಯಿಂದ ಬೃಹತ್ ತಮಟೆಯ ಹಾರವನ್ನು ಹಾಕಲಾಯಿತು.

ಸ್ವಾಮೀಜಿಗಳ ಸಾನ್ನಿಧ್ಯ: ಬಾಳೆಹೊನ್ನೂರಿನ ಶ್ರೀ ರಂಭಾಪುರಿ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ, ಕೇದಾರನಾಥ್‌ನ ಡಾ.ಭೀಮಾಶಂಕರ ಶಿವಾಚಾರ್ಯ ಮಹಾಸ್ವಾಮೀಜಿ, ಶ್ರೀಶೈಲದ ಡಾ.ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಭಾಗವಹಿಸಲಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಟ್ರಂಪ್ ಜಿಗಿಯಲು ಹೇಳಿದರೆ ಮೋದಿ ಜಿಗಿಯುತ್ತಾರೆ, ಮಲಗಲು ಹೇಳಿದರೆ ಮಲಗುತ್ತಾರೆ – **ರಾಹುಲ್ ಗಾಂಧಿ**

– ಅಂದರೆ ಅವರು ಊಟ ಮಾಡುವುದೂ ಟ್ರಂಪ್ ಹೇಳಿದ್ದರಿಂದ ಅಂದಂತಾಯ್ತು. ಅಂದ ಹಾಗೆ ಭಾರತವು ರಷ್ಯಾದಿಂದ ಪೆಟ್ರೋಲಿಯಂ ಖರೀದಿ ಮಾಡಬಾರದು ಅಂತ ಟ್ರಂಪ್ ಕಟ್ಟಾಜ್ಞೆ ಮಾಡಿದಾಗ ಮೋದಿ ಅದನ್ನು ಕ್ಯಾರೇ ಮಾಡಿಲ್ಲ ಎಂಬುದನ್ನು ನೀವು ಹೇಳಿಲ್ಲ!

ದಿನ ಭವಿಷ್ಯ

ಮೇಷ
ಉದ್ಯೋಗದಲ್ಲಿ ಅವಕಾಶ ಹೆಚ್ಚಲಿದೆ. ನಿಮ್ಮನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕೊಡಬೇಡ. ವೃತ್ತಿ ಒತ್ತಡ ಹೆಚ್ಚುವುದು.

ವೃಷಭ
ಆದಾಯ- ವೆಚ್ಚದ ಮಧ್ಯೆ ಸಮತೋಲನ ಇರಲಿ. ಖರ್ಚು ಹೆಚ್ಚಾಗಿ ತಾಪತ್ರಯ ಪಡುವಿರಿ. ಮಾನಸಿಕ ಶಾಂತಿ ತುಸು ದೂರವಾದೀತು.

ಮಿಥುನ
ಕಹಿಸಿಹಿ ಪ್ರಸಂಗಗಳ ಮಿಶ್ರಣ ಈ ದಿನ. ಹೆಚ್ಚಿದ ಖರ್ಚು ಚಿಂತೆಗೆ ಕಾರಣವಾಗಲಿದೆ. ಆತ್ಮೀಯರ ಜತೆಗಿನ ಭೇಟಿಯಿಂದ ಸಂತೋಷ.

ಕಟಕ
ಪ್ರಗತಿಗೆ ಬೇಕಾದ ಹಾದಿ ನಿಮ್ಮ ಮುಂದಿದೆ. ಸರಿಯಾದ ರೀತಿಯಲ್ಲಿ ಅದರ ಬಳಕೆ ಮಾಡಿಕೊಳ್ಳಿ. ಅನವಶ್ಯ ದ್ವೇಷ ಭಾವನೆ ಮುಂದುವರಿಸಬೇಡ.

ಸಿಂಹ
ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಸಣ್ಣಪುಟ್ಟ ವಿಷಯಗಳು ಮನಸ್ಸು ಕೆಡಿಸಲು ಅವಕಾಶ ಕಲ್ಪಿಸಬೇಡಿ. ಸಹನೆಯಿಂದ ವರ್ತಿಸಿ.

ಕನ್ಯಾ
ಪ್ರಮುಖ ಕೆಲಸಕ್ಕೆ ನೆರವು ಪಡಕೊಳ್ಳಿ. ಏಕಾಂಗಿ ಪ್ರಯತ್ನ ಫಲ ನೀಡದು. ಹೊಟ್ಟೆ ಸಮಸ್ಯೆ ಕಾಡಬಹುದು. ಆಪ್ತರ ಸಂಗದಲ್ಲಿ ಆನಂದ.

ತುಲಾ
ನಿಮ್ಮ ವ್ಯವಹಾರ ಉನ್ನತಿಗೆ ಹೊಸ ಚಿಂತನೆ ಅಳವಡಿಸಿ. ಹಳೆಯ ದಾರಿ ಫಲ ನೀಡದು. ಎಲ್ಲರನ್ನು ನಂಬಿ ಕೆಡಬೇಡಿ. ಕೌಟುಂಬಿಕ ಸಹಕಾರ.

ವೃಶ್ಚಿಕ
ಕೆಲಸದ ಮೇಲೆ ಉತ್ಸಾಹ ಕಳಕೊಳ್ಳುವಿರಿ. ಕೆಲವರ ಮೇಲೆ ಅಸಹನೆ ಹೆಚ್ಚಲಿದೆ. ಶಾಂತರಾಗಿ ಯೋಚಿಸಿ ಕಾರ್ಯವೆಸಗಿ. ದುಡುಕು ಬೇಡ.

ಧನು
ನೆಗೆಟಿವ್ ಚಿಂತನೆಯ ವ್ಯಕ್ತಿಗಳನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕದಿರಿ. ಹಳೆಯ ಸ್ನೇಹಿತರ ಭೇಟಿ. ಕೌಟುಂಬಿಕ ಸಮಾಧಾನ.

ಮಕರ
ಹಣಕ್ಕೆ ಸಂಬಂಧಿಸಿದ ಬಿಕ್ಕಟ್ಟು ಪರಿಹಾರ. ಸೂಕ್ತ ನೆರವು ಲಭ್ಯ. ಸಂಬಂಧದಲ್ಲಿ ಅನುಮಾನಕ್ಕೆ ಆಸ್ಪದ ನೀಡಬೇಡಿ. ವಸ್ತು ಖರೀದಿ, ಧನವ್ಯಯ.

ಕುಂಭ
ಅಶಾಂತ ಮನಸ್ಥಿತಿ. ಆಪ್ತರ ಜತೆಗೆ ಭಿನ್ನಮತ ಉಂಟಾದೀತು. ನಿಮಗೆ ಸಂಬಂಧಿಸದ ವಿಚಾರದಲ್ಲಿ ತಲೆಕೆಡಿಸಿಕೊಳ್ಳದಿರಿ. ವೆಚ್ಚ ಹೆಚ್ಚದಂತೆ ನೋಡಿ.

ಮೀನ
ಬಿಡುವಿಲ್ಲದ ದಿನ. ಕೆಲವು ಹೊಣೆಗಾರಿಕೆ ಪೂರೈಸಬೇಕಾದ ಒತ್ತಡ. ಭಾವನಾತ್ಮಕ ಏರುಪೇರು. ಅನವಶ್ಯ ಖರ್ಚು ಹೆಚ್ಚುತ್ತಲೆ ಹೋಗುತ್ತದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 7,0,9,1

ಟೊಮೆಟೊ ಬಾತ್, ಮೊಸರನ್ನ, ಮೈಸೂರು ಪಾಕ್ ಬಡಿಸಲು ಸಿದ್ಧತೆ: ವಿಶ್ವನಾಥ್

ಅಭಿಮಾನೋತ್ಸವದ ಹಬ್ಬ

• **ಚಿತ್ರದುರ್ಗ:** ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ, ಪುರಪ್ರವೇಶ ಕಾರ್ಯಕ್ರಮವನ್ನು ಸಾಂಸ್ಕೃತಿಕ ಹಬ್ಬವಾಗಿ ಆಚರಿಸಲು ಮುಂದಾಗಿದ್ದೇವೆ ಎಂದು ಸಂಸದ ಗೋವಿಂದ ಕಾರಜೋಳ ಅವರು ತಿಳಿಸಿದ್ದಾರೆ.

ಅವರು ಇಂದು ಇಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು. ಸುಮಾರು 24 ಕಲಾತಂಡಗಳು, ಕವಿಗಳು, ಸಾಹಿತಿಗಳು ಭಾಗವಹಿಸುತ್ತಾರೆ. ಇಂದಿನ ಮೆರವಣಿಗೆಯಲ್ಲಿ ರೈತರು, ಮಹಿಳೆಯರು, ಮಕ್ಕಳು ಪಾಲ್ಗೊಳ್ಳುತ್ತಾರೆ. ಇದೊಂದು ವಿಶಿಷ್ಟ ಪುರಪ್ರವೇಶ ಕಾರ್ಯಕ್ರಮ ಎಂದರು. ಜನತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮನವಿ ಮಾಡಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಅವರು ಮಾತನಾಡಿ, ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಲಕ್ಷಾಂತರ ಜನರು ಬರಲಿದ್ದಾರೆ. ಅವರಿಗೆ ಊಟದ ವ್ಯವಸ್ಥೆ ಮಾಡಲು ಬೆಂಗಳೂರಿನ ಶಾಸಕರು ಸಭೆ ಮಾಡಿದ್ದೇವೆ. ವಾರದ ಹಿಂದೆ ಸ್ಥಳ ಪರಿಶೀಲಿಸಿದ್ದೇವೆ ಎಂದು ವಿವರಿಸಿದರು. ಕಾರ್ಯಕ್ರಮ ಮುಗಿದ ಮೇಲೂ ಸ್ವಚ್ಛತೆಗೆ ಸಿದ್ಧತೆ ಮಾಡಿದ್ದೇವೆ ಎಂದರು.

ಮೈಸೂರು, ಬೆಂಗಳೂರು, ಚಿತ್ರದುರ್ಗ, ತುಮಕೂರು ಮೊದಲಾದ 5 ಕಡೆಯ ಪ್ರಮುಖ ಅಡುಗೆಯವರಿಗೆ ನಿರ್ವಹಣೆ ಕೊಟ್ಟಿದ್ದೇವೆ. ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಲಿದೆ. ಟೊಮೆಟೊ ಬಾತ್, ಮೊಸರನ್ನ, ಮೈಸೂರು ಪಾಕ್, ಅರ್ಧ ಲೀಟರ್ ಕುಡಿಯುವ ನೀರನ್ನೂ ಕೊಡುತ್ತೇವೆ ಎಂದು ಮಾಹಿತಿ ನೀಡಿದರು. ಸಂಜೆ 6ರವರೆಗೂ ಇದು ಮುಂದುವರೆಯುತ್ತದೆ ಎಂದರು.

ಒಂದೊಂದು ಅಡುಗೆ ಮನೆ ಬಳಿ ಬೆಂಗಳೂರಿನ ಶಾಸಕರ 100 ರಂತೆ ಸ್ವಯಂಸೇವಕರೂ ಇರುತ್ತಾರೆ. ಹಂತ ಹಂತವಾಗಿ ಬಿಸಿಯೂಟವನ್ನೇ ಕೊಡಲು ಕ್ರಮ ಕೈಗೊಳ್ಳಲಿದ್ದಾರೆ. ಸರತಿ ಸಾಲಿನಲ್ಲೂ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತಾರೆ ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ ಇಂದು ನಡೆಯಲಿರುವ ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಈ ಕಾರನ್ನು ತರಲಾಗಿದ್ದು, ಕಾರಿನ ವಿಶೇಷತೆಗಳ ಕುರಿತು ವಿಜಯೇಂದ್ರ ಅವರು ಮಾಧ್ಯಮಗಳಿಗೆ ವಿವರಿಸಿದರು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರನ್ನು ರೈತನಾಯಕ ಎಂದು ಜನ ಗುರುತಿಸುತ್ತಾರೆ ಪ್ರೀತಿಸುತ್ತಾರೆ. ಯಡಿಯೂರಪ್ಪ ಅವರ ಮೇಲೆ ನಾಡಿನ ಜನ ಯಾವ ರೀತಿಯ ಪ್ರೀತಿ ಮತ್ತು ಅಭಿಮಾನ ತೋರುತ್ತಾರೋ ಅದೇ ಸಿಕೆಆರ್ 45 ನಂಬರಿನ ಕಾರಿಗೂ ಜನ ಪ್ರೀತಿ ತೋರುತ್ತಾರೆ ಎಂದು ಹೇಳಿದರು.

ಆ ಕಾಲದಲ್ಲಿ ಕೇವಲ ನಗರಕ್ಕೆ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿಹಳ್ಳಿಗೆ ತೆಗೆದುಕೊಂಡು ಹೋಗಿ ಪಕ್ಷದ ಸಂಘಟನೆ ಬಲಪಡಿಸಲು ಬಿಎಸ್‌ವೈ ಸಾಕಷ್ಟು ಶ್ರಮಿಸಿದರು. ಪಕ್ಷ ಸಂಘಟನೆಯಲ್ಲಿ ಯಡಿಯೂರಪ್ಪ ಅವರ ಪಾತ್ರ ಎಷ್ಟಿದೆಯೊ ಈ ಕಾರಿನ ಪಾತ್ರವೂ ಅಷ್ಟೇ ಇದೆ ಎಂದು ವಿವರಿಸಿದರು.

ಬಿಎಸ್‌ವೈ ಅವರೊಂದಿಗೆ ಅನಂತ ಕುಮಾರ್, ಡಿ.ಎಚ್.ಶಂಕರಮೂರ್ತಿ ಅವರು ಇದೇ ಕಾರಿನಲ್ಲಿ ರಾಜ್ಯದಲ್ಲಿ ಪ್ರವಾಸಲ್ಲಿ ಮಾಡಿದ್ದಾರೆ. ಆ ದಿನಗಳಲ್ಲಿ ರಸ್ತೆಗಿಂತ ಗುಂಡಿಗಳೇ ಹೆಚ್ಚಿದ್ದವು. ಯಡಿಯೂರಪ್ಪ ಇದೇ ಕಾರನ್ನು ಸದಾ ಬಳಸುತ್ತಿದ್ದರು. ಅವರ ಪ್ರವಾಸಕ್ಕೆ ಶಕ್ತಿ ತುಂಬಿದ್ದು ಈ ಕಾರು ಎಂದರು.

ಶಂಕರ್ ಎಂಬುವರು ಹತ್ತಾರು ವರ್ಷ ಚಾಲಕರಾಗಿದ್ದರು. ಮಂಜಣ್ಣ ಎಂಬ ಮತ್ತೊಬ್ಬರು ಚಾಲಕರಾಗಿದ್ದರು. ಅವರು ನಮ್ಮ ಕುಟುಂಬ ಸದಸ್ಯರಂತೆ ಹದಿನೈದು ವರ್ಷ ಕಾರು ಓಡಿಸಿದ್ದಾರೆ. ಒಮ್ಮೆ ಮಾತ್ರ ಕಾರು ಅಡಿಮೇಲಾಗಿದ್ದು ಮತ್ತೆ ಯಾವುದೇ ಅವಘಡ ಸಂಭವಿಸಿಲ್ಲ. ಸುರಕ್ಷಿತವಾಗಿ ಇಡೀ ರಾಜ್ಯದಲ್ಲಿ ಬಿಎಸ್‌ವೈ ಅವರನ್ನು ಈ ಕಾರು ಸುತ್ತಾಡಿಸಿದೆ. ಇದರ ಮೇಲೆ ಅವರಿಗೆ ಅಪಾರ ಪ್ರೀತಿ ಇದೆ ಎಂದರು.

ಬಿಎಸ್‌ವೈ ಮೆಚ್ಚಿನ ಕಾರು ಸಿಕೆಆರ್ 45



ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ರಾಜಕೀಯ ಜೀವನದಲ್ಲಿ ಬಳಸಿದ ಸಿಕೆಆರ್ 45 ನಂಬರಿನ ಹಿಂದೂಸ್ತಾನ್ ಅಂಬಾಸಿಡರ್ ಕಾರನ್ನು ಇಡೀ ರಾಜ್ಯದ ಜನ ಗುರುತಿಸಿದ್ದಾರೆ, ಪತ್ತೆ ಹಚ್ಚುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಅವರು ಹೇಳಿದರು.



ಬಹುಮತದ ವಿಜಯ!

ಪುಟ 1 ➜ ಪರಿಣಾಮವಾಗಿ ರಾಜ್ಯದಲ್ಲಿ ಅತಂತ್ರ ಅಸೆಂಬ್ಲಿ ಸ್ಥಿತಿನಿರ್ಮಾಣವಾಗಿತ್ತು.

ಡಿಎಂಕೆ-ಎಐಎಡಿಎಂಕೆ ರಹಸ್ಯ ಮಾತುಕತೆ!: ವಿಜಯ್ ಅಧಿಕಾರಕ್ಕೆ ಬರಬಾರದು ಎಂಬ ಉದ್ದೇಶದಿಂದ ರಾಜಕೀಯ ವೈರಿ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ನಡುವೆ ಸರ್ಕಾರ ರಚನೆ ಕುರಿತು ಅನೌಪಚಾರಿಕ ಮಾತುಕತೆ ನಡೆದಿರುವುದು ರಾಜ್ಯ ರಾಜಕಾರಣದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ಕಳೆದ ಐದು ದಶಕಗಳಿಂದ ಪರಸ್ಪರ ವಿರುದ್ಧ ರಾಜಕೀಯ ನಡೆಸುತ್ತಿದ್ದ ದ್ರಾವಿಡ ಪಕ್ಷಗಳು ಮೊದಲ ಬಾರಿಗೆ ಒಂದಾಗುವ ಸಾಧ್ಯತೆಗಳ ಸುದ್ದಿ ಹರಿದಾಡಿದವು.

ಮೂಲಗಳ ಪ್ರಕಾರ, 'ವಿಜಯ್ ಅವರನ್ನು ತಡೆಯಲು ಹೊರಗಿನ ಬೆಂಬಲ ಮಾದರಿಯಲ್ಲಿ ಸರ್ಕಾರ ರಚನೆ ಸಾಧ್ಯವೇ?' ಎಂಬ ಪ್ರಶ್ನೆಯ ಸುತ್ತ ಚರ್ಚೆಗಳು ನಡೆದಿದ್ದವು. ಆದರೆ ಮುಖ್ಯಮಂತ್ರಿ ಹುದ್ದೆ ಯಾರಿಗೆ, ಸಚಿವ ಸಂಪುಟ ಹಂಚಿಕೆ ಹೇಗೆ, ಸ್ಪೀಕರ್ ಸ್ಥಾನ ಯಾರಿಗೆ ಎಂಬ ವಿಚಾರದಲ್ಲಿ ಒಮ್ಮತ ಮೂಡಲಿಲ್ಲ. ಡಿಎಂಕೆ ಮತ್ತು ಎಐಎಡಿಎಂಕೆ ಎರಡೂ ಪಕ್ಷಗಳ ಒಳಗಡೆಯಲ್ಲೇ ಈ ಯೋಚನೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು ಎನ್ನಲಾಗಿದೆ. ಈ ಬೆಳವಣಿಗೆಗೆ ತೀವ್ರ ಪ್ರತಿಕ್ರಿಯೆ ನೀಡಿದ್ದ ಟಿವಿಕೆ ವಲಯ, 'ಡಿಎಂಕೆ-ಎಐಎಡಿಎಂಕೆ ಸೇರಿ ಸರ್ಕಾರ ರಚಿಸಿದರೆ ನಮ್ಮ ಎಲ್ಲ ಶಾಸಕರು ರಾಜೀನಾಮೆ ನೀಡುತ್ತಾರೆ' ಎಂದು ಎಚ್ಚರಿಕೆ ನೀಡಿತ್ತು. ಇದರಿಂದ ರಾಜಕೀಯ ಒತ್ತಡ ಮತ್ತಷ್ಟು ಹೆಚ್ಚಾಗಿತ್ತು.

ರಾಜ್ಯಪಾಲರೆದುರು 3 ಬಾರಿ ಶಕ್ತಿ ಪ್ರದರ್ಶನ: ಬಹುಮತದ ಪಟ್ಟಿ ಸಿದ್ಧವಾಗದ ಕಾರಣ ವಿಜಯ್‌ಗೆ ಆರಂಭದಲ್ಲಿ ರಾಜ್ಯಪಾಲರು ಸರ್ಕಾರ ರಚನೆಗೆ ಅವಕಾಶ ನೀಡಿರಲಿಲ್ಲ. ಬುಧವಾರ ಮತ್ತು ಗುರುವಾರ ನಡೆದ ಎರಡು ಭೇಟಿಗಳಲ್ಲೂ 'ಬಹುಮತದ ಸ್ಪಷ್ಟ ಬೆಂಬಲ ತೋರಿಸಿ' ಎಂದು ರಾಜ್ಯಪಾಲರು ಸೂಚಿಸಿದ್ದರು. ಈ ನಡುವೆ ಕಾಂಗ್ರೆಸ್, ಎಡಪಕ್ಷಗಳು ಹಾಗೂ ವಿಸಿಕೆ ಜತೆ ಟಿವಿಕೆ ನಿರಂತರ ಮಾತುಕತೆ ನಡೆಸಿತು.

ಶುಕ್ರವಾರ ಸಂಜೆ ಮೂರನೇ ಬಾರಿ ರಾಜ್ಯಪಾಲರನ್ನು ಭೇಟಿ ಮಾಡಿದ ವಿಜಯ್, 118 ಶಾಸಕರ ಬೆಂಬಲ ಪತ್ರಗಳನ್ನು ಸಲ್ಲಿಸಿದರು. ಬಳಿಕ ರಾಜ್ಯಪಾಲರು ಸರ್ಕಾರ ರಚನೆಗೆ ಸಮ್ಮತಿ ಸೂಚಿಸಿರುವ ಮಾಹಿತಿ ಹೊರಬಿದ್ದಿದೆ.

ಕಾಂಗ್ರೆಸ್ ತೀರ್ಮಾನದಿಂದ ಡಿಎಂಕೆಗೆ ಶಾಕ್: ಚುನಾವಣೆಗೆ ಮುನ್ನ ಡಿಎಂಕೆಯ ಮೈತ್ರಿ ಪಾಲುದಾರವಾಗಿದ್ದ ಕಾಂಗ್ರೆಸ್, ಫಲಿತಾಂಶದ ಬಳಿಕ ಟಿವಿಕೆ ಬೆಂಬಲಿಸುವ ನಿರ್ಧಾರ ತೆಗೆದುಕೊಂಡಿದ್ದು ತಮಿಳುನಾಡು ರಾಜಕೀಯದಲ್ಲಿ ಅಚ್ಚರಿ ಮೂಡಿಸಿತು. ಕಾಂಗ್ರೆಸ್ ನಾಯಕರು 'ಕೋಮುವಾದಿ ಶಕ್ತಿಗಳನ್ನು ಒಂದಾಗಿ ಉಳಿಸಲು ಹಾಗೂ ಬಿಜೆಪಿ ವಿರುದ್ಧ ಜನಮತವನ್ನು ಗೌರವಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಸಮರ್ಥಿಸಿಕೊಂಡರು. ಕಾಂಗ್ರೆಸ್ ಬೆಂಬಲದ ನಂತರ ಡಿಎಂಕೆ-ಕಾಂಗ್ರೆಸ್ ಸಂಬಂಧಗಳಲ್ಲಿ ಬಿರುಕು ಸ್ಪಷ್ಟವಾಗಿ ಗೋಚರಿಸಿತು.

ಹೊಸ ರಾಜಕೀಯ ಅಧ್ಯಾಯ

ಡಿಎಂಕೆ ಮತ್ತು ಎಐಎಡಿಎಂಕೆ ನಡುವಿನ ಪರ್ಯಾಯ ಆಡಳಿತಕ್ಕೆ ಜನರು ಬೇಸತ್ತಿದ್ದಾರೆ ಎಂಬ ವಿಶ್ಲೇಷಣೆಗಳ ನಡುವೆ ಟಿವಿಕೆ ಮೊದಲ ಚುನಾವಣೆಯಲ್ಲೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದು ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಸಿನಿತಾರೆಯಾಗಿ ಜನಪ್ರಿಯತೆ ಪಡೆದ ವಿಜಯ್, ಈಗ ರಾಜಕೀಯದಲ್ಲೂ ಹೊಸ ಶಕ್ತಿಯಾಗಿ ಹೊರಹೊಮ್ಮಿದ್ದು, ತಮಿಳುನಾಡಿನಲ್ಲಿ ದ್ರಾವಿಡ ರಾಜಕೀಯದ ಸಾಂಪ್ರದಾಯಿಕ ಸಮೀಕರಣವೇ ಬದಲಾಗುವ ಸೂಚನೆಗಳು ಕಾಣಿಸುತ್ತಿವೆ.

ಭಾರತಕ್ಕೆ ಈಜಿ ಬಂದ ಟೆಕ್ಕಿ ದಂಪತಿ!

• **ಬೆಂಗಳೂರು:** ಯಾವುದೇ ಕ್ಷೇತ್ರದಲ್ಲಿ ಮುನ್ನುಗ್ಗಬೇಕಾದರೆ ಮೊದಲು ಬೇಕಾಗಿರುವುದು ಛಲ. ಛಲವೊಂದಿದ್ದರೇ ಜಗತ್ತಿನಲ್ಲಿ ಅಸಾಧ್ಯವೆಂಬುದನ್ನೂ ಸಾಧ್ಯವಾಗಿಸಬಹುದು. ಇದಕ್ಕೆ ಸ್ಪಷ್ಟ ಉದಾಹರಣೆಯಂತೆ ಬೆಂಗಳೂರಿನ ಟೆಕ್ಕಿ ದಂಪತಿ ಸುಮಾರು 10 ಗಂಟೆ 45 ನಿಮಿಷಗಳ ಕಾಲ ಸಮುದ್ರದ ರಭಸದ ಅಲೆಗಳನ್ನೂ ಲೆಕ್ಕಿಸದೇ ಶ್ರೀಲಂಕಾದಿಂದ ಮೂಲಕ ರಾಮಸೇತು ಮಾರ್ಗದಲ್ಲಿ ಭಾರತಕ್ಕೆ ಈಜಿ ಬರುವ ಮೂಲಕ ಹೊಸ ದಾಖಲೆ ಸೃಷ್ಟಿಸಿದ್ದಾರೆ.

ಈಜುಗಾರರಾದ ಡ್ಯಾನಿಶ್ ಅಬ್ದಿ ಮತ್ತು ವೃಶಾಲಿ ಪ್ರಸಾದೆ ಹಿಂದು ಮಹಾಸಾಗರದ ಐತಿಹಾಸಿಕ ರಾಮಸೇತುವಿನ ಉದ್ದಕ್ಕೂ ಸುಮಾರು 32 ಕಿಲೋಮೀಟರ್ ಈಜುತ್ತಾ, 10 ಗಂಟೆ 45 ನಿಮಿಷಗಳಲ್ಲಿ ನೀರಿನ ಹಾದಿಯನ್ನು ಸುಲಭವಾಗಿ ತಲುಪಿದ್ದಾರೆ. ಸಮುದ್ರದ ಭಾರೀ ಅಲೆಗಳು, ಹವಾಮಾನ ಬದಲಾವಣೆ ಮತ್ತು ದೈಹಿಕ ಬಳಲಿಕೆಯನ್ನು ಲೆಕ್ಕಿಸದೇ ಈ ದಂಪತಿ ತಮ್ಮ ಗುರಿ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ಈ ಸಾಹಸ ಈಜಿನ ಹಾದಿಯುದ್ದಕ್ಕೂ ಬೆಂಬಲವಾಗಿ ಪ್ಯಾರಾಮೆಡಿಕ್ಸ್ ತಂಡಗಳು, ಕೋಸ್ಟ್ ಗಾರ್ಡ್ ಹಾಗೂ ತಾಂತ್ರಿಕ ಸಿಬ್ಬಂದಿಗಳು ದೋಣಿಗಳ ಮೂಲಕ ಸಹಕಾರ ನೀಡಿದ್ದರು. ಈ ಜೋಡಿಯು ಶ್ರೀಲಂಕಾದ ತಲೈಮನ್ನಾರ್‌ನಿಂದ ತಮ್ಮ ಪ್ರಯಾಣವನ್ನು ಪ್ರಾರಂಭಿಸಿ ಧನುಷ್ಕೋಡಿಯಲ್ಲಿ ಈಜು ಪೂರ್ಣಗೊಳಿಸಿದ್ದಾರೆ. ಅವರ ಈ ಸಮುದ್ರಯಾನವು ಆಳವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಹೊಂದಿದೆ. ಅನೇಕರು ಈ ದಂಪತಿಗಳ ಸಾಧನೆಯನ್ನು ರಾಮಾಯಣದಲ್ಲಿ ಬರುವಂತಹ ಪ್ರಾಚೀನ ರಾಮಸೇತುವೆ ದಾಟಿರುವ ಉಲ್ಲೇಖವನ್ನು ಇಲ್ಲಿ ನೆನಪಿಸಿಕೊಂಡಿದ್ದಾರೆ.



ಯಾರೀ ದಂಪತಿ?

30ರ ಹರೆಯದ ಡ್ಯಾನಿಶ್ ಮತ್ತು ವೃಶಾಲಿ ಇಬ್ಬರೂ ಬೆಂಗಳೂರಿನ ಐಟಿ ವಲಯದಲ್ಲಿ ಕೆಲಸ ಮಾಡುತ್ತಿದ್ದು, ತಮ್ಮ ಕೆಲಸದ ನಡುವೆ ಈ ಹವ್ಯಾಸವನ್ನು ಒಗ್ಗೂಡಿಸಿಕೊಂಡಿದ್ದಾರೆ. ಈ ಹಿಂದೆ ಹಿಂದು ಮಹಾಸಾಗರದಾದ್ಯಂತ ರಿಲೇ ಈಜುಗಳಲ್ಲಿ ಭಾಗವಹಿಸಿದ ಅನುಭವ ಇವರಿಗಿದೆ.

ಕೊನೆಗೂ ಪೊಲೀಸ್ ಬಲೆಗೆ ಬಿದ್ದ ನಿದಾ

ಪುಟ 1 ➜ ನಾಸಿಕ್ ಟಿಸಿಎಸ್ ಕಚೇರಿಯಲ್ಲಿ ನಡೆಸಿದ ಕರ್ಮಕಾಂಡ ಬಹಿರಂಗವಾದ ಬಳಿಕ ನಿದಾ ಖಾನ್ ಬಂಧನ ತಪ್ಪಿಸಿಕೊಂಡು ತಲೆಮರೆಸಿ ಕೊಂಡಿದ್ದರಿಂದ, ಪೊಲೀಸರು ಹಲವು ಪ್ರದೇಶಗಳಲ್ಲಿ ನಿರಂತರ ಶೋಧ ಕಾರ್ಯಾಚರಣೆ ನಡೆಸಿದ್ದರು. ಮೇ ಮೊದಲ ವಾರದಲ್ಲಿ, ಆಕೆ ಕೈಸರ್ ಕಾಲೋನಿಯ ನರೇಗಾಂವ್ ಪ್ರದೇಶದ ಬಾಡಿಗೆ ಮನೆಯಲ್ಲಿ ತಂಗಿರುವ ಮಾಹಿತಿ ತನಿಖಾ ತಂಡಕ್ಕೆ ದೊರಕಿತ್ತು. ಇದುವರೆಗೆ ಪ್ರಕರಣದಲ್ಲಿ ನಿದಾಸಹಿತ ಒಟ್ಟು 8 ಜನರನ್ನು ಬಂಧಿಸಲಾಗಿದೆ. ಉಳಿದ 7 ಆರೋಪಿಗಳನ್ನು ತನಿಖೆಯ ವೇಳೆ ಈಗಾಗಲೇ ಬಂಧಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕಣ್ಗಾವಲು, ಲೋಕೇಶನ್ ಟ್ರ್ಯಾಕಿಂಗ್‌ನಿಂದ ಪತ್ತೆ: ರಹಸ್ಯ ಮಾಹಿತಿಯ ಆಧಾರದ ಮೇಲೆ ಪೊಲೀಸರು ತಾಂತ್ರಿಕ ಕಣ್ಗಾವಲು ಹಾಗೂ ಲೊಕೇಶನ್ ಟ್ರ್ಯಾಕಿಂಗ್ ಮೂಲಕ ಆಕೆಯ ಹಾಜರಾತಿಯನ್ನು ದೃಢಪಡಿಸಿದರು. ಮೂಲಗಳ ಪ್ರಕಾರ, ನಿದಾ ತನ್ನ ತಂದೆ-ತಾಯಿ, ಸಹೋದರ ಮತ್ತು ಅತ್ತೆಯೊಂದಿಗೆ ಮೂರು ನಾಲ್ಕು ದಿನಗಳಿಂದ ಆ ಮನೆಯಲ್ಲಿ ವಾಸಿಸುತ್ತಿದ್ದರು. ಆರೋಪಿ ನಿದಾಳಿಗೆ ಅನುಮಾನ ಬಾರದಂತೆ ಪೊಲೀಸರು ತಕ್ಷಣ ದಾಳಿ ನಡೆಸದೆ ದೀರ್ಘ ಕಾಲದಿಂದ ಕಣ್ಗಾವಲು ನಡೆಸುತ್ತಿದ್ದರು.

ಸುಮಾರು 20ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಮಫ್ತಿಯಲ್ಲಿ ಸುತ್ತಮುತ್ತ ನಿಯೋಜಿಸಲ್ಪಟ್ಟಿದ್ದರು. ಅನುಮಾನ ಮೂಡದಂತೆ ಪೊಲೀಸ್ ವಾಹನಗಳನ್ನು ಪ್ರದೇಶದಿಂದ ದೂರ ಇಡಲಾಗಿತ್ತು. ಅಧಿಕಾರಿಗಳ ಪ್ರಕಾರ, ನಿದಾ ಖಾನ್ ಸ್ಥಳೀಯ ವಕೀಲರೊಂದಿಗೆ ಚರ್ಚೆ ನಡೆಸುತ್ತಿದ್ದು, ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸುತ್ತಿದ್ದರು. ಆದರೆ ಅರ್ಜಿ ಸಲ್ಲಿಸುವ ಮೊದಲೇ ಪೊಲೀಸರು ಆಕೆಯನ್ನು ಅಚ್ಚರಿಯ ರೀತಿಯಲ್ಲಿ ಬಂಧಿಸಿದರು. ಗುರುವಾರ ರಾತ್ರಿ ಆಕೆಯನ್ನು ಬಂಧಿಸಿ, ಸುತಗಿರಣಿ ಚೌಕ್‌ನಲ್ಲಿರುವ ನ್ಯಾಯಾಂಗ ಅಧಿಕಾರಿಯ ನಿವಾಸದ ಮುಂದೆ ಹಾಜರುಪಡಿಸಲಾಯಿತು.

ಬಳಿಕ ನಾಸಿಕ್ ಪೊಲೀಸರು ಟ್ರಾನ್ಸಿಟ್ ರಿಮಾಂಡ್ ಪಡೆದು ವಿಶೇಷ ವಾಹನದಲ್ಲಿ ಮುಂದಿನ ತನಿಖೆಗಾಗಿ ನಾಸಿಕ್‌ಗೆ ಕರೆದೊಯ್ದರು. ಬಂಧನದ ವೇಳೆ ಆ ಮನೆಯಲ್ಲಿ ಇನ್ನೂ ಐವರು ಇದ್ದರು ಎಂದು ಮೂಲಗಳು ತಿಳಿಸಿವೆ.

ದೇಸಿ ಗ್ಲೈಡ್ ತಾರಾ ಪರೀಕ್ಷೆ ಯಶ

• **ಹೊಸದಿಲ್ಲಿ:** ಸಿಂದೂರ ಕಾರ್ಯಾಚರಣೆಗೆ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ ಭಾರತ ತನ್ನ ಚೊಚ್ಚಲ ದೇಸಿ ಮಾಡ್ಯುಲರ್ ಗ್ಲೈಡ್ ಶಸ್ತ್ರಾಸ್ತ್ರ ವ್ಯವಸ್ಥೆಯಾದ ತಾರಾ ಹಾರಾಟ ಪರೀಕ್ಷೆ ಒಡಿಶಾ ಕರಾವಳಿಯಲ್ಲಿ ಗುರುವಾರ ಯಶಸ್ವಿಯಾಗಿ ನಡೆಸಿದೆ. ತಾರಾ (ಟ್ಯಾಕ್ಟಿಕಲ್ ಅಡ್ವಾನ್ಸ್ಡ್ ರೇಂಜ್ ಆಗ್ಮೆಂಟೇ ಶನ್), ಗ್ಲೈಡ್ ಶಸ್ತ್ರಾಸ್ತ್ರವು ಒಂದು ಸ್ಮಾರ್ಟ್ ಬಾಂಬ್ ಆಗಿದ್ದು, ಇದಕ್ಕೆ ಹಾರಾಟದಲ್ಲಿ ಸಮತೋಲನ ಸಿಗುವುದಕ್ಕಾಗಿ ಕ್ಷಿಪಣಿ ಗಳಂತೆ ರೆಕ್ಕೆಗಳನ್ನು ಜೋಡಿಸಲಾಗಿರುತ್ತದೆ. ಭಾರತವು ದೇಶೀಯವಾಗಿ ಅಭಿವೃದ್ಧಿಪಡಿಸಿದ ಚೊಚ್ಚಲ ಗ್ಲೈಡ್ ಶಸ್ತ್ರಾಸ್ತ್ರ ಇದಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಭಾರತೀಯ ವಾಯುಪಡೆ (ಐಎಎಫ್) ಜಂಟಿಯಾಗಿ ಅಭಿವೃದ್ಧಿಪಡಿಸಿದ ಭಾರತದ ಮೊದಲ ಗ್ಲೈಡ್ ಶಸ್ತ್ರಾಸ್ತ್ರದ ಹಾರಾಟ ಪರೀಕ್ಷೆ ಮೇ 7ರಂದು ಒಡಿಶಾ ಕರಾವಳಿಯಲ್ಲಿ ಯಶಸ್ವಿಯಾಗಿ ನಡೆಯಿತು ಎಂದು ರಕ್ಷಣಾ ಸಚಿವಾಲಯ ಶುಕ್ರವಾರ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದೆ. ಹೈದರಾಬಾದ್‌ನ ಸಂಶೋಧನಾ ಕೇಂದ್ರ ಇಮಾರತ್ (ಆರ್‌ಸಿಐ) ಮತ್ತು ಡಿಆರ್‌ಡಿಒ ಪ್ರಯೋಗಾಲಯದಲ್ಲಿ, ತಾರಾ ಗ್ಲೈಡ್ ಶಸ್ತ್ರಾಸ್ತ್ರ ವ್ಯವಸ್ಥೆ ಅಭಿವೃದ್ಧಿಪಡಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

'ಘಟನೋತ್ತರ ಆದೇಶಕ್ಕಾಗಿ ಕಡತ ಮಂಡಿಸಿ' ಎನ್ನುತ್ತಿದ್ದ ಬಿಎಸ್ವೈ

ಪುಟ 1 ➜ ಆದರೂ ಹುಟ್ಟು ಕೋಪಿಷ್ಟನೊಬ್ಬ ಹೇಗೆ ಅಪ್ಪಾಜಿಯಾದರು ಎಂದರೆ ಅವರು ಶೀಘ್ರ ಕೋಪಿಯೇ ಹೊರತು ದೀರ್ಘ ದ್ವೇಷಿಯಲ್ಲ. ಕೋಪ ತಣಿದ ಕೂಡಲೇ ಕರೆಸಿ ಉಪ್ಪಿಟ್ಟು ತಿನ್ನಿಸಿ, ಕೆಲಸ ಮಾಡಿಕೊಟ್ಟು ಕಳುಹಿಸುತ್ತಿದ್ದರು. ಸಾರ್ವಜನಿಕವಾಗಿ ಅವರಲ್ಲಿ ಕಾಣುತ್ತಿದ್ದ ಸಿಟ್ಟು ಸಾತ್ವಿಕವಾಗಿರುತ್ತಿತ್ತು. ಯಡಿಯೂರಪ್ಪನವರ ಸಿಟ್ಟು ಸೆಡವುಗಳ ಹಿಂದೆ ಹೆಂಗರುಳೂ ಇದೆ. ಅದಕ್ಕೆ ಉದಾಹರಣೆ ಬೇಕಾ?

ಗೌರವಪೂರ್ವಕ ಯೋಜನೆ: ಬಡವನ ಮನೆಯಲ್ಲಿ ಹೆಣ್ಣುಮಗಳು ಹುಟ್ಟಿದರೆ ಅವಳು ಮನೆಗೆ ಭಾರವಲ್ಲ, ಅವಳು ಮನೆಯ ಭಾಗ್ಯಲಕ್ಷ್ಮಿ ಎಂಬ ಯೋಜನೆಯನ್ನೇ ತಂದರು. ಅವಳ ಭವಿಷ್ಯಕ್ಕಾಗಿ ಒಂದು ಲಕ್ಷ ರೂಪಾಯಿಯ ಯೋಜನೆ ಅದಾಗಿತ್ತು. ಆ ಹೆಣ್ಣುಮಗಳ ಶಾದಿ ಬಗ್ಗೆ ಯೋಚಿಸಲಿಲ್ಲ, ಅವಳನ್ನು ಶಾಲೆಗೆ ಸೇರಿಸಿ ವಿದ್ಯಾಲಕ್ಷ್ಮಿಯನ್ನಾಗಿ ಮಾಡುವುದಕ್ಕಾಗಿ ಸೈಕಲ್ ಕೊಟ್ಟರು. ರೆಕ್ಕೆಪುಕ್ಕ ಬಂದ ಮೇಲೆ ಗೂಡು ತೊರೆದು ಹಾರಿಹೋಗುವ ಹಕ್ಕಿಗಳಂತೆ ವೃದ್ಧ ತಂದೆತಾಯಂದಿರನ್ನು ಊರಲ್ಲಿ ಬಿಟ್ಟು ಮಕ್ಕಳು ಪೇಟೆ ಸೇರಿದರೇನಂತೆ ಆಳುವ ಪಕ್ಷಕ್ಕೆ ಹಿರಿಯರನ್ನು ಸಾಕಿ ಸಲಹುವ ಸಾಮಾಜಿಕ ಜವಾಬ್ದಾರಿಯಿದೆಯೆಂದು ಅರಿತು ಸಂಧ್ಯಾಸುರಕ್ಷಾ ಯೋಜನೆಯನ್ನು ಜಾರಿಗೆ ತಂದರು. ವೃದ್ಧಾಪ್ಯ, ವಿಧವಾ ವೇತನ ಹೆಚ್ಚಿಸಿದರು. ನಲವತ್ತು ವರ್ಷ ದಾಟಿದ ಅವಿವಾಹಿತ ಹೆಣ್ಣುಮಕ್ಕಳನ್ನೂ ಪಿಂಚಣಿ ಯೋಜನೆ ವ್ಯಾಪ್ತಿಗೆ ತಂದರು.

ರೈತಪರ ನಾಯಕ: ರೈತರ ವಿಷಯ ಬಂದರೆ ಅವರು ಮೃದುವಾಗುತ್ತಿದ್ದರು. ಉಪಮುಖ್ಯಮಂತ್ರಿಯಾಗಿದ್ದಾಗ ಸಾಲ ಮನ್ನಾ ಮಾಡಿದ್ದ ಅವರು, ಮುಖ್ಯಮಂತ್ರಿಯಾದ ನಂತರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿದ್ದ ಸಾಲವನ್ನೂ ಒಳಪಟ್ಟಂತೆ ರೈತನ ಬಡ್ಡಿ ಮನ್ನಾ ಮಾಡಿದರು. ಕರೆಂಟಿನ ಬಿಸಿಯಲ್ಲಿ ರೈತನ ಬದುಕು ಮತ್ತು ಬೆಳೆ ಸುಟ್ಟು ಹೋಗಬಾರದೆಂದು ಭಾವಿಸಿ ಆತನ ಲಕ್ಷಾಂತರ ಪಂಪ್ ಸೆಟ್ ಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಿದರು. ಹಾಗಾಗಿಯೇ ರಾಜ್ಯದಲ್ಲಿರುವ ಬರಪೀಡಿತ ಪ್ರದೇಶಗಳಲ್ಲೆಲ್ಲ ಕುಡಿಯುವ ನೀರು ಪೂರೈಕೆ ಹಾಗೂ ಕೆರೆಗಳಿಗೆ ನೀರು ತುಂಬಿಸುವ ಕಾಯಕಕ್ಕೆ ಕೈಹಾಕಿದರು. ಜೋಳಕ್ಕೆ, ಭತ್ತಕ್ಕೆ ಕೇಂದ್ರ ಸರ್ಕಾರ ಕೊಡುವ ಕನಿಷ್ಠ ಬೆಂಬಲ ಬೆಲೆಗೆ 150 ರೂ. ಸೇರಿಸಿಕೊಟ್ಟು ಖರೀದಿ ಮಾಡಿದರು.

ಕಳೆದ ಮೂರು ದಶಕಗಳನ್ನು ನೋಡಿದರೆ ನಮ್ಮ ರಾಜ್ಯದ ಒಂದಿಲ್ಲೊಂದು ಭಾಗಗಳು ಬರ, ನೆರೆಗೆ ತುತ್ತಾಗುತ್ತಲೇ ಬಂದಿವೆ. ಆದರೆ ಒಬ್ಬ ಮುಖ್ಯಮಂತ್ರಿಯಾದವರಿಗೆ ದೂರದೃಷ್ಟಿ ಇರಬೇಕಾಗುತ್ತದೆ. ಎಸ್.ಎಂ. ಕೃಷ್ಣ ಅವರು ಮೂರು ವರ್ಷಗಳ ಸತತ ಬರ ಬಂದಾಗ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕಾದರೆ ಬೀಳುವ ಹನಿ ಹನಿ ನೀರನ್ನೂ ಕಾಪಿಟ್ಟುಕೊಳ್ಳಬೇಕೆಂದು ಭಾವಿಸಿ ಕೆರೆಗಳ ಪುನಶ್ಚೇತನಕ್ಕೆಂದೇ ಕಾಯಕ ಕೆರೆ ಎಂಬ ಯೋಜನೆ ಜಾರಿಗೆ ತಂದಿದ್ದರು. ಅದೇ ರೀತಿ ಬರ ಎದುರಿಸುತ್ತಿದ್ದ ಚಾಮರಾಜನಗರ ಜಿಲ್ಲೆಯ ಕೆರೆಗಳು ನೀರಿಗಾಗಿ ಬಾಯ್ಬಿಟ್ಟುಕೊಂಡು ಕುಳಿತಿವೆ, ಬತ್ತಿದ ಕೆರೆಗಳಿಂದಾಗಿ ದನಕರುಗಳು ಬಳಲಿವೆ ಎಂಬುದನ್ನು ಕಂಡಕೂಡಲೇ 19 ಕೆರೆಗಳಿಗೆ ಕಬಿನಿಯಿಂದ ನೀರು ತುಂಬಿಸಲು 219 ಕೋಟಿ ರೂಪಾಯಿಯನ್ನು ನಿಂತಲ್ಲೇ ಬಿಡುಗಡೆ ಮಾಡಿದವರು ಬಿಎಸ್‌ವೈ.

ಆವರ್ತ ನಿಧಿ: 2013ರಲ್ಲಿ ಸಿದ್ದರಾಮಯ್ಯನವರ ಸರ್ಕಾರ ಅಸ್ತಿತ್ವಕ್ಕೆ ಬಂದ ಪ್ರಾರಂಭದಲ್ಲಿ ಬೆಳಗಾವಿ ಅಧಿವೇಶನದಲ್ಲಿ ಕಬ್ಬುಬೆಳೆಗಾರ ವಿಠ್ಠಲ ಅರಭಾವಿ ಆತ್ಮಹತ್ಯೆ ಮಾಡಿಕೊಂಡ. ಅವರು ವಾರಕ್ಕೊಮ್ಮೆ ಬರುವ ಮೈಸೂರಿನ ಮಾರ್ಗ ಮಧ್ಯದಲ್ಲಿ ಸಿಗುವ ಮಂಡ್ಯದಲ್ಲಿ ತಾನೇ ಬೆಳೆದ ಕಬ್ಬಿನ ಗದ್ದೆಗೆ ಬೆಂಕಿಕೊಟ್ಟು ರೈತ ಸುಟ್ಟುಕೊಂಡು ಸಾವಾದ. ಆದರೆ ಸಿದ್ದರಾಮಯ್ಯನವರ ಸ್ಪಂದನೆ ಹೇಗಿತ್ತು? ಅದಕ್ಕೂ ಮೊದಲು ಮುಖ್ಯಮಂತ್ರಿಯಾಗಿದ್ದ ಬಿಎಸ್‌ವೈ ಕೂಡ ಕಬ್ಬು ಬೆಳೆಗಾರರ ಸಮಸ್ಯೆ ಎದುರಿಸಿದ್ದರು. ಕೂಡಲೇ ಕಬ್ಬಿನ ಕಾರ್ಖಾನೆಗಳ ಪುನಶ್ಚೇತನಕ್ಕೆ ಕೈಹಾಕಿದರು. ಬರ, ನೆರೆಯಂಥ ಪ್ರಕೃತಿ ವಿಕೋಪಗಳಾದರೆ ಕೂಡಲೇ ರೈತನ ಸಂಕಷ್ಟಕ್ಕೆ ಸ್ಪಂದಿಸಲು 500 ಕೋಟಿಯನ್ನು ಮೀಸಲಿಡುವ ಆವರ್ತ ನಿಧಿಯನ್ನು ಆರಂಭಿಸಿದರು.

ಸೋಷಿಯಲ್ ಎಂಜಿನಿಯರಿಂಗ್: ರಾಜಕೀಯವಾಗಿಯೂ ಸೋಷಿಯಲ್ ಎಂಜಿನಿಯರಿಂಗನ್ನು ಯಡಿಯೂರಪ್ಪನವರು 2008ರಲ್ಲಿ ಮುಖ್ಯಮಂತ್ರಿಯಾದ ಕೂಡಲೇ ಆರಂಭಿಸಿದ್ದರು. ಸಣ್ಣ ಸಣ್ಣ ಜಾತಿಗಳನ್ನೂ ಗುರುತಿಸಿ ಸಮಾವೇಶ ನಡೆಸಿದರು, ಅವರ ಬೇಡಿಕೆ, ನೋವನ್ನು ಆಲಿಸಿ ಸ್ಪಂದಿಸುವ ಕೆಲಸ ಮಾಡಿದರು. ಅವರಲ್ಲಿ ನಾಯಕತ್ವ ಬೆಳೆಸುವ ಕಾರ್ಯಕ್ಕೂ ಕೈಹಾಕಿದ್ದರು. ನಮ್ಮ ಹಿಂದುಳಿದ ಜಾತಿ, ವರ್ಗ, ಜನಾಂಗಗಳಲ್ಲಿ ಹೆಮ್ಮೆಯನ್ನು ಮೂಡಿಸಬೇಕೆಂದು ಕನಕ, ವಾಲ್ಮೀಕಿ ಜಯಂತಿಯನ್ನು ಆರಂಭಿಸಿದರು. ಇಂತಹ ಆದರ್ಶ ವ್ಯಕ್ತಿಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಹೆಮ್ಮೆಯಿಂದ ಮುನ್ನಡೆಯಿರಿ ಎಂಬ ಸಂದೇಶ ಕೊಟ್ಟಿದ್ದರು. 24 ಕೋಟಿ ಕೊಟ್ಟು ಕನಕ ಪ್ರಾಧಿಕಾರ ರಚಿಸಿದರು.

ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ಅಂಬೇಡ್ಕರ್, ಬಾಬು ಜಗಜೀವನ್ರಾಮ್, ವಾಲ್ಮೀಕಿ, ಕನಕ ಭವನಗಳ ನಿರ್ಮಾಣಕ್ಕೆ ಕೈಹಾಕುವ ಮೂಲಕ ಮದುವೆ, ಮುಂಜಿ ಅಥವಾ ಯಾವುದೇ ಸಮಾರಂಭವಿರಲಿ, ಎಲ್ಲರಂತೆ ಭವ್ಯ ಕಟ್ಟಡಗಳಲ್ಲೇ ಆಚರಿಸಿ ಎಂದು ಸಾಮಾಜಿಕ ನ್ಯಾಯ ಸ್ಥಾಪನೆಗೆ ಮುಂದಾದವರು ಬಿಎಸ್‌ವೈ. ಕನಕ ಜಯಂತಿ, ವಾಲ್ಮೀಕಿ ಜಯಂತಿಗೆ ರಜಾ ಘೋಷಣೆ ಮಾಡಿದ್ದೇ ಅವರು.

ಹಳ್ಳಿ ಹಳ್ಳಿಗೆ ರಸ್ತೆ: ಬಸವ ವಸತಿ ಯೋಜನೆ ಆರಂಭಿಸಿ ಪ್ರತಿ ಪಂಚಾಯಿತಿಗೆ ಗರಿಷ್ಠ 300 ಮನೆಗಳನ್ನು ಕೊಟ್ಟರು. ಅಷ್ಟೇ ಅಲ್ಲ, ಪ್ರತಿ ನಗರ ಸಭೆಗಳಿಗೆ 25 ಕೋಟಿ, ಮಹಾನಗರಪಾಲಿಕೆಗಳಿಗೆ ತಲಾ ವಾರ್ಷಿಕ 50 ಕೋಟಿ ನೀಡಿದ್ದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಸೋನಿಯಾ ಗಾಂಧಿ ನಿಯಂತ್ರಿತ ಯುಪಿಎ ಸರ್ಕಾರ ದುಡ್ಡೇ ಕೊಡದೇ ಹೋದಾಗ, ನೀವು ಕೊಡದಿದ್ದರೇನಂತೆ ನಾನೇ ಗ್ರಾಮಗಳ ರಸ್ತೆಯನ್ನು ಅಭಿವೃದ್ಧಿ ಮಾಡುತ್ತೇನೆಂದು ನಮ್ಮ ಗ್ರಾಮ; ನಮ್ಮ ರಸ್ತೆ ಯೋಜನೆಯನ್ನು ಜಾರಿಗೆ ತಂದರು. 4 ಸಾವಿರ ಸುವರ್ಣ ಗ್ರಾಮಗಳನ್ನು ತಲಾ 75 ಲಕ್ಷದಿಂದ 2 ಕೋಟಿವರೆಗೂ ನೀಡಿ ಅಭಿವೃದ್ಧಿಪಡಿಸಿದರು. ಅವರು 2008 ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಬೆಳಗ್ಗೆ 8 ಗಂಟೆಯ ತಿಂಡಿಗೆ ಮೊದಲು ಆ ದಿನದ ಎಲ್ಲ ಪತ್ರಿಕೆಗಳ ವರದಿಗಳನ್ನು ಪಟ್ಟಿ ಮಾಡಿ, ಸಮಸ್ಯೆ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಸಿದ್ಧಮಾಡಿ ಅಧಿಕಾರಿಗಳು ಅವರ ಟೇಬಲ್ಲಿನ ಮೇಲಿಟ್ಟಿರಬೇಕಿತ್ತು. ಸೂಕ್ತ ಕ್ರಮಕ್ಕೆ ಸೂಚನೆ ಕೊಟ್ಟ ನಂತರವೇ ಬ್ರೇಕ್ ಫಾಸ್ಟ್.

ಇಂತಹ ಧೀಮಂತ ನಾಯಕ, ಬಿಜೆಪಿಯನ್ನು ಕಟ್ಟಿಬೆಳೆಸಿದ ಹೋರಾಟಗಾರ ಬಿಎಸ್ವೈ, ರಾಜಕೀಯಕ್ಕೆ ಕಾಲಿಟ್ಟು 50 ರ್ಷ ತುಂಬಿರುವ ಈ ಸಂದರ್ಭದಲ್ಲಿ ಕೋಟೆನಾಡು ದುರ್ಗದಲ್ಲಿ ಅಭಿಮಾನೋತ್ಸವ ಆಯೋಜನೆಯಾಗಿದೆ. ಇದು ಅಭಿಮಾನೋತ್ಸವ ಮಾತ್ರವಲ್ಲ, ಕರ್ಯಕರ್ತರು ನೆಚ್ಚಿನ ನಾಯಕನಿಗೆ ತೋರುವ ಗೌರವ ಸರ್ಪಣಾ ಕರ್ಯಕ್ರಮವೂ ಹೌದು.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572103 ಫ್ಯಾಕ್ಸ್ : 0816-2255761 ದೂರವಾಣಿ : 2272280
website: tumakuru.uda.gov.in, email: tudatmk2009@yahoo.co.in

ಕ್ರಮಾಂಕ ಟಿಯುಡಿಎ/ಸಮುದಾಯ ಭವನ/ಇ–ಹರಾಜು/01/2026–27 ದಿನಾಂಕ : 07–05–2026

ಇ–ಹರಾಜು ಪ್ರಕಟಣೆ

ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಿರುವ ಸಮುದಾಯ ಭವನದ ನಿರ್ವಹಣೆಗೆ ಇ–ಹರಾಜು ಪ್ರಕಟಣೆ

1)	ಇ–ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ	:	ದಿನಾಂಕ : 07–05–2026
2)	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ	:	ದಿನಾಂಕ : 21–05–2026 ಸಾಯಂಕಾಲ : 5.00 ಗಂಟೆವರೆಗೆ
3)	ಇ–ಹರಾಜಿನಲ್ಲಿ ಬಿಡ್ ಮಾಡುವ ಸಮಯ	:	ದಿನಾಂಕ : 22–05–2026 ರ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. (ಡೆಲ್ಟಾ ಟೈಮ್ 0.05.00 ನಿಮಿಷ)

ತುಮಕೂರು ನಗರದ ಕುಣಿಗಲ್ ರಸ್ತೆ ಹಾಗೂ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಪ್ರಾಧಿಕಾರದಿಂದ ರಚಿಸಿರುವ ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನವನ್ನು ಬಾಡಿಗೆ ನೀಡುವ ಬಗ್ಗೆ.

ಕ್ರ ಸಂ	ಸ್ಥಳ	ವಿಸ್ತೀರ್ಣ ಚ.ಮೀ. ಗಳಲ್ಲಿ	ಕನಿಷ್ಠ ಮಾಸಿಕ ಪ್ರೀಮಿಯಂ ರೂ. ಗಳಲ್ಲಿ	ಪಾವತಿಸ ಬೇಕಾಗಿರುವ. ಇ.ಎಂ.ಡಿ. ಮೊತ್ತ ರೂ. ಗಳಲ್ಲಿ	ಪಾವತಿಸಬೇಕಾದ ಠೇವಣಿ ಮೊಬಲಗು ರೂ. ಗಳಲ್ಲಿ
1	ಮರಳೂರು ಸಮುದಾಯ ಭವನ	ಕೆಳ ಮಹಡಿ 6804 ಚ.ಅ ನೆಲಮಹಡಿ 6410 ಚ.ಅ 1ನೇ ಮಹಡಿ 4256 ಚ.ಅ ಹಾಗೂ ಪಾರ್ಕಿಂಗ್ ಸ್ಥಳ: 13000 ಚ.ಅ	3,00,000	6,48,000	21,60,000

ವೆಬ್‌ಸೈಟ್ : kppp.karnataka.gov.in ಹಾಗೂ website:tumakuru.uda.gov.in ನಲ್ಲಿ ಇ–ಹರಾಜಿನ ಸಂಬಂಧ ಷರತ್ತು, ನಿಯಮ, ನಿಬಂಧನೆಗಳ ವಿವರಗಳನ್ನು ಮೇಲ್ಕಂಡ ವೈಬ್‌ಸೈಟ್‌ನಲ್ಲಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಮತ್ತು ಇ–ಹರಾಜಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/– (ಶುಭ ಕಲ್ಯಾಣ್) ಭಾ.ಆ.ಸೇ.,
ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

ಸಹಿ/– (ಉಮೇಶ್‌ಚಂದ್ರ ಎನ್.ಆರ್.) ಕೆ.ಎ.ಎಸ್.,
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

DIPR/TUM/RO-26/26-27/Oysters

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ

ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2026,27 ದಿನಾಂಕ: 04–05–2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೋಕಿಗೆ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ವಿಶೇಷ ಅನುದಾನದಡಿ ಹೊಳೆನರಸೀಪುರ ತಾಲ್ಲೂಕು ಅರಕಲಗೂಡು ವಿಧಾನಸಭಾ ಕ್ಷೇತ್ರ ಹಳ್ಳಿಮೈಸೂರು ಹೋಬಳಿ, ಕಡವಿನಬಾಚನಹಳ್ಳಿ–ದೇವರಮುದ್ದನಹಳ್ಳಿ, ಮೂಡಲಕೊಪ್ಪಲು, ಕೆರೆಮೇಗಲಕೊಪ್ಪಲು, ಕಬ್ಬೂರು, ಮಲುಗನಹಳ್ಳಿ, ಬಂಟರತಳಾಲು, ಸಿ.ಹಿಂದಲಹಳ್ಳಿ,ಮೆಣಗನಹಳ್ಳಿ, ಚಿಕ್ಕಕಾಡನೂರು, ದೊಡ್ಡಹಳ್ಳಿ, ಸಂತೆಮೈದಾನ, ದೋಣನಘಟ್ಟ, ಮುಕ್ಕನಹಳ್ಳಿ, ಆನೆಕನ್ನಂಬಾಡಿ, ದೇವರಗುಡ್ಡೇನಹಳ್ಳಿ, ಕಲ್ಲಹಳ್ಳಿ, ಮಂಗಳವಾಡಿ, ಹಳ್ಳಿಮೈಸೂರು, ಗೋಹಳ್ಳಿ,ತೇಜೂರು, ಟಿ.ಮಾಯಿಗೌಡನಹಳ್ಳಿ, ತಾತನಹಳ್ಳಿ, ದೇವಿಪುರ, ಕ್ಯಾತನಹಳ್ಳಿ, ಹೆಚ್.ಹಿಂದಲಹಳ್ಳಿ, ಗುಡ್ಡೇನಹಳ್ಳಿ,ಹಾಡ್ಯ, ಬಿದರಕ್ಕ, ಕೋಗಿಲಹಳ್ಳಿ, ಮಾಳನಾಯಕನಹಳ್ಳಿ, ಬೇಡಿಗನಹಳ್ಳಿಕೊಪ್ಪಲು, ಬಂಡಿಗನಹಳ್ಳಿ, ಜೋಡಿಗುಬ್ಬಿ, ಕುಪ್ಪೆ, ಕೆರಗೋಡು, ಉದ್ದೂರು, ಉದ್ದೂರಹೊಸಹಳ್ಳಿ, ಕೆ.ಮುದ್ದನಹಳ್ಳಿ, ಹಾರಗೌಡನಹಳ್ಳಿ, ಚೋಳೇನಹಳ್ಳಿ, ದಾಸನಕೊಪ್ಪಲು, ಜಕ್ಕನಹಳ್ಳಿ, ಅಣ್ಣೇಚಾಕನಹಳ್ಳಿ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ RDPR/2025,26/RD/WORK_INDENT25831 ಟೆಂಡರ್ ಮೊತ್ತ ರೂ 296.02 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 16–05–2026ರ ಸಂಜೆ 5.00ಘಂಟೆಯವರೆಗೆ ಟೆಂಡರ್ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 16–05–2026ರ ಸಂಜೆ 5.00 ಗಂಟೆಯೊಳಗೆ ಅಪ್ಲೋಡ್ ಮಾಡತಕ್ಕದ್ದು. ದಿನಾಂಕ 15–05–2026ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 18–05–2026ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್ಸೈಟ್ನಲ್ಲಿ ಅಪ್ಲೋಡ್ ಮಾಡಲಾಗುವುದು ಟೆಂಡರ್ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/109/ಕೆಎಸ್ಎಂಸಿಎ/2026–27

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ, ಹುಬ್ಬಳ್ಳಿ–580029

ನಂ:ಎಚ್.ಡಿ.ಎಂ.ಸಿ/74/05/2026–27/ ದಿನಾಂಕ: 08.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಪಾಲಿಕೆಯು 15ನೇ ಹಣಕಾಸು, ಶಾಸಕರ ಸ್ಥಳೀಯ ಪ್ರದೇಶಭಿವೃದ್ಧಿ ಯೋಜನೆ ಹಾಗೂ ಸಾಮಾನ್ಯ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2026-27/IND6153/CALL-2	79,53,600.00	1,59,072.00	16–05–2026 ಸಮಯ ಸಂಜೆ 4.30 ಗಂಟೆ	18–05–2026 ಸಮಯ ಬೆಳಿಗ್ಗೆ 10.30 ಗಂಟೆ
2	DMA/2026-27/IND6249	15,00,000.00	37,500.00		
3	DMA/2026-27/SE7789	49,84,320.00	99,686.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ದಿನಾಂಕ: 09–05–2026 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ)
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/157/ಮಣಿಪಾಲ್/2025–26

IN THE COURT OF THE MOTOR ACCIDENT CLAIMS TRIBUNAL AT BANGALORE (SCCH-25)

M.V.C. No. 9629/2026

BETWEEN : SMT. FATHIMA BI & OTHERS ...PETITIONERS
AND : ANEESH .C.V & ANOTHER ...RESPONDENTS

NOTICE TO RESPONDENTS No. 1

ANEESH .C.V S/o. Balakrishna Nambiar, R/at Badaga Banangala V & P, Siddapura, Virajpet Taluk, Kodagu - 571253. (R C Owner of Lorry Reg. No. KA-12-C-0993)

Whereas, the above Claim Petition is filed by the Petitioner against you and "United India Insurance Company Ltd" for seeking compensation for a sum of Rs.70,00,000/- on account of injuries in the Road Traffic Accident that occurred On 09.12.2025 at about 02:00 A.M, the Deceased was carefully riding on Scooter bearing Registration No. KA-05-QG-8251 by following the all traffic rules & regulation, also wearing helmet, near Old Madras Road, near Indira Nagar Police Station, Indira nagar, Bangalore, at that time Driver of Lorry Reg.No. KA-12-C-0993, was driving in a rash and negligent manner endangering human life, came at high speed and dashed against the Deceased Scooter, caused the accident.

You are hereby Summoned to appear in this Court in person or pleader duly instructed **on 16.06.2026 at 11-00 A.M.** To answer the Claim Petition.

Take notice that in default of your appearance on the said date, the same will be heard and determined in your absence.

Given under my hand and seal of the Court on 04.05.2026.

By Order of the Court, Assistant Registrar, Court of Small Causes, Bengaluru.

Advocate for Petitioner : **VINODA B C,** Advocate No. 5/9, 50 Feet Road, Muneshwara Block, Girinagar, Bangalore - 560 058.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂ:08539–220054.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026–27/391
ದಿ: 06/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 07 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.**100.00** ಲಕ್ಷಗಳರಿಂದ **500.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **11.05.2026** ರಿಂದ ದಿನಾಂಕ: **20.05.2026** ಸಂಜೆ. 16.00 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **18.05.2026** ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **22–05–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **25–05–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ" ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/71/ಕೆಎಸ್ಎಂಸಿಎ/2026–27

IN THE COURT OF HONOURABLE Vth ADDL. CIVIL JUDGE & JMFC AT MANGALURU, D.K.

O.S.No.408/2025

Between:
Bank of Baroda
Bendoor Branch ... Plaintiff
-And-
Mrs. Deekshitha & another ... Defendants

NOTICE TO WHOMSOEVER IT MAY CONCERN

To The Defendant No. 1 to 3
Mrs. Nisha P,
W/o. Sridhar, Aged about 41 years, R/o 4-199/29, Flat No. 201, Pooja Residency, Yeyyadi, Mangalore, D.K - 575008.

Please take notice that the Plaintiff named above has filed the above suit against the Defendants, wherein you are one of the Defendants in the above suit. The Honourable Court has ordered that the Plaintiff to issue Summons of the suit through paper publication against you. Therefore, you are hereby called upon to appear in person or through pleader before the said Honourable Court at 11.00 A.M on **23.06.2026.** If you fail to appear the matter will be decided in your absence according to the merits of the suit treating you as ex-parte by the Court.

Given under my hand and the seal of the Court on this 6th day of May 2026.

(BY ORDER OF THE COURT)
Chief Ministerial Officer,
Court of the Civil Judge & JMFC,
Mangalore.

Advocate for Petitioner
Dayananda Rai K.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

KARNATAKA RURAL INFRASTRUCTURE DEVELOPMENT LTD.

(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040

ಸಂ: ಕಾಪಾಅ–4/ಕೆಆರ್‌ಐಡಿಎಲ್/ಟೆಂಡರ್/2026–27/214 ದಿನಾಂಕ:08.05.2026

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್, BBMP ವಿಭಾಗ–4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ–ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (KRIDL/2025-26/RD/WORK_INDENT 44/Call-2) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು ಆಗಿರುತ್ತದೆ. ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	08.05.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	11.05.2026, 17:00
ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	12.05.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	15.05.2026, 17:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	18.05.2026, 11:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	26.05.2026, 11:30

ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in. ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/– ಕಾರ್ಯಪಾಲಕ ಅಭಿಯಂತರರು–4,
ಕೆ.ಆರ್.ಐ.ಡಿ.ಎಲ್, ಬೆಂಗಳೂರು

ಡಿಐಪಿಆರ್/ಸಿಪಿ/574/ಸಿಸಿಎಲ್/2026–27

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–03/14/2026–27/217 ದಿನಾಂಕ:08.05.2026

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀಮತಿ ಟಿ.ವಿ.ಮಮತಾ ಕೋಂ ಪಿ.ಮಂಜು ಇವರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ:228/4ರ 02ಎ–09ಗು ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/571/2026–27

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ

Ph.08472 - 220196 e-mail: midnglb@rediffmail.com/midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–3/ಕೆ.ಡಬ್ಲ್ಯೂ–1&4/2026–27/673 ದಿನಾಂಕ: 06–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1 & 4

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025–26ನೇ ಸಾಲಿನ 4702 ಆಣೆಕಟ್ಟು ಪಿಕಪ್ ಹಾಗೂ ವಿಶೇಷ ಘಟಕ ಯೋಜನೆ ಅಡಿ ಕಾಮಗಾರಿಗಳಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ.244,38,475.95ಕನಿಷ್ಠ ರೂ.3,43,481.25,** 3) ಗುತ್ತಿಗೆದಾರರ ಅರ್ಹತೆ ವಿವರ : 4ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ.ಪಿ ನಂತೆ. ಇ.ಎಂ.ಡಿ. **ಗರಿಷ್ಠ ರೂ. 3,66,600.00 ಕನಿಷ್ಠ ರೂ.4,300.00,** 5) ಪ್ರಿ ಬಿಡ್ ಮೀಟಿಂಗ್ ದಿನಾಂಕ : 14.05.2026 ಬೆಳಿಗ್ಗೆ 11.00 ಗಂಟೆಯ ವರೆಗೆ 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 19.05.2026 ಬೆಳಿಗ್ಗೆ 11.00 ಗಂಟೆಯ ವರೆಗೆ, 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 20.05.2026 ಸಾಯಂಕಾಲ 17.30 ಗಂಟೆಯ ವರೆಗೆ 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21.05.2026 ಸಾಯಂಕಾಲ 17.30 ಗಂಟೆಯ ವರೆಗೆ 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : 22.05.2026 ಸಾಯಂಕಾಲ 17.30 ಗಂಟೆಯ ವರೆಗೆ 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : (https://kppp.karnataka.gov.in)

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ವಿಭಾಗ, ಕಲಬುರಗಿ

ವಾ.ಸಾ.ಸಂ.ಇ./ಕಲಬುರಗಿ/108/
ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರದ ಉದ್ಯಮ
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ.
Phone No : 08371 – 295016 E-mail : eeslis1mdg@gmail.com

ಟೆಂಡರ್ ಪ್ರಕಟಣೆ (2ನೇ ಕರೆ) (ONLY THROUGH "KPP-Procurement" SYSTEM)

ಉಲ್ಲೇಖ :
1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರಗಳ ಸಂಖ್ಯೆ: 170 ರಿಂದ 174 ದಿನಾಂಕ: 07.05.2026
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರಗಳ ಸಂಖ್ಯೆ: 175 ದಿನಾಂಕ: 07.05.2026
3. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 176 ದಿನಾಂಕ: 07.05.2026
4. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 177 ದಿನಾಂಕ: 07.05.2026
5. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರಗಳ ಸಂಖ್ಯೆ: 178 & 179 ದಿನಾಂಕ: 07.05.2026

ಸಿಂಗಟಾಲೂರು ಏತ ನೀರಾವರಿ ಯೋಜನೆಯ ಮುಂಡರಗಿ ವಿಭಾಗ–1 ಕಛೇರಿ ವ್ಯಾಪ್ತಿಯಲ್ಲಿ ಬರುವ ಹಾಗೂ 2025–26ನೇ ಸಾಲಿಗೆ ಅನುದಾನ ಹಂಚಿಕೆಯಾದ ಲೆಕ್ಕಶೀರ್ಷಿಕೆ–2701 ರಡಿ ವಿವಿಧ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ ಕಾರ್ಯದ ಒಟ್ಟು 8 ಕಾಮಗಾರಿಗಳಿಗೆ ಮತ್ತು ಲೆಕ್ಕಶೀರ್ಷಿಕೆ–4701 ರಡಿ ನಿರ್ಮಾಣ ಮತ್ತು ದುರಸ್ಥಿ ಕಾರ್ಯದ 2 ಕಾಮಗಾರಿಗಳು ಸೇರಿದಂತೆ ಒಟ್ಟು 10 ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಅವುಗಳ ಪೈಕಿ ಲೆಕ್ಕಶೀರ್ಷಿಕೆ–2701ರಡಿ ಉಲ್ಲೇಖ(1)ರಂತೆ Work Indent No.4306, 4298, 4300, 4015 & 4307 ಐದು ಟೆಂಡರ್ ಪ್ರಕಟಣೆಗಳಲ್ಲಿನ ಕಾಮಗಾರಿಗಳಿಗೆ General Category ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಉಲ್ಲೇಖ(2)ರಡಿ Work Indent No.4299 - Category-II(A) ಗುತ್ತಿಗೆದಾರರಿಂದ, ಉಲ್ಲೇಖ(3)ರಡಿ Work Indent No. 4270 - ST Category ಗುತ್ತಿಗೆದಾರರಿಂದ ಹಾಗೂ ಉಲ್ಲೇಖ(3)ರಡಿ Work Indent No. 4308 - Category-I ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನಂತರದಲ್ಲಿ, ಲೆಕ್ಕಶೀರ್ಷಿಕೆ–4701ರಡಿ Work Indent No.4069 & 4202 ಟೆಂಡರ್ ಪ್ರಕಟಣೆಗಳಲ್ಲಿನ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (KPP-Portal ನಲ್ಲಿ ಇಂಡೆಂಟ್ ನಂಬರ್‌ಗಳ ಮುಂದೆ /CALL-2 ಎಂದು ಇರುತ್ತದೆ)

ಮುಂದುವರೆದು, ಸದರಿ ಕಾಮಗಾರಿಗಳ ಟೆಂಡರಿಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. **3.54** ಲಕ್ಷಗಳಿಂದ ರೂ. **183.45** ಲಕ್ಷಗಳವರೆಗೆ ಇದ್ದು, ಅವುಗಳ ಇ.ಎಂ.ಡಿ. ಮೊತ್ತವು ರೂ. **7500/–** ಗಳಿಂದ ರೂ. **2.33** ಲಕ್ಷಗಳವರೆಗೆ ಇರುತ್ತವೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ : **08.05.2026** ರ ನಂತರ "https://kppp.karnataka.gov.in" ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **27.05.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **29.05.2026** ಎಂದು ನಿಗದಿಪಡಿಸಿದೆ. ಅದರಂತೆ, Work Indent No.4202 ಟೆಂಡರ್ ಕುರಿತು Pre-bid ಸಭೆಯನ್ನು ದಿನಾಂಕ : **15.05.2026** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ–01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು KPP-Procurement Helpdesk Phone No's: 080-46010000, 080-68948777, 09240214000 & 09240214001 ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮುಂಡರಗಿ, ಗದಗ ಜಿಲ್ಲೆ.

ವಾಸಾಸಂಇ/ಗದಗ/ಕೆಎಸ್ಎಂಸಿಎ/57/2026–27

UNIVERSITY OF HORTICULTURAL SCIENCES, BAGALKOT
Office of the Registrar Udyanagiri, Navanagar, Bagalkote-587104, Karnataka.

No.R/UHSB/Affiliation/136/2026-27 Date: 07.05.2026

REVISED NOTIFICATION

The University of Horticultural Sciences, Bagalkot please to extend the date of submission of applications for affiliation of private Horticultural Colleges to offer Undergraduate courses in Horticulture from the Managements/Societies/Trusts registered under Societies Registration Act of Karnataka situated in the Jurisdiction of this University. The last date for submission of the filled application is extended upto 06.06.2026.

For further details, please refer the University website (https://uhsbagalkot.karnataka.gov.in/)

Sd/-REGISTRAR
UHS, BAGALKOT

DIPR/BGK/RO-NO-30/KSMCA/2026-27

ನಗರಸಭಾ ಕಾರ್ಯಾಲಯ, ದಾಂಡೇಲಿ

ಕಛೇರಿ ವಿಳಾಸ: ಸಿವಿಕ್ ಸೆಂಟರ ಏರಿಯಾ, ಜೆ.ಎನ್ ರಸ್ತೆ, ದಾಂಡೇಲಿ–581325
ಕಛೇರಿ ಫೋನ ನಂ: 08284–231482
www.dandelicity.gov.in E-mail id: ka.dandeli.cmc@gmail.com

ಸಂಖ್ಯೆ:ದಾನಸ/ತಾಂತ್ರಿಕ/ವಿವ/CMIDP ಟೆಂಡರು/2026–27 ದಿನಾಂಕ: 06–05–2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ದಾಂಡೇಲಿ ನಗರಸಭೆಗೆ 2025–26 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ (CMIDP) ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿ–2000 KPPP Portal ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು KW-2 ಕರಾರಿನಂತೆ ಲೋಕೋಪಯೊಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ 1) DMA/2025-26/OW/WORK_INDENT 55046/Call-2 (ಇತರೆ) 2) DMA/2025-26/OW/WORK_INDENT 55053/Call-2 (ಇತರೆ) 3) DMA/2025-26/OW/WORK_INDENT 55060/Call-2 (ಪರಿಶಿಷ್ಟ ಪಂಗಡ) 4) DMA/2025-26/OW/WORK_INDENT 55066/Call-2 (ಪರಿಶಿಷ್ಟ ಜಾತಿ) 5) DMA/2025-26/OW/WORK_INDENT 55067/Call-2 (ಪರಿಶಿಷ್ಟ ಪಂಗಡ) 6) DMA/2025-26/OW/WORK_INDENT 55069/Call-2 (ಪರಿಶಿಷ್ಟ ಜಾತಿ) 7) DMA/2025-26/OW/WORK_INDENT 55071/Call-2 (ಪ್ರ.ವರ್ಗ–1) 8) DMA/2025-26/OW/WORK_INDENT 55072/Call-2 (ಪರಿಶಿಷ್ಟ ಜಾತಿ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. www.kppp.karnataka.gov.in ಮೂಲಕ ಟೆಂಡರ್ ಫಾರ್ಮಗಳನ್ನು ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ನಗರಸಭೆಯ ವೆಬ್ ಸೈಟ್ www.dandelicity.mrc.gov.in ನಲ್ಲಿ ಪಡೆಯಬಹುದು.

ಟೆಂಡರು ವಿವರ: (1) ಟೆಂಡರ ಕುರಿತು ವಿಚಾರಣೆಗಾಗಿ ದಿನಾಂಕ: 25–05–2026 16:30 ಗಂಟೆಗೆ (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26–05–2026 16:30 ಗಂಟೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–05–2026 17:00 ಗಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30–05–2026 17.00 ಗಂಟೆಗೆ

ಸಹಿ/– ಮಾನ್ಯ ಆಡಳಿತಾಧಿಕಾರಿಗಳು
ನಗರಸಭೆ, ದಾಂಡೇಲಿ ಹಾಗೂ
ಜಿಲ್ಲಾಧಿಕಾರಿಗಳು, ಉ.ಕ.ಜಿಲ್ಲೆ, ಕಾರವಾರ

ಸಹಿ/– ಪೌರಾಯುಕ್ತರು,
ನಗರಸಭೆ, ದಾಂಡೇಲಿ

DIPR/KWR/KSMCA/115/26-27 dt.08.05.2026

ಪುತ್ತೂರು ಮಾರುಕಟ್ಟೆ ಧಾರಣೆ

08-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಠೋರ	355 - 405
ಹಳೆ ಪಠೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	255 - 285
ಹಳೆ ಕರಿಗೋಟು	255 - 285
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	248.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	149.00
ಸ್ಕ್ರಾಪ್ 2	140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-51) ಡ್ರಾ ಮೇ 8ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RE 355123 (PALAKKAD)

Consolation Prize Rs.5,000/-
RA 355123 RB 355123 RC 355123 RD 355123
RF 355123 RG 355123 RH 355123 RJ 355123
RK 355123 RL 355123 RM 355123

2nd Prize Rs.30,00,000/- [30 Lakhs]
RC 104788 (ERNAKULAM)

3rd Prize Rs.5,00,000/- [5 Lakhs]
RF 609705 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0592 1816 2301 2580 3756 4173 4339 4622 5568 6947 7173 7339 7378 7517 7779 7977 8461 9102 9772

5th Prize Rs.2,000/-
0239 0626 1426 2215 2793 4611

6th Prize Rs.1,000/-
0170 0392 0408 0615 1019 1529 1829 2022 2272 3612 4117 4682 4790 4866 5450 5780 7143 7560 7776 8221 8851 9005 9273 9474 9557

7th Prize Rs.500/-
0209 0231 0262 0295 0337 0366 0454 0465 0522 0634 0723 0749 0788 0832 0894 1122 1123 1204 1318 1512 1544 1663 1679 1879 2010 2065 2492 2682 2685 2837 2884 3320 3418 3477 3560 3564 3593 3623 3814 3878 3952 4028 4394 4584 4990 5168 5341 5392 5457 5510 5619 5839 5904 6014 6398 6604 6648 7463 7494 7509 7526 7827 8008 8333 8542 8581 8866 8940 9195 9206 9248 9365 9371 9627 9834 9966

8th Prize Rs.200/-
0057 0187 0311 0349 0405 0487 0581 0657 0851 0999 1044 1189 1193 1424 1658 1728 1811 1814 1838 2084 2398 2639 2758 2805 2929 3271 3428 3521 3620 3670 3694 4149 4235 4420 4493 4546 4571 4590 4909 5035 5055 5163 5217 5491 5586 5924 5992 6078 6373 6559 6570 6608 6667 6692 6801 6812 6813 6900 6901 6923 7004 7052 7182 7281 7433 7510 7593 7963 7990 8114 8130 8329 8344 8399 8411 8540 8781 8785 8873 8892 8926 8929 9071 9180 9335 9453 9752 9805 9884 9916 9918 9945

9th Prize Rs.100/-
0034 0107 0152 0237 0242 0388 0473 0474 0533 0550 0591 0640 0794 0906 0909 0978 1092 1178 1213 1359 1413 1442 1463 1498 1523 1621 1682 1877 1942 1945 2115 2235 2316 2427 2476 2479 2659 2833 2947 3103 3136 3255 3337 3426 3530 3543 3549 3596 3678 3696 3717 3731 3752 3768 4060 4118 4253 4259 4288 4305 4361 4407 4445 4468 4473 4556 4675 5021 5038 5053 5153 5258 5340 5460 5468 5607 5665 5703 5705 5877 5899 5925 5953 5961 6123 6152 6193 6217 6283 6295 6329 6404 6494 6504 6594 6993 7018 7097 7107 7250 7310 7417 7507 7564 7573 7676 7864 7953 7993 8012 8034 8067 8074 8115 8169 8198 8296 8350 8431 8449 8599 8617 8628 8769 8812 8865 8880 8912 8970 9109 9172 9188 9223 9255 9312 9367 9382 9458 9506 9556 9698 9720 9737 9836

ಮಾದಕ ವಸ್ತು ಎಂಡಿಎಂಎ ಮಾರಾಟ ಯತ್ನ

ಮೂವರು ಪೊಲೀಸ್ ವಶ

ಮಂಗಳೂರು: ಮಂಗಳೂರಿನ ಕರಾವಳಿ ಉತ್ಸವ ಮೈದಾನದ ಬಳಿ ಮಾದಕ ವಸ್ತುವಾದ ಎಂಡಿಎಂಎ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂರು ಮಂದಿ ಆರೋಪಿಗಳನ್ನು ಉರ್ವ ಠಾಣಾ ಪೊಲೀಸರು ಬಂಧಿಸಿದ್ದಾರೆ.

ರಿಪಾಝಿಲ್ ಸುಲೈಮಾನ್ ರಿಯಾಝ್ (20), ಭಾಷಾ ಸವಾದ್ (19) ಮತ್ತು ಮಹಮ್ಮದ್ ನಬಿಲ್ (20) ಬಂಧಿತ ಆರೋಪಿಗಳು.

ಪೊಲೀಸರು ಗಸ್ತು ಕರ್ತವ್ಯದಲ್ಲಿದ್ದಾಗ ಕರಾವಳಿ ಉತ್ಸವ ಮೈದಾನ ಬಳಿ ಮೂವರು ಯುವಕರು ಒಂದು ಸ್ಕೂಟರ್‌ನಲ್ಲಿ ಹೆಲ್ಮೆಟ್ ಧರಿಸದೆ ಪಂಪ್ ಹೌಸ್ ಪಕ್ಕದ ಅಡ್ಡ ರಸ್ತೆಯಲ್ಲಿ ಸಾಗುತ್ತಿದ್ದುದು ಕಂಡು ಬಂದಿದೆ. ಅವರನ್ನು ಹಿಂಬಾಲಿಸಿದಾಗ ಪಂಪ್ ಹೌಸ್ ಬಳಿ ಇರುವ ಪಾಳು ಬಿದ್ದ ಸರಕಾರಿ ವಸತಿ ಗೃಹ ಕಟ್ಟಡದ ಬಳಿ ಸ್ಕೂಟರ್ ನಿಲ್ಲಿಸಿ ಓಡಿ ಹೋಗಲು ಯತ್ನಿಸಿದ್ದಾರೆ. ಅವರನ್ನು ಹಿಡಿದು ವಿಚಾರಣೆಗೆ ಒಳ ಪಡಿಸಿದಾಗ ರಿಫಾಝಿಲ್ ವಿಚಾರ ಬಾಯಿಬಿಟ್ಟಿದ್ದಾನೆ. ತನ್ನ ಸ್ನೇಹಿತ ಅಲ್ವಾಝ್ ಬೆಳ್ತಂಗಡಿ ನೀಡಿರುವ ಬೆಂಗಳೂರಿನ ನೈಜೀರಿಯನ್ ಪ್ರಜೆಯನ್ನು ವಾಟ್ಸ್ ಆ್ಯಪ್ ಮೂಲಕ ಸಂಪರ್ಕಿಸಿ ಆತನಿಂದ ಎಂಡಿಎಂಎ ಪಡೆದು ಹೆಚ್ಚಿನ ಹಣಕ್ಕೆ ಗ್ರಾಹಕರಿಗೆ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದ್ದಾನೆ.

ಆರೋಪಿಗಳ ಸ್ಕೂಟರ್ ಪರಿಶೀಲಿಸಿದಾಗ ಡಿಕ್ಕಿಯಲ್ಲಿ 1,40,000 ರೂ. ಮೌಲ್ಯದ 14.48 ಗ್ರಾಂ ಎಂಡಿಎಂಎ ಪತ್ತೆಯಾಗಿದೆ. ಜತೆಗೆ ಆರೋಪಿಗಳ ವಶದಲ್ಲಿದ್ದ 30 ಸಾವಿರ ರೂ. ಮೌಲ್ಯದ 4ಮೊಬೈಲ್ ಫೋನ್, ಮಾದಕ ವಸ್ತು ತುಂಬಿಸಲು ತಂದಿದ್ದ ಸಣ್ಣ 13 ಜಿಪ್ ಲಾಕ್ ಪ್ಲಾಸ್ಟಿಕ್ ಖಾಲಿ ಕವರ್, 600 ರೂ. ನಗದು, 80,000 ರೂ. ಮೌಲ್ಯದ ಸ್ಕೂಟರ್ ವಶಕ್ಕೆ ಪಡೆಯಲಾಗಿದೆ.

ಆರೋಪಿಗಳ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಮುಲ್ಕಿ ಪೊಲೀಸರ ಕಾರ್ಯಾಚರಣೆ

ಮಾದಕ ವಸ್ತು ಸೇವನೆ: ಮೂವರ ಸೆರೆ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆ ಸಂದರ್ಭ ಮೂರು ಸ್ಥಳದಲ್ಲಿ ಮೂವರು ಮಾದಕವಸ್ತು ಸೇವನೆ ಮಾಡಿರುವುದು ಪತ್ತೆಯಾಗಿದ್ದು, ಮೂವರನ್ನೂ ಬಂಧಿಸಲಾಗಿದೆ.

ಪ್ರಕರಣ 1

ಕೊಳಚಿಕಂಬಳ ಬಳಿ ಪೊಲೀಸ್ ಠಾಣಾ ಉಪ ನಿರೀಕ್ಷಕ ರಾಘವೇಂದ್ರ ನಾಯ್ಕ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ರೌಂಡ್ಸ್ ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಕೊಳಚಿ ಕಂಬಳ ನದಿ ಬದಿಯಲ್ಲಿ ಓರ್ವ ವ್ಯಕ್ತಿಯು ಹೊಗೆ ಬತ್ತಿ ಸೇದುತ್ತಿರುವುದು ಕಂಡು ಬಂದಿದೆ. ಆತ ಕೈಯಲ್ಲಿದ್ದ ಹೊಗೆ ಬತ್ತಿಯನ್ನು ನದಿ ನೀರಿಗೆ ಬಿಸಾಡಿ ಪರಾರಿಯಾಗಲು ಪ್ರಯತ್ನಿಸಿದಾಗ ಹಿಡಿದು ವಿಚಾರಿಸಿದಾಗ ಅಮಲಿನಲ್ಲಿದ್ದು ಹೊಗೆ ಬತ್ತಿಯೊಂದಿಗೆ ಗಾಂಜಾ ಸೇವಿಸಿರುವುದಾಗಿ ತಿಳಿಸಿದ್ದಾನೆ.



ಆರೋಪಿ ಕೆ.ಎಸ್. ರಾವ್ ನಗರದ ನಿವಾಸಿ ಮೊಹಮ್ಮದ್ ಆಖಿಲ್ (24) ನನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕ ದ್ರವ್ಯ ಸೇವನೆ ಮಾಡಿರುವುದು ದೃಢಪಟ್ಟಿದೆ.

ಪ್ರಕರಣ 2

ಇನ್ನೊಂದು ಪ್ರಕರಣದಲ್ಲಿ ಪೊಲೀಸ್ ಠಾಣಾ ವ್ಯಾಪ್ತಿಯ ಬಪ್ಪನಾಡು ಗ್ರಾಮದ ಬಪ್ಪನಾಡು ಶಾಂಭವಿ ಸೇತುವೆ ಬಳಿ ಓರ್ವ ವ್ಯಕ್ತಿ ಒಂದು ರೀತಿಯ ಅಮಲಿನಲ್ಲಿ ನಿಂತಿರುವುದು ಕಂಡು ಬಂದಿದ್ದು ಪೊಲೀಸರನ್ನು ಕಂಡ ಕೂಡಲೇ ಪರಾರಿಯಾಗಲು ಯತ್ನಿಸಿದ್ದಾನೆ

ಕೂಡಲೇ ಪೊಲೀಸರು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹೊಗೆ ಬತ್ತಿಯೊಂದಿಗೆ ಎಂಡಿಎಂಎ ಮಾದಕ ವಸ್ತು ಸೇವಿಸಿರುವುದಾಗಿ ತಿಳಿಸಿದ್ದು ಆರೋಪಿ ಕೆ. ಎಸ್. ರಾವ್ ನಗರದ ನಿವಾಸಿ ಮೊಹಮ್ಮದ್ ಶಾಝಿಲ್ ಅಲಿಯಾಸ್ ಶಾಝಿಲ್ (20) ನನ್ನು ವಶಕ್ಕೆ ಪಡೆದಿದ್ದಾರೆ.

ಪ್ರಕರಣ 3

ಹಳೆಯಂಗಡಿ ಗ್ರಾಮದ ಕೊಪ್ಪಲ ಸೇತುವೆ ಬಳಿ ಬಳಿ ಓರ್ವ ವ್ಯಕ್ತಿ ಅಮಲಿನಲ್ಲಿ ನಿಂತಿದ್ದು, ಪೊಲೀಸರನ್ನುನೋಡಿದಕೂಡಲೇ ಪರಾರಿಯಾಗಲು ಪ್ರಯತ್ನಿಸಿದಾಗ ಹಿಡಿದು ವಿಚಾರಿಸಿದಾಗ ಎಂಡಿಎಂಎ ಮಾದಕ ವಸ್ತು ಸೇವಿಸಿರುವುದಾಗಿ ತಿಳಿಸಿದ್ದಾನೆ.

ಮುಲ್ಕಿಯ ಕೆ. ಎಸ್. ರಾವ್ ನಗರ ಅಂಚೆ ಕಚೇರಿ ಬಳಿಯ ನಿವಾಸಿ ಮೊಹಮ್ಮದ್ ಶರೀಫ್ ಅಲಿಯಾಸ್ ಶಾಹಿಲ್ (32) ನನ್ನು ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆ ನಡೆಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿದ್ದು ಪ್ರಕರಣ ದಾಖಲಾಗಿದೆ.

ಗಂಗೊಳ್ಳಿ–ಬೆಂದೂರು ಗ್ರಾಮಸ್ಥರಿಂದ ಮನವಿ ಸಲ್ಲಿಕೆ

ಕೆಎಸ್‌ಆರ್‌ಟಿಸಿ ಬಸ್ ಸಂಚರಿಸಲಿ

ಕುಂದಾಪುರ : ಉಡುಪಿ ಜಿಲ್ಲೆಯ ಪ್ರಮುಖ ಮೀನುಗಾರಿಕಾ ಬಂದರು ಪ್ರದೇಶವಾಗಿರುವ ಗಂಗೊಳ್ಳಿಯಿಂದ ಬೈಂದೂರಿಗೆ ಬಸ್ ವ್ಯವಸ್ಥೆ ಇಲ್ಲ. ಹೀಗಾಗಿ ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್ ಆರ್‌ಟಿಸಿ ಬಸ್ ಸಂಚಾರ ಆರಂಭಿಸುವಂತೆ ಗಂಗೊಳ್ಳಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಬೈಂದೂರಿನಿಂದ ಗಂಗೊಳ್ಳಿಯ ವಿವಿಧ ಶಾಲಾ ಕಾಲೇಜುಗಳಿಗೆ ಬಹಳಷ್ಟು ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಬರುತ್ತಿದ್ದಾರೆ ಅಲ್ಲದೆ ಮೀನುಗಾರರು, ಸಾರ್ವಜನಿಕರು, ಸರಕಾರಿ ಮತ್ತು ಖಾಸಗಿ ನೌಕರರು, ಉದ್ಯಮಿಗಳು ಅವರವರ ಕಾರ್ಯನಿಮಿತ್ತ ಗಂಗೊಳ್ಳಿಯಿಂದ ಬೈಂದೂರಿಗೆ ಪ್ರತಿನಿತ್ಯ ಸಂಚರಿಸುತ್ತಿದ್ದಾರೆ. ಆದರೆ ಗಂಗೊಳ್ಳಿಯಿಂದ ಬೈಂದೂರಿಗೆ ಮತ್ತು ಬೈಂದೂರಿನಿಂದ ಗಂಗೊಳ್ಳಿಗೆ ಯಾವುದೇ ಸರಕಾರಿ ಅಥವಾ ಖಾಸಗಿ ಬಸ್ ವ್ಯವಸ್ಥೆ ಇಲ್ಲ. ಇದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ಮೀನುಗಾರರು ಸಹಿತ ನೂರಾರು ಮಂದಿ ಸಕಾಲದಲ್ಲಿ ಗಂಗೊಳ್ಳಿಗೆ ಬರಲು ಮತ್ತು ಸಕಾಲದಲ್ಲಿ ಮನೆ ತಲುಪಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ.

> ಕಳೆದ ಕೆಲವು ವರ್ಷಗಳಿಂದ ಗಂಗೊಳ್ಳಿ-ಬೈಂದೂರು ನಡುವೆ ನೇರ ಬಸ್ ವ್ಯವಸ್ಥೆ ಇಲ್ಲ. ಸಂಚಾರ ನಡೆಸುತ್ತಿದ್ದ ಖಾಸಗಿ ಬಸ್‌ಗಳು ಕೂಡ ಸಂಚಾರ ಸ್ಥಗಿತಗೊಳಿಸಿವೆ. ಇದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಮೀನುಗಾರರು ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತಿನಿತ್ಯ ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್‌ಆರ್‌ಟಿಸಿ ಗ್ರಾಮೀಣ ಬಸ್ ಸಂಚಾರವನ್ನು ಪ್ರಾರಂಭಿಸಬೇಕು
>
> ■ ಎಚ್.ಎಸ್.ಚಿಕ್ಕಯ್ಯ ಪೂಜಾರಿ, ಅಧ್ಯಕ್ಷರು, ನಾ.ಹೋ.ಸ ಗಂಗೊಳ್ಳಿ.

ಕೆಲ ವರ್ಷಗಳ ಹಿಂದೆ ಗಂಗೊಳ್ಳಿ- ಬೈಂದೂರು ನಡುವೆ ಸಂಚಾರ ನಡೆಸುತ್ತಿದ್ದ ಖಾಸಗಿ ಬಸ್‌ಗಳು ಸಂಚಾರ ಸ್ಥಗಿತಗೊಳಿಸಿವೆ. ಬೈಂದೂರಿನಿಂದ ಗಂಗೊಳ್ಳಿಗೆ ಬರಲು ಎರಡೆರಡು ಬಸ್‌ಗಳನ್ನು ಬದಲಾಯಿಸಿ ಬರಬೇಕಿದೆ. ಬೈಂದೂರಿನಿಂದ ಬರುವಾಗ ತ್ರಾಸಿ ಜಂಕ್ಷನ್‌ನಲ್ಲಿ ಬಸ್ ಇಳಿಯಬೇಕಿದ್ದು, ರಾಷ್ಟ್ರೀಯ ಹೆದ್ದಾರಿ-66 ದಾಟಲು ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರು ಜೀವವನ್ನು ಕೈಯಲ್ಲಿ ಹಿಡಿದು ದಾಟಬೇಕಾದ ಪರಿಸ್ಥಿತಿ ಇದೆ. ರಸ್ತೆ ದಾಟುವ ಸಂದರ್ಭ ಅನೇಕ ಅಪಘಾತಗಳು ನಡೆದಿದ್ದು, ಹಲವರು ಪ್ರಾಣ ಕಳೆದುಕೊಂಡ ಘಟನೆಗಳೂ ನಡೆದಿದೆ. ಹೀಗಾಗಿ ಗಂಗೊಳ್ಳಿ-ಬೈಂದೂರು ನಡುವೆ ನೇರ ಬಸ್ ವ್ಯವಸ್ಥೆ ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಆರಂಭಿಸುವಂತೆ ಈಗಾಗಲೇ ಅನೇಕ ಶಾಲಾ ಕಾಲೇಜುಗಳು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು, ಶಾಸಕರು ಹಾಗೂ ಇನ್ನಿತರ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ಎಲ್ಲಾ ತೊಂದರೆಗಳನ್ನು ಪರಿಹರಿಸಲು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರತಿನಿತ್ಯ ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್ ಆರ್‌ಟಿಸಿ ಗ್ರಾಮೀಣ ಬಸ್ ಸಂಚಾರವನ್ನು ಪ್ರಾರಂಭಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

> ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್‌ಆರ್ ಟಿಸಿ ಬಸ್ ಸಂಚಾರ ಆರಂಭಿಸುವ ಬಗ್ಗೆ ಸಾರ್ವಜನಿಕರಿಂದ ಬೇಡಿಕೆ ಬರುತ್ತಿದೆ. ಬಸ್, ಚಾಲಕ, ನಿರ್ವಾಹಕರ ಕೊರತೆ ಇರುವುದರಿಂದ ಹೊಸ ಮಾರ್ಗದಲ್ಲಿ ಬಸ್ ಸಂಚಾರ ಆರಂಭಿಸುವುದು ಕಷ್ಟ. ಗಂಗೊಳ್ಳಿ-ಬೈಂದೂರು ನಡುವೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಆರಂಭಿಸಲು ಪರಿಶೀಲನೆ ನಡೆಸಲಾಗುವುದು
>
> ■ ಉದಯ ಶೆಟ್ಟಿ, ಡಿಪೊ ಮ್ಯಾನೇಜರ್, ಕುಂದಾಪುರ ಡಿಪೊ

ಕಾಸರಗೋಡು ನಿವಾಸಿಯ ನೇತೃತ್ವದಲ್ಲಿ ಅವಯವ ದಾನ ವಂಚನೆ: ಇಬ್ಬರ ಬಂಧನ

ಕಾಸರಗೋಡು: ಅವಯವ ದಾನಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ವಂಚನೆ ನಡೆಸುವ ತಂಡದ ಇಬ್ಬರನ್ನು ಬಂಧಿಸಲಾಗಿದೆ. ವಂಚನೆ ತಂಡಕ್ಕೆ ನೇತೃತ್ವ ನೀಡುವ ಕಾಸರಗೋಡು ನಿವಾಸಿ ಹಾಗೂ ಆತನ ಪತ್ನಿಗಾಗಿ ಹುಡುಕಾಟ ನಡೆಯುತ್ತಿದೆ. ಕೊಚ್ಚಿ ಕುನ್ನುತ್ತುನಾಡು ನಿವಾಸಿ, ಸನ್ ಕಮ್ಯೂನಿಕೇಶನ್ಸ್ ಮಾಲಕ ಸಣ್ಣಿ ವರ್ಗೀಸ್, ಪತ್ನಿ ಸನ್ನಿ ವರ್ಗೀಸ್ ಎಂಬವರನ್ನು ಕುನ್ನುತ್ತುನಾಡು ಪೊಲೀಸರು ಬಂಧಿಸಿದ್ದಾರೆ. ಅವರ ಸಂಸ್ಥೆಗೆ ಪೊಲೀಸರು ದಾಳಿ ನಡೆಸಿದ್ದಾರೆ. ಸಂಸದರು, ಶಾಸಕರು ಮೊದಲಾದವರ ಹಲವು ನಕಲಿ ಶಿಫಾರಸ್ಸು ಪತ್ರಗಳನ್ನು ಅಲ್ಲಿಂದ ಪತ್ತೆಹಚ್ಚಲಾಗಿದೆ.

ಕಾಸರಗೋಡು ಜಿಲ್ಲೆಯ ಮೇಲ್ಪರಂಬ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಸಿಸುವ ನಜೀಬ್ ಎಂಬಾತ ಪ್ರಕರಣದ ಮುಖ್ಯ ಆರೋಪಿಯಾಗಿದ್ದಾನೆ. ಆತನ ಪತ್ನಿಯೂ ಈ ವಂಚನೆಯಲ್ಲಿ ಶಾಮೀಲಾಗಿರುವುದಾಗಿ ಪೊಲೀಸರು ನಡೆಸಿದ ತನಿಖೆಯಲ್ಲಿ ತಿಳಿದುಬಂದಿದೆ. ದಂಪತಿ ಸೇರಿ ಅವಯವ ಅಗತ್ಯವುಳ್ಳವರನ್ನು ಬಲೆಗೆ ಬೀಳಿಸುತ್ತಿದ್ದಾರೆ. ವಂಚನೆಗೆ ಅಗತ್ಯವಿರುವ ನಕಲಿ ದಾಖಲೆಗಳನ್ನು ನಿರ್ಮಿಸಿ ನೀಡುತ್ತಿದ್ದುದು ಸಣ್ಣಿ ವರ್ಗೀಸ್ ಹಾಗೂ ಪತ್ನಿ ಸಿನಿ ವರ್ಗೀಸ್ ಆಗಿದ್ದಾರೆ. ಇವರ ಸಂಸ್ಥೆಯಿಂದ ಖಾಸಗಿ ಆಸ್ಪತ್ರೆಗಳ ಖಾಲಿ ಲೆಟರ್ ಪ್ಯಾಡ್, ನಕಲಿ ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ತಯಾರಿಸಲಿರುವ ನಕಲಿ ದಾಖಲೆಗಳು, ಮೆಡಿಕಲ್ ಪ್ಯಾಡ್‌ಗಳುಮೊದಲಾದವುಗಳನ್ನು ಪತ್ತೆಹಚ್ಚಲಾಗಿದೆ. ಸೆರೆಗೀಡಾದವರು ಹಾಗೂ ಮುಖ್ಯ ಆರೋಪಿಗಳ ಮಧ್ಯೆ ವಾಟ್ಸ್ಆ್ಯಪ್‌ನಲ್ಲಿ ನಡೆದ ಸಂದೇಶಗಳನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಹೆಚ್ಚಿನ ತನಿಖೆಗಾಗಿ ಪೊಲೀಸರು ಕಾಸರಗೋಡಿಗೆ ಆಗಮಿಸಲಿದ್ದಾರೆ.

ಮೇ 15, 16: ಚೇಳಾಯರು ಕಂಡೇವುದ ಆಯನ

ಹಳೆಯಂಗಡಿ: ಸಸಿಹಿತ್ಲು ಚೇಳಾಯರು ಖಂಡಿಗೆ ಧರ್ಮರಸು ಶ್ರೀ ಉಳ್ಳಾಯ ದೈವಸ್ಥಾನದಲ್ಲಿ ಕಂಡೇವುದ ಆಯನವು ಮೇ 15ರಿಂದ 16 ರ ವರೆಗೆ ನಡೆಯಲಿದೆ. ಮೇ 15 ರ ಬೆಳಿಗ್ಗೆ 7ಕ್ಕೆ ಖಂಡಿಗೆ ನಂದಿನಿ ನದಿಯಲ್ಲಿ ಮೀನು ಹಿಡಿಯುವಿಕೆ, 11ಕ್ಕೆ ಸಂಕ್ರಮಣ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಮಹಾ ಅನ್ನಸಂತರ್ಪಣೆ, ಸಂಜೆ 5.30ಕ್ಕೆ ಪಾಂಚಜನ್ಯ ಯಕ್ಷಗಾನ ಬಯಲಾಟ, ರಾತ್ರಿ 9 ಕ್ಕೆ ಬ್ರಹ್ಮಸ್ಥಾನದಲ್ಲಿ ಬ್ರಹ್ಮರಿಗೆ ತಂಬಿಲ, ಕುಮಾರ ಸಿರಿಗಳ ದರ್ಶನ,ಧರ್ಮರಸು ಶ್ರೀ ಉಳ್ಳಾಯ ಹಾಗೂ ಪರಿವಾರ ದೈವಗಳ ಭಂಡಾರ ಮೂಲಸ್ಥಾನಕ್ಕೆ ಹೋಗುವುದು, ಧ್ವಜಾರೋಹಣ, 16 ರ ಬೆಳಿಗ್ಗೆ 5ಕ್ಕೆ ಧರ್ಮರಸು ಶ್ರೀ ಉಳ್ಳಾಯ. ಇಷ್ಟದೇವತೆ.ಬಬ್ಬರ್ಯ ಹಾಗೂ ಪರಿವಾರ ದೈವಗಳ ನೇಮೋತ್ಸವ ನಂತರ ನಂದಿಗೋಣ, ಕುಮಾರ ಸಿರಿಗಳ ಭೇಟಿ, 7ಕ್ಕೆ ನಾಗದೇವರಿಗೆ ಭಕ್ತಾದಿಗಳಿಂದ ತಂಬಿಲ ಸೇವೆ, ಸಂಜೆ 4.30ಕ್ಕೆ ಬಾಕಿಮಾರು ಗದ್ದೆಯಲ್ಲಿ ಚೆಂಡು, 6ಕ್ಕೆ ಜಾರಂದಾಯ, ಬಂಟ, ಕೊಡಮಣಿತ್ತಾಯ ದೈವಗಳಿಗೆ ಜೋಡಿ ನೇಮೋತ್ಸವ, ಬಾಕಿಲ್ ದಾಂತಿ ಕೋರ್ದಬ್ಬು ದೈವಸ್ಥಾನದ ಶ್ರೀ ಕೋರ್ದಬ್ಬು ಮತ್ತು ಧೂಮಾವತಿ ದೈವದ ಭೇಟಿ, 7.30ಕ್ಕೆ ಶ್ರೀ ಉಳ್ಳಾಯ ಹಾಗೂ ಪರಿವಾರ ದೈವಗಳಿಗೆ ಸಾಮೂಹಿಕ ಹೂವಿನ ಪೂಜೆ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ 8 ಕ್ಕೆ ಎನ್ನಿಲೆಕ್ಕ ಇಜ್ಜೆರ್ ತುಳು ನಾಟಕ ಪ್ರದರ್ಶನ, 8ಕ್ಕೆ ಧ್ವಜಾವರೋಹಣ, ಖಂಡಿಗೆ ಬೀಡಿಗೆ ಭಂಡಾರ ನಿರ್ಗಮನವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶಂಕರ ಕೆ. ಶೆಟ್ಟಿ ನಾಗೇಶ್ ಶೆಟ್ಟಿ 'ಗಿರಿಜಾ ನಿವಾಸ', ಕೋಭಾವನ ಬಳಿ, ಮಿಜಾರು.
2. ಪಾಂಡುರಂಗ ಸದೋಜಿನಿ ಆಚಾರ್ಯ, ಮೋಂತಿಮಾರು ಮನೆ, ಮಂಚಿ, ಕುಕ್ಕಾಜೆ, ಬಂಟ್ವಾಳ (ತಾ).
3. ಆಶಾ ದಿವಾಕರ ಶೆಟ್ಟಿ, ಉಗ್ರಾಣಿ ಬೆಟ್ಟು ಹೌಸ್, ಆಜೆಕಾರು, ಕಾರ್ಕಳ (ತಾ).
4. ಅಭಿಜಿತ್, 'ಶ್ರೀ ಸದನ', ಕಟ್ಟ, ಮಲ್ಲಮಾರ್, ಇಡ್ಯಾ ಸುರತ್ಕಲ್– ಕಟೀಲು ಗಿಡಿಗೆರೆ ಶ್ರೀನಿಕೇತನದಲ್ಲಿ.
5. ದಿ ರಮಾನಾಥ್ ಯಸ್. ಪಯ್ಯಡೆ ಇವರ ಸ್ಮರಣಾರ್ಥ ಸಹೋದರರು, ಕೂರಿಯಾಳಗುತ್ತು, ಪಯ್ಯಡೆ ಹೌಸ್, ಬಂಟ್ವಾಳ (ತಾ).
6. ದಿ ಅಪ್ಪು ಎಂ. ಶೆಟ್ಟಿ ಸ್ಮರಣಾರ್ಥ ಮಕ್ಕಳು, ಭೂತಗುಂಡಿ, ಎಕ್ಕಾರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಕೇಶವ ಶೆಟ್ಟಿ, ಕೋಟೆಕೈಲು, ಪದು ಪೆರಾರ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.

ಶ್ರೀ ಧರ್ಮಸ್ಥಳ ಮೇಳ
ಪೆರ್ಲ ಸತ್ಯನಾರಾಯಣ ಶಾಲೆಯಲ್ಲಿ ಹತ್ತು ಸಮಸ್ತರು, ಪೆರ್ಲ

ಶ್ರೀ ಸಾಲಿಗ್ರಾಮ ಮೇಳ
ಬಗ್ವಾಡಿ ಶ್ರೀ ಮಹಿಷಾಸುರ ಮರ್ದಿನಿ ದೇವಸ್ಥಾನದಲ್ಲಿ ಬಯಲಾಟ- **ರಂಗನಾಯಕಿ**

ಶ್ರೀ ಪೆರ್ಡೂರು ಮೇಳ
ದೊಡ್ಡಣ್ಣೆಯಲ್ಲಿ
ರುದ್ರಕೋಪ, ಮಾಗಧ, ಭದ್ರಸೇನ

ಶ್ರೀ ಹನುಮಗಿರಿ ಮೇಳ
ನಾಳದಲ್ಲಿ

ಶ್ರೀ ಪಾವಂಜೆ ಮೇಳ
ಕೊಲ್ಯ , ಸೋಮೇಶ್ವರ ಸೌಂದರ್ಯ ಸಭಾಂಗಣದಲ್ಲಿ
ಶ್ರೀ ದೇವಿ ಮಹಾತ್ಮೆ

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ.ಮಡಿಕೇರಿ,
ಕೊಡಗು ಜಿಲ್ಲೆ
ಸಿ.ಆರ್.ಎಂ.ಸಿ. ನಂ.: 109/2026

ಅರ್ಜಿದಾರರು:
ಶ್ರೀ ಶರತ್ ಸಿ.ಬಿ
ವಿರುದ್ಧ
ಎದುರುದಾರರು:
ತಹಶೀಲ್ದಾರರು ಮಡಿಕೇರಿ
ಮತ್ತು ಇತರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ಅಜ್ಜ ದಿವಂಗತ ಸಿ.ಎಸ್. ಚಿನ್ನಪ್ಪ ಇವರು ದಿನಾಂಕ 10-11-1974 ರಂದು ಹೆಬ್ಬೆಟ್ಟಗೇರಿ ಗ್ರಾಮದಲ್ಲಿರುವ ಅರ್ಜಿದಾರರ ನಿವಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ ದಿನಾಂಕ:25-05-2026 ರಂದು ಬೆಳಿಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಮಡಿಕೇರಿ, ಕೊಡಗು ಜಿಲ್ಲೆ
ಸಹಿ/- ಭಾನುಪ್ರಕಾಶ ಪಿ.ಟಿ.
ಅರ್ಜಿದಾರರ ಪರ ವಕೀಲರು
ಮಡಿಕೇರಿ
23-04-2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ: 07/2026–2027 ದಿನಾಂಕ: 07.05.2026

ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-4 ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:// kppp.karnataka.gov.in ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು.
ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ ದಿನಾಂಕ: 15.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ 07.05.2026 ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 25.05.2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.05.2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 27.05.2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ:29.05.2026 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 6 ತಿಂಗಳು ಒಟ್ಟು 1 (ಒಂದು), ಕಾಮಗಾರಿ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.400.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/105/2026–27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ
ದೂರವಾಣಿ: 0831-2407207/2407212 ಇ–ಮೇಲ್ ವಿಳಾಸ: dsadmbgm@gmail.com

ಟೆಂಡರ್ ಪ್ರಕಟಣೆ (6ನೇ ಕರೆ)

ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸುವ ಸಲುವಾಗಿ.

ಉಪ ಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ಬೆಳಗಾವಿ ಜಿಲ್ಲೆಯ 477 ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸಲು ಅರ್ಹ ಬಿಡ್‌ದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್‌ದಾರರು ಅಗತ್ಯವಾಗಿ ಮೇಲೆ ತಿಳಿಸಿದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ (6ನೇ ಕರೆ)	ನಂ./ಜಿಪಂಬೆ/ಆಡಳಿತ/ಗ್ರಂಥಾಲಯ/ವಿವ–43/ 2024–25 ದಿನಾಂಕ: 08.05.2026
2	ಅಂದಾಜು ಬಿಡ್ ಮೌಲ್ಯ	ರೂ. 477 ಲಕ್ಷಗಳು
3	ಟೆಂಡರ್ ಡಾಕ್ಯೂಮೆಂಟ್ ಡೌನಲೋಡ್ ಮಾಡಲು ಲಭ್ಯವಾಗುವ ಮತ್ತು ಟೆಂಡರ್ ಪ್ರಾರಂಭದ ದಿನಾಂಕ	ದಿನಾಂಕ: 08.05.2026
4	ಬಿಡ್ ಪೂರ್ವ ಸಭೆ	ದಿನಾಂಕ: 18.05.2026 ಸಮಯ: 11.00 ಪೂರ್ವಾಹ್ನ @ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 27.05.2026 ಸಮಯ: 05.00 ಅಪರಾಹ್ನ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 29.05.2026 ಸಮಯ: 11.00 ಪೂರ್ವಾಹ್ನ
7	ಮಾದರಿಗಳನ್ನು ಸಲ್ಲಿಸಲು ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 29.05.2026 ಸಮಯ: 11.00 ಪೂರ್ವಾಹ್ನ @ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
8	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 30.05.2026 ಸಮಯ: 11.00 ಪೂರ್ವಾಹ್ನ
9	EMD ಮೊತ್ತ ಶೇ. 1.5%	ರೂ. 7,15,500/–

ಈ ಟೆಂಡರ್‌ನಲ್ಲಿ ಭಾಗವಹಿಸಲು ನಿರೀಕ್ಷಿತ ಪೂರೈಕೆದಾರರು https://kppp.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು.

ಯಾವುದೇ ಟೆಂಡರ್ ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಸಂಖ್ಯೆ: 9480854001 & e-mail: dsadmbgm@gmail.com ಸಂಪರ್ಕಿಸಬಹುದು.

ಶಹಿ/– ಉಪಕಾರ್ಯದರ್ಶಿಗಳು (ಆಡಳಿತ)
ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಶಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು
ಟೆಂಡರ್ ಅನುಮೋದನೆ ಪ್ರಾಧಿಕಾರ

ವಾ.ಸಾ.ಇ./ಬೆಳಗಾವಿ/220/2026–27/ದೇಶಪಾಂಡೆಪಬ್ಲಿಸಿಟಿ

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.
ಎಫ್.ಸಿ.ಮಡಿಕೇರಿ,
ಕೊಡಗು ಜಿಲ್ಲೆ,
ಸಿ.ಆರ್. ಎಂ.ಸಿ. ನಂ.:110/2026

ಅರ್ಜಿದಾರರು:
ಶ್ರೀ ಶರತ್ ಸಿ.ಬಿ
ವಿರುದ್ಧ
ಎದುರುದಾರರು:
ತಹಶೀಲ್ದಾರರು ಮಡಿಕೇರಿ
ಮತ್ತು ಇತರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ಅಜ್ಜಿ ದಿವಂಗತ ಸಿ ಸಿ ತಂಗಮ್ಮ ಇವರು ದಿನಾಂಕ 17-04-2010 ರಂದು ಹೆಬ್ಬೆಟ್ಟಗೇರಿ ಗ್ರಾಮದಲ್ಲಿರುವ ಅರ್ಜಿದಾರರ ನಿವಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ ದಿನಾಂಕ:25-05-2026 ರಂದು ಬೆಳಿಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಮಡಿಕೇರಿ, ಕೊಡಗು ಜಿಲ್ಲೆ
ಸಹಿ/- ಭಾನುಪ್ರಕಾಶ ಪಿ.ಟಿ.
ಅರ್ಜಿದಾರರ ಪರ ವಕೀಲರು
ಮಡಿಕೇರಿ
23-04-2026

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಚೇರಿ,
ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ,
ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ,
ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ–580 001.
ಫೋನ: 0836–2955347 ಇ–ಮೇಲ್: eesliddwd@gmail.com

No.KNN/SLID/DWD/PB-2/Mouneshwar & Belavalkoppa/Tender/ 2026-27/97 Dt:08-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಎರಡನೇ ಕರೆ)

ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಮಾತ್ರ
ಉಲ್ಲೇಖ: ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 900
ದಿನಾಂಕ: 28.01.2026 (First call)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ., ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ 1)"Improvement and Development of Belavalkoppa Tank in Belavalkoppa village of Shiggaon Taluk of Haveri district". **(Amount put to tender Rs.252.00 Lakhs)** and 2)"Improvement and Development of Nala from Mouneshwara Temple in Hulagur village to Madapura Tank in Shiggaon Taluk Haveri District.". **(Amount put to tender Rs.417.68 Lakhs)** ದ್ವಿ–ಲಕೋಟೆ ಪದ್ಧತಿಯ ಮುಖಾಂತರ ಟೆಂಡರ್‌ನ್ನು ನಿರ್ವಹಿಸಲು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ: 13.05.2026 ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 22.05.2026ರ ಸಂಜೆ 4.00 ಗಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ 18.05.2026 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: 25.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: 27.05.2026 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರ್‌ನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
(ಮಂಜುನಾಥ.ಬಿ.)
ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ,
ಧಾರವಾಡ

ವಾ.ಸಾ.ಸಂ.ಇ/ಧಾರವಾಡ/148/
ದೇಶಪಾಂಡೆಪಬ್ಲಿಸಿಟಿ/2026–27

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ,
ಸಯ್ಯಾಜಿರಾವ್ ರಸ್ತೆ, ಮೈಸೂರು ಇ–ಮೇಲ್– eewmccmys@gmail.com

ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–04/2026–27 ದಿನಾಂಕ: 07.05.2026

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಮೈನಪಾ/ಕಾ.ಅ(ಪೂ)/ಟಿ.ಎನ್–08/ 2026–27, ದಿನಾಂಕ:05.05.2026	03	244.00	06.05.2026 ಬೆಳಗ್ಗೆ 11ರ ನಂತರ	21.05.2026 ಸಂಜೆ 5.00 ಗಂಟೆಗೆ	22.05.2026 ಸಂಜೆ 5.15 ರ ನಂತರ
2	ಮೈನಪಾ/ಕಾ.ಅ(ಪೂ)/ಟಿ.ಎನ್–09/2 026–27, ದಿನಾಂಕ:05.05.2026	21	833.01	07.05.2026 ಬೆಳಿಗ್ಗೆ 11 ರ ನಂತರ	15.05.2026 ಸಂಜೆ 5.00 ವರೆಗೆ	16.05.2026 ಸಂಜೆ 5.15 ರ ನಂತರ
3	ಮೈನಪಾ/ಕಾ.ಅ(ಪೂ&ಪ)/ಟಿ.ಎನ್–10/ 2026–27, ದಿನಾಂಕ:05.05.2026	01	385.00	07.05.2026 ಬೆಳಿಗ್ಗೆ 11 ರ ನಂತರ	15.05.2026 ಸಂಜೆ 5.00 ಗಂಟೆಗೆ	16.05.2026 ಸಂಜೆ 5.15 ರ ನಂತರ

ಇ–ಹರಾಜು ಪ್ರಕಟಣೆ
ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿವೇಕಾನಂದ ನಗರದ ವಿವೇಕಾನಂದ ವೃತ್ತದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಸ್ ನಿಲ್ದಾಣ ಹಾಗೂ ವಾಣಿಜ್ಯ ಮಳಿಗೆಗಳ ಇ– ಹರಾಜು

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ	ಚಾಲ್ತಿಗೆ ಬರುವ ದಿನಾಂಕ	ದಿನಾಂಕ
4	ಮೈನಪಾ/ಕಾಇಂ(ಪ)/ಟಿ.ಎನ್–11/ 2026–27, ದಿನಾಂಕ:07.05.2026	16	–	07.05.2026	25.05.2026 ರಿಂದ 26.05.2026

- ಮಳಿಗೆ–01 ನ್ನು ಶೇಕಡ 50 ಕ್ಕಿಂತ ಹೆಚ್ಚಾಗಿ ಅಂಗವಿಕಲತೆ ಹೊಂದಿರುವವರಿಗೆ ಮೀಸಲಿರಿಸಲಾಗಿದ್ದು, ಬಾಡಿಗೆ ದರ ರೂ.8,238/– ಆಗಿರುತ್ತದೆ. ಅರ್ಜಿಯೊಂದಿಗೆ ಇ.ಎಂ.ಡಿ ಮೊತ್ತ ರೂ.12,500/– ಗಳನ್ನು ಡಿ.ಡಿ/ಚೆಕ್ ಮೂಲಕ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರ ಹೆಸರಿಗೆ ಸಲ್ಲಿಸತಕ್ಕದ್ದು. ಅರ್ಹ ಫಲಾನುಭವಿಗಳು ಸೂಕ್ತ ದಾಖಲಾತಿಗಳನ್ನು ಸದರಿ ಕಚೇರಿಗೆ ದಿನಾಂಕ: 22.05.2026 ರ ಸಂಜೆ 5.00ರ ಒಳಗೆ ನೇರವಾಗಿ ಸಲ್ಲಿಸತಕ್ಕದ್ದು.
- ಅರ್ಹ ಅಂಗವಿಕಲ ಫಲಾನುಭವಿಗಳ ದಾಖಲಾತಿಗಳನ್ನು ಪರಿಶೀಲಿಸಿ ದಿನಾಂಕ:26.05.2026 ರಂದು ಸಂಜೆ 4.00 ಗಂಟೆಗೆ ಎಲ್ಲರ ಸಮ್ಮುಖದಲ್ಲಿ ಲಾಟರಿ ಮುಖಾಂತರ ನೇರವಾಗಿ ಹಂಚಿಕೆ ಮಾಡುವುದು. ಅಂತಿಮವಾಗಿ ಆಯ್ಕೆಯಾದ ಫಲಾನುಭವಿಗಳು ರೂ.1,90,500/– ಗಳನ್ನು ಭದ್ರತಾ ಠೇವಣಿಯನ್ನು ಅವಧಿ ಮುಗಿಯುವವರೆಗೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರ ಹೆಸರಿಗೆ ಸಲ್ಲಿಸತಕ್ಕದ್ದು. ಠೇವಣಿಯಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಹಾಗು ಕನಿಷ್ಠ ಬಾಡಿಗೆಯಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಹಾಗೂ ಪಾಲಿಕೆಯ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸುವುದು.

ಇ–ಹರಾಜು ಪ್ರಕಟಣೆ
ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ನ್ಯೂ ಸಯ್ಯಾಜಿರಾವ್ ರಸ್ತೆ (ಆರ್.ಎಂ.ಸಿ ಖಾಸಗಿ ಬಸ್ ನಿಲ್ದಾಣದ ಬಳಿ)ಯಲ್ಲಿರುವಖಾಲಿ ಜಾಗ ಮತ್ತು ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿರುವ ಖಾಲಿ ಜಾಗ (ಪ್ರಸ್ತುತ ಇಂಡಿಯನ್ ಪೆಟ್ರೋಲ್ ಬಂಕ್ ಇರುವ ಸ್ಥಳಗಳು)

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ	ಚಾಲ್ತಿಗೆ ಬರುವ ದಿನಾಂಕ	ದಿನಾಂಕ
5	ಮೈನಪಾ/ಕಾಇಂ(ಪ)/ಟಿ.ಎನ್–12/ 2026–27, ದಿನಾಂಕ:07.05.2026	02	–	07.05.2026	25.05.2026 ರಿಂದ 26.05.2026

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ & ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು..

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂರ್ವ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಸಹಿ/– ಕಾರ್ಯಪಾಲಕ ಅಭಿಯಂತರರು (ಪಶ್ಚಿಮ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/158/ಶಿರಡಿ ಸಾಯಿ/2026–27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ–562 101,
eerdwsd .ckb2@gmail.com ದೂರವಾಣಿ ಸಂಖ್ಯೆ: 08156– 270058, 9886629118

ಕ್ರ.ಸಂ. ಕಾಪಾಅ/ಗ್ರಾಕುನೀ&ನೈವಿ/ಚಿಪುರ/ತಾ.ಶಾ/2026–27/122
ದಿನಾಂಕ:04.05.2026

ಪತ್ರಿಕಾ ಪ್ರಕಟಣೆ

ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿಗಳ ನಿರ್ವಹಣೆಗೆ **(HDPE Electro fusion Machine, PPR Pipe Welding Machine, Tool Kit & Distribution Training in Taluk Level)** ಯಂತ್ರೋಪಕರಣಗಳನ್ನು ಖರೀದಿಸುವ ಸಲುವಾಗಿ ದರ ನಿಗದಿ ಪಡಿಸಲು ಸೀಲ್ ಮಾಡಿದ ಲಕೋಟೆಯಲ್ಲಿ ಕೋಟೇಷನ್ ಕರೆಯಲಾಗಿದೆ. ಆಸಕ್ತಿಯುಳ್ಳ ಉತ್ಪಾದಕರು ಅಥವಾ ಅಧಿಕೃತ ಮಾರಾಟಗಾರರು ಕೋಟೇಷನ್ ದರಗಳನ್ನು ನೊಂದಾಯಿತ ಜಿ.ಎಸ್.ಟಿ ಹೊಂದಿದ ಸದರಿ ಸಾಮಾಗ್ರಿಗಳ ಮಾರಾಟಗಾರರು ಚಿಕ್ಕಬಳ್ಳಾಪುರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಅಳವಡಿಸಿದ ಪರಿಮಾಣಗಳ ಮಾಹಿತಿ ಪಡೆದು ಸದರಿ ಯಂತ್ರೋಪಕರಣಗಳ ಐಟಂಗಳಿಗೆ ಪ್ರತ್ಯೇಕವಾಗಿ ದರ ನಮೂದಿಸಿ **ದಿನಾಂಕ: 11.05.2026 ಸಂಜೆ 5.00 ಗಂಟೆಯೊಳಗೆ** ಈ ಕಛೇರಿಗೆ ನೀಡುವುದು, **ದಿನಾಂಕ: 11.05.2026 ರ ಸಂಜೆ 5.00** ಗಂಟೆಯ ನಂತರ ಬರುವ ಕೋಟೇಷನ್‌ಗಳನ್ನು ತಿರಸ್ಕರಿಸಲಾಗುವುದು. **ದಿನಾಂಕ:12.05.2026 ರಂದು ಬೆಳಗ್ಗೆ 11.00 ಗಂಟೆಯ** ನಂತರ ಸಾಧ್ಯವಾದಲ್ಲಿ ಕೋಟೇಷನ್ ತೆರೆಯಲಾಗುವುದು. ಯಾವುದೇ ಕಾರಣ ನೀಡದೆ ಕೋಟೇಷನ್ ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರ ಈ ಕೆಳ ಸಹಿದಾರರಿಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:53/ಕೆಎಸ್‌ಎಂಸಿಎ/2026–27

69 ವರ್ಷದ ಡಚ್ ಮಹಿಳೆ ಸೋಂಕಿಗೆ ಬಲಿ

ಏನಿದು ಹೊಸ ಹಂಟಾವೈರಸ್?



ಇಲಿ, ಹೆಗ್ಗಣಗಳಿಂದ ಸೋಂಕು!

ಇಲಿ, ಹೆಗ್ಗಣದಂತಹ ಜಾತಿಯ ಪ್ರಾಣಿಗಳಿಂದ ಮಾನವರಿಗೆ ಈ ವೈರಸ್ ಹರಡುತ್ತವೆ. ಈ ವೈರಸ್ ಅನ್ನು ಇಲಿ, ಹೆಗ್ಗಣಗಳು ತಮ್ಮೊಂದಿಗೆ ತೆಗೆದುಕೊಂಡು ಹರಡಿಸುತ್ತವೆ. ಆದರೆ, ಅವುಗಳಿಗೆ ಇದರಿಂದ ಯಾವುದೇ ಆರೋಗ್ಯ ಸಮಸ್ಯೆ ಆಗುವುದಿಲ್ಲ. ಹಂಟಾವೈರಸ್‌ನಿಂದ ಇಲಿ, ಹೆಗ್ಗಣಗಳಿಗೆ ಸಾವು ಬರುವುದಿಲ್ಲ. ಈ ಪ್ರಾಣಿಗಳ ಮೂತ್ರ, ಸಲೈವಾ ಮತ್ತು ಹಿಕ್ಕೆಗಳ ಮೂಲಕ ವೈರಸ್ ಹರಡುತ್ತದೆ. ಕಲುಷಿತ ಆಕ್ಸಿಜನ್ ಉಸಿರಾಟದಿಂದ ವೈರಸ್ ಹರಡುವ ಸಾಧ್ಯತೆಯಿದೆ.

- 5 ಮಂದಿಗೆ ಸೋಂಕು ಇರುವುದು ದೃಢ
- ಬ್ರಿಟಿಷ್ ವ್ಯಕ್ತಿಗೆ ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್‌ನಲ್ಲಿ ಚಿಕಿತ್ಸೆ

ಜಿನೀವಾ: ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಒಟ್ಟು ಐವರಿಗೆ ಹಂಟಾವೈರಸ್ ಸೋಂಕು ಇರುವುದು ದೃಢಪಟ್ಟಿದೆ. 69 ವರ್ಷದ ಡಚ್ ಮಹಿಳೆಯೊಬ್ಬರು ಹಂಟಾವೈರಸ್‌ಗೆ ಬಲಿಯಾಗಿದ್ದಾರೆ. 12 ಮಂದಿಗೆ ಸೋಂಕು ಇರುವುದಾಗಿ ಸಂಶಯಿಸಲಾಗಿತ್ತು. ಅದೇನಿದ್ದರೂ, ಹಂಟಾವೈರಸ್ ಏನಾದ್ರೂ ಇನ್ನೊಂದು ಕೋವಿಡ್ ಆಗುತ್ತದೆಯೇ? ಎಂಬ ಆತಂಕ ಸೃಷ್ಟಿಸಿದೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುತ್ತಿದ್ದ ಐಷಾರಾಮಿ ಡಚ್ ಕ್ರೂಸ್ ಹಡಗಿನಲ್ಲಿ 12 ಪ್ರಯಾಣಿಕರಲ್ಲಿ ಹಂಟಾವೈರಸ್ ಸೋಂಕು ಕಂಡುಬಂದಿದ್ದು, ಇವರಲ್ಲಿ ಮೂವರು ಹಡಗಿನಲ್ಲೇ ಮೃತಪಟ್ಟಿದ್ದಾರೆ ಎಂದು ವೈದ್ಯಕೀಯ ಅಧಿಕಾರಿಗಳು ಹೇಳಿದ್ದರು. ಆದರೆ ಇತ್ತೀಚೆಗಿನ ವರದಿಗಳ ಪ್ರಕಾರ, ವಿಶ್ವ ಆರೋಗ್ಯ ಸಂಸ್ಥೆ ಐವರಲ್ಲಷ್ಟೇ ಹಂಟಾ ಸೋಂಕು ಪತ್ತೆಯಾಗಿರುವುದನ್ನು ದೃಢೀಕರಿಸಿದೆ.

ಹಂಟಾವೈರಸ್ ಎಂದರೇನು?: ದಕ್ಷಿಣ ಕೊರಿಯಾದ ನದಿಯೊಂದರ ಹೆಸರಿನ ವೈರಸ್‌ಗಳ ಪ್ರಜಾತಿಯನ್ನು ಹಂಟಾವೈರಸ್‌ಗಳೆಂದು ಕರೆಯಲಾಗುತ್ತದೆ. ಇವುಗಳು ಬುನ್ಯಾವೈರೇಲ್ಸ್ ಅನ್ವಯದಲ್ಲಿ ಹಂಟಾವೈರಿಡೆ ಕುಟುಂಬದ ವೈರಸ್‌ಗಳಾಗಿವೆ. ವಿಶ್ವದೆಲ್ಲೆಡೆ ಒಟ್ಟು 20 ವಿವಿಧ ಪ್ರಜಾತಿಯ ಹಂಟಾವೈರಸ್‌ಗಳಿವೆ. ಆದರೆ ಮಾನವರಿಗೆ ಸೋಂಕು ತಗುಲಿದ ಉದಾಹರಣೆ ಕಡಿಮೆ ಸಂಖ್ಯೆಯಲ್ಲಿವೆ.

ಲಕ್ಷಣಗಳು ಮತ್ತು ಚಿಕಿತ್ಸೆ

ಹಂಟಾವೈರಸ್ ಪಲ್ಮನರಿ ಸಿಂಡ್ರೋಮ್ (ಎಚ್‌ಪಿಎಸ್) ಮತ್ತು ಹೇಮೋರ್‌ಹ್ಯಾಜಿಕ್ ಫೀವರ್ ವಿದ್ ರೆನಾಲ್ ಸಿಂಡ್ರೋಮ್ (ಎಚ್‌ಎಫ್‌ಆರ್‌ಎಸ್) ಎಂಬ ಎರಡು ರೋಗಗಳಿಗೆ ಹಂಟಾವೈರಸ್ ಕಾರಣವಾಗುತ್ತದೆ. ಸಾಮಾನ್ಯವಾಗಿ ದಣಿವು, ಜ್ವರ ಮತ್ತು ಸ್ನಾಯು ನೋವಿನಿಂದ ಆರಂಭವಾಗುತ್ತದೆ. ನಂತರ ತಲೆನೋವು, ತಲೆಸುತ್ತು, ಚಳಿ, ಹೊಟ್ಟೆನೋವು, ವಾಂತಿ, ಅತಿಸಾರ ಹಾಗೂ ತೀವ್ರ ಉಸಿರಾಟದ ತೊಂದರೆ ಕಾಣಿಸಬಹುದು. ಆ್ಯಂಡೆಸ್ ಸ್ಟ್ರೈನ್‌ಗೆ ಸಂಬಂಧಿಸಿದ ಎಚ್‌ಪಿಎಸ್ ಸಾವಿನ ಪ್ರಮಾಣ ಶೇ.20ರಿಂದ ಶೇ.40ರವರೆಗೆ ಅಂದಾಜಿಸಲಾಗಿದೆ.


ಇದು ಮತ್ತೊಂದು ಕೋವಿಡ್-19 ಪರಿಸ್ಥಿತಿಯೇ?

ವಿಶ್ವ ಆರೋಗ್ಯ ಸಂಸ್ಥೆ ಅಧಿಕಾರಿಗಳು ಈ ಹಂಟಾವೈರಸ್ ಅನ್ನು ಕೋವಿಡ್-19 ಮಹಾಮಾರಿಗೆ ಹೋಲಿಸಲಾಗುವುದಿಲ್ಲ ಎಂದಿದ್ದಾರೆ. ಆರು ವರ್ಷಗಳ ಹಿಂದೆ ಕೋವಿಡ್‌ನ ಪರಿಸ್ಥಿತಿ ಹೇಗಿತ್ತೋ ಇದು ಹಾಗಿಲ್ಲ. ಹಂಟಾವೈರಸ್ ಸಾಮಾನ್ಯವಾಗಿ ಅತಿ ಸಮೀಪದ ಮತ್ತು ದೀರ್ಘ ಸಂಪರ್ಕದಿಂದ ಮಾತ್ರ ಹರಡುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಸೋಂಕು ರೋಗ ತಜ್ಞೆ ಮಾರಿಯಾ ವಾನ್ ಕೆರ್ಖೋವ್ ಅವರು ವಿಶೇಷ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಕೋವಿಡ್-19 ಅಥವಾ ಫ್ಲೂನಂತೆ, ಹಂಟಾವೈರಸ್ ಕೆಮ್ಮು ಅಥವಾ ಸೀನುವುದರಿಂದ ಸುಲಭವಾಗಿ ಹರಡುವುದಿಲ್ಲ. ಮಾನವನಿಂದ ಮಾನವರಿಗೆ ಹರಡುವುದು ಕೇವಲ ಆ್ಯಂಡೆಸ್ ಸ್ಟ್ರೈನ್‌ನಲ್ಲಿ ಮಾತ್ರ. ಅದಕ್ಕೂ ಸೋಂಕಿತ ವ್ಯಕ್ತಿಯೊಂದಿಗೆ ದೀರ್ಘಕಾಲದ ನಿಕಟ ಸಂಪರ್ಕ ಅಗತ್ಯವಿರುತ್ತದೆ ಎಂದು ಮಾರಿಯಾ ತಿಳಿಸಿದ್ದಾರೆ. ತಜ್ಞರ ಪ್ರಕಾರ, ಜಾಗತಿಕ ಜನಸಂಖ್ಯೆಗೆ ಇರುವ ಒಟ್ಟು ಅಪಾಯ ಈಗ ಬಹಳ ಕಡಿಮೆ. ಕ್ರೂಸ್ ಹಡಗಿನ ಹೊರಗೆ ವೈರಸ್ ಹರಡಿರುವ ಯಾವುದೇ ಸಾಕ್ಷ್ಯವೂ ಸದ್ಯ ನಮಗೆ ಲಭ್ಯವಾಗಿಲ್ಲ ಎಂದು ವಿಶ್ವ ಸಂಸ್ಥೆ ಹೇಳಿದೆ. ಆದರೂ ಸಹ ಹಂಟಾವೈರಸ್ ಅನ್ನು ಲಘುವಾಗಿ ತೆಗೆದುಕೊಳ್ಳಬಾರದು ಎಂದು ಸೋಂಕು ತಜ್ಞೆ ಮಾರಿಯಾ ಪುನರುಚ್ಚರಿಸಿದ್ದಾರೆ. ಸೋಂಕಿತರ ಸಂಪರ್ಕ ಪತ್ತೆಹಚ್ಚುವುದು, ವಿವಿಧ ರಾಷ್ಟ್ರಗಳ ಸಹಕಾರದೊಂದಿಗೆ ರೋಗ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಅವರು ಹೇಳಿದ್ದಾರೆ.

ಆಪರೇಷನ್ ಸಿಂದೂರ್ ಸೇನೆ, ನೌಕಾಪಡೆ ಮತ್ತು ವಾಯುಪಡೆಯ ನಡುವಿನ ಅಭೂತಪೂರ್ವ ಸಮನ್ವಯವನ್ನು ಪ್ರದರ್ಶಿಸಿದ ಒಂದು ವರ್ಷದ ನಂತರ, ಇಂಟಿಗ್ರೇಟೆಡ್ ಥಿಯೇಟರ್ ಕಮಾಂಡ್‌ಗಳಿಗೆ ಭಾರತದ ಒತ್ತು ವೇಗವನ್ನು ಪಡೆದುಕೊಂಡಿದೆ. ಪ್ರಸ್ತಾವಿತ ಮಿಲಿಟರಿ ಪುನರ್‌ರಚನೆಯು ಭಾರತದ ಯುದ್ಧ-ಹೋರಾಟದ ಸಾಮರ್ಥ್ಯವನ್ನು ಹೇಗೆ ಪರಿವರ್ತಿಸುತ್ತಿದೆ. ಎಂಬುದರ ಕಿರುನೋಟ ಇಲ್ಲಿದೆ.

ಸಮಗ್ರತೆ ಸಾಧ್ಯತೆ ಹೆಚ್ಚಿಸಿದ ಸಿಂದೂರ ಸೇನಾ ಸಮನ್ವಯ
ಒಂದೇ ನಾಯಕತ್ವದಲ್ಲಿ ಸೇವೆ ಸಲ್ಲಿಸಿದ್ದ ಸಶಸ್ತ್ರಪಡೆಗಳು

ಅತಿ ದೊಡ್ಡ ಸೇನಾ ಸುಧಾರಣೆ ಸಾಧ್ಯತೆ



ಆಪರೇಷನ್ ಸಿಂದೂರ, ದೇಶದಲ್ಲಿ ಹೆಚ್ಚುತ್ತಿರುವ ಸೇನಾ ಸಮನ್ವಯದ ಸ್ಪಷ್ಟ ಉದಾಹರಣೆಯಾಗಿ ಹೊರಹೊಮ್ಮಿದ ವರ್ಷದ ಬಳಿಕ ಬಹುಕಾಲದಿಂದ ಬಾಕಿ ಉಳಿದಿರುವ ಸಮಗ್ರ ಥಿಯೇಟರ್ ಕಮಾಂಡ್‌ಗಳ(ಐಟಿಸಿ) ಸ್ಥಾಪನೆಗೆ ಇದೀಗ ಹೊಸ ಚೈತನ್ಯ ಸಿಕ್ಕಂತಾಗಿದೆ.

ಬಹುಶಃ ಕಾರ್ಗಿಲ್ ಸೇನಾ ಕಾರ್ಯಾಚರಣೆ ಬಳಿಕ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರ ಅತಿ ದೊಡ್ಡ ಸೇನಾ ಸುಧಾರಣೆ ತರುವ ಸಾಧ್ಯತೆಯಿದೆ. ಸಿಂದೂರ ಕಾರ್ಯಾಚರಣೆಯಲ್ಲಿ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಗಳು ಶ್ರೇಷ್ಠ ಸಮನ್ವಯ ಸಾಧಿಸಿದ್ದವು. ಪ್ರಸ್ತಾಪಿಸಲಾದ ಐಟಿಸಿ ಸ್ಥಾಪನೆಯಿಂದ ಚೀನಾ ಮತ್ತು ಪಾಕಿಸ್ತಾನದ ವಿರುದ್ಧ ಯುದ್ಧ ಸನ್ನದ್ಧತೆ ಮತ್ತು ಬಲವರ್ಧನೆಯೊಂದಿಗೆ ಸಂಪೂರ್ಣ ಸೇನೆ ಒಂದೇ ನಾಯಕತ್ವದಲ್ಲಿ ರೂಪಾಂತರಗೊಳ್ಳಲಿದೆ. 2025ರ ಏ.22ರಂದು ಜಮ್ಮು ಕಾಶ್ಮೀರದ ಪಹಲ್ಗಾಮ್ ಜಿಲ್ಲೆಯ ಬೈಸರಣ್ ಎಂಬ ಪ್ರವಾಸಿ ಕೇಂದ್ರದಲ್ಲಿ ಮೂವರು ಪಾಕಿಸ್ತಾನಿ ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿಯಲ್ಲಿ 26 ಅಮಾಯಕ ನಾಗರಿಕರು ಬಲಿಯಾಗಿದ್ದರು. ಇದಾದ ಬಳಿಕ ಸೇನೆ, ಭಾರತೀಯ ವಾಯುಪಡೆ (ಐಎಎಫ್) ಮತ್ತು ನೌಕಾಪಡೆ ಸಮನ್ವಯ ಸಾಧಿಸುವ ಮೂಲಕ ಸಿಂದೂರ ಕಾರ್ಯಾಚರಣೆ ನಡೆಸಿದ್ದವು.

ಆಪರೇಷನ್ ಸಿಂದೂರದಲ್ಲಿ ಸೇನೆಯ ಎಲ್ಲಾ ವಿಭಾಗಗಳ ನಡುವಿನ ಸಮನ್ವಯ ಮತ್ತು ಪರಿಣಾಮಕಾರಿ ಸಹಯೋಗ ಕಂಡುಬಂದಿದೆ. ಆದರೆ ಮೂರು ಪ್ರತ್ಯೇಕ ನಾಯಕತ್ವದಲ್ಲಿ ಸಶಸ್ತ್ರ ಪಡೆಗಳು ಕಾರ್ಯ ನಿರ್ವಹಿಸುತ್ತಿರುವುದು ಒಂದು ಮಿತಿಯನ್ನಾಗಿ ಪರಿಗಣಿಸಲಾಗುತ್ತಿದೆ. ಒಂದೇ ನಾಯಕತ್ವ ಇರುವುದರಿಂದ ಇನ್ನಷ್ಟು ಸಮನ್ವಯ ಹೆಚ್ಚಾಗುವ ಸಾಧ್ಯತೆಯಿದೆ.

ಭವಿಷ್ಯದ ಯುದ್ಧಗಳಿಗೆ ಸಮಗ್ರತೆ ಅಗತ್ಯ

ಭೂಮಿ, ವಾಯು, ಸಮುದ್ರ, ಸೈಬರ್, ಬಾಹ್ಯಾಕಾಶ ಮತ್ತು ಎಲೆಕ್ಟ್ರಾನಿಕ್ ಸೇರಿ ಎಲ್ಲಾ ವಾತಾವರಣಗಳಲ್ಲೂ ಭವಿಷ್ಯದ ಯುದ್ಧಗಳಿಗೆ ಸಿದ್ಧವಾಗಿರಲು ಸಮಗ್ರತೆ ಅಗತ್ಯವಿದೆ. ಇದರಿಂದಾಗಿ ಇಂತಹ ಸಮಗ್ರ ಥಿಯೇಟರ್ ಕಮಾಂಡ್(ಐಟಿಸಿ) ಸ್ಥಾಪಿಸಲು ಕೇಂದ್ರ ಸರ್ಕಾರ ಪ್ರಸ್ತಾವಿಸಿದೆ.

ಏನಿದು ಐಟಿಸಿ?

ಸಮಗ್ರ ಥಿಯೇಟರ್ ಕಮಾಂಡ್ (ಐಟಿಸಿ) ಎಂದರೆ ಇದೊಂದು ಏಕೀಕೃತ ಮಿಲಿಟರಿ ಸಂರಚನೆಯಾಗಿದೆ. ಇದರಲ್ಲಿ ಎಲ್ಲಾ ಶಸ್ತ್ರಗಳು ಹಾಗೂ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆ ಸೈನಿಕರೆಲ್ಲರೂ ಒಬ್ಬನೇ ಕಾರ್ಯಾಚರಣಾ ಕಮಾಂಡರ್ ನಾಯಕತ್ವದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. ಸದ್ಯ ದೇಶದ ಸಶಸ್ತ್ರಪಡೆಗಳು 17 ವಿವಿಧ ನೇತೃತ್ವದಲ್ಲಿ ಕರ್ತವ್ಯ ನಿರ್ವಹಿಸುತ್ತವೆ. ಭೂಸೇನೆ 7, ವಾಯುಪಡೆ 7 ಹಾಗೂ ನೌಕಾಪಡೆ 3 ಕಮಾಂಡ್‌ಗಳನ್ನು ಒಳಗೊಂಡಿವೆ. ಅತ್ಯಂತ ಸಂಘರ್ಷದ ಪರಿಸ್ಥಿತಿಯಲ್ಲಿ ಸೇನಾ ಸೇವೆಗಳ ನಡುವಿನ ಸಮನ್ವಯ ಸಾಧಿಸುವುದಕ್ಕಾಗಿ ವಿವಿಧ ಕಚೇರಿಗಳ ನಡುವೆ ಸಂವಹನ ನಡೆಸಬೇಕಾಗುತ್ತದೆ. ಈಗಿನ ವ್ಯವಸ್ಥೆಯನ್ನು ವೇಗವಾಗಿ ಬದಲಾಗುವ ಯುದ್ಧ ಪರಿಸ್ಥಿತಿಗಳಲ್ಲಿ ಕಾರ್ಯಾಚರಣಾ ಪ್ರತಿಕ್ರಿಯೆಗಳನ್ನು ನಿಧಾನಗೊಳಿಸುತ್ತದೆಂಬ ಟೀಕೆಗಳು ಆಗಾಗ ಕೇಳಿಬರುತ್ತಿವೆ. ಈ ಚದುರಿದ ವ್ಯವಸ್ಥೆಗೆ ಬದಲಾಗಿ, ನಿರ್ದಿಷ್ಟ ಥಿಯೇಟರ್‌ಗೆ ನಿಯೋಜಿಸಲಾದ ಎಲ್ಲಾ ಸೈನಿಕ ಸಂಪನ್ಮೂಲಗಳ ಮೇಲೆ ಕಾರ್ಯಾಚರಣಾ ಅಧಿಕಾರ ಹೊಂದಿರುವ ಏಕೈಕ ಕಮಾಂಡರ್ ನೇತೃತ್ವದ ವ್ಯವಸ್ಥೆಯನ್ನು ತರಲು ಥಿಯೇಟರ್ ಕಮಾಂಡ್ ಮಾದರಿ ಉದ್ದೇಶಿಸಿದೆ.

ಭಾರತದಲ್ಲಿ 2 ಕಾರ್ಯಾಚರಣಾತ್ಮಕ ತ್ರಿಸೇವಾ ರಚನೆಗಳಿವೆ

- ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್ - ಇದು ಭೌಗೋಳಿಕ ಕಮಾಂಡ್ ಆಗಿ ಕಾರ್ಯನಿರ್ವಹಿಸುತ್ತದೆ.
- ಸ್ಟ್ರಾಟರ್ಜಿಕ್ ಫೋರ್ಸಸ್ ಕಮಾಂಡ್ - ಇದು ಭಾರತದ ಅಣ್ವಸ್ತ್ರ ಸಂಪತ್ತಿನ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ.

ಈ ರಚನೆಗಳನ್ನು ಭಾರತವು ಈಗ ದೊಡ್ಡ ಮಟ್ಟದಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ಸಮಗ್ರ ಏಕೀಕರಣದ ಸೀಮಿತ ಉದಾಹರಣೆಗಳೆಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ.

ಭಾರತ ಯಾವ ರೀತಿಯ ಥಿಯೇಟರ್ ಕಮಾಂಡ್ ವ್ಯವಸ್ಥೆ ಯೋಜಿಸುತ್ತಿದೆ?

ಭಾರತೀಯ ಸಶಸ್ತ್ರ ಪಡೆಗಳ ಮುಖ್ಯ ರಕ್ಷಣಾ ಸಿಬ್ಬಂದಿ (ಸಿಡಿಎಸ್) ಆಗಿರುವ ಜನರಲ್ ಅನಿಲ್ ಚೌಹಾನ್ ಸಲ್ಲಿಸಿರುವ ಪ್ರಸ್ತಾವನೆಗಳ ಪ್ರಕಾರ, ಭಾರತದ ಸೈನಿಕ ಪುನರ್‌ರಚನೆ ಮೂರು ಪ್ರಮುಖ ಥಿಯೇಟರ್ ಕಮಾಂಡ್‌ಗಳ ಸುತ್ತ ರೂಪುಗೊಳ್ಳಲಿದೆ. ಮೊದಲನೆಯದು ಉತ್ತರ ಥಿಯೇಟರ್ ಕಮಾಂಡ್(ನಾರ್ಥನ್ ಥಿಯೇಟರ್ ಕಮಾಂಡ್). ಇದು ಮುಖ್ಯವಾಗಿ ಚೀನಾ ಗಡಿಯ ಮೇಲಿನ ಕಾರ್ಯಾಚರಣೆಗಳಿಗೆ ಕೇಂದ್ರೀಕರಿಸಲಿದ್ದು, ಇದರ ಕೇಂದ್ರ ಕಚೇರಿ ಲಖನೌನಲ್ಲಿ ಸ್ಥಾಪನೆಯಾಗುವ ಸಾಧ್ಯತೆ ಇದೆ. ಆ ಪ್ರದೇಶದ ಭೌಗೋಳಿಕ ಸ್ವಭಾವ ಮತ್ತು ಕಾರ್ಯಾಚರಣಾ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ಈ ಕಮಾಂಡ್‌ಗೆ ಸೇನೆಯ ಅಧಿಕಾರಿಯೊಬ್ಬರು ನೇತೃತ್ವ ವಹಿಸುವ ನಿರೀಕ್ಷೆಯಿದೆ. ಆಧುನಿಕ ಯುದ್ಧಗಳಲ್ಲಿ ಇಂಟಿಗ್ರೇಟೆಡ್ ಥಿಯೇಟರ್ ಕಮಾಂಡ್‌ಗಳು(ಐಟಿಸಿ) ಅತ್ಯಂತ ಪ್ರಮುಖವಾಗಿರುವುದಕ್ಕೆ ಮುಖ್ಯ ಕಾರಣ ವೇಗ, ಸಮನ್ವಯ ಮತ್ತು ಬಹು-ಕ್ಷೇತ್ರ ಕಾರ್ಯಾಚರಣೆಗಳ ಅಗತ್ಯ ಹೆಚ್ಚುತ್ತಿರುವುದಾಗಿದೆ. ಇಂದಿನ ಯುದ್ಧಗಳು ಕೇವಲ ಭೂಮಿ ಅಥವಾ ಸಮುದ್ರಕ್ಕೆ ಸೀಮಿತವಾಗಿಲ್ಲ; ಅವು ವಾಯು, ಸೈಬರ್, ಬಾಹ್ಯಾಕಾಶ ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ ಕ್ಷೇತ್ರಗಳಲ್ಲಿಯೂ ಒಂದೇ ಸಮಯದಲ್ಲಿ ನಡೆಯುತ್ತವೆ. ಸೈನಿಕ ತಂತ್ರಜ್ಞರು ಒಒಡಿಎ ಲೂಪ್ ಎಂಬ ಪರಿಕಲ್ಪನೆಯನ್ನು ಹೆಚ್ಚಾಗಿ ಉಲ್ಲೇಖಿಸುತ್ತಾರೆ. ಒಬ್ಸರ್ವ್ (ಗಮನಿಸುವುದು), ಓರಿಯೆಂಟ್ (ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು), ಡಿಸೈಡ್ (ತೀರ್ಮಾನಿಸುವುದು), ಆ್ಯಕ್ಟ್ (ಕ್ರಮ ಕೈಗೊಳ್ಳುವುದು). ಯಾರು ಈ ಚಕ್ರವನ್ನು ವೇಗವಾಗಿ ಪೂರ್ಣಗೊಳಿಸುತ್ತಾರೋ, ಅವರೇ ಯುದ್ಧದಲ್ಲಿ ಮೇಲುಗೈ ಸಾಧಿಸುವ ಸಾಧ್ಯತೆ ಹೆಚ್ಚು. ಪ್ರಸ್ತುತ ವ್ಯವಸ್ಥೆಯಲ್ಲಿ ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಪ್ರತ್ಯೇಕ ಕಮಾಂಡ್‌ಗಳು ಕಾರ್ಯನಿರ್ವಹಿಸುವುದರಿಂದ ನಿರ್ಧಾರ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗಬಹುದು. ಆದರೆ ಇಂಟಿಗ್ರೇಟೆಡ್ ಥಿಯೇಟರ್ ಕಮಾಂಡ್ ವ್ಯವಸ್ಥೆಯಲ್ಲಿ ಒಂದೇ ಕಮಾಂಡರ್‌ಗೆ ಆ ಪ್ರದೇಶದಲ್ಲಿನ ಮೂರು ಸೇನಾ ಘಟಕಗಳ ಮೇಲೂ ಕಾರ್ಯಾಚರಣಾ ಅಧಿಕಾರ ಇರುತ್ತದೆ.

ಇದರಿಂದ

- ವೇಗವಾದ ನಿರ್ಧಾರಗಳು ಸಾಧ್ಯವಾಗುತ್ತವೆ
- ಭೂ, ವಾಯು ಮತ್ತು ಸಮುದ್ರ ದಾಳಿಗಳ ನಡುವೆ ಉತ್ತಮ ಸಮನ್ವಯ ಸಿಗುತ್ತದೆ
- ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಸಾಧ್ಯವಾಗುತ್ತದೆ
- ಶತ್ರುವಿನ ವಿರುದ್ಧ ತ್ವರಿತ ಪ್ರತಿಕ್ರಿಯೆ ನೀಡಬಹುದು
- ಒಒಡಿಎ ಲೂಪ್ ಅನ್ನು ಶತ್ರುವಿಗಿಂತ ವೇಗವಾಗಿ ಪೂರ್ಣಗೊಳಿಸುವ ಅವಕಾಶ ಹೆಚ್ಚುತ್ತದೆ

ಕುತಂತ್ರಿ ಚೀನಾ ಬಂಡವಾಳ ಬಯಲು

ಕಳೆದ ವರ್ಷ ಭಾರತದೊಂದಿಗಿನ ನಾಲ್ಕು ದಿನಗಳ ಆಪರೇಷನ್ ಸಿಂದೂರ ವೇಳೆ ಪಾಕಿಸ್ತಾನಕ್ಕೆ ತಾಂತ್ರಿಕ ಬೆಂಬಲವನ್ನು ಒದಗಿಸಿರುವುದನ್ನು ಚೀನಾ ಮೊದಲ ಬಾರಿಗೆ ದೃಢಪಡಿಸಿದೆ. ಚೀನಾದ ರಾಜ್ಯ ಪ್ರಸಾರ ಸಿಸಿಟಿವಿ ಗುರುವಾರ ಚೀನಾದ ಏವಿಯೇಷನ್ ಇಂಡಸ್ಟ್ರಿ ಕಾರ್ಪೊರೇಷನ್ ಆಫ್ ಚೀನಾದ (ಎವಿಐಸಿ) ಚೆಂಗ್ಡು ಏರ್‌ಕ್ರಾಫ್ಟ್ ಡಿಸೈನ್ ಅಂಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಎಂಜಿನಿಯರ್, ಚೀನಾದ ಸುಧಾರಿತ ಫೈಟರ್ ಏರ್‌ಕ್ರಾಫ್ಟ್ ಮತ್ತು ಮಾನವರಹಿತ ವೈಮಾನಿಕ ವಾಹನ ವಿನ್ಯಾಸದ ಪ್ರಮುಖ ಡೆವಲಪರ್ ಝಾಂಗ್ ಹೆಂಗ್ ಅವರೊಂದಿಗಿನ ಸಂದರ್ಶನವನ್ನು ಪ್ರಸಾರ ಮಾಡಿದೆ. ಕಳೆದ ಮೇ ತಿಂಗಳಲ್ಲಿ ನಡೆದ ನಾಲ್ಕು ದಿನಗಳ ಯುದ್ಧದ ವೇಳೆ ಝಾಂಗ್ ಪಾಕಿಸ್ತಾನಕ್ಕೆ ತಾಂತ್ರಿಕ ಬೆಂಬಲ ಒದಗಿಸಿದ್ದರು ಎಂಬುದನ್ನು ಬಹಿರಂಗಪಡಿಸಿದ್ದಾರೆ.

ಕಿರುಸುದ್ದಿ

ನಾಳೆ ಅಸ್ಸಾಂ ಸಿಎಂ ಆಯ್ಕೆ: ಮೇ 12ಕ್ಕೆ ಪ್ರಮಾಣವಚನ

ಗುವಾಹಟಿ: ಅಸ್ಸಾಂ ವಿಧಾನಸಭೆಯ ನೂತನ ಶಾಸಕಾಂಗ ನಾಯಕನನ್ನು ಆಯ್ಕೆ ಮಾಡಲು ಬಿಜೆಪಿ ಶಾಸಕಾಂಗ ಪಕ್ಷವು ಭಾನುವಾರ(ಮೇ10) ಸಭೆ ಸೇರಲಿದೆ ಎಂದು ನಿರ್ಗಮಿತ ಮುಖ್ಯಮಂತ್ರಿ ಹಿಮಂತಾ ಬಿಸ್ವ ಶರ್ಮಾ ಶುಕ್ರವಾರ ತಿಳಿಸಿದ್ದಾರೆ.



ಹೊಸ ಸರ್ಕಾರವು ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಮೇ 12ಕ್ಕೆ ಬೆಳಗ್ಗೆ 11 ಗಂಟೆಗೆ ಪ್ರಮಾಣ ವಚನ ಸ್ವೀಕರಿಸುತ್ತದೆ ಎಂದು ಬಿಸ್ವಾ ಶರ್ಮ ಹೇಳಿದರು. ಪಕ್ಷದ ಕೇಂದ್ರ ವೀಕ್ಷಕ, ಕೇಂದ್ರ ಸಚಿವ ಜೆ. ಪಿ. ನಡ್ಡಾ ಮತ್ತು ಸಹ-ವೀಕ್ಷಕ ಮತ್ತು ಹರ್ಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರ ಸಮ್ಮುಖದಲ್ಲಿ ಹೊಸ ನಾಯಕನನ್ನು ಆಯ್ಕೆ ಮಾಡಲಾಗುವುದು ಎಂದು ಶರ್ಮಾ ಸುದ್ದಿಗಾರರಿಗೆ ತಿಳಿಸಿದರು. ಬಿಜೆಪಿ ನಾಯಕ ಆಯ್ಕೆಯಾದ ನಂತರ, ಅದನ್ನು ಎನ್‌ಡಿಎ ಮಿತ್ರಪಕ್ಷಗಳಾದ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ಮತ್ತು ಅಸ್ಸಾಂ ಗಣ ಪರಿಷತ್ (ಎಜಿಪಿ) ಅನುಮೋದಿಸುತ್ತವೆ. ಅದರ ನಂತರ, ಚುನಾಯಿತ ಬಿಜೆಪಿ ನಾಯಕರು ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯರ ಮುಂದೆ ಸರ್ಕಾರ ರಚಿಸಲು ಹಕ್ಕು ಮಂಡಿಸುತ್ತಾರೆ ಎಂದು ಅವರು ಹೇಳಿದರು.

ಜುಲೈನಲ್ಲಿ ಭಾರತ-ಕೆನಡಾ ಎಫ್‌ಟಿಎ ಮಾತುಕತೆ

ಹೊಸದಿಲ್ಲಿ: ಭಾರತ ಮತ್ತು ಕೆನಡಾ ಉದ್ದೇಶಿತ ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ಮುಂದಿನ ಸುತ್ತಿನ ಮಾತುಕತೆಗಳನ್ನು ಜುಲೈನಲ್ಲಿ ಒಟ್ಟಾವಾದಲ್ಲಿ ನಡೆಸಲಿವೆ ಎಂದು ವಾಣಿಜ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ. ಸಮಗ್ರ ಆರ್ಥಿಕ ಸಹಭಾಗಿತ್ವ ಒಪ್ಪಂದದ (ಸಿಇಪಿಎ) ಎರಡನೇ ಸುತ್ತಿನ ಮಾತುಕತೆಯನ್ನು ಎರಡೂ ಕಡೆಯವರು ಇಲ್ಲಿ ಶುಕ್ರವಾರದಂದು ಮುಕ್ತಾಯಗೊಳಿಸಿದರು. ಭಾರತ ಮತ್ತು ಕೆನಡಾ, ಸಮತೋಲಿತ, ಮಹತ್ವಾಕಾಂಕ್ಷೆಯ ಮತ್ತು ಪರಸ್ಪರ ಲಾಭದಾಯಕ ಒಪ್ಪಂದವನ್ನು ಮುಂದುವರಿಸಲು ತಮ್ಮ ಹಂಚಿಕೆಯ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಇದು ದ್ವಿಪಕ್ಷೀಯ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಐದು ದಿನಗಳ ಮಾತುಕತೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳಲ್ಲಿ ಸರಕುಗಳು, ಸೇವೆಗಳು, ಬೌದ್ಧಿಕ ಆಸ್ತಿ, ಮೂಲದ ನಿಯಮಗಳು, ನೈರ್ಮಲ್ಯ ಮತ್ತು ಫೈಟೋಸಾನಿಟರಿ ಕ್ರಮಗಳು ಮತ್ತು ವ್ಯಾಪಾರಕ್ಕೆ ತಾಂತ್ರಿಕ ಅಡೆತಡೆಗಳು ಸೇರಿವೆ.

ದಕ್ಷಿಣ ಭಾರತಾದ್ಯಂತ ಮಳೆಯ ಮುನ್ನೆಚ್ಚರಿಕೆ

ಹೊಸದಿಲ್ಲಿ: ಕೇರಳ ಮತ್ತು ತಮಿಳುನಾಡಿನಲ್ಲಿ ಗುಡುಗು ಸಹಿತ ಮಳೆಯಾಗುತ್ತಿದ್ದು, ಇದು ದಕ್ಷಿಣ ಭಾರತಾದ್ಯಂತ ಭಾರೀ ಮಳೆಯ ಮುನ್ನೆಚ್ಚರಿಕೆ ನೀಡಿದೆ. ಹಾಗೆಂದು ಭಾರತದ ಬಹುತೇಕ ಪ್ರದೇಶಗಳಲ್ಲಿ ಮೇ ತಿಂಗಳಲ್ಲೀಗ ಬೇಸಿಗೆಯ ವಿಪರೀತ ಸೆಕೆಯ ಹವಾಮಾನ ಮುಂದುವರೆದಿದೆ. ಆದರೆ ಕೇರಳ ತಮಿಳುನಾಡಿನ ಹವಾಮಾನ ಸನ್ನಿವೇಶವು ದ. ಭಾರತದ ಹಲವೆಡೆಗೆ ಶೀಘ್ರವೇ ನೈಋತ್ಯ ಮುಂಗಾರಿನ ಪ್ರವೇಶ ಸಾಧ್ಯತೆಯನ್ನು ಬಲವಾಗಿ ಸಾಂಕೇತಿಸಿದೆ.

ಕೇರಳ, ತಮಿಳುನಾಡಿನಲ್ಲಿ ಗುಡುಗು ಸಹಿತ ಮಳೆಯಾಗುತ್ತಿದೆಯಾದರೂ, ಭಾರತದಲ್ಲಿ ಚಾರಿತ್ರಿಕವಾಗಿ ಮುಂಗಾರು ಮೊದಲು ಪ್ರವೇಶಿಸುವ ದ್ವೀಪ ರಾಜ್ಯಗಳಾದ ಅಂಡಮಾನ್, ನಿಕೋಬಾರ್‌ಗಳಲ್ಲಿ ಮಳೆ ಹನಿದಿಲ್ಲ. ಇಲ್ಲಿ ಮಳೆ ಶುರುವಾಗಲು ಇನ್ನೂ ಹದಿನೈದು ದಿನಗಳ ಅಂತರವಿದೆ. ತಮಿಳುನಾಡು, ಕೇರಳ ಮಾತ್ರವಲ್ಲ ಮುಂದಿನ ಏಳು ದಿನಗಳಲ್ಲಿ ಪುದುಚೇರಿ, ಮಾಹೆಗಳಲ್ಲೂ ಮಳೆ ಸುರಿಯಲಿದೆ ಎಂದು ಭಾರತ ಹವಾಮಾನ ಇಲಾಖೆ ಅಂದಾಜಿಸಿದೆ. ಮುಂಗಾರುಪೂರ್ವ ಪ್ರಸ್ತುತ ಗುಡುಗು ಸಿಡಿಲ ಮಳೆಯು ಈ ಬಾರಿ ಮುಂಗಾರು ನಿಗದಿತ ಸಮಯದಲ್ಲೇ ಆರಂಭವಾಗುವುದನ್ನು ಸಾಂಕೇತಿಸಿದೆ ಎಂದು ಇಲಾಖೆ ತಿಳಿಸಿದೆ.

ವಾಯವ್ಯ ಮತ್ತು ಪೂರ್ವ ಭಾರತದಲ್ಲಿ ಕಡು ತಾಪಮಾನ ಮತ್ತು ಹಠಾತ್ ಗುಡುಗು ಸಿಡಿಲ ಸಹಿತ ಮಳೆ, ಆಲಿಕಲ್ಲು ಮಳೆಯಂತಹ ಹವಾಮಾನವಿದೆ. ಇದು ಮುಂಗಾರು ಋತುವನ್ನು ಹೋಲುವ ಸನ್ನಿವೇಶವೇ ಆಗಿದೆ. ಈ ಬಾರಿ ನೈಋತ್ಯ ಮುಂಗಾರು ಸಕಾಲದಲ್ಲಿ ಅಂದರೆ ಜೂ.1ರಂದು ಕೇರಳ ಕರಾವಳಿ ಪ್ರವೇಶಿಸಲಿದೆ ಎಂಬುದಕ್ಕೆ ಇದು ಸೂಚನೆಯಾಗಿದೆ.

ದೇಶಗಳ ನಡುವೆ ಉತ್ತಮ ಪಾಲುದಾರಿಕೆ ಮುಖ್ಯ

ಹೊಸದಿಲ್ಲಿ: ಕಠಿಣ ಜಗತ್ತಿನಲ್ಲಿ ಪ್ರಗತಿ ಸಾಧಿಸುವಲ್ಲಿ ದೇಶಗಳ ನಡುವಿನ ಪಾಲುದಾರಿಕೆಯ ನಿರ್ಣಾಯಕ ಪಾತ್ರವಹಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಈ ವೇಳೆ ಜಾಗತಿಕ ಸನ್ನಿವೇಶದಲ್ಲಿ ವಿಶ್ವಾಸಾರ್ಹ ಪಾಲುದಾರನಾಗಿ ಭಾರತದ ಪಾತ್ರದ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಪರಮಾರಿಬೊದಲ್ಲಿ ಪ್ರಗತಿಗಾಗಿ ಪಾಲುದಾರಿಕೆ ಎಂಬ ವಿಷಯದ ಮೇಲೆ ಸುರಿನಾಮೀಸ್ ಸಮಾಜದ ವಿಭಾಗಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕಠಿಣ ಜಗತ್ತಿಗೆ ಆದಾಗ್ಯೂ ಪ್ರಗತಿಯ ಅಗತ್ಯವಿದೆ ಎಂದು ವಾದಿಸಿದರು. ಪಾಲುದಾರಿಕೆಗಳ ಮೂಲಕ ಅದನ್ನು ಉತ್ತಮವಾಗಿ ಸಾಧಿಸಲಾಗುತ್ತದೆ ಎಂದು ಹೇಳಿದರು. ಈ ದಶಕವು ಕೊರೋನಾ ಸಾಂಕ್ರಾಮಿಕ ರೋಗದೊಂದಿಗೆ ಪ್ರಾರಂಭವಾಯಿತು ನಂತರ ಉಕ್ರೇನ್ ಸಂಘರ್ಷ ಮತ್ತು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವಾಯಿತು ಎಂದು ತಮ್ಮ ಭಾಷಣದಲ್ಲಿ ಹೇಳಿದರು. ಕಠಿಣ ಜಗತ್ತು ಎಂಬ ಪದವು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ನಾವು ಇಂದು ಹಣಕಾಸು, ಸಂಪನ್ಮೂಲಗಳು, ತಂತ್ರಜ್ಞಾನ, ಸಂಪರ್ಕ, ಭೌಗೋಳಿಕತೆಯ ಶಸ್ತ್ರಾಸ್ತ್ರವನ್ನು ನೋಡುತ್ತಿದ್ದೇವೆ ಎಂದು ಜೈಶಂಕರ್ ಹೇಳಿದರು. ಅಂತಹ ಸಮಯದಲ್ಲಿ, ರಾಷ್ಟ್ರಗಳು ಹೆಚ್ಚು ಅಂತರ್ಗತ ಜಗತ್ತು, ಸುಸ್ಥಿರ ಬೆಳವಣಿಗೆ ಮತ್ತು ಅಂತಾರಾಷ್ಟ್ರೀಯ ರಾಜಕೀಯದಲ್ಲಿ ಹೆಚ್ಚಿನ ಗೌರವದ ದೃಷ್ಟಿಯಿಂದ ಪ್ರಗತಿಯನ್ನು ನೋಡಲು ಬಯಸುತ್ತವೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಜಾಗತಿಕ ಒಳಿತಿನೊಂದಿಗೆ ಸಮನ್ವಯಗೊಳಿಸಬಲ್ಲ ವಿಶ್ವಾಸಾರ್ಹ ಪಾಲುದಾರನ ಗುಣಲಕ್ಷಣಗಳನ್ನು ಅವರು ಎತ್ತಿ ತೋರಿಸಿದರು.

800 ವರ್ಷಗಳ ಹಳೆ ದೇಗುಲ ನಾಶ, ದೂರು

ವಾರಂಗಲ್: ಸರ್ಕಾರಿ ಶಾಲೆ ನಿರ್ಮಾಣಕ್ಕಾಗಿ ಭೂಮಿ ಸಮತಟ್ಟು ಮಾಡುವ ನೆಪದಲ್ಲಿ, ತೆಲಂಗಾಣದ ವಾರಂಗಲ್ ಜಿಲ್ಲೆಯಲ್ಲಿನ, ಕಾಕತೀಯರ ಕಾಲದ 800 ವರ್ಷ ಪ್ರಾಚೀನ ಶಿವ ದೇವಾಲಯವನ್ನು ಬುಲ್ಡೋಜರ್ ಮುಖೇನ ಕೆಡವಲಾಗಿದ್ದು, ಈ ಹಿಂದು ವಿರೋಧಿ ಕೃತ್ಯ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಖಾನಾಪುರ ಮಂಡಲದ ಅಶೋಕನಗರದಲ್ಲಿದೆ ಈ ಪುರಾತನ ದೇವಾಲಯ.

13ನೇ ಶತಮಾನದಲ್ಲಿ ಕಾಕತೀಯ ರಾಜ ಗಣಪತಿದೇವ ನಿರ್ಮಿಸಿದ್ದೆನ್ನಲಾಗಿರುವ ಪ್ರಸ್ತುತ ಶಿವಾಲಯದ ಭೂಮಿಯಲ್ಲೊಂದು ಅಪೂರ್ವ ಶಿಲಾಶಾಸನವಿದೆ. ತೆಲುಗಲ್ಲಿ ಏಳು ವಾಕ್ಯಗಳ ಉಲ್ಲೇಖವಿದೆ ಈ ಶಿಲಾಶಾಸನದಲ್ಲಿ. ಆದೆಂದರೆ ಫೆಬ್ರವರಿ 1231 ಎಡಿ ಮತ್ತು ದೊರೆಯನ್ನು ಮಹಾರಾಜ ಹಾಗೂ ರಾಜಾಧಿರಾಜನೆಂದು ಸಂಬೋಧಿಸಿರುವ ಬರೆಹವಿದೆ. ಚಾರಿತ್ರಿಕ ಮಣ್ಣಿನ ಕೋಟೆ ವಲಯದಲ್ಲಿರುವ ಶಿವ ದೇವಾಲಯವನ್ನು ಪಾರಂಪರಿಕ ಇಲಾಖೆ 1965ರಲ್ಲಿ ದಾಖಲೀಕರಿಸಿತ್ತು.

ಪುರಾತನ ಶಿವಾಲಯವನ್ನು ಕೆಡವಿದ ವಿರುದ್ಧ ತೆಲಂಗಾಣ ಹಕ್ಕುಗಳ ವಕೀಲ ರಾಮರಾವ್ ಇಮ್ಮನೇಣಿ ಅವರು ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರಕ್ಕೆ ದೂರು ನೀಡಿದ್ದು, ಕೇಂದ್ರ ಸಂಸ್ಕೃತಿ ಮತ್ತು ಪ್ರಾಚ್ಯವಸ್ತು ಇಲಾಖೆ ಕೇಸ್ ದಾಖಲಿಸಿದೆ. ಪ್ರಾಚ್ಯವಸ್ತು ಮತ್ತು ದತ್ತಿ ಇಲಾಖೆಯಿಂದ ಸೂಕ್ತ ಮಂಜೂರಾತಿ ಪಡೆಯದೆ ದೇಗುಲ ಕೆಡವಲು ಸಮ್ಮತಿಸಿದ ಅಧಿಕಾರಿಗಳ ವಿರುದ್ಧ ತೆಲಂಗಾಣ ಪಾರಂಪರಿಕ ಕಾಯಿದೆಯ ಕಲಂ 30ರಡಿ ಕಾನೂನು ಕ್ರಮ ಕೈಗೊಳ್ಳುವಂತೆ ದೂರುದಾರರು ಆಗ್ರಹಿಸಿದ್ದಾರೆ.

ಚೀನಾ ಭ್ರಷ್ಟಾಚಾರ: ಇಬ್ಬರು ಮಾಜಿ ಸಚಿವರಿಗೆ ಗಲ್ಲು

ಬೀಜಿಂಗ್: ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದ ಚೀನಾದ ಮಾಜಿ ರಕ್ಷಣಾ ಸಚಿವರಾದ ವೆಯಿ ಫೆಂಗಿ ಮತ್ತು ಲಿ ಶಂಗ್‌ಫು ಅವರನ್ನು 2 ವರ್ಷಗಳ ತಾತ್ಕಾಲಿಕ ಮುಂದೂಡುವಿಕೆಯೊಂದಿಗೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಲಾಗಿದೆ ಎಂದು ಗುರುವಾರ ಚೀನಾ ಸರ್ಕಾರಿ ಸುದ್ದಿವಾಹಿನಿಗಳು ವರದಿ ಮಾಡಿವೆ. 2012ರಲ್ಲಿ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅಧಿಕಾರಕ್ಕೇರುತ್ತಲೇ ಚೀನಾ ಸೇನೆಯ ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ದೊಡ್ಡ ಗುರಿಯಾಗಿತ್ತು. 2018ರಿಂದ 2023ರವರೆಗೆ ವೆಯಿ ರಕ್ಷಣಾ ಸಚಿವರಾಗಿದ್ದರು. ಅವರ ಉತ್ತರಾಧಿಕಾರಿಯಾಗಿ ಲಿ ಕೆಲವು ತಿಂಗಳು ಜವಾಬ್ದಾರಿ ವಹಿಸಿದ್ದರು. 2023ರಲ್ಲಿ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತನಿಖೆಗೆ ಆದೇಶಿಸಿದ್ದು, ಭ್ರಷ್ಟಾಚಾರವು ಅಣ್ವಸ್ತ್ರ ಮತ್ತು ಕ್ಷಿಪಣಿಗಳ ಘಟಕವಾದ ಪಿಎಲ್‌ಎ ರಾಕೆಟ್ ಪಡೆಯನ್ನೂ ಆವರಿಸಿಕೊಂಡಿತ್ತು. ಇನ್ನೋರ್ವ ಅಪರಾಧಿ ಲಿ ಮೇಲೆ ಭಾರೀ ದೊಡ್ಡ ಮೊತ್ತವನ್ನು ಲಂಚ ಪಡೆದಿದ್ದಾರೆ.

ಪೆಂಟಗನ್‌ನಿಂದ ಯುಎಫ್‌ಒ ದಾಖಲೆ ಬಹಿರಂಗ

ಏಲಿಯನ್ ತಂತ್ರಜ್ಞಾನ ಸಾಕ್ಷ್ಯವಿಲ್ಲ

ವಾಷಿಂಗ್ಟನ್: ಹಲವು ವರ್ಷಗಳಿಂದ ಜಗತ್ತಿನಾದ್ಯಂತ ಕುತೂಹಲ ಕೆರಳಿಸಿದ್ದ ಯುಎಫ್‌ಒ ಹಾಗೂ 'ಅಪರಿಚಿತ ವೈಮಾನಿಕ ಘಟನೆಗಳು' ಕುರಿತ ದಾಖಲೆಗಳನ್ನು ಅಮೆರಿಕದ ಪೆಂಟಗನ್ ಹಂತ ಹಂತವಾಗಿ ಸಾರ್ವಜನಿಕರಿಗೆ ಬಿಡುಗಡೆ ಮಾಡಲು ಆರಂಭಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಣೆ ನೀಡಿರುವ ಪೆಂಟಗನ್, ಹಿಂದಿನ ಆಡಳಿತಗಳು ಜನರನ್ನು ತಪ್ಪುದಾರಿಗೆಳೆಯಲು ಅಥವಾ ವಿಷಯವನ್ನು ಮರೆಮಾಚಲು ಯತ್ನಿಸಿದ್ದರೆ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತ ಗರಿಷ್ಠ ಪಾರದರ್ಶಕತೆಯನ್ನು ಅನುಸರಿಸುತ್ತಿದೆ ಎಂದು ತಿಳಿಸಿದೆ. 'ಈ ದಾಖಲೆಗಳಲ್ಲಿರುವ ಮಾಹಿತಿಯನ್ನು ನೋಡಿ ಸಾರ್ವಜನಿಕರು ತಾವೇ ತಮ್ಮದೇ ಅಭಿಪ್ರಾಯ ರೂಪಿಸಿಕೊಳ್ಳಬಹುದು' ಎಂದು ಪೆಂಟಗನ್ ಹೇಳಿದೆ.

ಏಲಿಯನ್ ಜೀವಿಗಳ ಸಾಕ್ಷ್ಯ ಸಿಕ್ಕಿಲ್ಲ: ಪೆಂಟಗನ್ ಹಲವು ವರ್ಷಗಳಿಂದ ಯುಎಫ್‌ಒ ದಾಖಲೆಗಳ ಡಿಕ್ಲಾಸಿಫಿಕೇಶನ್ ಕಾರ್ಯ ನಡೆಸುತ್ತಿದೆ. 2022ರಲ್ಲಿ ಅಮೆರಿಕ ಕಾಂಗ್ರೆಸ್ ವಿಶೇಷ ಕಚೇರಿಯನ್ನೂ ರಚಿಸಿತ್ತು.

2024ರಲ್ಲಿ ಪ್ರಕಟವಾದ ವರದಿಯಲ್ಲಿ ನೂರಾರು ಹೊಸ ಯುಎಪಿ ಘಟನೆಗಳು ದಾಖಲಾಗಿದ್ದರೂ, ಅಮೆರಿಕ ಸರ್ಕಾರಕ್ಕೆ ಏಲಿಯನ್ ತಂತ್ರಜ್ಞಾನ ಅಥವಾ ಭೂಮಿಯ ಹೊರಗಿನ ಜೀವಿಗಳ ಅಸ್ತಿತ್ವಕ್ಕೆ ಯಾವುದೇ ದೃಢ ಸಾಕ್ಷ್ಯ ಸಿಕ್ಕಿಲ್ಲ ಎಂದು ಸ್ಪಷ್ಟಪಡಿಸಲಾಗಿತ್ತು.

ಅಮೆರಿಕ ರಕ್ಷಣಾ ಇಲಾಖೆಯಿಂದ ಸ್ಪಷ್ಟನೆ

ಸೇನಾ ಸಿಬ್ಬಂದಿಯಿಂದ ಅಚ್ಚರಿ ಮಾಹಿತಿ: ಕೆಲವು ಸೇನಾ ಸಿಬ್ಬಂದಿ ವಿಚಿತ್ರ ವೈಮಾನಿಕ ವಸ್ತುಗಳನ್ನು ಕಂಡಿರುವುದಾಗಿ ಹೇಳಿದ ನಂತರ 2022ರಲ್ಲಿ ಕಾಂಗ್ರೆಸ್, ದಶಕಗಳ ಕಾಲ ಸಂಗ್ರಹವಾಗಿದ್ದ ಯುಎಫ್‌ಒ ದಾಖಲೆಗಳನ್ನು ಬಿಡುಗಡೆ ಮಾಡಲು ಪೆಂಟಗನ್‌ಗೆ ಆದೇಶಿಸಿತ್ತು. ರಿಪಬ್ಲಿಕನ್ ಪಕ್ಷದ ಕೆಲ ಸಂಸದರು ಪೆಂಟಗನ್ ಇನ್ನೂ ಕೆಲವು ದಾಖಲೆಗಳನ್ನು ಮರೆಮಾಚುತ್ತಿದೆ ಎಂದು ಆರೋಪಿಸಿದ್ದರು. ಸಂಸದೆ ಅನ್ನಾ ಪೌಲಿನಾ ಲೂನಾ ಮಾರ್ಚ್ ನಲ್ಲಿ ಬರೆದ ಪತ್ರದಲ್ಲಿ 46 ಯುಎಪಿ ವೀಡಿಯೊಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿದ್ದರು. ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ ಲೂನಾ, ಆ ವೀಡಿಯೊಗಳನ್ನು ಮುಂದಿನ ಹಂತದಲ್ಲಿ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ದಿಲ್ಲಿ ಪೊಲೀಸರ ತನಿಖೆಯಿಂದ ಐಎಸ್‌ಐ ಷಡ್ಯಂತ್ರ ಬಯಲು

ದೇಗುಲ ಮೇಲೆ ದಾಳಿಗೆ ಸಂಚು!

ಹೊಸದಿಲ್ಲಿ: ದಿಲ್ಲಿ -ಸೋನಿಪತ್ ಹೆದ್ದಾರಿಯಲ್ಲಿನ ಚಾರಿತ್ರಿಕ ದೇವಾಲಯ ಮತ್ತು ಹರ್ಯಾಣದ ಮಿಲಿಟರಿ ಕ್ಯಾಂಪ್‌ಗಳ ಮೇಲೆ ದಾಳಿ ನಡೆಸಲು ಪಾಕ್‌ನ ಕುಖ್ಯಾತ ಐಎಸ್‌ಐ ತಂತ್ರ ಬೆಸೆದಿದೆ.

ದಿಲ್ಲಿ ಪೊಲೀಸರ ತನಿಖೆಯಿಂದ ಈ ಸ್ಫೋಟಕ ಮಾಹಿತಿ ಬಯಲಾಗಿದೆ. ಪಾಕ್ ಮೂಲದ ಕುಖ್ಯಾತ ಗ್ಯಾಂಗ್‌ಸ್ಟರ್, ಐಎಸ್‌ಐ ನಿಕಟವರ್ತಿ ಶಹಝಾದ್ ಭಟ್ಟಿ ಸಹಚರರ ಮುಖೇನ ದಾಳಿ ನಡೆಸುವುದು ಐಎಸ್‌ಐ ಷಡ್ಯಂತ್ರವೆಂದು ಪೊಲೀಸ್ ಮೂಲಗಳು ತಿಳಿಸಿವೆ. ಗ್ಯಾಂಗ್ ಬಸ್ಟ್ ಆಪರೇಶನ್ 2.0ನಲ್ಲಿ ದಿಲ್ಲಿ ಪೊಲೀಸ್ ಇಲಾಖೆಯ ವಿಶೇಷ ಪಡೆ ವಿವಿಧ ರಾಜ್ಯಗಳಿಂದ , ಶಹಜಾದ್ ಭಟ್ಟಿ ಗ್ಯಾಂಗ್‌ನ 9 ಮಂದಿ ಸದಸ್ಯರನ್ನು ಗುರುವಾರ ಆಯುಧಗಳ ಸಮೇತ ಸೆರೆಹಿಡಿದು ವಿಚಾರಣೆ ನಡೆಸಿದಾಗ ಪ್ರಸ್ತುತ ಸ್ಫೋಟಕ ಮಾಹಿತಿ ಬಯಲಾಗಿದೆ.

ಭದ್ರತಾ ಪಡೆಗಳೂ ಟಾರ್ಗೆಟ್! : ಕುಖ್ಯಾತ ಐಎಸ್‌ಐನ ದಾಳಿ ಲಿಸ್ಟ್‌ನಲ್ಲಿ ದಿಲ್ಲಿಯ ದೇವಾಲಯ ಮುಂಚೂಣಿಯಲ್ಲಿದೆ. ದೇಗುಲ ಮಾತ್ರವಲ್ಲ, ದೇವಸ್ಥಾನದ ಭದ್ರತಾ ಸಿಬ್ಬಂದಿಗಳ ಮೇಲೂ ಐಎಸ್‌ಐ ವಕ್ರದೃಷ್ಟಿಯಿದೆ. ದೇಗುಲದ ಪೊಲೀಸ್ ಸಿಬ್ಬಂದಿಗಳು ಮತ್ತು ಅಲ್ಲಿರುವ ಛಾಯಾ ಮಿಲಿಟರಿ ಪಡೆಯನ್ನು ಕೂಡ ಐಎಸ್‌ಐ ಟಾರ್ಗೆಟ್ ಮಾಡಿದೆ. ಐಎಸ್‌ಐ ಜಾಲದ ಆರೋಪಿಗಳಲ್ಲೋರ್ವ ದೇವಾಲಯ ಪರಿಸರದ ಬೇಹುಗಾರಿಕೆ ನಡೆಸಿ, ಫೋಟೋಗಳನ್ನು ಪಾಕ್ ಮೂಲದ ಸಾಮಾಜಿಕ ಜಾಲತಾಣ ಹ್ಯಾಂಡ್ಲರ್‌ಗಳಿಗೆ ರವಾನಿಸಿದ್ದಾನೆ.

ದಿಲ್ಲಿಯ ಇತರ ಎರಡು ಕೇಂದ್ರಗಳಲ್ಲಿನ ಪೊಲೀಸ್ ಸಿಬ್ಬಂದಿಗಳೂ ಟಾರ್ಗೆಟ್ ಲಿಸ್ಟ್‌ನಲ್ಲಿದ್ದಾರೆ. ದಿಲ್ಲಿ-ಸೋನಿಪತ್ ಹೆದ್ದಾರಿಯಲ್ಲಿರುವ ಸದಾ ಕಿಕ್ಕಿರಿದ ಜನಸಂದಣಿಯುಳ್ಳ ಜನಪ್ರಿಯ ಧಾಬಾಗೆ ಹ್ಯಾಂಡ್ ಗ್ರೆನೇಡ್ ಎಸೆದು ಅಪಾರ ಪ್ರಮಾಣದ ಪ್ರಾಣಹಾನಿಗೂ ಐಎಸ್‌ಐ ಪಿತೂರಿ ನಡೆಸಿದೆ. ಇಷ್ಟೇ ಅಲ್ಲ, ಉತ್ತರಪ್ರದೇಶದ ಕೆಲವು ಪೊಲೀಸ್ ಠಾಣೆಗಳ ಪೊಲೀಸ್ ಸಿಬ್ಬಂದಿಗಳನ್ನೂ ಟಾರ್ಗೆಟ್ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಿಲಿಟರಿ ಕ್ಯಾಂಪ್ ಟಾರ್ಗೆಟ್: ಹರ್ಯಾಣದ ಹಿಸಾರ್ ನಲ್ಲಿನ ಮಿಲಿಟರಿ ಕ್ಯಾಂಪ್ ಮೇಲೂ ಐಎಸ್‌ಐ ವಕ್ರದೃಷ್ಟಿಯಿದೆ. ಸೇನಾ ಶಿಬಿರದ ವಿಡಿಯೋಗಳನ್ನು ಪಾಕ್‌ನ ಹ್ಯಾಂಡ್ಲರ್‌ಗಳಿಗೆ ರವಾನಿಸಲಾಗಿದೆ. ಗ್ಯಾಂಗ್‌ಸ್ಟರ್ ಶೆಹಜಾದ್ ಭಟ್ಟಿ ಪರವಾಗಿ ಕೆಲಸ ಮಾಡುತ್ತಿದ್ದ ಮಧ್ಯಪ್ರದೇಶದ ಗ್ವಾಲಿಯರ್ ಮೂಲದ 21ವರ್ಷದ ರಾಜ್‌ವೀರ್ ಮತ್ತು 19ವರ್ಷದ ವಿವೇಕ್ ಬಂಜಾರನನ್ನು ಕಳೆದ ಏಪ್ರಿಲ್ ಆರಂಭದಲ್ಲಿ ಸೆರೆಹಿಡಿಯಲಾಗಿತ್ತು. ಭಟ್ಟಿ ಮತ್ತಾತನ ಸಹಚರರು ದಿಲ್ಲಿ-ಎನ್‌ಸಿಆರ್ ವಲಯದಲ್ಲಿ ಭಾರೀ ಪ್ರಮಾಣದಲ್ಲಿ ಕ್ರಿಮಿನಲ್ ಕೃತ್ಯಗಳನ್ನು ನಡೆಸಲು ಪ್ಲ್ಯಾನ್ ಮಾಡಿದ್ದಾರೆಂಬ ಬೇಹುಗಾರಿಕಾ ಮಾಹಿತಿ ಮೇರೆಗೆ ದಿಲ್ಲಿ ಪೊಲೀಸರು ಮಾ.31ರಂದು ಈ ಬಗ್ಗೆ ಪ್ರಕರಣ ದಾಖಲಿಸಿ ತನಿಖೆಗೆ ಚಾಲನೆ ನೀಡಿದ್ದಾರೆ.

ಕಿರುಸುದ್ದಿ

ಐತ್ತೂರಿನಲ್ಲಿ ಮತಾಂತರ ಯತ್ನ ಆರೋಪ; ಪೊಲೀಸರಿಂದ ಪರಿಶೀಲನೆ

ಕಡಬ: ಹಿಂದೂ ಮಹಿಳೆಯರು ಹಾಗೂ ಮಕ್ಕಳನ್ನು ಕೂಡಿಟ್ಟು ಮತಾಂತರಕ್ಕೆ ಯತ್ನಿಸಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಡಬ ಪೊಲೀಸರು ಗುರುವಾರ ರಾತ್ರಿ ಐತ್ತೂರು ಗ್ರಾಮದ ಕರ್ಮಾಯಿ ಬಳಿಯ ಮನೆಯೊಂದಕ್ಕೆ ತೆರಳಿ ಪರಿಶೀಲನೆ ನಡೆಸಿದ ಘಟನೆ ನಡೆದಿದೆ.

ಐತ್ತೂರು ಗ್ರಾಮದ ಕರ್ಮಾಯಿ ತೆಕ್ಕಾತೀಲ್ ನಿವಾಸಿ ಜೋಸೆಫ್ ಎಂಬವರ ಮನೆಯಲ್ಲಿ ಬೆಂಗಳೂರು ಮೂಲದ ಮಹಿಳೆಯರು, ಪುರುಷರು ಹಾಗೂ ಮಕ್ಕಳು ಸೇರಿದಂತೆ ಸುಮಾರು 25 ಮಂದಿ ತಂಗಿದ್ದು ಅಲ್ಲಿ ಅನೈತಿಕ ಚಟುವಟಿಕೆ ಹಾಗೂ ಮತಾಂತರ ಯತ್ನ ನಡೆಯುತ್ತಿದೆ ಎಂದು ಪೊಲೀಸರಿಗೆ ಹಿಂದೂ ಸಂಘಟನೆಗಳ ಮೂಲಕ ಮಾಹಿತಿ ಲಭಿಸಿತ್ತು. ಅದರಂತೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಪೊಲೀಸರು ಮನೆಮಾಲಕ ಜೋಸೆಫ್ ಹಾಗೂ ಮನೆಯಲ್ಲಿದ್ದವರನ್ನು ಠಾಣೆಗೆ ಕರೆಸಿ ಮಾಹಿತಿ ಪಡೆದಿದ್ದಾರೆ. ತನಿಖೆಯ ವೇಳೆ ಮನೆಯಲ್ಲಿದ್ದ ಬೆಂಗಳೂರು ಮೂಲದ ಜನರು ಮಂಗಳೂರಿಗೆ ಪ್ರವಾಸಕ್ಕೆ ಬಂದವರು ಬೆಂಗಳೂರಿನಲ್ಲಿ ಕ್ರೈಸ್ತ ಧರ್ಮ ಗುರುವಾಗಿರುವ ವ್ಯಕ್ತಿಯೊಬ್ಬರ ಪರಿಚಯದ ಮೂಲಕ ಅವರ ಸಹೋದರ ಜೋಸೆಫ್ ಅವರ ಕರ್ಮಾಯಿಯ ಮನೆಗೆ ಬಂದು ತಂಗಿದ್ದರು ಎಂದು ಹೇಳಿಕೆ ನೀಡಿರುವ ಬಗ್ಗೆ ಪೊಲೀಸರು ತಿಳಿಸಿದ್ದಾರೆ. ಬೆಂಗಳೂರಿನಿಂದ ಬಂದು ಜೋಸೆಫ್ ಅವರ ಮನೆಯಲ್ಲಿ ತಂಗಿದ್ದವರು ಹೇಳಿಕೆ ನೀಡಿ ನಾವು ಕಳೆದ 15 –20 ವರ್ಷಗಳಿಂದ ಸ್ವಯಂ ಪ್ರೇರಿತರಾಗಿ ಕ್ರೈಸ್ತ ಧರ್ಮವನ್ನು ಅನುಸರಿಸುತ್ತಿದ್ದೇವೆ. ಯಾರೂ ನಮ್ಮನ್ನು ಒತ್ತಾಯಪೂರ್ವಕವಾಗಿ ಮತಾಂತರ ನಡೆಸಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಅವರಿಂದ ಹೇಳಿಕೆ ಪಡೆದುಕೊಂಡಿರುವ ಪೊಲೀಸರು ಅವರನ್ನು ಬಿಟ್ಟು ಕಳುಹಿಸಿದ್ದಾರೆ.

ರಸ್ತೆ ಬದಿ ನಿಂತಿದ್ದವರಿಗೆ ಕಾರು ಡಿಕ್ಕಿ: ಮಹಿಳೆ ಸಾವು

ಪಡುಬಿದ್ರಿ: ರಾಷ್ಟ್ರೀಯ ಹೆದ್ದಾರಿ 66 ರ ಉಚ್ಚಿಲದಲ್ಲಿ ರಸ್ತೆ ದಾಟಲು ನಿಂತಿದ್ದ ಮಹಿಳೆಯರಿಗೆ ಕಾರು ಡಿಕ್ಕಿ ಹೊಡೆದು ಓರ್ವ ಮಹಿಳೆ ಸಾವನ್ನಪ್ಪಿದ್ದು ಮತ್ತೋರ್ವಾಕೆ ಗಾಯಗೊಂಡ ಘಟನೆ ಶುಕ್ರವಾರ ರಾತ್ರಿ ವೇಳೆ ಘಟಿಸಿದೆ.

ಮೃತ ಮಹಿಳೆಯನ್ನು ಸಾಸ್ತಾನ ನಿವಾಸಿ ಮಮತಾ ರವೀಂದ್ರ ಪೂಜಾರಿ (40) ಎಂದು ಗುರುತಿಸಲಾಗಿದ್ದು ಗಾಯಗೊಂಡಾಕೆ ಸುಶೀಲ ನಾರಾಯಣ್ ಉಡುಪಿ. ಇವರು ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನದ ಎದುರು ಹೆದ್ದಾರಿಯ ಪೂರ್ವ ಬದಿಯಿಂದ ಪಶ್ಚಿಮ ಬದಿಗೆ ದಾಟಲು ಡಿವೈಡರ್ ಬಳಿ ನಿಂತಿದ್ದ ವೇಳೆ ಕಾರೊಂದು ಡಿಕ್ಕಿಯಾಗಿ ಅಪಘಾತ ಸಂಭವಿಸಿತ್ತು. ಸ್ಥಳೀಯರ ಸಹಕಾರದಿಂದ ಉಡುಪಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಪಡುಬಿದ್ರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ವಾರ್ತಾ ಇಲಾಖೆ ಪತ್ರಿಕಾ ವಾಹನಕ್ಕೆ ಚಾಲನೆ

ಮಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಜಿಲ್ಲೆಯ ಪತ್ರಕರ್ತರ ಪ್ರವಾಸದ ಅನುಕೂಲಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ಹಂಚಿಕೆಯಾದ ಹೊಸ ಪತ್ರಿಕಾ ವಾಹನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಶುಕ್ರವಾರ ನಗರದ ಸುಲ್ತಾನ್ ಬತ್ತೇರಿಯಲ್ಲಿ ಹಸಿರು ನಿಶಾನೆ ತೋರಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ದರ್ಶನ್ ಹೆಚ್. ವಿ., ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಜಿಲ್ಲಾ ವಾರ್ತಾಧಿಕಾರಿ ಬಿ.ಎ ಖಾದರ್ ಶಾ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ ಮತ್ತಿತರರು ಇದ್ದರು.

ವಸತಿ, ನಿವೇಶನ ರಹಿತರಿಗೆ ಸೂಚನೆ


ಕುಂದಾಪುರ: ರಾಜೀವ ಗಾಂಧಿ ವಸತಿ ನಿಗಮದ 2018ರ ವಸತಿ ಮತ್ತು ನಿವೇಶನ ರಹಿತರ ಸಮೀಕ್ಷೆ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅರ್ಹ ವಸತಿ ರಹಿತ ಫಲಾನುಭವಿಗಳು ಹತ್ತಿರದ ಗ್ರಾಮ ಪಂಚಾಯತ್‌ನ್ನು ಸಂಪರ್ಕಿಸಿ ಮೇ 15ರೊಳಗೆ ಅರ್ಜಿ ಸಲ್ಲಿಸುವಂತೆ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ.

ಸ್ಕೂಟರ್‌ನಲ್ಲಿ ಸಾಗಿಸುತ್ತಿದ್ದ ಕರ್ನಾಟಕ ಮದ್ಯ ವಶಕ್ಕೆ

ಕುಂಬಳೆ: ಸ್ಕೂಟರ್‌ನಲ್ಲಿ ಸಾಗಿಸುತ್ತಿದ್ದ 8.64 ಲೀಟರ್ ಕರ್ನಾಟಕ ಮದ್ಯವನ್ನು ಅಬಕಾರಿ ಅಧಿಕಾರಿಗಳು ವಶಪಡಿಸಿ ಕೇಸು ದಾಖಲಿಸಿಕೊಂಡಿದ್ದಾರೆ.ಹೊಸಬೆಟ್ಟು ವಿಲ್ಲೇಜ್‌ನ ಅಯ್ಯರ್‌ಕಟ್ಟೆ ಕೀರ್ತೇಶ್ವರ ನಿವಾಸಿ ಪ್ರಶಾಂತ್ (44) ಎಂಬಾತನ ವಿರುದ್ಧ ಕೇಸು ದಾಖಲಿಸಲಾಗಿದೆ. ಆರೋಪಿಯು ಪರಾರಿಯಾಗಿದ್ದಾನೆಂದು ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ. ಕುಂಬಳೆ ಅಬಕಾರಿ ಅಧಿಕಾರಿ ಪೀತಾಂಬರನ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಅಡುಗೆ ಕೋಣೆಯೊಳಗೆ ಅವಿತುಕೊಂಡ ಕಾಳಿಂಗ ಸರ್ಪ: ಬೆಚ್ಚಿ ಬಿದ್ದ ಮನೆಮಂದಿ

ಕಾಸರಗೋಡು: ಮನೆಯ ಅಡುಗೆ ಕೊಠಡಿಯೊಳಗೆ ನುಗ್ಗಿ ಒಲೆ ಬಳಿ ಬೃಹತ್ ಗಾತ್ರದ ಕಾಳಿಂಗ ಸರ್ಪವೊಂದು ಮುದುಡಿಕೊಂಡ ಸ್ಥಿತಿಯಲ್ಲಿ ಪ್ರತ್ಯಕ್ಷಗೊಂಡಿದ್ದು, ಮನೆಮಂದಿ ಅದನ್ನು ನೋಡಿ ಬೆದರಿದ ಘಟನೆ ನಡೆದಿದೆ. ಬಂದಡ್ಕ ಸಮೀಪದ ಮಾಣಿಮೂಲೆ ಪಿ.ಕೆ.ಬಾಲಕೃಷ್ಣನ್ ಎಂಬವರ ಮನೆಯ ಅಡುಗೆ ಕೊಠಡಿಯ ಒಲೆ ಬಳಿ ಇರಿಸಲಾಗಿದ್ದ ಪಾತ್ರೆಗಳ ಎಡೆಯಲ್ಲಿ ಕಾಳಿಂಗ ಸರ್ಪ ಅವಿತುಕೊಂಡಿತ್ತು. ಅಡುಗೆ ಕೊಠಡಿಯ ಬಾಗಿಲು ತೆರೆದಿಟ್ಟ ಸಂದರ್ಭದಲ್ಲಿ ಕಾಳಿಂಗ ಸರ್ಪ ಕೊಠಡಿಯೊಳಗೆ ಪ್ರವೇಶಿಸಿರಬಹುದೆಂದು



ಅಂದಾಜಿಸಲಾಗಿದೆ.ಮನೆಯವರು ಅಡುಗೆ ತಯಾರಿಸಲು ಒಲೆ ಬಳಿ ಬಂದಾಗ ಕಾಳಿಂಗ ಸರ್ಪ ಪತ್ತೆಯಾಗಿದ್ದು ಅವರು ನೀಡಿದ ಮಾಹಿತಿಯಂತೆ ಬೋವಿಕ್ಕಾನದಿಂದ ಅರಣ್ಯ ಇಲಾಖೆಯ ರ್‍ಯಾಪಿಡ್ ರೆಸ್ಪೋನ್ಸ್ ಟೀಮ್ ಕೂಡಲೇ ಸ್ಥಳಕ್ಕಾಗಮಿಸಿ ಕಾಳಿಂಗ ಸರ್ಪವನ್ನು ಸೆರೆ ಹಿಡಿಯುವಲ್ಲಿ ಸಫಲರಾದರು. ಬಳಿಕ ಅದನ್ನು ಸುರಕ್ಷಿತ ತಾಣಕ್ಕೆ ಬಿಡಲಾಯಿತು. ಆ ಮೂಲಕ ಸಂಭಾವ್ಯ ಭಾರೀ ಅನಾಹುತ ತಪ್ಪಿ ಹೋಯಿತು. ಈ ಕಾಳಿಂಗ ಸರ್ಪ 8 ಅಡಿ ಉದ್ದ, 16 ಕಿಲೋ ತೂಕವಿತ್ತೆಂದು ಅರಣ್ಯ ಪಾಲಕರು ತಿಳಿಸಿದ್ದಾರೆ.

ಮಳೆಗಾಲ ಪೂರ್ವ ಸಿದ್ಧತಾ ಸಭೆಯಲ್ಲಿ ಸಚಿವ ದಿನೇಶ್ ಸೂಚನೆ | ಚರಂಡಿ ರಾಜಕಾಲುವೆಗಳ ಹೂಳೆತ್ತುವ ಕಾರ್ಯ ತ್ವರಿತಗೊಳಿಸಿ

ನೆರೆ ಸಂಭಾವ್ಯ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ವಹಿಸಿ



ಮಂಗಳೂರು: ಮುಂಬರುವ ಮಳೆಗಾಲದಲ್ಲಿ ನೆರೆ ಮತ್ತು ನೀರು ನಿಲ್ಲಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಳೆಗಾಲ ಪೂರ್ವ ಸಿದ್ಧತೆ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಳೆದವರ್ಷ ನೆರೆಬಂದಪ್ರದೇಶಗಳುಹಾಗೂ ಭೂಕುಸಿತವಾದ ಜನವಸತಿ ಪ್ರದೇಶಗಳಿಗೆ ಅಧಿಕಾರಿಗಳು ತಕ್ಷಣವೇ ಭೇಟಿ ನೀಡಿ ದುರಂತ ಅಪಾಯ ತಡೆಯಲು ಈಗಿಂದಲೇ ಕ್ರಮವಹಿಸಬೇಕು. ಚರಂಡಿ ರಾಜಕಾಲುವೆಗಳ ಹೂಳೆತ್ತುವ ಕಾರ್ಯವನ್ನು ತ್ವರಿತಗೊಳಿಸಬೇಕು. ಈ ಸಂಬಂಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಮಾತನಾಡಿ, ಚರಂಡಿ ಮತ್ತು ರಾಜ ಕಾಲುವೆಗಳ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ಸಮುದ್ರ ಕೊರೆತ ಉಂಟಾಗಬಹುದಾದ 8 ಪ್ರದೇಶಗಳನ್ನು ಗುರುತಿಸಿ ಅಪಾಯದ ಪ್ರಮಾಣವನ್ನು ತಗ್ಗಿಸಲು ಕ್ರಮವಹಿಸಲಾಗಿದೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ತುರ್ತು ವಿಪತ್ತು ನಿರ್ವಹಣೆಗೆ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

ಮಂಗಳೂರು ನಗರದಲ್ಲಿ ರಾಜ ಕಾಲುವೆಗಳ ಬೃಹತ್ ಚರಂಡಿಗಳ ಹೂಳನ್ನು ಜೆಸಿಬಿ ಮೂಲಕ ತೆಗೆಯಲಾಗುತ್ತಿದ್ದು, ಈಗಾಗಲೇ ಬಹುತೇಕ ರಾಜಕಾಲುವೆಗಳ ಹೂಳು ತೆಗೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ದ.ಕ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ, ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ, ಡಿ.ಸಿ.ಎಫ್ ರವಿಶಂಕರ್, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಉಪಸ್ಥಿತರಿದ್ದರು.

> **ಕಳೆದ ವರ್ಷ ಸಂಭವಿಸಿದ ಪ್ರವಾಹ, ಕೃತಕ ನೆರೆ, ಭೂ ಕುಸಿತಗಳ ಜಾಗಗಳ ಹಿನ್ನೆಲೆಯಲ್ಲಿ ಮುಂಜಾಗೃತಾ ಕ್ರಮಗಳೊಂದಿಗೆ ಸಜ್ಜಾಗಿರಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ತಡೆಗೋಡೆಗಳ ನಿರ್ಮಾಣಕ್ಕೆ 80 ಕೋಟಿ ರೂ. ಅನುದಾನ ದೊರಕಿದ್ದು, ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಹೂಳೆತ್ತುವ ಕಾಮಗಾರಿಗೆ 9 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಲಾಗಿದೆ.**
> ■ **ದಿನೇಶ್ ಗುಂಡೂರಾವ್, ಸಚಿವ**

ಮೇ ಅಂತ್ಯಕ್ಕೆ ಎನ್‌ಡಿಆರ್‌ಎಫ್ ಆಗಮನ

ಮಂಗಳೂರಿನಲ್ಲಿ ಎಸ್‌ಡಿಆರ್‌ಎಫ್ ತಂಡ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ಮೇ ಅಂತ್ಯಕ್ಕೆ ಆಗಮಿಸುವ ಸಾಧ್ಯತೆ ಇದೆ. ಪೀಡಿತ 92 ಪ್ರದೇಶಗಳನ್ನು ಹಾಗೂ ಭೂ ಕುಸಿತ ಉಂಟಾಗಬಹುದಾದ 88 ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದೆ ಎಂದು ದರ್ಶನ್ ಎಚ್.ವಿ. ಹೇಳಿದರು.

ಖನಿಜ ಪ್ರತಿಷ್ಠಾನ ನಿಧಿ ಬಳಕೆ ಚರ್ಚಿಸಲು ಶೀಘ್ರ ಸಭೆ



ಮಂಗಳೂರು: ಗಣಿಗಾರಿಕೆಯಿಂದ ಹಾನಿಯಾದ ಪ್ರದೇಶಗಳಸುಧಾರಣೆಮತ್ತುಸಂತ್ರಸ್ತರಉಪಯೋಗಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕ್ರಷರ್, ಕಲ್ಲು ಗಣಿಗಾರಿಕೆ, ಮರಳುಗಾರಿಕೆ ಸೇರಿದಂತೆ ವಿವಿಧ ಗಣಿಗಾರಿಕೆಗಳಿಂದ ತೊಂದರೆಗೀಡಾದ ಪ್ರದೇಶಗಳಲ್ಲಿ ರಸ್ತೆ, ಶಾಲೆ ಮತ್ತು ಅಂಗನವಾಡಿ ಕಟ್ಟಡ ಸೇರಿದಂತೆ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ ಅವಕಾಶವಿದೆ. 2015 ರಿಂದ ಇದುವರೆಗೆ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ 47.62 ಕೋಟಿ ರೂ.ಮೊತ್ತ ಸಂಗ್ರಹವಾಗಿದೆ. ಗಣಿಗಾರಿಕೆ ರಾಯಲ್ಟಿಯ ಶೇ. 10 ರಷ್ಟನ್ನು ಖನಿಜ ಪ್ರತಿಷ್ಠಾನ ನಿಧಿಗೆ ಸಂಗ್ರಹಿಸಲಾಗುತ್ತಿದೆ ಎಂದು ಅವರು ಹೇಳಿದರು.

ಈ ನಿಟ್ಟಿನಲ್ಲಿ ಅಗತ್ಯವಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಜಿಲ್ಲೆಯ ಶಾಸಕರೊಂದಿಗೆ ಅತಿ ಶೀಘ್ರವೇ ಸಭೆ ನಡೆಸಿ ಈ ಮೊತ್ತವನ್ನು ಸದ್ಬಳಕೆ ಮಾಡಲು ಚರ್ಚಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಮಾತನಾಡಿ, ಗಣಿಗಾರಿಕೆ ಪ್ರದೇಶದ 5 ಕಿ.ಮೀ ವ್ಯಾಪ್ತಿಯ ಪ್ರದೇಶದಲ್ಲಿ ಹಾನಿಯಾದ ಪ್ರದೇಶಗಳನ್ನು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಈ ನಿಧಿಯಲ್ಲಿ ಅವಕಾಶವಿದೆ. ಈಗಾಗಲೇ 342 ಲಕ್ಷ ವೆಚ್ಚದಲ್ಲಿ 57 ವಿವಿಧ ಕಾಮಗಾರಿಗಳು ಈ ನಿಧಿಯಲ್ಲಿ ಪೂರ್ಣಗೊಂಡಿರುತ್ತದೆ. ಕೋವಿಡ್ ಸಂದರ್ಭದಲ್ಲಿ ವಿವಿಧ ಆರೋಗ್ಯ ಸೌಲಭ್ಯಗಳಿಗಾಗಿ ಖನಿಜ ಪ್ರತಿಷ್ಠಾನ ನಿಧಿಯಲ್ಲಿ 1.59 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ, ಪೊಲೀಸ್ ಅಧೀಕ್ಷಕ ಡಾ.ಅರುಣ್ ಕೆ, ಗಣಿ ಇಲಾಖೆ ಉಪನಿರ್ದೇಶಕ ಸಂದೀಪ್, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಮತ್ತಿತರರು ಉಪಸ್ಥಿತರಿದ್ದರು.

ಮಳೆಗಾಲದ 'ಶಾರ್ಟ್ ಸರ್ಕ್ಯೂಟ್' ತಡೆಗೆ ಮೆಸ್ಕಾಂ ಮಾಸ್ಟರ್ ಪ್ಲಾನ್

ಉಡುಪಿ ಜಿಲ್ಲೆಯಲ್ಲಿ 128 ವಿಶೇಷ ಸಿಬ್ಬಂದಿ ನಿಯೋಜನೆ

ಉಡುಪಿ: ಮುಂಗಾರು ಮಳೆಯ ಅಬ್ಬರಕ್ಕೆ ಕರಾವಳಿ ಸಜ್ಜಾಗುತ್ತಿರುವ ಬೆನ್ನಲ್ಲೇ, ವಿದ್ಯುತ್ ವ್ಯತ್ಯಯ ಮತ್ತು ಮಳೆಗಾಲದ ಅವಘಡ ಗಳನ್ನು ತಡೆಯಲು ಮೆಸ್ಕಾಂ ಸಮರೋಪಾದಿಯಲ್ಲಿ ಸಿದ್ಧತೆ ಆರಂಭಿಸಿದೆ. ಮಳೆ, ಗಾಳಿಗೆ ವಿದ್ಯುತ್ ಕಂಬಗಳು ಉರುಳುವುದು ಅಥವಾ ತಂತಿಗಳು ತುಂಡಾಗಿ ಸಂಭವಿಸುವ ಅನಾಹುತಗಳನ್ನು ತಪ್ಪಿಸಲು ಈ ಬಾರಿ ವಿಶೇಷ ಕಾರ್ಯಪಡೆಯನ್ನು ಸಜ್ಜುಗೊಳಿಸಲಾಗಿದೆ.

ತುರ್ತು ಕಾರ್ಯಾಚರಣೆಗೆ 128 ಸೈನಿಕರ ಪಡೆ!

ಮಳೆಗಾಲದ ಅವಧಿಯಲ್ಲಿ ಮರಗಳು ಬಿದ್ದು ವಿದ್ಯುತ್ ಸಂಪರ್ಕ ಕಡಿತಗೊಂಡರೆ ತಕ್ಷಣವೇ ಸ್ಪಂದಿಸಲು ಮೆಸ್ಕಾಂ ಜಿಲ್ಲೆಯಲ್ಲಿ 128 ವಿಶೇಷ ಸಿಬ್ಬಂದಿಗಳನ್ನು ನಿಯೋಜಿಸಲು ತೀರ್ಮಾನಿಸಿದೆ. ಈ ತಂಡವು ದಿನದ 24 ಗಂಟೆಯೂ ಸನ್ನದ್ಧವಾಗಿದ್ದು, ಅತಿವೃಷ್ಟಿ ಅಥವಾ ಬಿರುಗಾಳಿಯಿಂದ ಉಂಟಾಗುವ ತಾಂತ್ರಿಕ ದೋಷಗಳನ್ನು ಸ್ಥಳಕ್ಕೆ ತೆರಳಿ ಸರಿಪಡಿಸಲಿದೆ.

ದೂರು ಸ್ವೀಕಾರಕ್ಕೆ ಹೈಟೆಕ್ ಕಂಟ್ರೋಲ್ ರೂಮ್

ಸಾರ್ವಜನಿಕರ ದೂರುಗಳಿಗೆ ತಕ್ಷಣ ಸ್ಪಂದಿಸಲು ಪ್ರತ್ಯೇಕ ಕಂಟ್ರೋಲ್ ರೂಮ್ ವ್ಯವಸ್ಥೆ ಮಾಡಲಾಗಿದ್ದು, ತುರ್ತು ಕರೆಗಳನ್ನು ಸ್ವೀಕರಿಸಲು ಮತ್ತು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಮಾಹಿತಿ ರವಾನಿಸಲು 6 ಮಂದಿ ನುರಿತ ಸಿಬ್ಬಂದಿಗಳನ್ನು ಮೀಸಲಿಡಲಾಗಿದೆ. ಇದರಿಂದಾಗಿ ಮಳೆಗಾಲದಲ್ಲಿ ಗ್ರಾಹಕರು ಎದುರಿಸುವ ವಿದ್ಯುತ್ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಸಿಗುವ ನಿರೀಕ್ಷೆಯಿದೆ.

ಪೂರ್ವಭಾವಿ 'ಲೈನ್ ಕ್ಲಿಯರೆನ್ಸ್' ಕಾರ್ಯ ಚುರುಕು

ಮಳೆಗಾಲ ಆರಂಭಕ್ಕೂ ಮುನ್ನವೇ ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮೆಸ್ಕಾಂ ಸಿಬ್ಬಂದಿ 'ಲೈನ್ ಕ್ಲಿಯರೆನ್ಸ್' ಕೆಲಸದಲ್ಲಿ ನಿರತರಾಗಿದ್ದಾರೆ. ವಿದ್ಯುತ್ ತಂತಿಗಳಿಗೆ ತಗಲುತ್ತಿರುವ ಮರದ ಗೆಲ್ಲುಗಳು ಮತ್ತು ರೆಂಬೆಗಳನ್ನು ಗುರುತಿಸಿ ಅವುಗಳನ್ನು ಕತ್ತರಿಸುವ ಕಾರ್ಯ ನಡೆಯುತ್ತಿದೆ. ಇದರಿಂದಾಗಿ ಬಿರುಗಾಳಿ ಬೀಸಿದಾಗ ರೆಂಬೆಗಳು ತಂತಿ ಮೇಲೆ ಬಿದ್ದು ಶಾರ್ಟ್ ಸರ್ಕ್ಯೂಟ್ ಆಗುವುದು ಅಥವಾ ಕಂಬಗಳು ಮುರಿಯುವುದನ್ನು ತಪ್ಪಿಸಬಹುದಾಗಿದೆ.

ಸ್ಥಳೀಯಾಡಳಿತಗಳ ಸಮನ್ವಯ ಅಗತ್ಯ



ಮುಂಗಾರು ಪೂರ್ವ ಮಳೆ ಈಗಾಗಲೇ ಜಿಲ್ಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡಿದ್ದು, ಗಾಳಿ–ಮಳೆಗೆ ವಿದ್ಯುತ್ ವ್ಯತ್ಯಯದ ಬಿಸಿ ಜನರಿಗೆ ತಟ್ಟಲು ಆರಂಭವಾಗಿದೆ. ಕೇವಲ ಮೆಸ್ಕಾಂ ಮಾತ್ರವಲ್ಲದೆ, ಉಡುಪಿ ನಗರಸಭೆ ಸೇರಿದಂತೆ ಜಿಲ್ಲೆಯ ಎಲ್ಲಾ ಸ್ಥಳೀಯಾಡಳಿತಗಳು ಮುಂಗಾರು ಪೂರ್ವ ಸಿದ್ಧತೆಯಲ್ಲಿ ಚುರುಕಾಗಬೇಕಿದೆ. ವಿದ್ಯುತ್ ಲೈನ್‌ಗಳಿಗೆ ಅಡ್ಡಿಯಾಗುವ ಮರಗಳ ಅಪಾಯಕಾರಿ ರೆಂಬೆಗಳನ್ನು ತೆರವುಗೊಳಿಸಲು ಮೆಸ್ಕಾಂಗೆ ಸ್ಥಳೀಯ ಸಂಸ್ಥೆಗಳ ಸಹಕಾರ ಅತಿ ಮುಖ್ಯ. ಅಲ್ಲದೆ, ರಸ್ತೆ ಬದಿಯ ಚರಂಡಿಗಳನ್ನು ಸಮರ್ಪಕವಾಗಿ ಹೂಳೆತ್ತದಿದ್ದರೆ ಮಳೆ ನೀರು ಹರಿಯಲು ದಾರಿಯಿಲ್ಲದೆ ವಿದ್ಯುತ್ ಕಂಬಗಳು ಸಡಿಲಗೊಂಡು ಅವಘಡ ಸಂಭವಿಸುವ ಸಾಧ್ಯತೆಯಿದೆ. ಹಾಗಾಗಿ, ತುರ್ತು ಕಾರ್ಯಾಚರಣೆಗೆ ಇಲಾಖೆಗಳ ನಡುವಿನ ಸಮನ್ವಯ ಈಗಿನ ಅನಿವಾರ್ಯತೆ.

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ | ಅರ್ಜಿ ಆಹ್ವಾನ

ಕೆ.ಬಿ.ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ



ಮಂಗಳೂರು: ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ವತಿಯಿಂದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ತಿಳಿಸಿದ್ದಾರೆ.

ಸಂಘದ ಸದಸ್ಯರ ಮಕ್ಕಳಿಗೆ 2025–26ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 95 ಹಾಗೂ ಅದಕ್ಕಿಂತ ಹೆಚ್ಚು ಅಂಕ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ. 90 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು 2025–26ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಪಿ.ಯು.ಸಿ ಉತ್ತೀರ್ಣರಾಗಿ, 2026–27ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಬಿ.ಬಿ.ಎಸ್ /ಬಿಡಿಎಸ್/ ಆಯುಷ್/ವೆಟರ್ನರಿ ಮುಂತಾದ ವೈದ್ಯಕೀಯ ಶಿಕ್ಷಣ ಪದವಿ/ ಸ್ನಾತಕೋತ್ತರ ವ್ಯಾಸಂಗವನ್ನು ರಾಷ್ಟ್ರೀಯ ನೀಟ್ ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ, ಇಂಜಿನಿಯರಿಂಗ್ ಪದವಿ/ ಸ್ನಾತಕೋತ್ತರ ವ್ಯಾಸಂಗವನ್ನು ರಾಜ್ಯ ಮತ್ತು ರಾಷ್ಟ್ರೀಯ ಪ್ರವೇಶ ಪರೀಕ್ಷೆ ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಡಿಪ್ಲೊಮಾ ನಂತರ ಇಂಜಿನಿಯರಿಂಗ್ ಪದವಿಯ ವ್ಯಾಸಂಗವನ್ನು ರಾಜ್ಯ (ಸಿಇಟಿ) ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ, ಅಗ್ರಿಕಲ್ಚರಲ್/ ಫಿಶರೀಶ್ ಮತ್ತು ವೆಟರ್ನರಿ ಪದವಿ/ ಸ್ನಾತಕೋತ್ತರ ಪದವಿ ರಾಜ್ಯ ಅಖಿಲ ಪರೀಕ್ಷೆ ಮುಖೇನ ಸರ್ಕಾರಿ ಕಾಲೇಜಿನಲ್ಲಿ ಮೆರಿಟ್ ಸೀಟ್‌ನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ, ಎಂ.ಎ/ಎಂ.ಕಾಂ./ ಎಂ.ಬಿ.ಎ/ಎಂ.ಎಸ್.ಎಸ್ಸಿ/ಎಂ.ಇಡಿ ಪದವಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಪಾಲಿಟೆಕ್ನಿಕ್ ಡಿಪ್ಲೊಮಾ /ಐ.ಟಿ.ಐ/ಬಿ.ಪಿ.ಇ.ಡಿ/ ಬಿ.ಇ.ಡಿ./ಡಿ.ಇ.ಡಿಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕೋರ್ಸ್‌ಗಳಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾ ಪುರಸ್ಕಾರದ ಅರ್ಜಿಗಳು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ ಎಲ್ಲಾ ಶಾಖೆಗಳಲ್ಲಿ ಮತ್ತು ಸಂಘದ ಅಧಿಕೃತ ವೆಬ್‌ಸೈಟ್ http://ramakrishnacredit.com/ ನಲ್ಲಿ ಲಭ್ಯವಿದ್ದು ಜೂನ್ 15, 2026 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಸದಸ್ಯರು ಇದರ ಸದುಪಯೋಗ ಪಡೆಯುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೇತರಾದ ಬಿಜೆಪಿ ಅಭ್ಯರ್ಥಿ ವಿ.ಮುರಳೀಧರನ್ ಆಗ್ರಹ

ಮುಸ್ಲಿಂಲೀಗ್‌ಗೆ ಶಿಕ್ಷಣ ಇಲಾಖೆ ನೀಡಬಾರದು



ಕಾಸರಗೋಡು: ಕೇರಳ ರಾಜ್ಯದಲ್ಲಿ ಯುಡಿಎಫ್ ನೇತೃತ್ವದ ಸರಕಾರವು ಅಧಿಕಾರದ ಗದ್ದೆಗೆ ಏರಲಿದ್ದು, ಸಚಿವ ಸಂಪುಟದಲ್ಲಿ ಶಿಕ್ಷಣ ಇಲಾಖೆಯನ್ನು ಮುಸ್ಲಿಂಲೀಗ್‌ಗೆ ಯಾವುದೇ ಕಾರಣಕ್ಕೂ ನೀಡಬಾರದು ಎಂದು ಕಳಕೂಟ್ಟಂನಿಂದ ವಿಜೇತರಾದ ಬಿಜೆಪಿ ಅಭ್ಯರ್ಥಿ, ಕೇಂದ್ರದ ಮಾಜಿ ಸಚಿವ ವಿ.ಮುರಳೀಧರನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಇಲಾಖೆಯನ್ನು ಮುಸ್ಲಿಂಲೀಗ್‌ಗೆ ನೀಡಿದರೆ ಕೋಮುವಾದಗಳನ್ನು ತುಂಬಿಸಿ ಇಲಾಖೆಯನ್ನು ಒಂದು ಮತಕ್ಕೆ ಸಂಬಂಧಪಟ್ಟಸಚಿವಾಲಯವಾಗಿ ಬದಲಾಯಿಸಬಹುದು. ಇದರಿಂದಾಗಿ ಶೈಕ್ಷಣಿಕ ವ್ಯವಸ್ಥೆ ಕುಸಿಯಬಹುದು ಎಂದು ಅವರು ಮುನ್ನೆಚ್ಚರಿಕೆ ನೀಡಿದ್ದಾರೆ. ಮಾತ್ರವಲ್ಲದೆ ದೀರ್ಘಕಾಲೀನ ಸಮಸ್ಯೆಗಳಿಗೆ ಕಾರಣವಾಗಲಿದೆ. ಆದ್ದರಿಂದ ಈ ಕುರಿತು ಯುಡಿಎಫ್ ಒಕ್ಕೂಟವು ವಿಶೇಷ ಗಮನಹರಿಸಬೇಕೆಂದು ಅವರು ತಿರುವನಂತಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ.

ಇದೇ ವೇಳೆ ಐಕ್ಯರಂಗದಲ್ಲಿ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಪಾಣಕ್ಕಾಡ್ ತಂಙಳ್ ಎಂದು ಬಿಜೆಪಿ ಮುಖಂಡ ಕೆ.ಸುರೇಂದ್ರನ್ ಲೇವಡಿ ಮಾಡಿದ್ದಾರೆ. ಮುಸ್ಲಿಂಲೀಗ್ ನಾಯಕತ್ವವು ಹೇಳಿದ ವ್ಯಕ್ತಿಯನ್ನೇ ಕೇರಳದ ಮುಖ್ಯಮಂತ್ರಿ ಮಾಡಲು ಕಾಂಗ್ರೆಸ್ ಹೈಕಮಾಂಡ್ ಬಯಸಬಹುದು ಎಂದು ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಗುಂಡ್ಯ ಹೊಳೆಯ ಕೊಲ್ಯದ ಕಟ್ಟದಲ್ಲಿ ಇಬ್ಬರು ಹೆಣ್ಣುಮಕ್ಕಳು ನೀರುಪಾಲು



ಕಡಬ: ಕಡಬ ತಾಲೂಕಿನ ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಗುಂಡ್ಯಹೊಳೆಯ ಕೊಲ್ಯದಕಟ್ಟ ಡ್ಯಾಮ್ ಬಳಿ ಸ್ನಾನಕ್ಕೆಂದು ನೀರಿಗಿಳಿದ ಇಬ್ಬರು ಹೆಣ್ಣುಮಕ್ಕಳು ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಶುಕ್ರವಾರ ಸಂಜೆ ನಡೆದಿದೆ.

ಕಡಬ ತಾಲೂಕಿನ ಕುಟ್ರುಪ್ಪಾಡಿ ಗ್ರಾಮದ ಕಾರ್ಕಳ ಸರಕಾರಿ ಪ್ರಾಥಮಿಕ ಶಾಲೆಯ ಬಳಿ ಪೂವತಿಂಗಲ್ ನಿವಾಸಿ ಹರೀಶ್ ಪಿ.ಕೆ. ಎಂಬವರ ಪುತ್ರಿ ಕಡಬ ಸರಕಾರಿ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ ಅರ್ಪಿತಾ (15) ಹಾಗೂ ಹರೀಶ್ ಅವರು ಸಹೋದರಿ ನೆರೆಮನೆಯ ಶಕುಂತಲಾ ಎಂಬವರ ಪುತ್ರಿ ಸುನೀತ (21) ಮೃತಪಟ್ಟವರು.

ಹರೀಶ್ ಪಿ.ಕೆ. ಅವರ ಮಕ್ಕಳಾದ ಹರಿವಿಷ್ಣು, ಅರ್ಪಿತಾ, ಹರೀಶ್ ಅವರ ಅಕ್ಕ ನೆರೆಮನೆ ನಿವಾಸಿ ಶಕುಂತಾಳ ಅವರ ಮಕ್ಕಳಾದ ಸುರೇಶ, ಸುನೀತಾ, ಸುರೇಶನ ಮಗಳಾದ ಅಕ್ಷತಾ ಮತ್ತು ನೆಟ್ಟಣ ನಿವಾಸಿ ಶ್ರೇಯ ಅವರು ಒಟ್ಟಾಗಿ ಸ್ನಾನಕ್ಕೆಂದು ಗುಂಡ್ಯ ಹೊಳೆಗೆ ತೆರಳಿದ್ದರು. ಆ ಪೈಕಿ ಅರ್ಪಿತಾ ಹಾಗೂ ಸುನೀತ ನೀರಿನ ಆಳ ತಿಳಿಯದೆ ನೀರಿನಲ್ಲಿ ಮುಳುಗಿದ್ದಾರೆ. ಇದನ್ನು ಗಮನಿಸಿದ ಇತರರು ಅವರನ್ನು ರಕ್ಷಿಸಲು ಯತ್ನಿಸಿದರೂ ಫಲಕಾರಿಯಾಗಲಿಲ್ಲ. ಈ ವಿಚಾರವನ್ನು ಹರಿವಿಷ್ಣು ತನ್ನ ತಂದೆ ಹರೀಶ್ ಅವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದಲ್ಲದೆ ನದಿಯ ಪಕ್ಕದ ಮನೆಯವರಿಗೆ ತಿಳಿಸಿ ನೀರಲ್ಲಿ ಮುಳುಗಿದವರನ್ನು ರಕ್ಷಣೆ ಮಾಡುವಂತೆ ಮನವಿ ಮಾಡಿಕೊಂಡಿದ್ದಾನೆ. ಆದರೆ ಅದು ಸಾಧ್ಯವಾಗಲಿಲ್ಲ. ಬಳಿಕ ಕೊಲ್ಯದಕಟ್ಟ ನಿವಾಸಿ ಜಾರ್ಜ್ ಎಂಬವರು ಮೃತದೇಹವನ್ನು ನೀರಿನಿಂದ ಮೇಲಕ್ಕೆತ್ತಿದ್ದಾರೆ. ಸ್ಥಳಕ್ಕೆ ಕಡಬ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೃತದೇಹಗಳನ್ನು ಕಡಬ ಸರಕಾರಿ ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಹರೀಶ್ ಅವರು ನೀಡಿದ ದೂರಿನಂತೆ ಕಡಬ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿದೆ.

ಮೇ 10ರಂದು ಸಂಜೆ 5 ಗಂಟೆಗೆ ಇಸ್ಕಾನ್‌ನ ಶ್ರೀ ಚಂಚಲಪತಿ ದಾಸರಿಂದ ಯೋಜನೆಯ ವೆಬ್‌ಸೈಟ್ ಲೋಕಾರ್ಪಣೆ

'ಶ್ರೀಕೃಷ್ಣ ಮಂತ್ರ ಜಪ ಯಜ್ಞ' ಲೋಕಾರ್ಪಣೆ: ಶೀರೂರು ಶ್ರೀ

ಉಡುಪಿ: ಮನುಷ್ಯ ಜನ್ಮದಲ್ಲಿ ದೇವರ ಧ್ಯಾನ ಮಾಡುವುದು ಅತ್ಯಂತ ಅವಶ್ಯಕವಾಗಿದ್ದು, ವ್ಯರ್ಥ ಹರಟೆಯಲ್ಲಿ ಸಮಯ ಕಳೆಯುವ ಬದಲು ಭಕ್ತರು ಕೃಷ್ಣಮಂತ್ರ ಜಪದ ಮೂಲಕ ಪುಣ್ಯ ಸಂಪಾದಿಸಬೇಕು ಎಂದು ಪರ್ಯಾಯ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ತಿಳಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಶ್ರೀಗಳು, ಲೋಕೋದ್ಧಾರಕ ಉದ್ದೇಶದೊಂದಿಗೆ 'ಶ್ರೀಕೃಷ್ಣ ಮಂತ್ರ ಜಪ ಯಜ್ಞ'ವನ್ನು ಲೋಕಾರ್ಪಣೆ ಮಾಡುತ್ತಿರುವುದಾಗಿ ಘೋಷಿಸಿದರು.

ಈ ಜಪ ಯಜ್ಞದ ವಿಶೇಷತೆಯ ಕುರಿತು ವಿವರಿಸಿ, ಭಕ್ತರು ಭಕ್ತಿಯಿಂದ ಮಂತ್ರ ಜಪ ಮಾಡಿ ಒಂದು ಹಂತದ ಸಂಖ್ಯೆಯನ್ನು ತಲುಪಿದ ಬಳಿಕ ಶ್ರೀಕೃಷ್ಣ ಮಠಕ್ಕೆ ಬಂದು ಅದನ್ನು ಗುರುಗಳ ಮುಖಾಂತರ ಶ್ರೀಕೃಷ್ಣನಿಗೆ ಅರ್ಪಿಸಬೇಕು ಎಂದು ತಿಳಿಸಿದರು. ಕೇವಲ ಮಂತ್ರ ಜಪ ಮಾತ್ರವಲ್ಲದೆ, ಭಕ್ತರು ಆ ಸಮಯದಲ್ಲಿ ತಮ್ಮಲ್ಲಿರುವ ಯಾವುದಾದರೂ ಒಂದು ದುಶ್ಚಟವನ್ನು ತ್ಯಾಗ ಮಾಡುವ ಸಂಕಲ್ಪ ಮಾಡಬೇಕು. ಈ ಮೂಲಕ ಆಧ್ಯಾತ್ಮಿಕ ಶಕ್ತಿಯೊಂದಿಗೆ ಸಮಾಜದಲ್ಲಿ ಸದ್ವರ್ತನೆಯನ್ನು ಬೆಳೆಸುವುದು ತಮ್ಮ ಆಶಯವಾಗಿದೆ ಎಂದರು. ಮೇ 10ರ ಭಾನುವಾರ ಸಂಜೆ 5 ಗಂಟೆಗೆ ಇಸ್ಕಾನ್‌ನ ಶ್ರೀ ಚಂಚಲಪತಿ ದಾಸರು ಈ ಯೋಜನೆಯ ವೆಬ್‌ಸೈಟ್ ಉದ್ಘಾಟಿಸಲಿದ್ದಾರೆ ಎಂದು ಶ್ರೀಗಳು ಮಾಹಿತಿ ನೀಡಿದರು.



ಮಠದ ದಿವಾನ ಡಾ. ಉದಯ ಸರಳತ್ತಾಯ ಮಾತನಾಡಿ, ಈ ಜಪವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಮಾಡಬೇಕು. ಈ ಜಪ ಬರೆಯುವ ಪುಸ್ತಕವನ್ನು ಶ್ರೀಮಠದಿಂದಲೇ ಕೊಡುವ ಸಂಕಲ್ಪ ಮಾಡಿದ್ದೇವೆ. ಬೇಡಿಕೆಗೆ ಅನುಗುಣವಾಗಿ ಪುಸ್ತಕಗಳನ್ನು ಪ್ರಿಂಟ್ ಮಾಡಿಸಲಾಗುವುದು ಎಂದರು.

ಭಕ್ತರ ಅನುಕೂಲಕ್ಕೆ ಹೈಟೆಕ್ 'ಕ್ಯೂ ಸಿಸ್ಟಮ್'

ಮಠಕ್ಕೆ ಬರುವ ಭಕ್ತರು ಮಳೆ ಮತ್ತು ಬಿಸಿಲಿನಿಂದ ತೊಂದರೆ ಅನುಭವಿಸ ಬಾರದು ಎಂಬ ದೃಷ್ಟಿಯಿಂದ ಸುಸಜ್ಜಿತ ದರ್ಶನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಉದಯ ಸರಳತ್ತಾಯ ವಿವರಿಸಿದರು. ವಿಶೇಷ ದರ್ಶನಕ್ಕೆ ಪಾಸ್‌ಗಳ ವ್ಯವಸ್ಥೆಯನ್ನೂ ಮಾಡಲಾಗಿದ್ದು, ಪಾಸ್ ಒಂದಕ್ಕೆ 300 ರೂ. ನಿಗದಿ ಮಾಡಲಾಗಿದೆ. ನಿತ್ಯ ಬರುವ ಸ್ಥಳೀಯ ಭಕ್ತರು ಆ ಪಾಸ್ ಬಳಸಿ ನಿತ್ಯ ಕೃಷ್ಣನ ದರುಶನ ಮಾಡಬಹುದು ಎಂದರು. ವಾಹನ ನಿಲುಗಡೆ ಪ್ರದೇಶದಿಂದ ಕಟ್ಟಿಗೆ ರಥದ ಪಕ್ಕದ ಮೂಲಕ ಮಧ್ವ ಸರೋವರದ ಅಂಚಿನಲ್ಲಿ ಮೂರು ಸಾಲುಗಳ ಸುಭದ್ರ ಸರತಿ ಸಾಲನ್ನು ನಿರ್ಮಿಸಲಾಗಿದೆ. ಈ ಸಾಲಿಗೆ ಮಳೆ–ಬಿಸಿಲು ತಾಗದಂತೆ ಸುಸಜ್ಜಿತ ಮೇಲ್ಛಾವಣಿ ಅಳವಡಿಸಲಾಗಿದ್ದು, ಬಾಯಾರಿದ ಭಕ್ತರಿಗೆ ತಂಪು ಪಾನೀಯ, ಲಗೇಜ್ ಕೊಠಡಿ ಹಾಗೂ ಹಣ್ಣು–ಕಾಯಿ ಅರ್ಪಿಸಲು ಪ್ರತ್ಯೇಕ ಮಳಿಗೆಗಳನ್ನು ಏರ್ಪಡಿಸಲಾಗಿದೆ. ವಿಶೇಷ ದರ್ಶನ ಬಯಸುವವರಿಗಾಗಿ ಕನಕ ಗೋಪುರದ ಮೂಲಕ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದ್ದು, ಭಕ್ತರು ನವಗ್ರಹ ಕಿಂಡಿಯ ಮೂಲಕ ಸಮಾಧಾನದಿಂದ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಪರ್ಯಾಯ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ವಿವರಿಸಿದರು.

ಕಿರು ಸುದ್ದಿ

ದ್ವಿತೀಯ ಪಿ.ಯು.ಸಿ-2 ಪರೀಕ್ಷಾ ಹಾಜರಾತಿ

ಮಂಗಳೂರು: ಜಿಲ್ಲೆಯಲ್ಲಿ ಶುಕ್ರವಾರ ನಡೆದ ದ್ವಿತೀಯ ಪಿ.ಯು.ಸಿ-2 ರ ರಾಜ್ಯ ಶಾಸ್ತ್ರ ಪರೀಕ್ಷೆಗೆ 168 ವಿದ್ಯಾರ್ಥಿಗಳು ಹಾಜರಾಗಿದ್ದು, 62 ಮಂದಿ ಗೈರು ಹಾಜರಾಗಿದ್ದರು. ಇಲೆಕ್ಟ್ರಾನಿಕ್ಸ್ ಪರೀಕ್ಷೆಗೆ 10 ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದು, 5 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಕಂಪ್ಯೂಟರ್ ಸೈನ್ಸ್ ಪರೀಕ್ಷೆಗೆ 361 ವಿದ್ಯಾರ್ಥಿಗಳು ಹಾಜರಾಗಿದ್ದು 66 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ. ಗುರುವಾರ ನಡೆದ ದ್ವಿತೀಯ ಪಿ.ಯು.ಸಿ-2 ರ ಇತಿಹಾಸ ಪರೀಕ್ಷೆಗೆ 356 ವಿದ್ಯಾರ್ಥಿಗಳು ಹಾಜರಾಗಿದ್ದು, 90 ಮಂದಿ ಗೈರು ಹಾಜರಾಗಿದ್ದರು.

ಅಕ್ರಮ ಮರಳು ದಾಸ್ತಾನು ಪತ್ತೆ

ಉಪ್ಪಿನಂಗಡಿ: ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ತಂಗಡಿ ತಾಲೂಕು ಕರಾಯ ಗ್ರಾಮದ ಹುಣಸೇಕಟ್ಟೆ ಎಂಬಲ್ಲಿ ಕ್ರಮವಾಗಿ ದಾಸ್ತಾನು ಇರಿಸಲಾಗಿದ್ದ ಮರಳನ್ನು ಪತ್ತೆ ಹಚ್ಚಿ ಪ್ರಕರಣವನ್ನು ದಾಖಲಿಸಿರುವ ಬಗ್ಗೆ ವರದಿಯಾಗಿದೆ. ಉಪ್ಪಿನಂಗಡಿ ಪೊಲೀಸ್ ಠಾಣಾ ಪ್ರೊಬೆಷನರಿ ಐಪಿಎಸ್ ಅಽಕಾರಿ ಅನನ್ಯ ಶ್ರೀವಾಸ್ತವ್ ಗಸ್ತು ನಿರತರಾಗಿದ್ದ ವೇಳೆ ಅಕ್ರಮ ಮರಳು ಶೇಖರಣೆಯಾಗಿರುವುದನ್ನು ಕಂಡು ಪರಿಶೀಲಿಸಲಾಗಿ, ಹುಸೇನ್ ಎಂಬಾತ ಕುಪ್ಪೆಟ್ಟಿ ಹೊಳೆಯಿಂದ ಅಕ್ರಮವಾಗಿ ಸಂಗ್ರಹಿಸಿ ತಂದು ಶೇಖರಿಸಿಟ್ಟಿರುವುದಾಗಿದೆ ಎಂದು ತಿಳಿದು ಬಂದಿದೆ. ಈ ಸಂಬಂಧ ಅಕ್ರಮ ಮರಳನ್ನು ವಶಪಡಿಸಿಕೊಂಡು ಪ್ರಕರಣವನ್ನು ದಾಖಲಿಸಲಾಗಿದೆ.

ರಂಗ ಕಲಾವಿದನಿಗೆ ಬೆದರಿಕೆ: ತಿಮರೋಡಿ ವಿರುದ್ಧ ದೂರು ದಾಖಲು

ಪುತ್ತೂರು: ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ರಂಗ ಕಲಾವಿದ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸುಂದರ್ ರೈ ಮಂದಾರ ಹಾಗೂ ಅವರ ಕುಟುಂಬದ ವಿರುದ್ಧ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕಿ ಬೆದರಿಕೆ ಒಡ್ಡಿರುವ ಕುರಿತಂತೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ ಸತೀಶ್ ಕುಮಾರ್ ರೈ ಪಡುಮಲೆ, ಕುಡ್ಲ ರಾಂಪೇಜ್, ಪ್ರಸನ್ನ ರವಿ ಮತ್ತು ಇತರರ ವಿರುದ್ಧ ದೂರು ನೀಡಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿಗೆ ಸಂಬಂಧಿಸಿದ ಪ್ರಕರಣವೊಂದರ ದೂರುದಾರ ಸುಂದರ್ ರೈ ಮಂದಾರ ಅವರನ್ನು ಗುರಿಯಾಗಿಸಿ ಕಳೆದ ಏಪ್ರಿಲ್ ತಿಂಗಳಲ್ಲಿ ಆರೋಪಿಗಳು ಫೇಸ್‌ಬುಕ್‌ನಲ್ಲಿ ದೂರುದಾರರ ಬಗ್ಗೆ ಮತ್ತು ಅವರ ಕುಟುಂಬದ ಬಗ್ಗೆ ಕೆಟ್ಟದಾಗಿ, ಅಶ್ಲೀಲವಾಗಿ ಯಕ್ಷಗಾನ ಮಾದರಿ ಹಾಡುಗಳನ್ನು ರಚಿಸಿ ಪೋಸ್ಟ್‌ಗಳನ್ನು ಹಾಕಿದ್ದರು. ಈ ಪೋಸ್ಟ್‌ಗಳ ಮೂಲಕ ದೂರುದಾರರಾದ ಸುಂದರ್ ರೈ ಮಂದಾರ ಅವರಿಗೆ ಮಾನಸಿಕ ಕಿರುಕುಳ ನೀಡಿರುವುದಲ್ಲದೇ ಕಲಾವಿದರಾದ ಅವರ ಕಾರ್ಯಕ್ರಮವನ್ನು ಮುಂಬೈಯಲ್ಲಿ ನಡೆಯಲು ಬಿಡುವುದಿಲ್ಲ ಎಂಬ ಬೆದರಿಕೆಯನ್ನು ಒಡ್ಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ. ಈ ಕಿರುಕುಳದಿಂದಾಗಿ ದೂರುದಾರರ ದೈನಂದಿನ ಜೀವನ ಹಾಗೂ ವೃತ್ತಿ ಬದುಕಿಗೆ ತೊಂದರೆ ಉಂಟಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣದ ಬಗ್ಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತ ಅಡಿಯಲ್ಲಿ ಕೇಸು ದಾಖಲಿಸಿರುವ ಸಂಪ್ಯ ಗ್ರಾಮಾಂತರ ಠಾಣಾ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿಧನ ಸುದ್ದಿ

ಪುನೀತ್ ಕುಮಾರ್



ಬೆಳ್ತಂಗಡಿ: ಮುಂಡಾಜೆ ಗ್ರಾಮದ ಸೋಮಂತಡ್ಕದ ಅಗರಿ ರಸ್ತೆ ನಿವಾಸಿ ಪುನೀತ್ ಕುಮಾರ್ ಎಸ್. (35) ಹೃದಯಾಘಾತದಿಂದ ಮೇ 8ರಂದು ನಿಧನ ಹೊಂದಿದರು. ಬೆಳಗಿನ ಜಾವ ಅವರಿಗೆ ಮನೆಯಲ್ಲಿ ಎದೆ ನೋವು ಕಾಣಿಸಿಕೊಂಡಿದ್ದು ಬಳಿಕ ಬೆಳ್ತಂಗಡಿಯ ಸರಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸದೆ ನಿಧನರಾದರು. ಕಂಪೆನಿಯೊಂದರ ಉದ್ಯೋಗಿಯಾಗಿದ್ದ ಅವರು ಪ್ರಸ್ತುತ ಮನೆಯಿಂದಲೇ ಉದ್ಯೋಗ ನಿರ್ವಹಿಸುತ್ತಿದ್ದರು. ಅವರಿಗೆ ತಾಯಿ,ಪತ್ನಿ ಹಾಗೂ ಪುತ್ರ ಇದ್ದಾರೆ.

ರಾಧಮ್ಮ

ಮಂಜೇಶ್ವರ: ಖ್ಯಾತ ಯಕ್ಷಗಾನ ಕಲಾವಿದರಾಗಿದ್ದ ದಿ.ಕರವೋಳು ದೇರಣ್ಣ ಶೆಟ್ಟಿಯವರ ಪತ್ನಿ ರಾಧಮ್ಮ (89) ನಿಧನರಾದರು. ಅವರು ಕೃಷಿಕೆಯಾಗಿದ್ದರು. ಮೃತರು ಮಕ್ಕಳಾದ ಯಶೋಧಾ, ವಿಶಾಲಾಕ್ಷಿ, ಸುಮತಿ, ದಿನೇಶ್ ಶೆಟ್ಟಿ, ಪ್ರಕಾಶ್ ಶೆಟ್ಟಿ ಅವರನ್ನು ಅಗಲಿದ್ದಾರೆ.



ಆಂಧ್ರ ಪ್ರದೇಶದ ರಾಜ್ಯಪಾಲ ನ್ಯಾ. ಅಬ್ದುಲ್ ನಝೀರ್ ಅವರು ಶುಕ್ರವಾರ ದ.ಕ. ಜಿಲ್ಲಾಧಿಕಾರಿ ಕಚೇರಿ (ಪ್ರಜಾಸೌಧ)ಗೆ ಭೇಟಿ ನೀಡಿದರು. ವಿಧ ವಿಭಾಗಗಳಿಗೆ ಭೇಟಿ ನೀಡಿದ ಅವರು ಹೊಸ ಕಚೇರಿಯ ನಿರ್ಮಾಣ ಹಾಗೂ ಶೈಲಿಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಹೆಚ್.ವಿ. ದರ್ಶನ್, ಅಪರ ಜಿಲ್ಲಾಧಿಕಾರಿ ರಾಜು ಕೆ. ಉಪಸ್ಥಿತರಿದ್ದರು.

ಮೇ 16: ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರದಾನ

ಮಂಗಳೂರು: ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರದಾನ ಹಾಗೂ ಕನ್ನಡ ಸಂಸ್ಕೃತಿ ಉತ್ಸವ ಮೇ 16ರಂದು ಬೆಳಗ್ಗೆ 9ರಿಂದ ಕಾಸರಗೋಡು ಕುಡಾಲ್ ಮೇರ್ಕಳ ಸುಬ್ಬಯ್ಯ ಕಟ್ಟೆ ಅನುದಾನಿತ ಕಿ.ಪ್ರಾ. ಶಾಲಾ ವಠಾರದಲ್ಲಿ ನಡೆಯಲಿದೆ.

ಬೆಳಗ್ಗೆ 9 ಗಂಟೆಗೆ ಪೈವಳಿಕೆ ಗ್ರಾಪಂ ಅಧ್ಯಕ್ಷೆ ಬದರುನ್ನೀಸ ಸಲೀಂ ಮತ್ತು ಹಿರಿಯ ಸಮಾಜ ಸೇವಕ ಭಂಡಾರಗುತ್ತು ಸೀತಾರಾಮ ಶೆಟ್ಟಿ ಶೋಭಾಯಾತ್ರೆಗೆ ಚಾಲನೆ ನೀಡಲಿದ್ದಾರೆ. 11 ಗಂಟೆಗೆ ಸಭಾ ಕಾರ್ಯಕ್ರಮವನ್ನು ಕರ್ನಾಟಕ ಸಚಿವ ಎನ್.ಎಸ್. ಭೋಸರಾಜು ಉದ್ಘಾಟಿಸುವರು. ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಅಧ್ಯಕ್ಷತೆ ವಹಿಸುವರು. ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ದತ್ತನಿಧಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿ.ಎಂ. ಹನೀಫ್, ಕುರಿಯ ವಾಸುದೇವ ಎಂ. ಹೊಳ್ಳ, ಡಾ. ಯು.ಎಂ. ರವಿ, ಪುಂಡಲೀಕ ಭೀಮಪ್ಪ ಬಾಲೋಜಿ, ವಿಜಯಲಕ್ಷ್ಮಿ ಶಿಬರೂರು, ಎಚ್.ಇ.ರವಿ ಸೋಮವಾರಪೇಟೆ, ವಿಶ್ವನಾಥ ಬೆಳಗಲ್ ಮಠ ಕೊಪ್ಪಳ, ಪ್ರಕಾಶ್ ಸುವರ್ಣ ಕಟಪಾಡಿ, ದೇವೇಂದ್ರಪ್ಪ ಆವಂಟಿ ಕಲಬುರಗಿ, ಸತೀಶ್ ಇರಾ, ಸುಭಾಷ್ ಸಿರಿಯಾ, ಹರೀಶ್ ಮಾಂಬಾಡಿ, ನವೀನ್ ಡಿಸೋಜ ಕೊಡಗು, ಸಂಶುದ್ದೀನ್ ಎಣ್ಮೂರು, ಎ.ಆರ್. ಚಿದಂಬರ ಕೊರಟಗೆರೆ, ಕೆ.ಆರ್. ಮಂಜುನಾಥ ಹಾಸನ, ತೆಕ್ಕೆಕೆರೆ ಶಂಕರನಾರಾಯಣ ಭಟ್ಟ, ಸುಬ್ಬಣ್ಣ ಶೆಟ್ಟಿ ಕುಚಿಕ್ಕಾಡ್ ವಿವಿಧ ದತ್ತಿನಿಧಿಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದರು.

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಸಂಸ್ಥಾಪಕ ಪ್ರದೀಪ ಕುಮಾರ ಕಲ್ಕೂರ, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಧಾಕೃಷ್ಣ ಕೆ.ಉಳಿಯತ್ತಡ್ಕ, ಕಾಸರಗೋಡು ಜಿಲ್ಲಾಧ್ಯಕ್ಷ ಎ.ಆರ್.ಸುಬ್ಬಯ್ಯಕಟ್ಟೆ, ಸ್ವಾಗತ ಸಮಿತಿ ಪ್ರಧಾನ ಸಂಚಾಲಕ ಅಶೋಕ ಭಂಡಾರಿ ಕುಡಾಲ್, ಸಂಚಾಲಕ ರಾಘವ ಚೇರಾಲ್ ಉಪಸ್ಥಿತರಿದ್ದರು.

64 ಕೋ.ರೂ.ವೆಚ್ಚದ ಸುಲ್ತಾನ್ ಬತ್ತೇರಿ–ತಣ್ಣೀರುಬಾವಿ ಸೇತುವೆ | ಸಚಿವ ದಿನೇಶ್ ವಿಶ್ವಾಸ

ಸೆಪ್ಟೆಂಬರ್ ವೇಳೆಗೆ ಕಾಮಗಾರಿ ಪೂರ್ಣ

ಮಂಗಳೂರು: ಸುಮಾರು 64 ಕೋ.ರೂ. ವೆಚ್ಚದಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಸುಲ್ತಾನ್ ಬತ್ತೇರಿ ಬಳಿ ಫಲ್ಗುಣಿ ನದಿಯಿಂದ ತಣ್ಣೀರುಬಾವಿ ಸಂಪರ್ಕಿಸುವ ಅತ್ಯಾಧುನಿಕ ತಂತ್ರಜ್ಞಾನದ ಬೋ ಸ್ಟ್ರಿಂಗ್ ಸೇತುವೆ ಕಾಮಗಾರಿ ಸೆಪ್ಟಂಬರ್‌ಗೆ ಪೂರ್ಣಗೊಳ್ಳಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸುಲ್ತಾನ್ ಬತ್ತೇರಿಯಿಂದ ತಣ್ಣೀರುಬಾವಿಗೆ ಸಂಪರ್ಕ ಕಲ್ಪಿಸುವ ಸೇತುವೆಯ ಕಾಮಗಾರಿ ಶೀಘ್ರಗತಿಯಲ್ಲಿ ನಡೆಯುತ್ತಿದ್ದು, ಸ್ಥಳೀಯರು ನಗರ ಪ್ರವೇಶಕ್ಕೆ ಸುಲಭವಾಗಲಿದೆ. ಪ್ರಸ್ತುತ ಇಲ್ಲಿನ ಜನರು ಫೆರ್ರಿ ಮೂಲಕ ಅಥವಾ ಸುತ್ತು ಬಳಸಿ ಸುಮಾರು ಅರ್ಧ ಗಂಟೆ ವ್ಯಯಿಸಿ ನಗರ ಪ್ರದೇಶಕ್ಕೆ ಸಂಚಾರ ಮಾಡಬೇಕಾಗಿದೆ. ಸೇತುವೆ ನಿರ್ಮಾಣದಾವದರೆ ಪ್ರಯಾಣ ಸುಲಭವಾಗಲಿದೆ. ಅಲ್ಲದೆ ಬೆಂಗ್ರೆ ಪ್ರದೇಶದ ಸುಮಾರು 4000 ಕುಟುಂಬಗಳಿಗೆ ಪ್ರಯೋಜನವಾಗಲಿದೆ ಎಂದು ಅವರು ಹೇಳಿದರು.

ನೀರಿನ ಆಳ ಹಾಗೂ ಸೇತುವೆಯ ಎತ್ತರ ಇಲ್ಲಿ ಯಾವುದೇ ರೀತಿಯ ಸಹಜ ಚಟುವಟಿಕೆಗಳಿಗೆ ತೊಂದರೆ ಆಗದಂತೆ ರಾಷ್ಟ್ರೀಯ ಜಲಮಾರ್ಗ ಮಾರ್ಗಸೂಚಿಯಡಿ ಮಾಡಲಾಗುತ್ತಿದೆ. ಸೇತುವೆಯಲ್ಲಿ ಎಲ್ಲಾ ತೆರನಾದ ವಾಹನಗಳು ಓಡಾಟಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮಂಗಳೂರು ನಗರಕ್ಕೆ ಇದೊಂದು ಪ್ರಮುಖ ಹಾಗೂ ಮಹತ್ವದ ಯೋಜನೆ ಎಂದವರು ಹೇಳಿದರು.





ರಾಜ್ಯದ ಮೊದಲ ಬೋ ಸ್ಟ್ರಿಂಗ್ ಮಾದರಿ ಸೇತುವೆ

ಸುಲ್ತಾನ್ ಬತ್ತೇರಿಯಲ್ಲಿ ನಿರ್ಮಾಣವಾಗುತ್ತಿರುವ ಸೇತುವೆ ಕರ್ನಾಟಕದ ಮೊದಲ ಬೋ ಸ್ಟ್ರಿಂಗ್ ಮಾದರಿಯ ವಾಹನ ಸಂಚಾರ ಸೇತುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು 285 ಮೀಟರ್ ಉದ್ದವನ್ನು ಹೊಂದಿದೆ. 100 ಮೀಟರ್ ನಾವಿಗೇಶನ್ ಸ್ಪಾನ್ ಹಾಗೂ 10 ಮೀಟರ್ ವರ್ಟಿಕಲ್ ಕ್ಲಿಯರೆನ್ಸ್ ಒದಗಿಸಲು ಬೋಸ್ಟ್ರಿಂಗ್ ಗರ್ಡರ್ ಅಳವಡಿಸಲಾಗಿದೆ. ರಾಷ್ಟ್ರೀಯ ಜಲಮಾರ್ಗ 43ರ ನಿಯಮಾವಳಿ ಪ್ರಕಾರ ಸೇತುವೆ ಹೈ ಟೈಡ್ ಲೈನ್‌ನಿಂದ 10 ಮೀಟರ್ ಎತ್ತರದಲ್ಲಿರಲಿದೆ. ಪ್ರಸಕ್ತ ದೋಣಿ ಸೇವೆ ಲಭ್ಯವಿಲ್ಲದ ಸಂದರ್ಭ ಸ್ಥಳೀಯ ಬೆಂಗ್ರೆ ನಿವಾಸಿಗಳು ನಗರ ತಲುಪಲು ಕೂಳೂರು ಮೂಲಕ 30ರಿಂದ 35 ನಿಮಿಷ ಕ್ರಮಿಸಬೇಕಾಗಿದೆ. ಸೇತುವೆಯಿಂದ ಬೆಂಗ್ರೆ, ತಣ್ಣೀರುಬಾವಿ ಮತ್ತು ಮಂಗಳೂರು ನಡುವಿನ ಪ್ರಯಾಣ ಸಮಯ 8ರಿಂದ 10 ನಿಮಿಷಗಳಿಗೆ ಇಳಿಕೆಯಾಗಲಿದೆ.

ಪ್ರವಾಸೋದ್ಯಮಕ್ಕೂ ಒತ್ತು

ಬ್ಲೂ ಫ್ಲ್ಯಾಗ್ ಬೀಚ್‌ಗೂ ಈ ಸೇತುವೆ ಎರಡನೆ ಸಂಪರ್ಕ ರಸ್ತೆಯಾಗಿ ಬಳಕೆಯಾಗಲಿದೆ. ಇದರಿಂದ ಪ್ರವಾಸೋದ್ಯಮಕ್ಕೂ ಒತ್ತು ನೀಡಿದಂತಾಗುತ್ತದೆ. ಸ್ಥಳೀಯ ಜನರ ಸಂಚಾರದ ಜತೆಗೆ ವಾಣಿಜ್ಯ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳಿಗೂ ಈ ಸೇತುವೆಯಿಂದ ಸಹಕಾರವಾಗಲಿದೆ ಎಂದು ಸಚಿವರು ಹೇಳಿದರು.

ಈ ಸಂದರ್ಭ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಪಾಲಿಕೆ ಮಾಜಿ ಸದಸ್ಯರಾದ ವಿನಯರಾಜ್, ಅನಿಲ್ ಕುಮಾರ್, ಸಂತೋಷ್ ಶೆಟ್ಟಿ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಸ್ಮಾರ್ಟ್ ಸಿಟಿ ಮಂಗಳೂರು ವ್ಯವಸ್ಥಾಪಕ ನಿರ್ದೇಶಕ ಡಾ.ಸಂತೋಷ್ ಕುಮಾರ್, ಸ್ಮಾರ್ಟ್ ಸಿಟಿ ಜನರಲ್ ಮ್ಯಾನೇಜರ್ ಅರುಣ್ ಪ್ರಭಾ ಉಪಸ್ಥಿತರಿದ್ದರು.

ಶೃಂಗೇರಿ ಕಿರಿಯ ಮಠಾಧೀಶರ ಕೇರಳ ಭೇಟಿ ಗುರುಗಳಿಗೆ ರಾಜಮರ್ಯಾದೆ ಗೌರವ

ಪೆರ್ಲ: ಜಗದ್ಗುರು ಶ್ರೀ ಶಂಕರಾಚಾರ್ಯ ಶೃಂಗೇರಿ ಶ್ರೀ ಶಾರದಾ ಪೀಠದ ಕಿರಿಯ ಮಠಾಧೀಶ ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳವರು ಏಳು ದಿನಗಳ ಕೇರಳ ಭೇಟಿಗಾಗಿ ಗುರುವಾರ ಸಂಜೆ ಪುತ್ತೂರು ಪಾಣಾಜೆ ಮೂಲಕ ಕೇರಳ – ಕರ್ನಾಟಕ ಗಡಿ ಪ್ರದೇಶವಾದ ಸ್ವರ್ಗಕ್ಕೆ ಆಗಮಿಸಿದಾಗ ಕೇರಳ ರಾಜ್ಯ ಪೊಲೀಸ್ ವರಿಷ್ಠಾಧಿಕಾರಿ, ಡಿಜಿಪಿ ರಾವಡ ಆಜಾದ್ ಚಂದ್ರಶೇಖರ್ ನೇತೃತ್ವದಲ್ಲಿ ರಾಜ್ಯ ಸರಕಾರದ ಪರವಾಗಿ ಗಾರ್ಡ್ ಆಫ್ ಆನರ್ ಮೂಲಕ ಶ್ರೀ ಗುರುಗಳಿಗೆ ರಾಜಮರ್ಯಾದೆ ನೀಡಿ ಗೌರವಿಸಲಾಯಿತು. ಈ ಸಂದರ್ಭ ಡಿಐಜಿ ಯತೀಶ್ಚಂದ್ರ ಐಪಿಎಸ್ ಸಹಿತ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳು ಸ್ವರ್ಗ ಗಡಿ ತಲುಪಿದ್ದರು.

ಪ್ರಮುಖರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್, ಪಡ್ರೆ ಶ್ರೀ ಜಟಾಧಾರಿ ಮೂಲಸ್ಥಾನದ ಪ್ರಧಾನ ಅರ್ಚಕ ಬೆಲ್ಲ ಮಾಧವ ಭಟ್, ಶ್ರೀಹರಿ ಭಟ್ ಸಜಂಗದ್ದೆ, ಹೃಷಿಕೇಶ ವಿ.ಎಸ್., ವಿವೇಕ ಬಿ.ಕೆ. ಮತ್ತಿತರರ ನೇತೃತ್ವದಲ್ಲಿ ಜಗದ್ಗುರುಗಳಿಗೆ ತುಳಸಿ ಮಾಲೆ ಹಾಕಿ ಸ್ವಾಗತಿಸಲಾಯಿತು. ಸ್ವಾಮೀಜಿಗಳು ಡಿಜಿಪಿ ಅವರಿಗೆ ಶಾಲು ಹಾಕಿ ಮಂತ್ರಾಕ್ಷತೆ ನೀಡಿದರು.



ಕಿರಿಯ ಮಠಾಧೀಶರು ಕೋಝಿಕ್ಕೋಡ್‌ನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕೇರಳಕ್ಕೆ ಆಗಮಿಸಿದ್ದಾರೆ. ಮೇ 10ರಿಂದ 13ರ ವರೆಗೆ ಅವರು ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಳ ದಲ್ಲಿ ಮೊಕ್ಕಾಂ ಹೂಡಲಿದ್ದಾರೆ. ಅಲ್ಲದೆ ಚಟ್ಟಂಚಾಲ್ ಬಳಿಯ ತೈರೆ ಸಹಿತ ದೇವಾಲಯಗಳಿಗೆ ಭೇಟಿ ನೀಡಲಿದ್ದಾರೆ. ಮೇ 12ರಂದು ಸಂಜೆ 4ಕ್ಕೆ ಅವರು ಪೆರ್ಲ ಸಮೀಪದ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ.

ಡಿಜಿಪಿ ರಾವಡ ಆಜಾದ್ ಚಂದ್ರಶೇಖರ್ ಅವರು ಕಾಸರಗೋಡು ಜಿಲ್ಲಾ ಪ್ರಯಾಣದ ನಡುವೆ ಕಣ್ಣೂರು ಜಿಲ್ಲೆಯ ತಳಿಪರಂಬ ಶ್ರೀ ರಾಜರಾಜೇಶ್ವರ ದೇವಸ್ಥಾನ, ಪರಶ್ಶಿನಿಕಡವು ಶ್ರೀ ಮುತ್ತಪ್ಪನ್ ದೇವಾಲಯ, ಮಡಪ್ಪುರ ಶ್ರೀಕೃಷ್ಣ ದೇವಸ್ಥಾನ ಮತ್ತು ಮಾಡಾಯಿ ದೇವಸ್ಥಾನಕ್ಕೆ ಭೇಟಿ ನೀಡಿ ಶ್ರೀ ದೇವರ ದರ್ಶನ ಪಡೆದರು.

ಶೃಂಗೇರಿ ಜಗದ್ಗುರುಗಳು ತಿರುವಿದಾಂಕೂರು ಸಾಮ್ರಾಜ್ಯದ ರಾಜಗುರುಗಳಾಗಿದ್ದರಿಂದ ಶೃಂಗೇರಿ ಮಠದ ಸ್ವಾಮೀಜಿಗಳು ಕೇರಳಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರನ್ನು ರಾಜ್ಯದ ಅತಿಥಿಯಾಗಿ ಪರಿಗಣಿಸಿ ಕೇರಳದ ಪೊಲೀಸರು ಅವರಿಗೆ ಗಾರ್ಡ್ ಆಫ್ ಆನರ್ ನೀಡುತ್ತಾರೆ.

ಕೆ.ವಿ.ಜಿ. ಆಯುರ್ವೇದ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಪ್ರಥಮ ವರ್ಷದ ಪದವಿ ಫಲಿತಾಂಶ ಪ್ರಕಟ



ಸುಳ್ಯ: ರಾಜೀವ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯ 2026ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ನಡೆಸಿದ ಅಂತಿಮ ಪದವಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿದ್ದು ಕೆ.ವಿ.ಜಿ. ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಥಮ ವರ್ಷದ ಬಿ.ಎ.ಎಂ.ಎಸ್. ಪದವಿ ವಿಭಾಗದಲ್ಲಿ 98 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 67 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 23 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತೀರ್ಣರಾಗಿದ್ದಾರೆ.

ತನ್ಮಯಿ ಡಿ., ಸ್ವಾತಿ ಪಿ., ಅನನ್ಯಾ ಕೆ., ಜೈಸ್ವರ್ ನಿಖಿಲ್ ದೀನನಾಥ್, ಚೌಧರಿ ಯೊಗರಾಜ್ ಅನಿಲ್, ಪೂರ್ಣಚಂದು ಸಿ., ಕೆ. ಸಹನ ಭಟ್, ಮಾನಸ ಕೆ., ವರ್ಷಿಣಿ ವಿ.ಕೆ., ಎ. ಸಂಜನ, ಸೌರಭ್ ಆರ್., ಸಂಜೀತ್ ಗಣೇಶ್ ಹೆಗ್ಡೆ, ಸೊನಾಲಿ ಆರ್, ಕಸ್ತೂರಿ ಪದ್ಮಾಕರ್ ಪ್ರಭುನೆ, ಎಚ್. ದ್ರಾಕ್ಷಾಯನಿ, ಕಾಂಬ್ಲೆ ಶಾಂತನು ನಿತೇಶ್, ನೀಲಿಮಾ ಎ., ಮೋಕ್ಷಿತಾ ಕೆ., ಪ್ರೇರಣಾ ಎಸ್.ಎಂ., ವಿಶ್ರುತಾ ಎಸ್., ಭಗವತ್ ಜಾನ್ಹವಿ. ಪ್ರಶಾಂತ್, ಜಾಧವ್ ಆರ್ವ್ ಶಂಕರ್, ಮಾಫ್ಕರ್ ಮೆಹ್ವಿಷ್ ಇಮ್ತಿಯಾಜ್, ಸೌಜನ್ಯಾ ಎಸ್., ಬವ್ ಡಾನೆ, ಅಲ್ವಿನಿ ಅಶೋಕ್, ಸ್ನೇಹಾ ವೈಭವ್ ಬಾಗುಲ್, ಸುರಕ್ಷಾ ಎಂ.ಆರ್., ಓಮನಾ ಎಚ್.ಎಸ್., ಪಾಯಲ್ ಪ್ರಧಾನಿ, ಎ.ಎಂ. ಮೇಘಾ, ಧ್ಯಾನ್ ವಿಜಯ್, ಅಲ್ಫಿಫಾ, ಚಂದನಾ ಎಲ್., ಅಲಿ ಅಕ್ಬರ್ ಖಾನ್, ಶ್ರೇಯಾ ಜೋಗಿ, ಅರ್ಚನಾ ರಾಮ್, ಸಹನಾ ಕೆ.ಎನ್., ಹೆಮ್ ಚಂದ್ ಜಿ., ದೀಕ್ಷಿತಾ ಸಿ.ಕೆ., ವರ್ಷಾ ಬಡಿಗೇರ್, ಪಾಟೀಲ್ ಶ್ರುತಿಕಾ ಚಂದ್ರಕಾಂತ್, ದಿಶಾಜ್ಯೋತಿ ಎ.ಬಿ., ಕಾಂಬ್ಲೆ ಶುಭ್ರಾ ಮಹೇಶ್, ಸೌಜನ್ಯಾ ಬಬಲೇಶ್ವರ್, ವಿಭೂತೆ ಮಂಥನ್ ಮಧುಕರ್, ದರ್ಶನ್ ಮೇತಿ, ವೀರೇಶ್, ಧೀರಜ್ ಬಿ.ಆರ್., ಧೃತಿ ಪಿ. ಪಿ, ಕೃತಿಕಾ ಬಿ.ಯು., ಪರ್ವೆಜ್ ಫಕರ್ಸಾಬ್, ದೀಕ್ಷಾ ಎಂ.ಪಿ., ನಂದು ಮನೋಜ್ ಕುಮಾರ್, ಅಜಯ್ ಜಿ.ಎಂ., ಕೀರ್ತನಾ ಎಸ್.ಎನ್., ಪಿಂಗಾಲೆ ಟ್ವಿಂಕಲ್ ವಿಕಾಸ್, ಅದ್ವಿಕಾ ಕೆ.ಆರ್., ನಿಕಂ ಸೃಷ್ಟಿ ಸಂತೋಷ್, ದೀಕ್ಷಾ ವಿ., ಧುಲೇಕಾರ್ ಪಾಂಡುರಂಗ ಸಂತೋಷ್, ತೇಜಸ್ ಟಿ.ಆರ್., ಶ್ರೀಲಕ್ಷ್ಮೀ ಭಟ್, ಬಸವರಾಜ, ಮಾನ್ಯ ಅಂಬೆಕಲ್ಲು, ಮೋಂಡಲ್ ಸಾಗರ್ ನಿತೀಶ್, ಆಕಾಶ್ ದೀಪ್ ಕಲಿತಾ, ಸಾಹೇಬಗೌಡ್ ಪಾಟೀಲ್ ಅವರು ವಿಶಿಷ್ಟ ಶ್ರೇಣಿಯಲ್ಲಿ ಉತೀರ್ಣ ರಾಗಿದ್ದಾರೆ.

ರೈತ ಕುಡ್ಲ ಪ್ರತಿಷ್ಠಾನ ನೇತೃತ್ವದಲ್ಲಿ ಸಿರಿ ತೋಟಗಾರಿಕಾ ಸಂಘ ಮಂಗಳೂರು, ಸಾವಯವ ಕೃಷಿಕ ಗ್ರಾಹಕ ಬಳಗ ಸಹಯೋಗದಲ್ಲಿ ಗೇರು-ಮಾವು-ಹಲಸು ಮೇಳ

ಗೇರು ಹಣ್ಣಿನ ಜ್ಯೂಸ್ ಮುಂದೆ ಎನರ್ಜಿ ಡ್ರಿಂಕ್ ಆಗಲಿದೆ : ಶ್ರೀಪಡ್ರೆ

ಮಂಗಳೂರು: ದೊಡ್ಡ ಬಂಡವಾಳ ಬೇಡದ ಗೇರು ಹಣ್ಣಿನ ಜ್ಯೂಸ್ ಸೇರಿದಂತೆ ಇದರ ಮೌಲ್ಯವರ್ಧಿತ ವಸ್ತುಗಳಿಗೆ ಬಹಳ ದೊಡ್ಡ ಅವಕಾಶವಿದೆ. ಗೇರು ಹಣ್ಣಿನ ಮೌಲವರ್ಧನೆಯಲ್ಲಿ ಅದರೊಳಗೆ ಇರುವ ಒಗರೇ ಬಹಳ ದೊಡ್ಡ ಶತ್ರುವಾಗಿದ್ದು, ಮುಂದಿನ ದಿನಗಳಲ್ಲಿ ಎನರ್ಜಿ ಡ್ರಿಂಕ್ ಆಗಿ ಜನರು ಬಳಸುವ ದಿನಗಳು ದೂರವಿಲ್ಲ ಎಂದು ಗೇರು ಹಣ್ಣು ಮೌಲ್ಯವರ್ಧನೆಯ ರೂವಾರಿ ಶ್ರೀ ಪಡ್ರೆ ಹೇಳಿದರು.

ರೈತ ಕುಡ್ಲ ಪ್ರತಿಷ್ಠಾನ ನೇತೃತ್ವದಲ್ಲಿ ಸಿರಿ ತೋಟಗಾರಿಕಾ ಸಂಘ ಮಂಗಳೂರು ಮತ್ತು ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರು ಸಹಯೋಗದಲ್ಲಿ ನಗರದ ಕದ್ರಿ ಪಾರ್ಕ್‌ನಲ್ಲಿ ಮೂರು ದಿನಗಳ ಕಾಲ ನಡೆಯಲಿರುವ ಗೇರು, ಮಾವು, ಹಲಸು ಮೇಳವನ್ನು ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು.

ಗೇರು, ಹಲಸನ್ನು ನಿರ್ಲಕ್ಷಿತ ಹಣ್ಣುಗಳ ಗುಂಪಿನಲ್ಲಿ ಸೇರಿಕೊಂಡಿರುವುದರಿಂದ ಅದರ ಗ್ಲಾಮರ್ ಕಡಿಮೆಯಾಗಿದೆ. ಆದರೆ ಇಂತಹ ನಿರ್ಲಕ್ಷಿತ ವಸ್ತುಗಳು ಬಹಳಷ್ಟು ಇದ್ದು, ಅವುಗಳನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳುವ ಮನೋಭಾವ ನಮ್ಮಲ್ಲಿ ಇರುವಾಗ ಗೇರು ಹಣ್ಣಿಗೂ ಮೌಲ್ಯವರ್ಧನೆಗೆ ಹೆಚ್ಚಿನ ಅವಕಾಶವಿದ್ದು, ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ಇದರ ಮೌಲ್ಯ ಮತ್ತಷ್ಟು ಹೆಚ್ಚಾಗುವ ದಿನಗಳು ದೂರವಿಲ್ಲ ಎಂದರು.

ಗೇರು ಹಣ್ಣಿನ ಜ್ಯೂಸ್ ಒಂದು ಎನರ್ಜಿ ಡ್ರಿಂಕ್ ಆಗಿ ಬದಲಾಗುವ ದಿನಗಳು ದೂರವಿಲ್ಲ. ಇದರಲ್ಲಿರುವ ಪೋಷಕಾಂಶಗಳು ಬಹಳಷ್ಟಿದೆ. ಆ್ಯಂಟಿ ಅಕ್ಸಿಡೆಂಟ್ ಅಂಶಗಳು ಕೂಡ ಹೇರಳವಾಗಿದೆ. ವಿಟಮಿನ್ ಸೇರಿದಂತೆ ಹತ್ತಾರು ಉತ್ತಮ ವಿಚಾರಗಳು ಇದರಲ್ಲಿದೆ. ಮಲಬದ್ಧತೆಗಂತೂ ಇದೊಂದು ಬಹಳ ಉತ್ತಮ ಔಷಧವಾಗಿದೆ. ಆಯುರ್ವೇದ ಔಷಧಗಳಲ್ಲಿಯೂ ಇದರ ಬಳಕೆ ನಡೆಯುತ್ತಿದೆ ಎಂದರು.

ಸಿರಿತೋಟಗಾರಿಕಾ ಸಂಘದ ಖಜಾಂಚಿ ಹರೀಶ್ಚಂದ್ರ ಅಡ್ಕ, ಸಾವಯವ ಕೃಷಿಕ ಗ್ರಾಹಕ ಬಳಗದ ಕಾರ್ಯದರ್ಶಿ ರತ್ನಾಕರ ಕುಳಾಯಿ, ಕದ್ರಿ ಉದ್ಯಾನವನ ಅಭಿವೃದ್ಧಿ ಸಮಿತಿ ಕಾರ್ಯಕಾರಿ ಸದಸ್ಯರಾದ ಜಗನ್ನಾಥ್ ಗಾಂಭೀರ್, ಜಿ.ಕೆ. ಭಟ್, ರಾಮ ಮೊಗರೋಡಿ, ರೈತ ಕುಡ್ಲ ಪ್ರತಿಷ್ಠಾನದ ಕಾರ್ಯದರ್ಶಿ ಲತೀಶ್ ಮಳಲಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್‌ರಾಜ್ ಸೊರಕೆ ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.



ಎರಡೂವರೆ ಲಕ್ಷ ಬೆಲೆ ಇರುವ ಮಿಯಾಜಾಕಿ ಮಾವು

ಜಪಾನ್ ದೇಶದಲ್ಲಿ ಕೆಜಿಗೆ ಎರಡೂವರೆ ಲಕ್ಷ ಬೆಲೆ ಇರುವ ಮಿಯಾಜಾಕಿ ಮಾವು ಕೂಡ ಮೇಳದಲ್ಲಿ ಎಲ್ಲರ ಗಮನ ಸೆಳೆಯುತ್ತಿದೆ. ಅಂಕೋಲದ ಮಾವು ಬೆಳೆಗಾರ ಗಣೇಶ ಗುನಗಾ ಅವರು ಮಿಯಾಜಾಕಿ ಮಾವಿನ ಒಂದು ತುಂಡಿಗೆ ಎರಡೂವರೆ ಸಾವಿರ ರೂ.ನಂತೆ ಮಾರಾಟ ಮಾಡುತ್ತಿದ್ದಾರೆ. ಕೆಜಿವೊಂದರಲ್ಲಿ 4 ತೂಗುವ ಈ ಮಾವಿಗೆ ಇಲ್ಲಿನ ಬೆಲೆ 13 ಸಾವಿರ. ಇದರ ಜತೆಗೆ ಉತ್ತರ ಕನ್ನಡ ಭಾಗದ ಕರಿ ಇಶಾಡ್ ಮಾವು ಕೂಡ ಮಾರಾಟ ಮಾಡಲಾಗುತ್ತಿದ್ದು, ಕೆಜಿಗೆ 300 ರೂ. ದರ ನಿಗದಿ ಮಾಡಲಾಗಿದೆ.

ಹಲಸಿನ ಹಣ್ಣುಗಳ ಮಾರಾಟ

ಗೇರು ಮಾವು ಹಲಸು ಮೇಳದಲ್ಲಿ ಈ ಮೂರು ಹಣ್ಣುಗಳು ಹಾಗೂ ಅವುಗಳ ಮೌಲ್ಯವರ್ಧೀತ ಉತ್ಪನ್ನಗಳು ಮಾರಾಟಕ್ಕಿವೆ. ಸಕ್ಕರೆ, ನೀರು ಬೆರೆಸದ ತಾಜಾ ಗೇರು ಹಣ್ಣಿನ ಜ್ಯೂಸ್, ಗೇರು ಹಣ್ಣಿನ ಬೆಲ್ಲ, ಐಸ್ ಕ್ರೀಂ, ಉಪ್ಪಿನ ಕಾಯಿ, ಬರ್ಫಿ, ಕ್ಯಾಶ್ಯು ಆಪಲ್ ಮಫಿನ್ಸ್, ಹಲ್ವ, ಶೀರಾ, ಪಾಯಸ, ಗೇರು ಬೀಜದ ಮೊಳಕೆ, ಬಿಸ್ಕತ್ತು ಸಹಿತ ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಜತೆಗೆ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ನಗರದಲ್ಲೂ ಬೆಳೆಸಬಹುದಾದ ಗೇರು ಸಸಿಗಳ ಮಾರಾಟ, 60ಕ್ಕೂ ಅಧಿಕ ಬಗೆಯ ತಳಿಗಳ ಮಾವು ಪ್ರದರ್ಶನ ಮತ್ತು ಮಾರಾಟ ಜತೆಗೆ ಹಲಸಿನ ಹಣ್ಣುಗಳ ಮಾರಾಟವಿದೆ.

ರೈತರು ಗೇರು ಕೃಷಿಗೆ ಮುಂದಾಗಬೇಕು

ಬ್ರೆಜಿಲ್ ದೇಶದಲ್ಲಿ ಗೇರು ಹಣ್ಣನ್ನು ಶೇ.20ರಿಂದ 25ರಷ್ಟು ಪ್ರಮಾಣ ಕಮರ್ಷಿಯಲ್ ರೀತಿಯಲ್ಲಿ ಬಳಸಿಕೊಳ್ಳ ಲಾಗುತ್ತದೆ. ಅದರಿಂದ ಒಳ್ಳೆಯ ಆದಾಯ ವನ್ನು ಅಲ್ಲಿನ ಗೇರು ಬೆಳೆಗಾರರು ಪಡೆದು ಕೊಳ್ಳುತ್ತಿದ್ದಾರೆ. ಸೂಪರ್ ಮಾರ್ಕೆಟ್‌ನಲ್ಲಿ ಈ ಹಣ್ಣುಗಳಿಗೆ ಒಳ್ಳೆಯ ಬೇಡಿಕೆಯಿದೆ. ಅದರ ಜತೆಗೆ ಅದರ ಅಲ್ಕೋಹಾಲಿಕ್ ಅಂಶವನ್ನು ತೆಗೆದುಹಾಕಿ 15 ದೇಶಗಳಿಗೆ ಫೆನ್ನಿಯನ್ನು ರಫ್ತು ಮಾಡಲಾಗುತ್ತಿದೆ. ಅಮೆರಿಕ್ಕೆ ಹೆಚ್ಚು ರಫ್ತು ಇಲ್ಲಿಂದ ನಡೆಯುತ್ತದೆ. ಈ ವಿಚಾರ ದಲ್ಲಿ ಭಾರತದಲ್ಲಿ ಇಂತಹ ಕ್ರಾಂತಿಯೇ ಆಗಿಲ್ಲ. ತ್ರಿಶೂರು ಹಾಗೂ ಪುತ್ತೂರಿನ ಸಿಪಿಸಿಆರ್‌ಐನಲ್ಲಿ ನಡೆದ ಸಂಶೋಧನೆಗಳು ಬರೀ ಕಪಾಟಿನಲ್ಲಿ ಉಳಿದಿವೆ. ಉದ್ಯಮಿಗಳು ಅದನ್ನು ಮುಂದು ವರಿಸಬೇಕಿದೆ. ಮತ್ತೊಂದೆಡೆ ರೈತರು ಗೇರು ಕೃಷಿಗೆ ಮುಂದಾಗಬೇಕು ಎಂದು ಶ್ರೀ ಪಡ್ರೆ ಹೇಳಿದರು.



ಎನ್ . ಬ್ಯಂಗೀಶ್

ನಾಡಿನ ರೈತರ ಬೆನ್ನೆಲುಬನ್ನು ಭದ್ರ ಪಡಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಅವರದು. ಸಹಕಾರಿ ಕೃಷಿ ಸಾಲದ ಮೇಲಿನ ಬಡ್ಡಿಯ ಮನ್ನಾ ಮೂಲಕ ರೈತರಿಗೆ ನೆರವಾದ ಬಿಎಸ್‌ವೈ ಕೃಷಿ ಮತ್ತು ನೀರಾವರಿ ಕ್ಷೇತ್ರಗಳ ವಿಸ್ತರಣೆ ಮತ್ತು ಬಲಪಡಿಸುವಿಕೆಗೆ ನೀಡಿರುವ ಕೊಡುಗೆ ದಾಖಲಾರ್ಹ. ನಿಜವಾದ ಅರ್ಥದಲ್ಲಿ ಅವರು ಮಣ್ಣಿನ ಮಗ ಎಂಬುದನ್ನು ನಾಡು ಒಪ್ಪಿದೆ.

ಅರ್ಧಶತಮಾನದ ಅವಿರತ ಸೇವೆ



ಅರ್ಧಶತಮಾನದ ಅವಿರತ ಸೇವೆ. ಜನಮಾನಸದಲ್ಲಿ ಅವಿಚ್ಛಿನ್ನ ಸ್ಥಾನ. ಅದರ ಫಲಶ್ರುತಿಯೇ ಇಂದು ಬಿಎಸ್‌ವೈಗೆ ಅಭಿಮಾನೋತ್ಸವದ ಮೂಲಕ ಅಭಿನಂದನೆ.

ಬಿಎಸ್‌ವೈ(ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ) ಸಾರ್ವಜನಿಕ ಜೀವನ ಪ್ರವೇಶಿಸಿ 5 ದಶಕಗಳಾದ ಸಂದರ್ಭದಲ್ಲಿ ಅವರ ಅಭಿಮಾನಿಗಳಿಂದ ಸ್ಮರಣೀಯ ಗೌರವಾರ್ಪಣೆ ಇಂದು(09.05.2026) ಗಂಡು ಮೆಟ್ಟಿದ ನಾಡುಚಿತ್ರದುರ್ಗದಲ್ಲಿ ನಡೆಯಲಿದೆ. ನಾಡಿನಾದ್ಯಂತ ಬಂದಿರುವ ಸುಮಾರು 10 ಲಕ್ಷ ಅಭಿಮಾನಿಗಳು ಒಂದೆಡೆ ಸೇರುವ ಮತ್ತು ತಮ್ಮ ನಾಯಕನ ಗುಣಗಾನ ಮಾಡುವ ಸಾರ್ಥಕ್ಯದ ಸಂಧರ್ಭವೂ ಇದು ಹೌದು. ಸೇವೆಯನ್ನೇ ಏಕೈಕ ಕೈಂಕರ್ಯವನ್ನಾಗಿಸಿಕೊಂಡಿರುವ ನಾಯಕನಿಗೆ ಸಾರ್ವಜನಿಕರು ಗೌರವಿಸುವ ಅಪರೂಪದ ಪರಿ ಇದು. ಕನ್ನಡಿಗರು ವಿಶಾಲ ಹೃದಯಿಗಳು ಎಂಬುದಕ್ಕೆ ಇದು ಮತ್ತೊಂದು ಸಾಕ್ಷಿ.

ದಕ್ಷಿಣ ಭಾರತದ ಹೆಬ್ಬಾಗಿಲನ್ನು ತಮ್ಮ ಪಕ್ಷಕ್ಕೆ ತೆರೆದ ಅಪರೂಪದ ಸಾಹಸಿ ಬಿಎಸ್‌ವೈ. ಇದು ಸಾಹಸವೂ ಹೌದು ಮತ್ತು ತಂತ್ರಗಾರಿಕೆಯೂ ಹೌದು. ಈ ಸಾಹಸ ಮತ್ತು ತಂತ್ರಗಾರಿಕೆ ಫಲಿಸದೆ ಹೋಗಿದ್ದರೆ ಬಿಜೆಪಿ ಇಂದಿಗೂ ವಿಂಧ್ಯ ಪರ್ವತದ ಆಚೆಗೇ ಸೀಮಿತವಾಗಿ ಉಳಿಯುತ್ತಿತ್ತು. 4 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಿಎಸ್‌ವೈ ಅವರಿಗೆ ತಮ್ಮ ಧ್ಯೇಯೋದ್ದೇಶಗಳನ್ನು ಈಡೇರಿಸಲು ಪೂರ್ಣ ಅವಧಿ ಅವಕಾಶ ದೊರೆಯಲೇ ಇಲ್ಲ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ತಮ್ಮ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದಾರೆ. ನಾಡಿನ ರೈತರ ಬೆನ್ನೆಲುಬನ್ನು ಭದ್ರ ಪಡಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಅವರದು. ಸಹಕಾರಿ ಕೃಷಿ ಸಾಲದ ಮೇಲಿನ ಬಡ್ಡಿಯ ಮನ್ನಾ ಮೂಲಕ ರೈತರಿಗೆ ನೆರವಾದ ಬಿಎಸ್‌ವೈ ಕೃಷಿ ಮತ್ತು ನೀರಾವರಿ ಕ್ಷೇತ್ರಗಳ ವಿಸ್ತರಣೆ ಮತ್ತು ಬಲಪಡಿಸುವಿಕೆಗೆ ನೀಡಿರುವ ಕೊಡುಗೆ ದಾಖಲಾರ್ಹ. ನಿಜವಾದ ಅರ್ಥದಲ್ಲಿ ಅವರು ಮಣ್ಣಿನ ಮಗ ಎಂಬುದನ್ನು ನಾಡು ಒಪ್ಪಿದೆ. ಸಮಕಾಲೀನ ರಾಜಕೀಯ ಸನ್ನಿವೇಶದಲ್ಲಿ ರಾಜ್ಯ ಕಂಡ ಮೂವರು ಸಮೂಹ ನಾಯಕರಲ್ಲಿ(ಮಾಸ್ ಲೀಡರ್) ಬಿಎಸ್‌ವೈ ಒಬ್ಬರು. ಇನ್ನಿಬ್ಬರೆಂದರೆ ಎಚ್.ಡಿ. ದೇವೇ ಗೌಡರು ಮತ್ತು ಸಿದ್ದರಾಮಯ್ಯ. ಈ ನಾಯಕರು ಮಾತ್ರ ತಾವು ರಾಜಕೀಯವಾಗಿ ಯಾವ ನಡೆ ಅನುಸರಿಸುತ್ತಾರೋ ಅದೇ ಮಾರ್ಗದಲ್ಲಿ ತಮ್ಮ ಅನುಯಾಯಿಗಳನ್ನು ಸೆಳೆಯುವ ಸಾಮರ್ಥ್ಯ ಏರು ವವರು. ನಾಡಿನ ಗಣ ಸಂಖ್ಯೆಯಲ್ಲಿ ತಮ್ಮ ಈ 3 ನಾಯಕರು ಕಿತ್ತೂರು ಕರ್ನಾಟಕ ಕಾರಣ ಎಲ್ಲಾ ಅಸಮತೋಲನ ಡಾ. ಡಿ.ಎಂ. ಸ'ವಂತಿಯಂ ಈಸಮಿತಿಎಸ್ ವ'ಂತ'ಂ ಎಸ್. ನೀಯಮತ ದಾರರ ಪೈಕಿ ಅಧಿಕ ರಾಜ ಕೀಯ ನಡೆಗೆ ಹೊಂದಿಸುವಲ್ಲಿ ಸಿದ್ಧ ಹಸ್ತರು. ಕಲ್ಯಾಣ ಕರ್ನಾಟಕ ಮತ್ತು ದಲ್ಲಿ ಬಿಎಸ್‌ವೈ ಮನೆ ಮನೆ ಹೆಸರು. ವಿರೋಧಗಳನ್ನು ಲೆಕ್ಕಿಸದೆ ಪ್ರಾದೇಶಿಕ ನಿವಾರಣೆಗೆ ಅವರು ಕೈಗೊಂಡ ನಂಜುಂಡಪ್ಪ ಉನ್ನತಾಧಿಕಾರ ಶಿಫಾರಸ್ಸುಗಳ ಅನುಷ್ಠಾನ ಮಾಡಿದ್ದು. ಎಂ ಕೃಷ್ಣ ಸರ್ಕಾರದ ಕೂಸು. ಮಧ್ಯಂತರ ಅಂತಿಮ ವರದಿ ಕೂಡ ಸಲ್ಲಿಕೆಯಾಗಿದ್ದು ಎಂ. ಕೃಷ್ಣ ಸರ್ಕಾರದ ಅವಧಿಯಲ್ಲೇ. ಆದರೆ ಆ ಶಿಫಾರಸ್ಸುಗಳ ಜಾರಿಗೆ ದಿಟ್ಟ ನಿರ್ಧಾರ ಕೈಗೊಂಡಿದ್ದು ಮಾತ್ರ ಬಿ. ಎಸ್. ಯಡಿಯೂರಪ್ಪ. ನಂಜುಂಡಪ್ಪ ವರದಿಯ ಶಿಫಾರಸ್ಸುಗಳು ಬಹುತೇಕ ಉತ್ತರಕರ್ನಾಟಕಕ್ಕೆ ಅನ್ವಯವಾದರೂ ಇಡೀ ರಾಜ್ಯಕ್ಕೆ ಅದರ ಲಾಭವಾಗಿದೆ.

ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಮೊಟ್ಟ ಮೊದಲ ಅಧಿವೇಶನದಲ್ಲಿ ಹಣಕಾಸು ಇಲಾಖೆ ಉನ್ನತಾಧಿಕಾರಿಗಳ ವಿರೋಧದ ನಡುವೆಯೂ ಈ ವರದಿ ಜಾರಿಯ ಬಗ್ಗೆ ಘೋಷಿಸಿದ್ದು ಬಿಎಸ್‌ವೈ. ಅವರ ಕ್ರಮದ ಫಲವಾಗಿ ಅಸಮಾನತೆ ನಿವಾರಣೆ ದಿಕ್ಕಿನಲ್ಲಿ ಈವರೆಗೆ 30,000 ಕೋಟಿ ರೂ.ಗೂ ಅಧಿಕ ಹಣ ವೆಚ್ಚವಾಗಿದೆ. ಇದೊಂದು ಐತಿಹಾಸಿನ ನಿಲುವು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಬಹುತೇಕ ಲಾಭ ಉತ್ತರ ಕರ್ನಾಟಕವಲ್ಲದೇ ಇಡೀ ರಾಜ್ಯಕ್ಕೆ ಆಗಿದೆ.



ಹಾರಿದ್ದು ಒಂದೇ ಹೆಲಿಕಾಪ್ಟರ್

ಕಳಸ ಬಂಡೂರಿ ನಾಲಾ ಯೋಜನೆಗೆ ಅಡಿಗಲ್ಲನ್ನು ಇಟ್ಟಿದ್ದು 2007ರಲ್ಲಿ. ಆಗ ಹೆಚ್. ಡಿ. ಕುಮಾರಸ್ವಾಮಿ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ, ಬಿಎಸ್‌ವೈ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು. ಉತ್ತರ ಕರ್ನಾಟಕದ ಬಡತನ ಮತ್ತು ಅಸಮತೋಲನ ನಿವಾರಣೆಗೆ ತಮ್ಮ ರಾಜಕೀಯ ಪ್ರವೇಶದ ದಿನಗಳಿಂದಲೂ ಆಸಕ್ತಿ ವಹಿಸುತ್ತಾ ಬಂದಿದ್ದ ಬಿಎಸ್‌ವೈ ಆ ಪ್ರದೇಶದ ಕೃಷಿ, ನೀರಾವರಿ, ಉದ್ಯೋಗ ಸೃಜನೆ ಹಾಗೂ ಕುಡಿಯುವ ನೀರಿನ ಸಮರ್ಪಕ ವಿತರಣೆಯತ್ತ ಗಮನ ಹರಿಸಿದ್ದರು. ಬಿಎಸ್‌ವೈ ಮೊಟ್ಟ ಮೊದಲಿಗೆ ಅಧಿಕಾರ ದೊರೆತಾಗ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದ್ದು ಇದೇ ದಿಕ್ಕಿನಲ್ಲಿ.

ಕಳಸಾ ಬಂಡೂರಿ ನಾಲಾ ಯೋಜನೆಗೆ ಭೂಮಿ ಪೂಜೆ ಮಾಡಲು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಜೊತೆಯಾಗಿ ಭಾಗವಹಿಸುವುದು ಅಧಿಕೃತವಾಗಿ ನಿಶ್ಚಯವಾಗಿತ್ತು. ಬೆಂಗಳೂರಿನಿಂದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಗಡಿಗ್ರಾಮದಲ್ಲಿ ನಿಶ್ಚಯವಾಗಿದ್ದ ಕಾರ್ಯಕ್ರಮಕ್ಕೆ ಈ ಇಬ್ಬರು ನಾಯಕರು ಹೋಗುವುದಿತ್ತು. ಬೆಂಗಳೂರಿನ ಜಕ್ಕೂರು ವಾಯು ನೆಲೆಯಲ್ಲಿ 2 ಹೆಲಿಕಾಪ್ಟರ್‌ಗಳು ಸಿದ್ಧವಾಗಿದ್ದವು. ಬೆಳಿಗ್ಗೆ 8.30ಕ್ಕೆ ಪ್ರಯಾಣ ಆರಂಭವಾಗಬೇಕಿತ್ತು. ಆದರೆ ಕಾರ್ಯಕ್ರಮಕ್ಕೆ ಬರಬೇಕಿದ್ದ ಮುಖ್ಯಮಂತ್ರಿಗಳು ಯಾವುದೇ ಮುನ್ಸೂಚನೆ ನೀಡದೆ ತಮ್ಮ ಪ್ರಯಾಣ ರದ್ದುಗೊಳಿಸಿದರು. 9.30ರವರೆಗೆ ಜಕ್ಕೂರು ನಿಲ್ದಾಣದಲ್ಲಿ ಮುಖ್ಯಮಂತ್ರಿಗಳ ಬರುವಿಕೆಗೆ

ಕಾದ ಬಿ ಎಸ್‌ಯಡಿಯೂರಪ್ಪ ಕಾರ್ಯಕ್ರಮಕ್ಕೆ ಹೋಗಲೇಬೇಕೆಂಬ ಛಲದಿಂದ ಒಂದು ಹೆಲಿಕಾಪ್ಟರ್ ಏರಿದರು. ಮತ್ತೊಂದು ಹೆಲಿಕಾಪ್ಟರ್ ಅಲ್ಲೇ ಉಳಿಯಿತು. ಮುಖ್ಯಮಂತ್ರಿಗಳ ತಂಡ ಬಾರದೆ ಹೋದರೂ ಏಕಾಂಗಿಯಾಗಿ ಗೋವಾ – ಕರ್ನಾಟಕ ಗಡಿ ಗ್ರಾಮದಲ್ಲಿ ನಡೆದ ಕಳಸಾ ಬಂಡೂರಿ ನಾಲಾ ಯೋಜನೆಯ ಶಿಲಾನ್ಯಾಸವನ್ನು ನೆರವೇರಿಸಿದರು. ಸುರಿಯುವ ಮಳೆಯಲ್ಲಿ ನಡೆದ ಈ ಸಮಾರಂಭದಲ್ಲಿಅಂದು ಉಪ ಮುಖ್ಯಮಂತ್ರಿಗಳಿಗೆ ಸಹಯೋಗ ನೀಡಿದವರು ಅಂದಿನ ಜಲಸಂಪನ್ಮೂಲ ಸಚಿವ ಕೆ.ಎಸ್. ಈಶ್ವರಪ್ಪ ಮಾತ್ರ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾಗಿದ್ದ ಯಡಿಯೂರಪ್ಪ ಖುದ್ದು ಮುಖ್ಯಮಂತ್ರಿ ಸಮಾರಂಭಕ್ಕೆ ಬಾರದಿದ್ದರೂ ಯೋಜನೆ ಅನುಷ್ಠಾನದ ಹೊಣೆ ಹೊತ್ತು ತಮ್ಮ ಬದ್ಧತೆ ಮೆರೆದರು. ಇಂತಹ ದಿಟ್ಟ ನಿರ್ಧಾರಗಳಿಂದಲೇ ಯಡಿಯೂರಪ್ಪ ಅವರು ಉತ್ತರ ಕರ್ನಾಟಕದ ಜನ ಮಾನಸದಲ್ಲಿ ಶಾಶ್ವತವಾದ ಸ್ಥಾನಗಳಿಸಿಕೊಂಡಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಸುವರ್ಣ ವಿಧಾನಸೌಧ ನಿರ್ಮಿಸುವ ನಿರ್ಧಾರ ಪ್ರಕಟಿಸಿ ಅದರಂತೆ ನಡೆದುಕೊಂಡರು. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಭರವಸೆ ನೀಡಿದ್ದಂತೆ ಕ್ರಮ ಕೈಗೊಂಡರು, ಆ ಮೂಲಕ ನುಡಿದಂತೆ ನಡೆಯುವ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಅರ್ಧಶತಮಾನದ ಕಾಲ ಜನಮಾನಸದಲ್ಲಿ ನಿಜ ನಾಯಕನಾಗಿ ಉಳಿಯುವುದು ಅಷ್ಟು ಸುಲಭವಲ್ಲ. ಬಿಎಸ್‌ವೈಈಅಸಾಧ್ಯವನ್ನುಸಾಧ್ಯವಾಗಿಸಿದ್ದಾರೆ. ಜನಅದನ್ನುಮರೆಯದೆಸ್ಮರಿಸಿಗೌರವಿಸುತ್ತಿದ್ದಾರೆ. 83 ವರ್ಷಗಳ ಸನಿಹವಿರುವ ಯಡಿಯೂರಪ್ಪ ಈಗ ಸಾರ್ವಜನಿಕ ಜೀವನದಲ್ಲಿ ಗಳಿಸಬೇಕಾದದ್ದು ಏನೂ ಇಲ್ಲ. ಆದರೂ ಇಂತಹ ಸಮಾರಂಭ ಈ ಸನ್ನಿವೇಶದಲ್ಲಿ ಏಕೆ ಎಂಬುದು ಬಹು ಚರ್ಚಿತ ವಿಷಯ. ಇದು ಬಿಎಸ್‌ವೈ ಅಭಿಮಾನಿಗಳ ಏಕೈಕ ನಿರ್ಧಾರವೋ ಅಥವಾ ಅವರ ಪಕ್ಷದ ನಿರ್ಧಾರವೋ ಎಂಬುದು ಕೂಡ ಚರ್ಚಿತವಾಗುತ್ತಿದೆ. ಈ ಎರಡು ಕಾರಣಗಳು ಇರಬಹುದು. ಏಕೆಂದರೆ 2021ರಲ್ಲಿ ದಿಢೀರೆಂದು ಅಧಿಕಾರ ತ್ಯಾಗ ಮಾಡಲು ಒತ್ತಾಯಿಸಿದ ಪಕ್ಷದ ನಾಯಕತ್ವ ಇಂದು ಅದೇ ಬಿಎಸ್‌ವೈ ಅವರನ್ನು ಓಲೈಸುತ್ತಿದೆ. ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ದೂರ ಸರಿಸುವ ಜಾಯಮಾನ ರಾಜಕಾರಣದಲ್ಲಿ ಸಾಮಾನ್ಯ ಆದರೂ ಕಹಿ ಭಾವನೆ ತೋರದೆ ಬಿಎಸ್‌ವೈ ಉತ್ಸಾಹದಿಂದ ಭಾಗವಹಿಸುತ್ತಿರುವುದು ವಿಶೇಷ.

ಜನ್ಮಜಾತ ನೇತಾರ ಯಡಿಯೂರಪ್ಪ

ಸಂಘ ಸ್ಥಾನದಲ್ಲಿ ರೂಪುಗೊಳ್ಳುವ ಆತ್ಮವಿಶ್ವಾಸಕ್ಕೆ ಇವರೇ ಮಾದರಿ. ಬೆದರಿಕೆಗಳಿಗೆ ಬಗ್ಗದೇ, ಲಕ್ಷ್ಯವನ್ನೇ ನೋಡುತ್ತಾ ಮುನ್ನುಗ್ಗುವ ಸಂಘ ತತ್ತ್ವ ಇವರ ಉಸಿರು. ಮನೆ ಬಿಟ್ಟು ಅವಿರತವಾಗಿ ಪ್ರವಾಸಮಾಡಿ ಇವರು ಸಂಘಟನೆಯನ್ನು ಕಟ್ಟಿದರು.

ಡಾ. ಶಿಕಾರಿಪುರ ಕೃಷ್ಣಮೂರ್ತಿ, ಪ್ರಾಧ್ಯಾಪಕರು (ನಿ) ಮತ್ತು ನಿರ್ದೇಶಕರು, ಮಾನವ ಸಂಪದ್ವಿಕಾಸ ಪ್ರಶಿಕ್ಷಣ ಸಂಸ್ಥೆ, ಮಂಗಳೂರು

ಸಂಘದ ಮೈದಾನದಲ್ಲಿ ನನ್ನ ಜೊತೆಯಲ್ಲಿ ಆಡಿ, ಊರಿನ ಜನರ ಕಷ್ಟ–ಕಾರ್ಪಣ್ಯಗಳನ್ನು ಗುರುತಿಸಿ ತಂಡಕಟ್ಟಿ ಪರಿಹಾರ ಮಾಡುತ್ತಾ, ಸಂಘಟನೆ ಕಟ್ಟುತ್ತಾ, ರೂಪುಗೊಂಡ ನೇತೃತ್ವವೇ ನಮ್ಮೂರ ಯಡಿಯೂರಪ್ಪ. ನೇತೃತ್ವ ಶೂನ್ಯವಾಗಿದ್ದ ಶಿಕಾರಿಪುರಕ್ಕೆ ನಾಯಕರ ಅಗತ್ಯವಿತ್ತು. ಜನರ ನಡುವೆ ಓಡಾಡುತ್ತಾ, ಅವರಿಗೆ ಸ್ಪಂದಿಸುತ್ತಾ ಕ್ರಿಯಾಶೀಲರಾದ ಇವರು ಸಹಜವಾಗಿ ಜನರಿಂದ ಜನ್ಮಜಾತ ನೇತಾರರಾದರು. ನನ್ನಂತಹ ಹಲವರಿಗೆ ಯೌವನದ ಮಾರ್ಗದರ್ಶಿಗಳಾದರು. ಜಾತಿ–ಜಾತಿಗಳ ಮೇಲಾಟ ಮತ್ತು ಪಟ್ಟಭದ್ರರ ದುಷ್ಟ ಕಪಿಮುಷ್ಟಿಯಿಂದ ಶಿಕಾರಿಪುರವನ್ನು ಮುಕ್ತಿಗೊಳಿಸಿದರು. ಸರ್ವಮಾನ್ಯ ನಾಯಕರಾದ ಯಡಿಯೂರಪ್ಪನವರನ್ನು ಕರ್ನಾಟಕಕ್ಕೆ ಸಮರ್ಪಿಸಿದ್ದು ಈ ಶಿಕಾರಿಪುರ. ಬಲಿಷ್ಠರನ್ನೂ ಬದಿಗೊತ್ತಿ ಸುದೀರ್ಘಕಾಲ ಶಾಸಕರಾದ ಯಡಿಯೂರಪ್ಪನವರ ಕೈಬಿಡದೇ ಬೆಳೆಸಿದ್ದು ಶಿಕಾರಿಪುರದ ಜನತೆ.

ಇವರ ಸ್ಥಾನೀಯ ಪ್ರಭಾವ ಎಷ್ಟೊಂದು ದೃಢವಾಗಿತ್ತು ಎಂದರೆ ಪರ್ಯಾಯ ನಾಯಕತ್ವವನ್ನು ಜನ ಕಾಣಲೇ ಇಲ್ಲ. ಗ್ರಾಮ ಮಟ್ಟದಲ್ಲಿ ಸಮಸ್ಯೆಗಳ ಪರಿಹಾರ ಮತ್ತು ಕಣ್ಣಿಗೆ ಕಾಣುವ ಅಭಿವೃದ್ಧಿ ಇವರ ಗೆಲುವಿನ ಗುಟ್ಟು. ಬಿಜೆಪಿಯ ಸತತ ಗೆಲುವಿನ ಭದ್ರಕೋಟೆಯಾಯಿತು ಶಿಕಾರಿಪುರ. ಇದು ಯಡಿಯೂರಪ್ಪ ತಂಡದ ದೊಡ್ಡ ಸಾಧನೆ.

ವಿಶ್ವಾಸ ವಿವೇಕಗಳ ಸಾಕಾರಮೂರ್ತಿ

ಸಂಘ ಸ್ಥಾನದಲ್ಲಿ ರೂಪುಗೊಳ್ಳುವ ಆತ್ಮವಿಶ್ವಾಸಕ್ಕೆ ಇವರೇ ಮಾದರಿ. ಬೆದರಿಕೆಗಳಿಗೆ ಬಗ್ಗದೇ, ಲಕ್ಷ್ಯವನ್ನೇ ನೋಡುತ್ತಾ ಮುನ್ನುಗ್ಗುವ ಸಂಘ ತತ್ತ್ವ ಇವರ ಉಸಿರು. ಮನೆ ಬಿಟ್ಟು ಅವಿರತವಾಗಿ ಪ್ರವಾಸಮಾಡಿ ಇವರು ಸಂಘಟನೆಯನ್ನು ಕಟ್ಟಿದರು. ಸಹಯೋಗಿಗಳೊಡನೆ ಸತತವಾಗಿ ಸಂವಾದ ಮಾಡುತ್ತಾ ತಂಡವನ್ನು ಮುನ್ನಡೆಸಿದರು.

ಇವರ ಮೇಲೆ ಆದ ಮಾರಣಾಂತಿಕ ಆಕ್ರಮಣಗಳು ಇವರ ಕಿಚ್ಚನ್ನು ಹೆಚ್ಚಿಸಿದವು. ವೈಚಾರಿಕವಾದ ವಿವೇಕದ ಇವರ ತತ್ತ್ವಗಳ ಎದುರು ನಿಲ್ಲಲಾಗದೇ ಎದುರಾಳಿಗಳು ಸೋತರು. ಇವರ ಮುಂದಾಳತ್ವದಲ್ಲಿ ಮುನ್ನುಗ್ಗುತ್ತಿದ್ದ ಬಡವರೂ, ಶೋಷಿತರೂ, ಗ್ರಾಮೀಣ ರೈತರೂ, ಕೂಲಿಕಾರರೂ, ಹಿಂದುಳಿದವರೂ ಮುನ್ನಡೆದಾಗ ಸರ್ಕಾರವೇ ಬಗ್ಗಿತು, ಅಧಿಕಾರಿಗಳೆಲ್ಲರೂ ಇವರ ಹಕ್ಕೊತ್ತಾಯಗಳನ್ನು ಮಂಜೂರು ಮಾಡಲೇ ಬೇಕಾಯ್ತು. ಬಹುಪಾಲು ಸಂದರ್ಭಗಳಲ್ಲಿ ಇವರ ಅಪೇಕ್ಷೆಗಳು ಗೆಲ್ಲಲೇ ಬೇಕಾಯ್ತು. 'ಬಗರ್ ಹುಕುಂ' ಚಳುವಳಿ ಇವರ ಉಡ್ಡಯನದ ನೆಲೆಗಟ್ಟಾಯ್ತು. ನಂತರ ಬಂದ ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರವು ಯಡಿಯೂರಪ್ಪರನ್ನು ಗೆಲ್ಲಿಸಿತು. 'ಯಡಿಯೂರಪ್ಪ ಗುಡುಗಿದರೆ ಶಾಸನಸಭೆಯೇ ನಡುಗುವುದು' ಘೋಷವಾಯಿತು.

ಜಯಶೀಲರಾದ ಯಡಿಯೂರಪ್ಪನವರನ್ನು ಕಂಡು ಕರ್ನಾಟಕದ ಊರೂರಲ್ಲಿ ಸಂಘ–ಜನಸಂಘ–ಬಿಜೆಪಿ ಸಂಘಟನೆ ಬೆಳೆಯತೊಡಗಿತು. ರಾಜ್ಯಾದ್ಯಂತ ಪ್ರವಾಸಮಾಡಿ ಮಲಗಿದ್ದ ಸಮಾಜವನ್ನು ಬಡಿದೆಬ್ಬಿಸಿದರು.

ಗೆಲುವಿನ ಗುಟ್ಟು

ಇವರನ್ನು ಕಂಡೊಡನೆಯೇ ಯಾರಿಗಾದರೂ ಗೌರವ ಬರುವಂತಹ ಇವರ ಕಾಣ್ಕೆ, ಪ್ರತಿಬದ್ಧತೆಯ ಇವರ ನಿಲುವು–ಆಕಾರ, ಇವರ ಆಕರ್ಷಕ ವ್ಯಕ್ತಿತ್ವದ ಮುಖ್ಯಭಾಗವಾಗಿವೆ. ದೃಢತೆಯೇ ಇವರ ಸ್ವಭಾವ. ಸಂಘ ಪ್ರಣೀತ ಹಿಂದುತ್ವವೇ ಇವರ ತತ್ತ್ವವಿಚಾರ ಮೌಲ್ಯಗಳ ಮೂಲ. ಜನಹಿತ ಕಾರ್ಯಗಳಲ್ಲಿಯೇ ಇವರ ಆಸಕ್ತಿ, ಅಚ್ಚುಕಟ್ಟಾಗಿ ಮಾತಾಡುತ್ತಾ ಕೆಲಸಮಾಡುವ ಇವರ ಕಾರ್ಯನೈಪುಣ್ಯ, ಬುದ್ಧಿವಂತಿಕೆಯ ನಿರ್ಣಯಗಳೊಡನೆ ಮಾನವೀಯತೆಯ ಹತ್ತಾರು ಕಾರ್ಯಕ್ರಮಗಳು ಇವರ ಯಶಸ್ಸಿನ ಮೂಲವಾಯಿತು.

ಸಂದರ್ಭಗಳ ಸದುಪಯೋಗ, ಅನುಭವಗಳಿಂದ ಕಲಿತ ಪಾಠ, ಕಾರ್ಯಸಿದ್ಧಿಗಾಗಿ ಛಲಬಿಡದ ತತ್ಪರತೆ, ಅನ್ಯಾಯ ಕಂಡಲ್ಲಿ ರೊಚ್ಚಿಗೆದ್ದು ಮಾಡುವ ಹೋರಾಟ, ಸ್ಪಷ್ಟವಾದ ಗುರಿ, ಅಲ್ಲಾಡಿಸಲಾಗದ ಆತ್ಮವಿಶ್ವಾಸದ ಮನೋಬಲ ಮತ್ತು ದೃಢವಾದ ದೈವಭಕ್ತಿ ಇವುಗಳೇ ಯಡಿಯೂರಪ್ಪನವರ ಗೆಲುವಿನ ಗುಟ್ಟುಗಳು.

ಐವತ್ತು ವರ್ಷಗಳ ಇವರ ಸಹಯೋಗದಲ್ಲಿ ನಾನು ಕಂಡ ಇವರಲ್ಲಿನ ಅಂತರ್ಗತ



ಸದ್ಗುಣಗಳು ಇವರನ್ನು ಏರುಗತಿಯ ನಾಯಕನಾಗಿಸಿದೆ. ದೌರ್ಭಾಗ್ಯವೆಂದರೆ ಕರ್ನಾಟಕಕ್ಕೆ ಎರಡನೇ ಯಡಿಯೂರಪ್ಪ ಇನ್ನೂ ದೊರಕಲೇ ಇಲ್ಲ. ಅಲ್ಪತೃಪ್ತರಾಗಿರುವ ಮರಿ ನಾಯಕರೇ ಜಾಸ್ತಿ. ದಕ್ಷಿಣ ಭಾರತದಲ್ಲಿಯೂ ಇವರಂತೆ ಮತ್ತೊಬ್ಬ 'ಮೋದಿ' ಇನ್ನೂ ಬೆಳೆಯಲೇ ಇಲ್ಲ.

ಯಡಿಯೂರಪ್ಪನವರು ಅಂತಹ ರಾಷ್ಟ್ರೀಯ ನಾಯಕತ್ವಕ್ಕೆ ಸುಯೋಗ್ಯರಾದರೂ ಅವರಿಗೆ ವಯಸ್ಸು, ದೇಹಬಲ ಮತ್ತು ಸುಸಂಘಟಿತ ಪಕ್ಷಬಲ ಬೇಕಾಗಿದೆ. ಇವರನ್ನು ಈ ಮಟ್ಟಕ್ಕೆ ಏರಿಸಿದ ಶಿಕಾರಿಪುರದ ದೈವ ಹುಚ್ಚುರಾಯ ಸ್ವಾಮಿಯಲ್ಲಿ ನಮ್ಮ ಪ್ರಾರ್ಥನೆ

''ಪ್ರವರ್ಧತಾಂ ಯಡಿಯೂರಪ್ಪ ಭಾಗ್ಯ ಚಕ್ರಮ್''
''ಪ್ರವರ್ತತಾಂ ಭಾರತ ವೃದ್ಧಿ ಚಕ್ರಮ್''

ಅದ್ವಿತೀಯ ನಾಯಕ



ಪ್ರೊ|| ಎಸ್.ಎಸ್.ಮೂರ್ತಿ, ಹೊಸದಿಲ್ಲಿ, ಕುಲಪತಿಗಳು (ನಿ), ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ನಿರ್ದೇಶಕರು (ನಿ), ಎನ್.ಐ.ಟಿ.ಕೆ. ಸುರತ್ಕಲ್, ಹಿರಿಯ ಪ್ರಾಧ್ಯಾಪಕರು (ನಿ), ಐ.ಐ.ಟಿ. ಹೊಸದಿಲ್ಲಿ

ಏಳುಬೀಳುಗಳ ನಡುವೆಯೇ ಸವಾಲುಗಳಿಂದ ಪುಟಿದೆದ್ದು ವಿಜೃಂಭಿಸಿದ ನಾಯಕ ಬಿ. ಎಸ್. ಯಡಿಯೂರಪ್ಪ ನಾವು ಕಂಡ ಅದ್ವಿತೀಯ ಜನ ನೇತಾರ. ಶಿಕಾರಿಪುರದ ಮಣ್ಣಿನಲ್ಲಿ ಬೇರುಬಿಟ್ಟು ಬೃಹತ್ ವೃಕ್ಷವಾಗಿ ಬೆಳೆದ ಮಾದರಿ ನೇತಾರ ಇವರು.

ನನ್ನ ಕುಟುಂಬಕ್ಕೆ ತುಂಬಾ ಹತ್ತಿರದ ಆತ್ಮೀಯ ಮಿತ್ರಯಡಿಯೂರಪ್ಪನವರ ಐದು ದಶಕಗಳ ಏರುಗತಿಯ ಅಭಿವೃದ್ಧಿಯನ್ನು ಅಭಿನಂದಿಸುವ ಈ ಶುಭ ಘಳಿಗೆ ನಮ್ಮೆಲ್ಲರ ಸಂತಸದ ಕ್ಷಣ. ಶಿಕಾರಿಪುರ ನಗರದ ಜನರಿಗೆ ವಿಶ್ವಾಸ ಮೂಡಿಸಿ ಖಾಲಿ ಇದ್ದ ನಗರ ನಾಯಕತ್ವವನ್ನು ತುಂಬಿಸಿ, ಪುರಸಭಾ ಅಧ್ಯಕ್ಷರಾದರು. ಮತ್ತೆ ಹಿಂತಿರುಗಿ ನೋಡದೇ ಶಾಸಕರಾಗಿ, ಪ್ರತಿಪಕ್ಷ ನಾಯಕರಾಗಿ, ಉಪ ಮುಖ್ಯಮಂತ್ರಿಗಳಾಗಿ ಹೆಮ್ಮೆಯ ಮುಖ್ಯಮಂತ್ರಿಯೂ ಆದರು.

ಬೆಳೆದು–ಬೆಳೆಸಿದ ನಾಯಕತ್ವ

ಕೃಷಿ ಮಾಡುವ ರೈತನಾಗಿ, ರೈತರ ಕಷ್ಟಗಳ ವಕ್ತಾರರಾಗಿ, ನಾಯಕರಾಗಿ ಮೇಲೆದ್ದು ಬಂದರು. ಬಹು ಜನ ಸಂಖ್ಯೆಯ ಲಿಂಗಾಯತ–ಕುರುಬ ಸಮುದಾಯಗಳೆರಡರಲ್ಲೂ ನಾಯಕರನ್ನು ಬೆಳೆಸಿ ಸಾಮರಸ್ಯದ ಹಿಂದು ಸಮಾಜವನ್ನಿಲ್ಲಿ ಸಂಘಟಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ತಾಲೂಕು ಕಾರ್ಯವಾಹರಾಗಿ ಸಂಘ ತತ್ತ್ವಾಧಾರಿತವಾದ ಜಾಗೃತ ಹಿಂದು ಸಮಾಜವನ್ನು ಬಲಗೊಳಿಸತೊಡಗಿದರು.

ನಮ್ಮೂರ ರತ್ನ

ನಮ್ಮೂರ ಗ್ರಾಮ ದೇವತೆ ಹುಚ್ಚುರಾಯಸ್ವಾಮಿಯ ಅನನ್ಯ ಭಕ್ತರಾಗಿ ಈ ಆಂಜನೇಯನ ಅಪಾರ ಕಾರುಣ್ಯಕ್ಕೆ ಪಾತ್ರರಾದ ಯಡಿಯೂರಪ್ಪಗೆ ಹನುಮನ ಬಲವೇ ಶಕ್ತಿ ತುಂಬಿತು. ಮುನ್ನೂರು ವರ್ಷಗಳ ಹಳೇ ದೇಗುಲ ಇವರ ಕೈಗೆ ಸಿಕ್ಕು ದರ್ಶನೀಯ ದೇವಾಲಯವಾಯ್ತು. ಅಚ್ಚುಕಟ್ಟಾದ ಪುಷ್ಕರಿಣಿ ಹಾಗೂ ಹುಚ್ಚುರಾಯಸ್ವಾಮಿ ಉದ್ಯಾನವನವಾಯಿತು. ವಿಖ್ಯಾತವಾದ ಹುಚ್ಚುರಾಯನ ಕೆರೆ ಹೂಳು ತೆಗೆದು ಕೆರೆ ಏರಿಯನ್ನು ವಾಕಿಂಗ್ ಮಾರ್ಗ ಮಾಡಿ ಪ್ರವಾಸಿಗಳ ತಾಣ ಮಾಡಿದರು.

ಅರ್ಥಪೂರ್ಣ ಅಭಿವೃದ್ಧಿ

ಅವರು ನಮ್ಮ ಮುಖ್ಯಮಂತ್ರಿಗಳಾದಾಗ ನಾನು ನನ್ನ ಎಂಜಿನಿಯರಿಂಗ್ ಪರಿಣತಿಯ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿದ ಸಲಹೆಗಳಲ್ಲಿ ಹಲವನ್ನು ಜಾರಿಗೊಳಿಸಿದ ಮುಕ್ತಮನದ ಸಂಕಲ್ಪ ಸಿದ್ಧರು ಯಡಿಯೂರಪ್ಪ.ಮಲೆನಾಡಿನ ಬಾಗಿಲಾಗಿರುವ ಶಿಕಾರಿಪುರಕ್ಕೆ ರೈಲ್ವೇ ಸಂಪರ್ಕ ಇವರಿಂದಾಗಿ ಸಾಧ್ಯವಾಯಿತು. ಶಿವಮೊಗ್ಗ–ಶಿಕಾರಿಪುರ– ರಾಣೆಬೆನ್ನೂರಿನ ಈ ಹೊಸ ರೈಲ್ವೇ ದಾರಿ ನಿರ್ಮಾಣವಾಗುತ್ತಿದ್ದು, ಬೆಂಗಳೂರು– ಮುಂಬೈ ದೂರ ಕಡಿಮೆಗೊಳಿಸಿದರು. ಕೃಷಿ ಉತ್ಪನ್ನಗಳಿಗೆ ರಾಷ್ಟ್ರೀಯ ಮಾರುಕಟ್ಟೆ ದೊರಕಿಸುವುದು ಇವರ ದೂರದೃಷ್ಟಿ. ಇವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರದ ಇಂತಹ ಹಲವಾರು ನೀತಿ ನಿರ್ಧಾರಗಳ ಲಾಭ ಪಡೆದ ಕರ್ನಾಟಕವು ಇಂದಿಗೂ ನೆನೆಯುವ ಮುಖ್ಯಮಂತ್ರಿ ಇವರಾದರು. ಸರಳ ಸಜ್ಜನಿಕೆಯ ಯಡಿಯೂರಪ್ಪನವರು ತಾವು ಹಿಡಿದ ಕೆಲಸವನ್ನು ಬಿಡದೇ ಸಾಧಿಸುವ ಛಲವಾದಿ ನೇತಾರರು. ಬಿಗಿತನದ ವ್ಯಕ್ತಿಯಂತೆ ಕಾಣುವ ಇವರ ವಜ್ರ ಕಠೋರತೆಯ ಹಿಂದೆ ಇವರ ಹೂವಿನಂತಹ ಮಾನವೀಯ ಮೃದುತನವಿದೆ. ಇವರ ಕ್ರಿಯಾಶೀಲತೆಯ ವಿಸ್ತಾರವೋ ಎಂಬಂತೆ ಬೆಳೆದುನಿಂತಿರುವ ಇವರ ಪುತ್ರ ಶಿವಮೊಗ್ಗ ಸಂಸದ ರಾಘವೇಂದ್ರ, ಇವರ ನೇತೃತ್ವದ ರೂಪಾಂತರವೋ ಎಂಬಂತೆ ಖ್ಯಾತರಾಗುತ್ತಿರುವ ದ್ವಿತೀಯ ಪುತ್ರ ಶಾಸಕ, ಪಕ್ಷಾಧ್ಯಕ್ಷ ವಿಜಯೇಂದ್ರ, ವಿದ್ಯಾ ಸಂಸ್ಥೆಗಳನ್ನು ಕಟ್ಟಿ ಚೆನ್ನಾಗಿ ವಿಸ್ತರಿಸುತ್ತಿರುವ ಪುತ್ರಿಯರೂ, ಸೊಸೆಯರೂ ಕೂಡಿಕೊಂಡ ಇವರ ಕುಟುಂಬವೇ ನಮ್ಮ ಶಿಕಾರಿಪುರದ ಹೆಮ್ಮೆಯ ಮನೆತನವಾಗಿದೆ. ಇವರಿಗೆ ಸುದೀರ್ಘವಾದ ಸೇವಾಸಿದ್ಧಿಯನ್ನು ಹಾರೈಸುತ್ತೇನೆ.

ಲೇಖಕರು ಯಡಿಯೂರಪ್ಪ ಅವರ ಕುಟುಂಬ ಮಿತ್ರರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	10	6	3	1	13	+0.571
ಹೈದರಾಬಾದ್	11	7	4	0	14	+0.737
ಆರ್‌ಸಿಬಿ	10	6	4	0	12	+1.234
ರಾಜಸ್ಥಾನ	10	6	4	0	12	+0.510
ಗುಜರಾತ್	10	6	4	0	12	-0.147
ಚೆನ್ನೈ	10	5	5	0	10	+0.151
ದಿಲ್ಲಿ	10	4	6	0	8	-0.949
ಕೆಕೆಆರ್	9	3	5	1	7	-0.539
ಮುಂಬೈ	10	3	7	0	6	-0.649
ಲಖನೌ	10	3	7	0	6	-0.934

ಕಿರುಸುದ್ದಿ

ಖೇಲೊ ಬಿಎಸ್‌ಎನ್‌ಡಿಪಿ ಲೀಗ್ ಲೋಗೋ ಅನಾವರಣ



ಬೆಂಗಳೂರು: ರಾಜ್ಯದ ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂಬ ಉದ್ದೇಶದಿಂದ ಖೇಲೊ ಬಿಎಸ್‌ಎನ್‌ಡಿಪಿ ರಾಜ್ಯಮಟ್ಟದ ಕ್ರಿಕೆಟ್ ಲೀಗ್ ಆಯೋಜಿಸಿದೆ. ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ದೇವಿಕಾನಂದ ಶ್ರೀಗಳು ಹಾಗೂ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಈ ಕ್ರಿಕೆಟ್ ಲೀಗ್ ನ ಲೋಗೋ ಬಿಡುಗಡೆ ಮಾಡುವ ಮೂಲಕ ಈ ಕ್ರೀಡಾ ಕೂಟಕ್ಕೆ ಚಾಲನೆ ನೀಡಿದರು. ಬ್ರಹ್ಮ ಶ್ರೀ ನಾರಾಯಣ ಗುರೂಜಿ ಅವರ ಹೆಸರಿನಲ್ಲಿ ಈ ಕ್ರಿಕೆಟ್ ಲೀಗ್ ನಡೆಯಲಿದೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಂದಲೂ ಒಂದೊಂದು ತಂಡ ಭಾಗವಹಿಸಲಿದೆ. ಅಲ್ಲದೆ 31 ಜಿಲ್ಲೆಗಳಲ್ಲಿ ಆಯಾ ಭಾಗದ ಗಣ್ಯರ ಹೆಸರಿನಲ್ಲಿ ಕ್ರೀಡಾ ಜ್ಯೋತಿ ಯಾತ್ರೆಯು ನಡೆಯಲಿದೆ. ಈ ಕ್ರಿಕೆಟ್ ಲೀಗ್ ನಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ 25 ಲಕ್ಷ ರೂ, ದ್ವಿತೀಯ ಬಹುಮಾನವಾಗಿ 5 ಲಕ್ಷ ರೂ. ತೃತೀಯ ಬಹುಮಾನವಾಗಿ 2.5 ಲಕ್ಷ ರೂ. ದೊರಕಲಿದೆ.ಮ್ಯಾನ್ ಆಫ್ ದಿ ಸೀರೀಸ್ ಆದವರಿಗೆ ಎಲ್ಕ್ಟ್ರಿಕ್ ಬೈಕ್ ಬಹುಮಾನವಾಗಿ ದೊರಕಲಿದೆ. ಕ್ರಿಕೆಟಿಗ ದೊಡ್ಡ ಗಣೇಶ್, ನಿರ್ಮಾಪಕರಾದ ಡಾ.ಸಂಜಯ್ ಗೌಡ್ರು ಅಲ್ಲದೆ ಮೋಹನ್ ಬಾಬು, ಟಿ.ವಿ. ಬಾಬು, ಬಿ. ಸೋಮಶೇಖರ್, ಸೈದಪ್ಪ ಕೆ. ಗುತ್ತೇದಾರ್ ಹಾಗೂ ಇತರ ಗಣ್ಯರುಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ನಡೆಯಲಿದೆ 'ಎಲ್'ಎಟೇಪ್' ಸೈಕ್ಲಿಂಗ್




ಬೆಂಗಳೂರು: ಮೈಸೂರಿನಲ್ಲಿ ನಡೆಯಲಿರುವ ಟೂರ್ ಡಿ ಫ್ರಾನ್ಸ್‌ನ 'ಎಲ್'ಎಟೇಪ್ ಮೈಸೂರು' ಸೈಕ್ಲಿಂಗ್ ಸ್ಪರ್ಧೆಗೆ ಎನ್ ಇಬಿ ಸ್ಪೋರ್ಟ್ಸ್ ಸಂಸ್ಥೆಯು ಅಧಿಕೃತ ಲೋಗೋ ಹಾಗೂ ವೆಬ್ಸೈಟ್ ಲೋಕಾರ್ಪಣೆ ಮಾಡಿತು. ಕರ್ನಾಟಕದಲ್ಲಿ ಹಿಂದೆಂದೂ ನಡೆಯದ ಐತಿಹಾಸಿಕ ಸೈಕ್ಲಿಂಗ್ ಸ್ಪರ್ಧೆ ಇದಾಗಿದ್ದು, ರಾಜ್ಯದ ಕ್ರೀಡಾ ಇತಿಹಾಸದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಲು ಸಜ್ಜಾಗಿದೆ. ಅಕ್ಟೋಬರ್ 4, 2026ರಂದು ಈ ಹವ್ಯಾಸಿ ರೇಸ್ ನಡೆಯಲಿದೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಲಾಗಿರುವ ಎಲ್'ಎಟೇಪ್ ಮೈಸೂರು ಸ್ಪರ್ಧೆಯು ಟೂರ್ ಡಿ ಫ್ರಾನ್ಸ್ ಸರಣಿಯಲ್ಲಿ ನಡೆಯುವ ಜಾಗತಿಕ ಎಲ್'ಎಟೇಪ್ ಸ್ಪರ್ಧೆಯ ಭಾಗವಾಗಿದೆ. ಟೂರ್ ಡಿ ಫ್ರಾನ್ಸ್ ಆಯೋಜಕರು ಹವ್ಯಾಸಿ ಸೈಕ್ಲಿಂಗ್ ಆಸಕ್ತರಿಗಾಗಿ ಎಲ್'ಎಟೇಪ್ ಸ್ಪರ್ಧೆಯನ್ನು ಆಯೋಜಿಸುತ್ತಾ ಬಂದಿದ್ದಾರೆ. ಮೊಟ್ಟಮೊದಲ ಬಾರಿ ಕರ್ನಾಟಕದಲ್ಲಿ ಈ ಸ್ಪರ್ಧೆ ನಡೆಯುತ್ತಿದೆ. ಅದನ್ನು ಅರಮನೆಗಳ ನಗರಿ ಮೈಸೂರಿನಲ್ಲಿ ಅದ್ಧೂರಿಯಾಗಿ ನಡೆಸಲು ನಿರ್ಧರಿಸಲಾಗಿದೆ.

ಸ್ಪರ್ಧೆಯು ನಾಲ್ಕು ವಿಭಾಗಗಳಲ್ಲಿ ನಡೆಯಲಿದೆ: 100 ಕಿಮೀ: ದಿ ರೇಸ್ – ವೃತ್ತಿಪರ ಸೈಕ್ಲಿಸ್ಟ್‌ಗಳ ರೇಸ್
50 ಕಿಮೀ: ದಿ ರೈಡ್ – ಫಿಟ್ನೆಸ್ ಆಸಕ್ತರಿಗಾಗಿ
20 ಕಿಮೀ: ಫ್ಯಾಮಿಲಿ ಫನ್ ರೈಡ್ – ಎಲ್ಲಾ ವಯಸ್ಸಿನವರಿಗೆ
1 ಕಿಮೀ: ಮಕ್ಕಳು ಮತ್ತು ಕಮ್ಯುನಿಟಿ ರೈಡರ್ಗಳಿಗೆ

ಫ್ರಾಂಚೈಸಿಗಳಿಗೆ ಬಿಸಿಸಿಐ ಎಚ್ಚರಿಕೆ | ಆಟಗಾರರ ಕೊಠಡಿ ಪ್ರವೇಶಕ್ಕೆ ಅನುಮತಿ ಕಡ್ಡಾಯ

ಐಪಿಎಲ್ ನಿಯಮ ಉಲ್ಲಂಘಿಸಿದರೆ ಕ್ರಮ

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ವೇಳೆ ತಂಡಗಳ ಶಿಸ್ತು, ಆಟಗಾರರ ವರ್ತನೆ ಮತ್ತು ಭದ್ರತಾ ನಿಯಮ ಉಲ್ಲಂಘನೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ, ಇಂತಹ ಘಟನೆಗಳು ಲೀಗ್‌ನ ಪ್ರತಿಷ್ಠೆಗೆ ದೊಡ್ಡ ಹೊಡೆತ



ನೀಡಬಹುದು ಅಂಥವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗಳಿಗೆ ಅಪರೂಪದ ಹಾಗೂ ಕಠಿಣ ಎಚ್ಚರಿಕೆಯ ಸಲಹೆ ಪತ್ರವನ್ನು ಜಾರಿ ಮಾಡಿದೆ. ಮಂಡಳಿಯ ಕಾರ್ಯದರ್ಶಿ ದೇವಜೀತ್ ಸಹಿ ಮಾಡಿದ ಏಳು ಪುಟಗಳ ಸಲಹೆ ಪತ್ರವನ್ನು ಎಲ್ಲಾ ಹತ್ತು ತಂಡಗಳಿಗೆ ಕಳುಹಿಸಲಾಗಿದೆ. ಯಾವುದೇ ನಿರ್ದಿಷ್ಟ ಫ್ರಾಂಚೈಸಿ, ಆಟಗಾರ ಅಥವಾ ಅಧಿಕಾರಿಯ ಹೆಸರನ್ನು ಉಲ್ಲೇಖಿಸದಿದ್ದರೂ, ಹಲವು ಗಂಭೀರ ನಿಯಮ ಉಲ್ಲಂಘನೆಗಳ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಆಟಗಾರರ ಹೋಟೆಲ್ ಕೊಠಡಿಗಳಿಗೆ ಅನುಮತಿಯಿಲ್ಲದೆ ಅತಿಥಿಗಳ ಪ್ರವೇಶ, ಪಂದ್ಯದ ವೇಳೆ ತಂಡದ ಮಾಲೀಕರು ಆಟಗಾರರನ್ನು ಸಂಪರ್ಕಿಸುವುದು, ಮೈದಾನದಲ್ಲಿ ವೇಪ್ ಹಾಗೂ ಇ-ಸಿಗರೇಟ್ ಬಳಕೆ ಮತ್ತು ತಂಡದ ಹೋಟೆಲ್‌ಗಳಿಂದ ಅನುಮತಿ ಇಲ್ಲದೆ ಹೊರಹೋಗುವುದು ಕಳುಹಿಸಲಾಗಿರುವ ಸಲಹೆ ಪತ್ರದಲ್ಲಿ ಉಲ್ಲೇಖಗೊಂಡಿರುವ ಅಂಶಗಳಾಗಿವೆ.

ಕೊಠಡಿ ಪ್ರವೇಶಕ್ಕೆ ಅನುಮತಿ ಕಡ್ಡಾಯ: ಮಂಡಳಿಯ ಪ್ರಕಾರ, ಕೆಲ ಆಟಗಾರರು ಮತ್ತು ಸಹಾಯಕ ಸಿಬ್ಬಂದಿ ತಂಡದ ವ್ಯವಸ್ಥಾಪಕರ ಅನುಮತಿಯಿಲ್ಲದೆ ತಮ್ಮ ಕೊಠಡಿಗಳಿಗೆ ಅತಿಥಿಗಳನ್ನು ಕರೆದುಕೊಂಡಿದ್ದಾರೆ. ಪ್ರಸ್ತುತ ನಿಯಮಗಳ ಪ್ರಕಾರ ಯಾವುದೇ ಅತಿಥಿಗೆ ಪ್ರವೇಶ ನೀಡುವ ಮೊದಲು ತಂಡದ ವ್ಯವಸ್ಥಾಪಕರ ಅನುಮತಿ ಕಡ್ಡಾಯವಾಗಿದೆ. ಈ ಮಾಹಿತಿ ಭ್ರಷ್ಟಾಚಾರ ನಿಗ್ರಹ ಘಟಕಕ್ಕೂ ತಿಳಿಸಬೇಕಾಗುತ್ತದೆ. ಆದರೆ ಹಲವು ಸಂದರ್ಭಗಳಲ್ಲಿ ತಂಡದ ವ್ಯವಸ್ಥಾಪಕರಿಗೇ ಈ ವಿಚಾರ ತಿಳಿದಿರಲಿಲ್ಲ ಎಂದು ಮಂಡಳಿ ಆತಂಕ ವ್ಯಕ್ತಪಡಿಸಿದೆ. ಯಾವುದೇ ಕುಟುಂಬ ಸದಸ್ಯ, ಸ್ನೇಹಿತ ಅಥವಾ ಇತರ ವ್ಯಕ್ತಿಗೆ ಆಟಗಾರರ ಕೊಠಡಿಗೆ ಪ್ರವೇಶ ನೀಡಬೇಕಾದರೆ ಲಿಖಿತ ಅನುಮತಿ ಅಗತ್ಯ ಎಂದು ಸ್ಪಷ್ಟಪಡಿಸಲಾಗಿದೆ. ಅತಿಥಿಗಳ ಭೇಟಿಯನ್ನು ಹೋಟೆಲ್ ಲಾಬಿಯಲ್ಲೇ ಸೀಮಿತಗೊಳಿಸುವಂತೆ ಸೂಚಿಸಲಾಗಿದೆ.

ಇ-ಸಿಗರೇಟ್‌ಗೆ ಕಡಿವಾಣ: ಮೈದಾನ ಮತ್ತು ಡ್ರೆಸ್ಸಿಂಗ್ ರೂಮ್‌ಗಳಲ್ಲಿ ವೇಪ್ ಹಾಗೂ ಇ-ಸಿಗರೇಟ್ ಬಳಕೆಯನ್ನೂ ಮಂಡಳಿ ಗಂಭೀರವಾಗಿ ಪರಿಗಣಿಸಿದೆ.

ಭಾರತದಲ್ಲಿ ಇಂತಹ ಸಾಧನಗಳು ನಿಷೇಧಿತವಾಗಿರುವುದರಿಂದ ಇದು ಕೇವಲ ಲೀಗ್ ನಿಯಮ ಉಲ್ಲಂಘನೆಯಷ್ಟೇ ಅಲ್ಲ, ಕಾನೂನುಬದ್ಧ ಅಪರಾಧವೂ ಆಗಬಹುದು ಎಂದು ಎಚ್ಚರಿಸಲಾಗಿದೆ. ಇತ್ತೀಚೆಗೆ ರಾಜಸ್ಥಾನ ತಂಡದ ನಾಯಕ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವೇಪ್ ಬಳಸಿದ ಪ್ರಕರಣವೂ ಚರ್ಚೆಗೆ ಕಾರಣವಾಗಿತ್ತು. ಮುಂದಿನ ದಿನಗಳಲ್ಲಿ ತಪಾಸಣೆಗಳನ್ನು ನಡೆಸುವುದಾಗಿ ಮಂಡಳಿ ತಿಳಿಸಿದೆ. ನಿಯಮ ಉಲ್ಲಂಘನೆ ಮಾಡಿದರೆ ಶೋಕಾಸ್ ನೋಟಿಸ್, ದಂಡ, ಅಮಾನತು ಅಥವಾ ಮುಂದಿನ ಋತುವಿನಿಂದಲೇ ಅನರ್ಹತೆ ಶಿಕ್ಷೆಯನ್ನೂ ವಿಧಿಸಬಹುದು ಎಂದು ಸ್ಪಷ್ಟಪಡಿಸಿದೆ. ಈ ನಿಯಮಗಳು ಯಾರನ್ನೂ ನಿರ್ಬಂಧಿಸಲು ಅಲ್ಲ, ಲೀಗ್, ಫ್ರಾಂಚೈಸಿಗಳು ಹಾಗೂ ಆಟಗಾರರನ್ನು ಭವಿಷ್ಯದ ಗಂಭೀರ ಅಪಾಯಗಳಿಂದ ರಕ್ಷಿಸಲು, ಎಂದು ಮಂಡಳಿ ತನ್ನ ಸಲಹೆ ಪತ್ರದಲ್ಲಿ ಹೇಳಿದೆ.

ಫ್ರಾಂಚೈಸಿಗಳ ಮಾಲೀಕರಿಗೂ ಎಚ್ಚರಿಕೆ

ಪಂದ್ಯದ ವೇಳೆ ಫ್ರಾಂಚೈಸಿ ಮಾಲೀಕರು ಆಟಗಾರರೊಂದಿಗೆ ಸಂಪರ್ಕ ಸಾಧಿಸಲು ಯತ್ನಿಸಿರುವುದು ಕೂಡ ಮಂಡಳಿಗೆ ಅಸಮಾಧಾನ ತಂದಿದೆ. ಈ ಬಗ್ಗೆ ಬಿಸಿಸಿಐ ಪತ್ರದಲ್ಲಿ ಬರೆದಿದ್ದು, ಆಟದ ಮಧ್ಯ ಫ್ರಾಂಚೈಸಿಗಳ ಮಾಲೀಕರು ಆಟಗಾರರನ್ನು ಭೇಟಿ ಮಾಡುವಂತಿಲ್ಲ ಎಂದಿದೆ. ಕೆಲ ಮಾಲೀಕರು ಡಗೌಟ್, ಡ್ರೆಸ್ಸಿಂಗ್ ರೂಮ್ ಅಥವಾ ಮೈದಾನದಲ್ಲಿ ಆಟಗಾರರನ್ನು ಅಪ್ಪಿಕೊಳ್ಳಲು, ಮಾತನಾಡಲು ಹಾಗೂ ಪ್ರೇರೇಪಿಸಲು ಯತ್ನಿಸಿದ್ದಾರೆ ಎಂದು ಸಲಹೆ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಇದು ಲೀಗ್‌ನ ನಿಯಮಗಳಿಗೆ ವಿರುದ್ಧವಾಗಿದೆ, ಪಂದ್ಯದ ವಾತಾವರಣ ಮತ್ತು ಆಟಗಾರರ ಪ್ರದರ್ಶನದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಮಂಡಳಿ ತಿಳಿಸಿದೆ. ಪಂದ್ಯ ಮುಗಿದ ಬಳಿಕ ಮಾತ್ರ ಮಾಲೀಕರಿಗೆ ಆಟಗಾರರೊಂದಿಗೆ ಸಂವಹನಕ್ಕೆ ಅವಕಾಶ ಇದೆ.

ಹನಿ ಟ್ರ್ಯಾಪ್‌ನಿಂದ ದೂರವಿರಿ

ಹೆಚ್ಚು ಗಮನ ಸೆಳೆದಿರುವ ಮತ್ತೊಂದು ವಿಚಾರವೆಂದರೆ ಹನಿ ಟ್ರ್ಯಾಪ್' ಹಾಗೂ ಭ್ರಷ್ಟಾಚಾರದ ಅಪಾಯ. ಉನ್ನತ ಮಟ್ಟದ ಕ್ರೀಡಾ ವಾತಾವರಣದಲ್ಲಿ ಆಟಗಾರರನ್ನು ಗುರಿಯಾಗಿಸಿಕೊಂಡು ಮೋಸ ಮಾಡುವ ಸಾಧ್ಯತೆಗಳು ಹೆಚ್ಚಿವೆ ಎಂದು ಮಂಡಳಿ ಎಚ್ಚರಿಸಿದೆ. ಇಂತಹ ಘಟನೆಗಳು ಕಾನೂನು ಸಮಸ್ಯೆಗಳು ಹಾಗೂ ಲೈಂಗಿಕ ದೌರ್ಜನ್ಯ ಆರೋಪಗಳಿಗೂ ಕಾರಣವಾಗಬಹುದು ಎಂದು ಹೇಳಲಾಗಿದೆ.

ಪಂತ್ ಪಡೆಗೆ ಜಯ | ಬೆಂಗಳೂರು ಟೇಬಲ್ ಟಾಪ್ ಗುರಿಗೆ ಪೆಟ್ಟು

ಆರ್‌ಸಿಬಿಗೆ ಲಖನೌ ಶಾಕ್

ಲಖನೌ: ರಾಯಲ್ ಚಾಲೆಂಜರ್ಸ್ ಬೆಂಗಳೂರ ತಂಡವನ್ನು 9 ರನ್‌ನಿಂದ ಮಣಿಸಿರುವ ಲಖನೌ ಸೂಪರ್ ಜೇಂಟ್ಸ್ ತಂಡವು ಪಂದ್ಯಾವಳಿಯಲ್ಲಿ ತನ್ನ ಆರು ಸೋಲುಗಳ ಸರಪಳಿಯನ್ನು ಮುರಿದು ಹಾಕಿದ್ದಲ್ಲದೆ, ಆರ್‌ಸಿಬಿಯ ಟಾಪ್ 2ರ ಲೆಕ್ಕಾಚಾರಕ್ಕೆ ಭಾರೀ ಪೆಟ್ಟು ನೀಡಿದೆ.

ಮಾರ್ಷ್ ಶತಕದ ಬೆನ್ನಲ್ಲೇ ಪ್ರಿನ್ಸ್ ಯಾದವ್ ಮತ್ತು ಸ್ಪಿನ್ನರ್‌ಗಳಾದ ಶೆಹಬಾಜ್ ಅಹ್ಮದ್, ದಿಗ್ವೇಶ್ ರಾಥಿಯ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಲಖನೌ ಆರ್‌ಸಿಬಿಯೊಂದಿಗಿನ ಸೋಲಿನ ಸೇಡು ತೀರಿಸಿಕೊಂಡಿದೆ. ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಆದಾಗ್ಯೂ ಲಖನೌ ಸಿಡಲಂತೆ ಮಿಂಚಿ ಗೆದ್ದಿತು. ಬ್ಯಾಟಿಂಗ್ ಆಹ್ವಾನ ಪಡೆದರೂ ಮಾರ್ಷ್ (111) ಅವರ ಸಿಕ್ಸರ್ ಸುರಿಮಳೆಯಿಂದ ಕೂಡದ ಶತಕದ ನೆರವಿಗೆ ಪೂರಣ್ (38) ಸಾಥ್ ಸಿಕ್ಕ ನಂತರ ದೊಡ್ಡ ಮೊತ್ತದತ್ತ ಸಾಗಿತು. ಸ್ಫೋಟಕ ಬ್ಯಾಟರ್ ರಿಷಭ್ ಪಂತ್(32*) ನೀಡಿದ ಅದ್ಭುತ ಫಿನಿಶ್‌ನೊಂದಿಗೆ ಲಖನೌ ನಿಗದಿತ 19 ಓವರ್‌ಗಳಲ್ಲಿ 209 ರನ್ ಗಳಿಸಿತು.

ಡಿಎಲ್ಎಸ್ ನಿಯಮಾನ್ವಯ ಆರ್‌ಸಿಬಿಗೆ 213 ರನ್ ಗುರಿ ನಿಗದಿ ಮಾಡಲಾಯಿತು. ಗುರಿ ಬೆನ್ನತ್ತುವಾಗ ರಜತ್ ಪಾಟಿದಾರ್ (61) ಭರ್ಜರಿ ಪ್ರದರ್ಶನದೊಂದಿಗೆ ಮಿಂಚಿದರು. ಟೀಮ್ ಡೆವಿಡ್(40), ಕೃಣಾಲ್ ಪಾಂಡ್ಯ(28*) ಮತ್ತು ರೋಮಾರಿಯೊ ಶೇಫರ್ಡ್(23*) ಅವರ ಬ್ಯಾಟಿಂಗ್‌ನೊಂದಿಗೆ ಆರ್‌ಸಿಬಿ ಕೊನೆಯ ಓವರ್‌ವರೆಗೂ ಹೊಡೆದಾಟದಲ್ಲಿತ್ತು. ಆದರೆ ಕೊನೆಯ ಓವರ್‌ನಲ್ಲಿ ದಿಗ್ವೇಶ್ ರಾಥಿ ಮಾಡಿದ ಕಮಾಲ್‌ನಿಂದಾಗಿ ಲಖನೌ 9 ರನ್‌ಗಳ ರೋಚಕ ಜಯ ಸಾಧಿಸಿತು.

ಮಿಚೆಲ್ ಮಾರ್ಷ್ ಪಂದ್ಯಶ್ರೇಷ್ಠ ಆಟಗಾರ. ಕೊಹ್ಲಿ ಸೇರಿದಂತೆ ಪ್ರಮುಖ 3 ವಿಕೆಟ್ ಕಿತ್ತ ಪ್ರಿನ್ಸ್ ಪಂದ್ಯ ಗೆಲುವಿನ ಸ್ಟಾರ್ ಅನಿಸಿಕೊಂಡರು. ರಿಷಭ್ ಪಂತ್ ತಿರುವು ನೀಡಿದ ಬ್ಯಾಟರ್, ರಜತ್ ಪಾಟಿದಾರ್ ಮತ್ತು ಟೀಮ್ ಡೆವಿಡ್ ಹೋರಾಡಿ ಭೇಷ್ ಅನಿಸಿಕೊಂಡರು. ಈ ಗೆಲುವಿನೊಂದಿಗೆ ಲಖನೌ ಸೋಲಿನಿಂದ ಹೊರಬಂದರೆ ಆರ್‌ಸಿಬಿ ತಂಡಕ್ಕೆ ಆಘಾತವೊಡ್ಡಿದೆ.

ಪಾಟಿದಾರ್, ಡೆವಿಡ್ ಮಿಂಚಿನಾಟ, ಪ್ರಿನ್ಸ್ ಗೆಲುವಿನ ಹೀರೋ: ಗುರಿ ಬೆನ್ನತ್ತುವಾಗ ಆರ್‌ಸಿಬಿಗೆ ಆರಂಭಿಕ ಆಘಾತ ಎದುರಾಯಿತು. ಪ್ರಿನ್ಸ್ ಯಾದವ್ ಕೊಹ್ಲಿಗೆ ಶೂನ್ಯಕ್ಕೆ ಪೆವಿಲಿಯನ್



ಸಂಕ್ಷಿಪ್ತ ಸ್ಕೋರ್

ಲಖನೌ 19 ಓವರ್‌ಗಳಲ್ಲಿ 209/3: ಮಾರ್ಷ್ 111, ಪೂರಣ್ 38, ಪಂತ್ 32*; ಕೃಣಾಲ್ 31/1

ಆರ್‌ಸಿಬಿ 19 ಓವರ್‌ಗಳಲ್ಲಿ 203/6: ಪಾಟಿದಾರ್ 61, ಡೆವಿಡ್ 40; ಪ್ರಿನ್ಸ್ 33/3, ಶೆಹಬಾಜ್ 33/2

ಗಟ್ಟುವ ಮೊದಲೇ ಬೆಥೆಲ್ ವಿಕೆಟ್ ಒಪ್ಪಿಸಿದ್ದರು. 9 ರನ್‌ಗೆ ಆರ್‌ಸಿಬಿ 2 ಮಹತ್ವದ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ನಾಲ್ಕನೇ ವಿಕೆಟ್‌ಗೆ ಪಡಿಕ್ಕಲ್ ಮತ್ತು ಪಾಟಿದಾರ್ ಜೊತೆಯಾಟ ನಿರ್ಮಿಸಿದರು. ಪಡಿಕ್ಕಲ್ ವಿಕೆಟ್ ಉಳಿಸುವ ಜವಾಬ್ದಾರಿ ತೆಗೆದುಕೊಂಡರೆ, ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಬೇರೊಂದು ಯೋಜನೆ ಹಾಕಿಕೊಂಡಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 45 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಇನ್ನಷ್ಟು ಆಕ್ರಮಣಕಾರಿ ಬ್ಯಾಟಿಂಗ್ ಮಾಡಿದ ಪಾಟಿದಾರ್ ಅರ್ಧಶತಕ ಬಾರಿಸಿದರೆ, ಪಡಿಕ್ಕಲ್ ವಿಕೆಟ್ ಇತ್ತರು. ಬಳಿಕ ಬಂದ ಡೆವಿಡ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಪಂದ್ಯ ತಿರುಗಿಸಿದ ಡೆವಿಡ್ ಮತ್ತು ಪಾಟಿದಾರ್ 121 ರನ್‌ಗೆ ಕೊಂಡೊಯ್ದರು. ಡೆತ್ ಓವರ್‌ನಲ್ಲಿ 50ಕ್ಕೂ ಹೆಚ್ಚು ರನ್ ಬೇಕಿದ್ದವು. ಆಗ ಬಂದ ಕೃಣಾಲ್ ಮತ್ತು ಶೇಫಡ್ ಮೂರು ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದರು. 18ನೇ ಓವರ್‌ನಲ್ಲಿ ಮೂರು ಸಿಕ್ಸರ್‌ಗಳು ಬಂದವು. ಆರ್‌ಸಿಬಿ ಗೆಲುವಿನತ್ತ ಸಾಗಿತು. ಕೊನೆಯ ಓವರ್‌ನಲ್ಲಿ 20 ರನ್ ಬೇಕಿದ್ದವು. ಈ ವೇಳೆ ಬೌಲಿಂಗ್‌ಗೆ ಬಂದ ದಿಗ್ವೇಶ್ ರಾಥಿ ಗೂಗ್ಲಿ ಮೂಲಕ ಶೇಫರ್ಡ್‌ಗೆ ಕಾಟ ಕೊಟ್ಟರು. ಆರ್‌ಸಿಬಿ 10 ರನ್ ಮಾತ್ರ ಗಳಿಸಿತು. 9 ರನ್‌ನಿಂದ ಗೆದ್ದ ಲಖನೌ ಮಿಂಚಿತು.

ಕ್ಯಾಪಿಟಲ್ಸ್‌ಗೆ ನಿಸ್ಸಂಕಾ ಆಸರೆ

ಹೊಸದಿಲ್ಲಿ: ಕಾರ್ತಿಕ್ ತ್ಯಾಗಿ, ಅಂಕುಲ್ ರಾಯ್ ದಾಳಿಗೆ ತತ್ತರಿಸಿದರೂ ನಿಸ್ಸಂಕಾ ಅರ್ಧ ಶತಕದ ಆಸರೆ ಪಡೆದ ದಿಲ್ಲಿ ಗೆಲ್ಲಲೇಬೇಕಾದ ಪಂದ್ಯದಲ್ಲಿ ಸಾಮಾನ್ಯ ಗುರಿ ಮಾತ್ರ ನೀಡಿದೆ.

ಉತ್ತಮ ಆರಂಭ ಪಡೆದಿದ್ದಾದರೂ ಮಧ್ಯಮ ಕ್ರಮಾಂಕಿತ ಬ್ಯಾಟಿಗರು ಕೈಕೊಟ್ಟ ನಂತರ ದಿಲ್ಲಿ ಕುಸಿತ ಕಂಡಿತು. ಆದಾಗ್ಯೂ ಕೆಳ ಕ್ರಮಾಂಕಿತ ಆಟಗಾರರು ತಾಳ್ಮೆ ಪ್ರದರ್ಶಿಸಿದ ಬೆನ್ನಲ್ಲೇ ಆಲೌಟ್ ಆಗದ ದಿಲ್ಲಿ 142/8 ರನ್ ಗಳಿಸಿದೆ.

ನಿಸ್ಸಂಕಾ ಅರ್ಧಶತಕ: ಟಾಸ್ ಸೋತು ಬ್ಯಾಟಿಂಗ್ ಗಿಳಿದ ದಿಲ್ಲಿ ಕ್ಯಾಪಿಟಲ್ಸ್‌ಗೆ ಭರ್ಜರಿ ಆರಂಭ ಸಿಕ್ಕಿತು. ಪಾಥುಮ್ ನಿಸ್ಸಂಕಾ ಯಥಾಪ್ರಕಾರ ಬೌಂಡರಿ ಸಿಕ್ಸರ್‌ಗಳೊಂದಿಗೆ ಮಿಂಚಿದರು. ರಾಹುಲ್ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. 5 ಓವರ್‌ವರೆಗೂ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ತಂಡ ಸ್ಕೋರ್ 5 ಓವರ್‌ಗಳಲ್ಲಿ 49 ರನ್ ಆದಾಗ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ್ದ ಕೆ.ಎಲ್. ರಾಹುಲ್ ವಿಕೆಟ್ ಒಪ್ಪಿಸಿದರು. ನಿತೀಶ್ ರಾಣ 10 ಬಾಲ್‌ಗಳಲ್ಲಿ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಿಸ್ಸಂಕಾ ತಮ್ಮ ಸ್ಫೋಟಕ



ಬ್ಯಾಟಿಂಗ್ ಮುಂದುವರಿಸುತ್ತಿದ್ದಂತೆ ಪವರ್‌ಪ್ಲೇ ಮುಕ್ತಾಯವಾಯಿತು. 55 ರನ್ ಗಳಿಸಿದ ದಿಲ್ಲಿ ಉತ್ತಮ ಸ್ಥಿತಿಯಲ್ಲೇ ಇತ್ತು. ಮಧ್ಯಮ ಓವರ್‌ಗಳ ಆರಂಭದಲ್ಲಿ ರಿಜ್ವಿ 3 ರನ್‌ಗೆ, ಸ್ಟಬ್ಸ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಒಂದಾದ ಅಕ್ಷರ್ ಪಟೇಲ್ ಮತ್ತು ಅಷುತೋಶ್ ಶರ್ಮ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಒಂದು ಹೊತ್ತಲ್ಲಿ ದಿಢೀರ್ ಕುಸಿತ ಕಂಡಿದ್ದ ದಿಲ್ಲಿಗೆ ಈ ಜೋಡಿ ಆಸರೆಯಾಯಿತು. ಮಧ್ಯಮ ಓವರ್‌ಗಳಲ್ಲಿ ಪ್ರಮುಖ ವಿಕೆಟ್ ಕಳೆದುಕೊಂಡ ದಿಲ್ಲಿ ಹೆಚ್ಚಿನ ರನ್ ಗಳಿಸಲಾಗಲಿಲ್ಲ. ಕೊನೆಯಲ್ಲಿ ದಿಲ್ಲಿ 142 ರನ್ ಗಳಿಸಿತು.

ಪುಟಿದೇಳುವ ಬಗ್ಗೆ ವಿಶ್ವಾಸ | ನಾಯಕ ರಜತ್ ಆಟಕ್ಕೆ ಭಾರೀ ಮೆಚ್ಚುಗೆ

ಸೋತರೂ ಭರವಸೆಯಲ್ಲಿ ಆರ್‌ಸಿಬಿ

ಲಖನೌ: ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಡಿಎಲ್‌ಎಸ್ ನಿಯಮದಂತೆ ಒಂಬತ್ತು ರನ್‌ಗಳ ಅಂತರದಲ್ಲಿ ಸೋತಿದ್ದರೂ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಹೋರಾಟದ ಮನೋಭಾವ ತಂಡಕ್ಕೆ ಧೈರ್ಯ ತುಂಬಿದೆ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಮತ್ತು ಆಟಗಾರ ಟಿಮ್ ಡೇವಿಡ್ ಹೇಳಿದ್ದಾರೆ.



ಈ ಸೋಲಿನೊಂದಿಗೆ, ಗುರಿ ಬೆನ್ನಟ್ಟಿದ ಐದು ಪಂದ್ಯಗಳಲ್ಲಿ ಆರ್‌ಸಿಬಿಗೆ ಇದು ಮೊದಲ ಸೋಲಾಗಿದೆ. ತಂಡದ ನಾಯಕ ರಜತ್ ಪಾಟೀದಾರ್ ಕೇವಲ 31 ಎಸೆತಗಳಲ್ಲಿ 61 ರನ್ ಸಿಡಿಸಿ ತಂಡಕ್ಕೆ ಆಸರೆಯಾದರು. ತಮ್ಮ ಇನ್ನಿಂಗ್ಸ್‌ನಲ್ಲಿ ಆರು ಭರ್ಜರಿ ಸಿಕ್ಸರ್‌ಗಳನ್ನು ಸಿಡಿಸಿದ ಅವರು, ಈ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಪಾಟಿದಾರ್ ಆಡುವಾಗ ಎದ್ದು ನಿಂತಿದ್ದೆ: ಡೇವಿಡ್: ಪಂದ್ಯದ ಬಳಿಕ ಮಾತನಾಡಿದ ಟಿಮ್ ಡೇವಿಡ್, ರಜತ್ ಆಟವನ್ನು ಮೆಚ್ಚಿ ಮಾತನಾಡಿದರು. ರಜತ್ ಅದ್ಭುತವಾಗಿ ಆಡಿದರು. ಅವರು ಬಾರಿಸಿದ ಸಿಕ್ಸರ್‌ಗಳು ವಿಶೇಷವಾಗಿದ್ದವು. ಎದುರಾಳಿ ಬೌಲರ್‌ಗಳು ವೇಗ ಮತ್ತು ಶಾರ್ಟ್ ಬಾಲ್‌ಗಳಿಂದ ಒತ್ತಡ ಹೇರುತ್ತಿದ್ದರೂ, ಆರಂಭದಲ್ಲಿ ಅದನ್ನು ಸಮರ್ಥವಾಗಿ ಎದುರಿಸಿ ನಂತರ ತಮ್ಮ ಸಹಜ ಆಟ ಪ್ರದರ್ಶಿಸಿದರು, ಎಂದರು. ಅವರ ಬ್ಯಾಟಿಂಗ್ ನೋಡುವುದೇ ಮನಮೋಹಕ ಅನುಭವವಾಗಿತ್ತು. ಅವರು ಬಾರಿಸಿದ ಸಿಕ್ಸರ್‌ಗಳು ನನ್ನನ್ನೇ ಆಸನದಿಂದ ಎದ್ದು ನಿಲ್ಲುವಂತೆ ಮಾಡಿತು, ಎಂದು ಹೇಳಿದರು.

ರಜತ್-ಪಡಿಕ್ಕಲ್ ಹೊಗಳಿದ ಬೊಬಾಟ

ಮೊ ಬೊಬಾಟ್ ಕೂಡ ಮಧ್ಯಮ ಕ್ರಮಾಂಕದ ಆಟಗಾರರ ಹೋರಾಟವನ್ನು ಶ್ಲಾಘಿಸಿದರು. ಎರಡು ಅಂಕಗಳನ್ನು ಪಡೆಯಲು ಸಾಧ್ಯವಾಗದಿರುವುದು ಖಂಡಿತ ನಿರಾಸೆ. ಆದರೆ ಇಂದು ಕೆಲವು ಆಟಗಾರರು ತೋರಿದ ಧೈರ್ಯಮಯ ಪ್ರದರ್ಶನ ಉತ್ತೇಜನಕಾರಿಯಾಗಿದೆ, ಎಂದರು. ಈ ಋತುವಿನಲ್ಲಿ ನಮ್ಮ ಆರಂಭಿಕ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಆದರೆ ಇಂದು ಅವರು ಬೇಗ ಔಟಾದುದು ಅಪರೂಪದ ಘಟನೆ. ಅಂತಹ ಸಂದರ್ಭದಲ್ಲಿ ದೇವದತ್ ಮತ್ತು ರಜತ್ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿ, ನಂತರ ಎದುರಾಳಿಗಳ ಮೇಲೆಯೇ ಒತ್ತಡ ಹೇರಿದರು, ಎಂದು ಹೇಳಿದರು.

ಪ್ರಮುಖ ಪಂದ್ಯದಲ್ಲಿ ಗುಜರಾತ್-ರಾಜಸ್ಥಾನ

ಜೈಪುರ: ಸತತ ಗೆಲುವುಗಳೊಂದಿಗೆ ಐದನೇ ಸ್ಥಾನದಲ್ಲಿ ಕೂತಿರುವ ಗುಜರಾತ್ ಟೈಟಾನ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಮಹತ್ವದ ಪಂದ್ಯದಲ್ಲಿ ಶನಿವಾರದಂದು ಮುಖಾಮುಖಿಯಾಗಲಿವೆ. ಆಡಿರುವ ಪಂದ್ಯಗಳಲ್ಲಿ 6 ಗೆಲುವು ಸಾಧಿಸಿರುವ ಎರಡೂ ತಂಡಗಳು ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ. ಪ್ಲೇಆಫ್ ವಿಚಾರಕ್ಕೆ ಸಂಬಂಧಿಸಿದಂತೆ ಇದು ಉಭಯ ತಂಡಗಳಿಗೂ ಮಹತ್ವದ ಪಂದ್ಯವಾಗಿದೆ.

ರಾಜಸ್ಥಾನ ಹಿಂದಿನ ಪಂದ್ಯಗಳಲ್ಲಿ ಸೋಲನುಭವಿಸಿದೆ. ಪಂಜಾಬ್‌ನೊಂದಿಗೆ ಗೆದ್ದ ನಂತರವೂ ದಿಲ್ಲಿಯೊಂದಿಗೆ ಸೋತಿರುವುದು ತಂಡಕ್ಕೆ ಹೊಡೆತ ನೀಡಿದೆ. ಇತ್ತ ಗುಜರಾತ್ ತಂಡವು ಚೆನ್ನೈ, ಆರ್‌ಸಿಬಿ, ಪಂಜಾಬ್ ಹೀಗೆ ಬಂದ ತಂಡಗಳನ್ನು ಸೋಲಿಸುತ್ತಾ ಗೆಲುವಿನ ವಿಶ್ವಾಸದಲ್ಲಿದೆ. ಜೈಪುರದ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಗೆದ್ದವರು ಎರಡನೇ ಸ್ಥಾನಕ್ಕೆ!: ಗುಜರಾತ್ 12 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿದೆ. ಇತ್ತ ರಾಜಸ್ಥಾನ ಕೂಡ 12 ಅಂಕಗಳನ್ನು ಹೊಂದಿದೆ. ಆರ್‌ಸಿಬಿ ತಂಡವನ್ನು ಲಖನೌ ಸೂಪರ್ ಜೇಂಟ್ಸ್ ತಂಡ ಸೋಲಿಸಿದ ನಂತರ 14 ಅಂಕ ಮುಟ್ಟಿರುವುದು ಹೈದರಾಬಾದ್ ಮಾತ್ರ. 2ನೇ ಸ್ಥಾನದಲ್ಲಿ ಪಂಜಾಬ್ ಕಿಂಗ್ಸ್ ಇದ್ದು, 13 ಅಂಕಗಳನ್ನು ಹೊಂದಿದೆ. ಹೀಗಿರುವಾಗ ಈ ಪಂದ್ಯದಲ್ಲಿ ಗೆದ್ದ ತಂಡದ ಅಂಕ 14ಕ್ಕೇರಲಿದ್ದು, ಗೆದ್ದವರು ನೇರವಾಗಿ ಎರಡನೇ ಸ್ಥಾನಕ್ಕೇರಲಿದ್ದಾರೆ.

ತಂಡಗಳ ಬಲಾಬಲ: ಗುಜರಾತ್ ಟೈಟಾನ್ಸ್ ತಂಡವು ಸಾಯಿ ಸುದರ್ಶನ್, ಶುಭಮನ್ ಗಿಲ್, ಜಾಸ್ ಬಟ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಭದ್ರ ಬುನಾದಿ ಸಿಕ್ಕ ನಂತರ ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್, ಟೇವಾಟಿಯ ಕೂಡ ಉತ್ತಮ ಪ್ರದರ್ಶನ ನೀಡಬಲ್ಲರು. ಅತ್ತ ರಾಜಸ್ಥಾನ ತಂಡದಲ್ಲಿ ಜೈಸ್ವಾಲ್ ಮತ್ತು ವೈಭವ್ ಸೂರ್ಯವಂಶಿ ಇದ್ದಾರೆ. ಮೂರನೇ ಕ್ರಮಾಂಕದಲ್ಲಿ ಆಡುವ ಜುರೇಲ್ ಕೂಡ ವಿಶ್ವಾಸ ಹೆಚ್ಚಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲೂ ಜಡೇಜಾ, ಫೆರೇರಾ ಅಂಥವರಿಂದ ಬಲ ತುಂಬಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ರಾಜಸ್ಥಾನ ಪರ ಆರ್ಚರ್, ಬ್ರಿಜೇಶ್, ಬರ್ಗರ್ ಮತ್ತು ರವಿ ಬಿಷ್ಣೋಯ್ ಲಯದಲ್ಲಿದ್ದಾರೆ. ಇತ್ತ ಗುಜರಾತ್ ಪರ ಸಿರಾಜ್, ರಬಾಡ, ರಶೀದ್ ಖಾನ್ ವಿಶ್ವಾಸ ಹೆಚ್ಚಿಸಿದ್ದಾರೆ.

ಪಿಚ್

ಜೈಪುರದ ಮಾನ್‌ಸಿಂಗ್ ಕ್ರೀಡಾಂಗಣ ಬ್ಯಾಟರ್‌ಗಳ ಆಟಕ್ಕೆ ಬಲ ಕೊಡುತ್ತದೆ. ಕಳೆದ ಪಂದ್ಯಗಳಲ್ಲಿ ಬೌಲರ್‌ಗಳು ಅಲ್ಪ ಹಿನ್ನಡೆ ಅನುಭವಿಸಿದ್ದಾರೆ. ಫ್ಲಾಟ್ ಪಿಚ್ ಇರುವುದರಿಂದ ಬೌನ್ಸ್ ಸಿಗಲಿದೆ. ಸ್ಪಿನ್ನರ್‌ಗಳಿಗೆ ಸ್ವಲ್ಪ ಲಾಭವನ್ನೂ ಕೊಡುತ್ತದೆ. ಬ್ಯಾಟಿಂಗ್ ಮಾಡಬಹುದಾದ ಪಿಚ್ ಇರುವುದರಿಂದ ಟಾಸ್ ಗೆದ್ದವರು ಬೌಲಿಂಗ್ ಆಯ್ದುಕೊಳ್ಳಲಿದ್ದಾರೆ.

ಪಂದ್ಯದ ವಿವರ

ಯಾವಾಗ: ಶನಿವಾರ, **ಎಲ್ಲಿ:** ಜೈಪುರ, **ಸಮಯ:** ಸಂಜೆ 7:30, **ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಪಿಎಲ್‌ನಲ್ಲಿ ವೈಯಕ್ತಿಕ ಪ್ರದರ್ಶನದ ಜತೆಗೆ ಪ್ರಭಾವಶಾಲಿ ನಾಯಕತ್ವ

ವೈಟ್‌ಬಾಲ್ ಕ್ರಿಕೆಟ್‌ಗೆ ಶ್ರೇಯಸ್ ನಾಯಕ?

ಮುಂಬೈ: ಶ್ರೇಯಸ್ ಅಯ್ಯರ್ ಅವರ ಪ್ರಭಾವಶಾಲಿ ಪ್ರದರ್ಶನ ಮತ್ತು ನಾಯಕತ್ವ ನಿರ್ವಹಣೆಗಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದ್ದು, ಅವರಿಗೆ ಭಾರತ ತಂಡದ ಏಕದಿನ ಮತ್ತು ಟಿ20 ತಂಡದ ನಾಯಕತ್ವ ನೀಡುವ ಬಗ್ಗೆ ಚಿಂತನೆ ನಡೆಸಿದೆ.

ಕಳೆದೆರಡು ವರ್ಷಗಳಿಂದ ಶ್ರೇಯಸ್ ಅಯ್ಯರ್ ಅವರ ನಾಯಕತ್ವದ ಬಗ್ಗೆ ಎಲ್ಲಾ ಕಡೆ ಚರ್ಚೆಗಳು ನಡೆಯುತ್ತಿವೆ. ವೈಯಕ್ತಿಕ ಪ್ರದರ್ಶನದ ಜತೆಗೆ ಪ್ರಭಾವಶಾಲಿ ನಾಯಕತ್ವದೊಂದಿಗೆ ಗಮನ ಸೆಳೆದಿರುವ ಶ್ರೇಯಸ್ ಅಯ್ಯರ್ ಅವರಿಗೆ ಬಿಸಿಸಿಐ ಗಿಫ್ಟ್ ನೀಡುವ ಸಾಧ್ಯತೆ ಇದೆ. ಮುಖ್ಯ ಆಯ್ಕೆದಾರ ಅಜಿತ್ ಅಗರ್ಕರ್ ಈ ಬಗ್ಗೆ ಚಿಂತನೆ ನಡೆಸುತ್ತಿದ್ದಾರೆಂದು ವರದಿಯಾಗಿದೆ.

ಕಳೆದ ಕೆಲವು ವರ್ಷಗಳಲ್ಲಿ ಟಿ20 ಕ್ರಿಕೆಟ್‌ನಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ರೋಹಿತ್ ಶರ್ಮ ನಿವೃತ್ತರಾದ ಬಳಿಕ ತಂಡವನ್ನು ಸೂರ್ಯಕುಮಾರ್ ಯಾದವ್ ಮುನ್ನಡೆಸಿದರು. ವಿಶ್ವಕಪ್ ಕೂಡ ಗೆಲ್ಲಿಸಿದರು. ಕೆಲವು ದಿನಗಳ ಮಟ್ಟಿಗೆ ಶುಭಮನ್ ಗಿಲ್ ಅವರಿಗೆ ಉಪನಾಯಕತ್ವ ನೀಡಲಾಗಿತ್ತು. ಆದರೆ ನಿರಂತರ ಕಳಪೆ ಪ್ರದರ್ಶನ ಬೆನ್ನಲ್ಲೇ ಅವರನ್ನು ತಂಡದಿಂದಲೇ ಹೊರಹಾಕಲಾಗಿತ್ತು. ಇತ್ತ ಏಕದಿನಕ್ಕೆ ರೋಹಿತ ಬದಲಿಗೆ ಶುಭಮನ್ ಗಿಲ್ ಅವರನ್ನು ನಾಯಕರನ್ನಾಗಿ ಮಾಡಲಾಗಿದೆ.

ಬೆಸ್ಟ್ ನಾಯಕ ಶ್ರೇಯಸ್: ಈ ನಡುವೆ ಏಕ ನಾಯಕ ನೀತಿಯತ್ತ ಬಿಸಿಸಿಐ ಮುಖಮಾಡುವ ಬಗ್ಗೆ ಚಿಂತನೆ ನಡೆಸಿದೆ. ಶ್ರೇಯಸ್ ಅಯ್ಯರ್ ಐಪಿಎಲ್‌ನಲ್ಲಿ ದಿಲ್ಲಿ ತಂಡವನ್ನು ಪ್ಲೇಆಫ್‌ಗೇರಿಸಿದ್ದರು. ಮುಂದೆ ಕೆಕೆಆರ್ ತಂಡವನ್ನು ಮುನ್ನಡೆಸಿ ಚಾಂಪಿಯನ್ ಆಗಿಸಿದರು. 2025ರಲ್ಲಿ ಪಂಜಾಬ್ ತಂಡಕ್ಕೆ ನಾಯಕರಾದ ಅವರು, 10 ವರ್ಷದ ಬಳಿಕ ತಂಡವನ್ನು ಫೈನಲ್‌ಗೇರಿಸಿದ್ದರು. ಈ ಬಾರಿಯೂ ಉತ್ತಮ ಪ್ರದರ್ಶನ-ನಿರ್ವಹಣೆ ಮಾಡುತ್ತಿರುವ ಅವರು, ಪಂಜಾಬ್ ತಂಡವನ್ನು ಪ್ಲೇಆಫ್‌ಗೆ ಬಲಿಷ್ಠ ಪಡೆಯನ್ನಾಗಿಸಿದ್ದಾರೆ. ಇನ್ನೊಂದೆಡೆ ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ ಹೇಳಿಕೊಳ್ಳುವ ಪ್ರದರ್ಶನ ನೀಡುತ್ತಿಲ್ಲ. ಟಿ20 ಮತ್ತು ಏಕದಿನ ತಂಡಕ್ಕೆ ಶ್ರೇಯಸ್ ಅಯ್ಯರ್ ಅವರನ್ನು ನಾಯಕರನ್ನಾಗಿ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಬದಲಾವಣೆ ನಿರೀಕ್ಷಿಸಿ: ಈ ಬಗ್ಗೆ ಮೂಲಗಳು ಮಾತನಾಡಿ, ಹೊಸ ಟಿ20 ತಂಡವನ್ನು ಘೋಷಿಸಿದಾಗ ಕೆಲವು ಬದಲಾವಣೆಗಳನ್ನು ನಿರೀಕ್ಷಿಸಿ. ಟಿ20 ಮತ್ತು ಏಕದಿನ ತಂಡಗಳನ್ನು ಮುನ್ನಡೆಸುವ ಒಬ್ಬ ಆಟಗಾರನನ್ನು ನಾವು ನೋಡುತ್ತಿದ್ದೇವೆ. ನಮ್ಮ ಗಮನ ಈಗ ಎರಡರ ಮೇಲೂ ಇದೆ. ಬಿಸಿಸಿಐ ಯುವ ಪ್ರತಿಭೆಗಳನ್ನು ನೋಡುವುದರ ಜೊತೆಗೆ ಅನುಭವಿ ಆಟಗಾರರಿಗೆ ಅವಕಾಶಗಳನ್ನು ನೀಡಲು ಬಯಸುತ್ತದೆ. ಶ್ರೇಯಸ್ ಕಳೆದ ಕೆಲವು ವರ್ಷಗಳಿಂದ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ ಎಂದಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5978

ಎಡದಿಂದ ಬಲಕ್ಕೆ

1.ನಿಮಗಾಗದವರ ಮೇಲೆ ನಾವಿಟ್ಟ ಲಕ್ಷ್ಯ (2)
2.ಸಂಪಾದಿಸು (3)
4.ಪುಣ್ಯವಲ್ಲದ ಕಾರ್ಯವಿದು (2)
6.ನೀರು ಎತ್ತರದಿಂದ ಧುಮುಕುವ ಸ್ಥಳ (4)
7.ವಯಸ್ಸಿಗೆ ಅನುಗುಣವಾದ ವರ್ತನೆ (4)
8.ದ್ರವಪದಾರ್ಥದ ಸೇವನೆ ತಿರುಗಿ ನಡೆದಿದೆ (2)
9.ಪದ್ಧತಿ ತಿಳಿದುಕೊಂಡ ಗಂಡ ಉಲ್ಟಾ ಕುಳಿತಿದ್ದಾನೆ (2)
13.ಯೋಗ್ಯ-ಸಮರ್ಥವ್ಯಕ್ತಿಯೀತ (2)
14.ಇದು ನೀರಿನಿಂದ ಸುತ್ತುವರಿದ ಭೂಭಾಗ (2)
15.ಮದುವೆ ಮುಂತಾದವುಗಳ ಬಾಂಧವ್ಯ (3)
16.ತೋರುತ್ತಿರುವ ಉತ್ಸುಕತೆ (3)
17.ದೈವಿಕ ಗಾಯಕರು ವಾಸಿಸುವ ಪರ್ವತ (5)


ಮೇಲಿನಿಂದ ಕೆಳಕ್ಕೆ

1.ಕಳಂಕಗಳಿಂದ ಮುಕ್ತನಾದವನು (4)
2.ಲೆಕ್ಕಾಚಾರ ಮಾಡು-ಚಿಂತಿಸು ಎಂಬರ್ಥದ ನುಡಿಗಟ್ಟು (5)
3.ಹುಸಿಯಿಂದ ಕೂಡಿದ ಗಾಳಿಸುದ್ದಿ (5)
5.ಪಯ-ರಿಣ ಸೇರಿ ಮದುವೆಯಾಯ್ತು (4)
8.ಡಾ.ರಾಜ್-ವಿಷ್ಣು ಅಭಿನಯದ ಚಿತ್ರ ತಲೆಕೆಳಗಾಗಿದೆ (5)
10.ಸ್ವಾರ್ಥವಿಲ್ಲದೆ ಸಹಾಯ ಮಾಡುವ ವ್ಯಕ್ತಿ (5)
11.ಅಕ್ರಮ ವ್ಯಾಪಾರ ನಡೆಯುವ ಸ್ಥಳ (4)
12.ಅಧಿಕಾರ ದುರುಪಯೋಗದಿಂದ ನಡೆದ ಕೆಟ್ಟ ಕೆಲಸ (4)

5977 ಉತ್ತರ

ಎಡದಿಂದ ಬಲಕ್ಕೆ:
1.ವ್ಯಾಧ 2.ಜವುಗು
4.ಲೋಕ 6.ಗಟವಾಣಿ
8.ರಸಕಸಿ 10.ಗ್ರಹಣ
11.ದಸ್ಕತ್ತು 13.ತೊತ್ತಿಗ
15.ಗದಗದ
16.ಗಡಿಯಾರ

ಮೇಲಿನಿಂದ ಕೆಳಕ್ಕೆ :
1.ವ್ಯಾಸಂಗ 2.ಜಕಣಿ
3.ಗುಡಾರ 3.ಕಳಾಸಿ
7.ವಾಯುಗುಣ
9.ಸದಾನಂದ 10.ಗ್ರಹಗತಿ
12.ಹರಕತ್ತು 13.ತೊದಲು
14.ಗಗನ


50 ವರ್ಷಗಳ ಸಾರ್ಥಕ ರಾಜಕೀಯ ಪಯಣ!
50 ವರ್ಷಗಳ ಯಶಸ್ವೀ ರಾಜಕೀಯ ಜೀವನ ಪೂರೈಸಿದ
ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು,
ಅಭಿವೃದ್ಧಿಯ ಹರಿಕಾರರು, ಸಮಸಮಾಜದ
ನಿರ್ಮಾತೃಗಳು, ರೈತ ನಾಯಕರು, ಹೋರಾಟಗಾರರು ಆದ
ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ
ಅಭಿನಂದನೆಗಳು
ಬಿಎಸ್‌ವೈ ಅಭಿಮಾನೋತ್ಸವ
ಯಶಸ್ವಿಯಾಗಲೆಂದು ಹಾರೈಸುವ
ಜಿ.ಬಿ. ವಿನಯ್‌ಕುಮಾರ್
ಸಂಸ್ಥಾಪಕರು ಮತ್ತು ನಿರ್ದೇಶಕರು, ಇನ್‌ಸೈಟ್ಸ್ ಐಎಎಸ್.





Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 34° 26°
ಉಡುಪಿ 34° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 09, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಬಂಟ್ವಾಳ ಬಿಜೆಪಿಯ ಸ್ಥಳಾಂತರಿತ ಕಾರ್ಯಾಲಯ ಉದ್ಘಾಟನೆ



ಪುಟ 4

ಟಿಪ್ಪರ್‌ನಲ್ಲಿ ಅವೈಜ್ಞಾನಿಕ ಮಣ್ಣು ಸಾಗಾಟ: ಹೆದ್ದಾರಿ ಸಂಚಾರಕ್ಕೆ ಸಂಕಷ್ಟ

ಬಿಸಿಲ ಝಳಕ್ಕೆ ಬಿಸಿಯೇರಿದ್ದ ಪೊಡವಿಗೊಡೆಯನ ನಾಡಿಗೆ ತಂಪೆರೆಯಿತು ಶುಕ್ರವಾರದ ಬೇಸಿಗೆ ಮಳೆ



ಉಡುಪಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಶುಕ್ರವಾರ ಸಂಜೆ ಬಳಿಕ ಭರ್ಜರಿ ಮಳೆಯಾಗಿದೆ. ಉಡುಪಿ ನಗರ, ಕಟಪಾಡಿ, ಶಂಕರಪುರ, ಉಚ್ಚಿಲ, ಶಿರ್ವ, ಬ್ರಹ್ಮಾವರ, ಕಾಪು, ಬಂಟಕಲ್, ಪೆರ್ಣಂಕಿಲ, ಹಿರಿಯಡ್ಕ, ಕಾರ್ಕಳ ಹಾಗೂ ಬೈಲೂರು ಪರಿಸರದಲ್ಲಿ ಸುಮಾರು ಅರ್ಧಗಂಟೆಗೂ ಅಧಿಕ ಕಾಲ ಧಾರಾಕಾರ ಮಳೆ ಸುರಿಯಿತು. ಮಳೆ ಜೊತೆಗೆ ಗುಡುಗು ಬಿರುಗಾಳಿ ಹಾಗೂ ಮಿಂಚಿನ ಆರ್ಭಟ ಜೋರಾಗಿತ್ತು.

ಸುತ್ತಮುತ್ತ

ಅಲ್ಲಲ್ಲಿ ಮಳೆ ಬಿದ್ದರೂ ಇಳಿಕೆಯಾಗದ ತಾಪಮಾನ: ಕರಾವಳಿ ಇನ್ನೂ ಧಗಧಗ!

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ ವಾತಾವರಣದ ತಾಪದಲ್ಲಿ ಯಾವುದೇ ಇಳಿಕೆಯಾಗಿಲ್ಲ. ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲೆಯ ತಾಪಮಾನ ಗರಿಷ್ಟ 37 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು.

ಸುಡು ಬಿಸಿಲಿನ ಧಗೆಗೆ ಭೂಮಿ ಹೈರಾಣಾಗಿದ್ದು, ನದಿ ತೊರೆಗಳು ವೇಗವಾಗಿ ಬತ್ತಲಾರಂಭಿಸಿದೆ. ಗ್ರಾಮೀಣ ಭಾಗಗಳಲ್ಲಿ ಈಗಾಗಲೇ ನೀರಿಗೆ ಹಾಹಾಕಾರ ನಿಧಾನವಾಗಿ ಆರಂಭವಾಗುತ್ತಿದೆ.

ಮೂಡುಬಿದ್ರೆ ಭಾಗದಲ್ಲಿ ಗುಡುಗು, ಸಿಡಿಲಾರ್ಭಟ ರಹಿತವಾಗಿ ಭಾರೀ ಮಳೆ

ಮೂಡುಬಿದಿರೆ: ಶುಕ್ರವಾರ ಮುಂಜಾನೆ ಮೂಡುಬಿದಿರೆ ಪರಿಸರದಲ್ಲಿ ಉತ್ತಮ ಮಳೆಯಾಗಿದೆ. ಗುರುವಾರ ಬೆಳಿಗ್ಗೆಯೂ ಮಳೆ ಸುರಿದಿದ್ದು, ತಡರಾತ್ರಿ ಮತ್ತೆ ಮಳೆಯಾಗಿದೆ. ಯಾವುದೇ ಗುಡುಗು ಸಿಡಿಲಿನಾರ್ಭಟಗಳಿಲ್ಲದೆ, ಗಾಳಿಯ ಅಬ್ಬರವಿಲ್ಲದೆ ಮಳೆಯಾಗಿದೆ.



ಶುಕ್ರವಾರ ದಿನಪೂರ್ತಿ ಮಳೆಯ ವಾತಾವರಣವಿತ್ತು. ಮೋಡ ಕವಿದ ವಾತಾವರಣ ದಿನದುದ್ದಕ್ಕೂ ಕಂಡು ಬಂತು. ಮೂಡುಬಿದಿರೆ, ಮಾರೂರು,ಹೊಸಂಗಡಿ, ಶಿರ್ತಾಡಿ, ಮಾರ್ಪಾಡಿ, ವಿದ್ಯಾಗಿರಿ, ಕಲ್ಲಮುಂಡ್ಕೂರು, ಪೇಪರ್ ಮಿಲ್, ಕೀರ್ತಿನಗರ, ಶೇನವ ನಗರ, ಕೆಂಪ್ಲಾಜೆ ಮೊದಲಾದ ಪರಿಸರದಲ್ಲಿ ಭಾರೀ ಮಳೆಯಾಗಿದೆ. ಇದರಿಂದಾಗಿ ಪರಿಸರದಲ್ಲಿ ತಣ್ಣಗಿನ ವಾತಾವರಣ ನಿರ್ಮಾಣವಾಗಿದೆ. ಮೂಡುಬಿದಿರೆ ತಾಲೂಕಿನ ಬಹುತೇಕ ಎಲ್ಲಾ ಕಡೆಗಳಲ್ಲೂ ಮಳೆಯಾಗಿದೆ. ಗುರುವಾರ ಮುಂಜಾನೆ ಸುಮಾರು ಒಂದೂವರೆ ತಾಸುಗಳ ಕಾಲ ಕೆಲವು ಭಾಗಗಳಲ್ಲಿ ಉತ್ತಮ ಮಳೆಯಾದರೆ, ಕೆಲವು ಕಡೆಗಳಲ್ಲಿ ಕ್ಷೀಣವಾಗಿತ್ತು.

ಕರಾವಳಿಯಲ್ಲಿ ಇನ್ನೂ ಎರಡು ದಿನಗಳ ಕಾಲ ಬೇಸಿಗೆ ಮಳೆ ಆರ್ಭಟ?

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಗುಡುಗು ಸಹಿತ ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಲೋಡ್ ಶೆಡ್ಡಿಂಗ್ ಅಲ್ಲ। ಕರೆಂಟ್ ಇಲ್ಲ

ಜನತೆಗೆ ತಾಪತ್ರಯ!


ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಜನ ಹೈರಾಣ

ಕುಂದಾಪುರ: ಈ ಬಾರಿ ಲೋಡ್ ಶೆಡ್ಡಿಂಗ್ ಇಲ್ಲ ಎಂದು ಹೇಳುತ್ತಾ ಬಂದಿದ್ದ ಸರಕಾರ, ಇದೀಗ ಅನಿಯಮಿತ್ ಲೋಡ್ ಶೆಡ್ಡಿಂಗ್ ಮಾಡಲು ಮುಂದಾಗಿದೆ.

ಕಳೆದ ಕೆಲವು ದಿನಗಳಿಂದ ಮೆಸ್ಕಾಂ ಕುಂದಾಪುರ ಉಪವಿಭಾಗ ವ್ಯಾಪ್ತಿಯಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದ್ದು, ಬೆಳಿಗ್ಗೆ ಮಧ್ಯಾಹ್ನ ಹಾಗೂ ರಾತ್ರಿಯ ವೇಳೆ ಅನಿಯಮಿತ ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಎಲ್ಲೆಡೆ ಸಮಸ್ಯೆಯಾಗುತ್ತಿದೆ

ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ರೈತರು, ಜನರಿಗೆ ಸಮಸ್ಯೆಯಾಗುತ್ತಿದೆ. ಇಲ್ಲಿ ಮುನ್ಸೂಚನೆ ನೀಡದೆ ವಿದ್ಯುತ್ ಕಡಿತ ಮಾಡುತ್ತಿರುವುದು ಸೆಕೆಯಿಂದ ಬಳಲುವ ಜನರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ತಾಪ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ವಿಪರೀತ ಸೆಕೆ ಜನರನ್ನು ಹೈರಾಣಾಗಿಸಿದೆ.



ಮಂಗಳವಾರ ನಿರ್ವಹಣೆಗೆ ಕಡಿತ!

ಹಲವೆಡೆ ರಿಪೇರಿ ನೆಪದಲ್ಲಿ ಪ್ರತಿನಿತ್ಯ ಗಂಟೆಗಳ ಕಾಲ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಪ್ರತಿ ಮಂಗಳವಾರ ನಿರ್ವಹಣೆ ನೆಪದಲ್ಲಿ ಬೆಳಿಗ್ಗೆಯಿಂದ ಸಂಜೆ ತನಕ ವಿದ್ಯುತ್ ಕಡಿತ ಮಾಡುತ್ತಿರುವ ಮೆಸ್ಕಾಂ, ಇದೀಗ ಸರತಿ ಸಾಲಿನಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್ ಮಾಡುತ್ತಿದೆ.

ಯಾವುದೇ ಲೋಡ್ ಶೆಡ್ಡಿಂಗ್ ಇಲ್ಲ ಎಂದ ಮೆಸ್ಕಾಂ

ಯುಪಿಸಿಎಲ್ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ತಾಂತ್ರಿಕ ದೋಷ ಕಂಡು ಬಂದ ಹಿನ್ನಲೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡಲಾಗಿದ್ದು, ದೋಷ ಸರಿಪಡಿಸಲಾಗಿದೆ. ಕೆಲವೊಮ್ಮೆ ವಿದ್ಯುತ್ ಮಾರ್ಗದಲ್ಲಿ ಸಣ್ಣಪುಟ್ಟ ದೋಷ ಕಂಡು ಬಂದಾಗ ವಿದ್ಯುತ್ ಕಡಿತ ಮಾಡಲಾಗುತ್ತಿದೆಯೇ ಹೊರತು ಈಗ ಲೋಡ್ ಶೆಡ್ಡಿಂಗ್ ಇಲ್ಲ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಲೋ ವೋಲ್ಟೇಜ್

ಅನಿಯಮಿತ ವಿದ್ಯುತ್ ಕಡಿತದಿಂದ ವಿವಿಧೆಡೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಪೂರೈಕೆಗೂ ಸಮಸ್ಯೆಯಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಕುಡಿಯುವ ನೀರನ್ನು ಓವರ್ ಹೆಡ್ ಟ್ಯಾಂಕ್‌ಗಳಿಗೆ ತುಂಬಿಸಿಕೊಳ್ಳಲು ಕಷ್ಟವಾಗುತ್ತಿದ್ದು, ಗ್ರಾಮೀಣ ಪ್ರದೇಶದಲ್ಲಿ ಲೋ ವೋಲ್ಟೇಜ್ ಸಮಸ್ಯೆಯಿಂದ ಪಂಪ್ ಸೆಟ್ ಆನ್ ಆಗುತ್ತಿಲ್ಲ, ಇದರಿಂದ ಕುಡಿಯುವ ನೀರಿನ ಪೂರೈಕೆಗೆ ತೊಂದರೆಯಾಗುತ್ತಿದೆ. ಗ್ರಾಮೀಣ ಪ್ರದೇಶಗಳ ರೈತರಿಗೂ ಸಮಸ್ಯೆಯಾಗುತ್ತಿದ್ದು, ವಿದ್ಯುತ್ ಕಡಿತದಿಂದ ಕೃಷಿ ಚಟುವಟಿಕೆ ಮೇಲೂ ಪರಿಣಾಮ ಬೀರಲಾರಂಭಿಸಿದೆ.

ಶಾಲೆ ಮೇಲೆ ಶಿಕ್ಷಣ ಇಲಾಖೆ ನಿಗಾ

ಫಿಟ್‌ನೆಸ್ ನೋಡಲ್ ಅಧಿಕಾರಿಗಳ ನೇಮಕ

ಪರಿಶೀಲನೆಗೆ ಬರಲಿದೆ ತಂಡ

ಕಾಸರಗೋಡು: ಶಾಲಾ ಕಟ್ಟಡಗಳ ದೃಢತೆ ಪರಿಶೀಲಿಸಿ ಫಿಟ್‌ನೆಸ್ ಸರ್ಟಿಫಿಕೇಟ್ ನೀಡಬೇಕಾಗಿದ ಇಲಾಖೆಗಳನ್ನು ಸಂಯೋಜನೆ ಗೊಳಿಸಿ ಆ ಮೂಲಕ ಅಗತ್ಯದ ಕ್ರಮ ಕೈಗೊಳ್ಳಲು ರಾಜ್ಯ ಶಿಕ್ಷಣ ಇಲಾಖೆ ಜಿಲ್ಲಾ ಮಟ್ಟದಲ್ಲಿ ನೋಡೆಲ್ ಅಧಿಕಾರಿಗಳನ್ನು ನೇಮಿಸಲು ತೀರ್ಮಾನಿಸಿದೆ.

ಜಿಲ್ಲಾಧಿಕಾರಿಗಳ ನೇತೃತ್ವ

ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ನೋಡೆಲ್ ಅಧಿಕಾರಿಗಳ ತಂಡ ಕಾರ್ಯವೆಸಗಲಿದ್ದು, ಶಾಲೆಗಳ ಫಿಟ್‌ನೆಸ್ ಪರಿಶೀಲಿಸಿ ವರದಿ ನೀಡಲಿದ್ದಾರೆ.

ಸಧ್ಯ ಮುಖ್ಯೋಪಾಧ್ಯಾಯರು ನಿರಾಳ

ತಮ್ಮ ಶಾಲೆಗಳ ಫಿಟ್‌ನೆಸ್ ಸರ್ಟಿಫಿಕೇಟ್‌ಗಾಗಿ ಪ್ರತೀ ಶಾಲೆಗಳ ಮುಖ್ಯೋಪಾಧ್ಯಾಯರು ಏಕಾಂಗಿಯಾಗಿ ಐದು ವಿಭಿನ್ನ ಇಲಾಖೆಗಳನ್ನು ಸಂಪರ್ಕಿಸಿ ಅವರ ಮೂಲಕ ಶಾಲೆಗಳ ಫಿಟ್‌ನೆಸ್‌ನ್ನು ಪರಿಶೀಲಿಸಬೇಕಾಗಿ ಬರುತ್ತಿರುವ ಅತ್ಯಂತ ತ್ರಾಸದಾಯಕ ಹಾಗೂ ಅದರ ಹೆಸರಿನಲ್ಲಿ ಮುಂದೆ ಎದುರಿಸಬೇಕಾಗಿ ಬರುವ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಗಣಿಸಿ ಅದನ್ನು ಹೊರತುಪಡಿಸುವ ಸಲುವಾಗಿ ಈಗ ನೋಡೆಲ್ ಅಧಿಕಾರಿಗಳನ್ನು ನೇಮಿಸಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ.



ಮಾರ್ಗಸೂಚಿ ಪ್ರಕಟ

ನೋಡೆಲ್ ಅಧಿಕಾರಿಗಳ ನೇತೃತ್ವದಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ತಂಡ ಶಾಲೆಗೆ ಆಗಮಿಸಿ ಶಾಲಾ ಕಟ್ಟಡಗಳ ದೃಢತೆಯನ್ನು ಪರಿಶೀಲಿಸಲಿದೆ. ಇದಕ್ಕೆ ಅಗತ್ಯದ ಮಾರ್ಗಸೂಚಿಗಳನ್ನು ಶಿಕ್ಷಣ ಇಲಾಖೆ ಹೊರಡಿಸಿದೆ.

ಜೂ.1ರ ಮೊದಲು ಅಗತ್ಯ

2026ನೇ ಶೈಕ್ಷಣಿಕ ವರ್ಷ ಜೂ.1 ರಂದು ಆರಂಭಗೊಳ್ಳಲಿದ್ದು ಅದರೊಳಗಾಗಿ ಎಲ್ಲಾ ಶಾಲೆಗಳ ಫಿಟ್‌ನೆಸ್ ಪರಿಶೀಲಿಸಿ ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾಗಿದೆ ಎಂದು ಸರಕಾರ ಈ ಹಿಂದೆಯೇ ನಿರ್ದೇಶನ ನೀಡಿತ್ತು.

ಶಿಮಂತೂರು ಸಂಪರ್ಕ ಹಾದಿಯಲ್ಲಿನ ಅವ್ಯವಸ್ಥೆಗೆ ಸ್ಥಳೀಯ ನಾಗರಿಕರು ಗರಂ

ಮೊದಲ ಮಳೆಗೇ ರಸ್ತೆಯಲ್ಲಿ ಕೃತಕ ಕೆರೆ ಸೃಷ್ಟಿ!

ಮುಲ್ಕಿ: ಇಲ್ಲಿನ ತಾಲೂಕು ವ್ಯಾಪ್ತಿಯಲ್ಲಿ ಕಳೆದ ಎರಡು ದಿನ ಸುರಿದ ಭಾರೀ ಮಳೆಗೆ ಗ್ರಾಮೀಣ ಪ್ರದೇಶದ ಜನರು ಸಮಸ್ಯೆಯಿಂದ ಹೈರಾಣಾಗಿದ್ದಾರೆ ತಾಲೂಕು ವ್ಯಾಪ್ತಿಯ ಕಿಲ್ಪಾಡಿ ಹಾಗೂ ಅತಿಕಾರಿಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳು ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲಿ ಮಳೆ ನೀರು ಹರಿಯುತ್ತಿದ್ದು ರಸ್ತೆಯಲ್ಲಿ ಕೆಲ ಕಡೆ ಕೃತಕ ಕೆರೆ ಸೃಷ್ಟಿಯಾಗಿದೆ.

ಅವ್ಯವಸ್ಥೆಗಳ ಆಗರವಾದ ರಸ್ತೆಗಳು

ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿಯ ಕುಬೆವೂರು ರೈಲ್ವೆ ಮೇಲ್ಸೇತುವೆಯಿಂದ ಕವಲೊಡೆಯುವ ಶಿಮಂತೂರು ದೇವಸ್ಥಾನದ ರಸ್ತೆಯಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಅವ್ಯವಸ್ಥೆಗಳ ಆಗರವಾಗಿದೆ.





ಕೃತಕ ನೆರೆಗೆ ಕೃಷಿನಾಶ ಉಂಟಾಗುತ್ತಿದೆ

ಪ್ರತಿ ಮಳೆಗಾಲದಲ್ಲಿ ಈ ಭಾಗದಲ್ಲಿ ಕೃತಕ ನೆರೆ ಉಂಟಾಗಿ ರಸ್ತೆ ಮುಳುಗುತ್ತದೆ, ಕೃಷಿ ನಾಶ ಸಂಭವಿಸುತ್ತದೆ. ಈ ಬಗ್ಗೆ ಅನೇಕ ಬಾರಿ ಸ್ಥಳೀಯ ಜನತೆ ಪಂಚಾಯತ್ ಆಡಳಿತಕ್ಕೆ ಮನವಿ ಸಲ್ಲಿಸಿದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರಾದ ಸುಗಂಧಿ ಪೂಜಾರಿ ಎಂಬವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರಥಮ ಮಳೆಗೆ ಹೀಗಾದರೆ ಮುಂದಿನ ಮಳೆಗಾಲದ ಸ್ಥಿತಿ ಹೇಗೆ? »ಪುಟ 6

ಪ್ರತೀ ಮಳೆಗಾಲ ಇಲ್ಲಿ ಇದೇ ಸಮಸ್ಯೆ

ಪ್ರತೀ ಮಳೆಗಾಲದಲ್ಲಿ ಈ ರಸ್ತೆಯ ಕೆಲವು ಕಡೆಗಳಲ್ಲಿ ಕೃತಕ ನೆರೆ ಉಂಟಾಗುತ್ತಿದೆ. ಕೆಲವು ರಸ್ತೆಗಳು ಅವ್ಯವಸ್ಥೆಯ ಆಗರವಾಗಿದೆ. ಇದನ್ನು ಸರಿಪಡಿಸಲು ಸಂಬಂಧಪಟ್ಟ ಆಡಳಿತ ಮಾತ್ರ ಮುಂದಾಗುತ್ತಿಲ್ಲ ಎಂಬುದು ಸ್ಥಳೀಯರ ಆರೋಪ. ಶುಕ್ರವಾರ ಬೆಳಗ್ಗೆ ಸುರಿದ ಭಾರೀ ಮಳೆಗೆ ರಸ್ತೆಯಲ್ಲಿ ತುಂಬಾ ನೀರು ನಿಂತಿದ್ದು ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಯಿತು.

ತಾಪಕೋಪದಿಂದ ರಕ್ಷಣೆಗೆ ಸೇತುವೆ ತಳವೇ ಆಸರೆ



ಕರಾವಳಿಯಲ್ಲಿ ವಾತಾವರಣದ ಉಷ್ಣಾಂಶ ಸತತವಾಗಿ ಏರಿಕೆಯಾಗುತ್ತಿದ್ದು, ತಾಪದಿಂದ ರಕ್ಷಣೆಗೆ ಕಾರ್ಮಿಕರು ಸೇತುವೆಯ ತಳವನ್ನೇ ಆಶ್ರಯಿಸಿದ ದೃಶ್ಯ ಮಂಗಳೂರಿನ ಸುಲ್ತಾನ್‌ಬತ್ತೇರಿಯಲ್ಲಿ ಕಂಡದ್ದು...

ಅಜೆಕಾರು, ಶಿರ್ಲಾಲು, ಕೆರ್ವಾಶೆ, ಮಾಳ, ನೂರಲ್ ಬೆಟ್ಟು, ಹೆರ್ಮುಂಡೆ, ಬಜಗೋಳಿ

ಗಾಳಿಮಳೆಯ ನಡುವೆ ಕಾರ್ಕಳ, ಹೆಬ್ರಿ ಖುಷ್!

ಕಾರ್ಕಳ/ಹೆಬ್ರಿ: ವಿಪರೀತ ಉರಿ ಬಿಸಿಲು ಮತ್ತು ಅತಿಯಾದ ಸೆಖೆಯಿಂದ ಕಂಗೆಟ್ಟಿದ್ದ ಕಾರ್ಕಳ, ಹೆಬ್ರಿ ತಾಲೂಕಿನ ಜನತೆಗೆ ಶುಕ್ರವಾರ ಸಂಜೆ ಸುರಿದ ಮಳೆ ನೆಮ್ಮದಿ ತಂದಿದೆ.

ಕಾರ್ಕಳ ತಾಲೂಕಿನ ಅಜೆಕಾರು, ಶಿರ್ಲಾಲು, ಕೆರ್ವಾಶೆ, ಮಾಳ, ನೂರಲ್ ಬೆಟ್ಟು, ಹೆರ್ಮುಂಡೆ ಹಾಗೂ ಬಜಗೋಳಿ ಭಾಗ ಗುಡುಗು, ಮಿಂಚಿನ ಸಹಿತ ಭಾರಿ ಮಳೆಯಾಗಿದ್ದು, ಸುಡುಬಿಸಿಲಿನಿಂದ ಕಾದಿದ್ದ ಭೂಮಿಯನ್ನು ತಂಪಾಗಿಸಿದೆ. ಬೆಳಿಗ್ಗೆ ಯಿಂದಲೇ ಸೆಖೆಯ ಬೇಗೆಯಲ್ಲಿ ಬೆಂದಿದ್ದ ಜನರಿಗೆ ಸಂಜೆ ವೇಳೆಗೆ ಸುರಿದ ಮಳೆ ಚೈತನ್ಯ ನೀಡಿದೆ.

ಹೆಬ್ರಿ ತಾಲೂಕಿನಲ್ಲಿಯೂ ಉತ್ತಮ ಮಳೆ

ಹೆಬ್ರಿ ತಾಲೂಕಿನ ಮುನಿಯಾಲು, ಅಂಡಾರು, ಮುದ್ರಾಡಿ, ಕಬ್ಬಿನಾಲೆ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಯೂ ಉತ್ತಮ ಮಳೆಯಾದ ವರದಿಯಾಗಿದೆ. ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣ ಕಂಡುಬಂದಿದ್ದು, ಸಂಜೆ ವೇಳೆಗೆ ಏಕಾಏಕಿ ಆರಂಭವಾದ ಮಳೆಯು ಕೆಲಕಾಲ ಜೋರಾಗಿ ಸುರಿಯಿತು. ಕಳೆದ ಕೆಲವು ದಿನಗಳಿಂದ ಹೆಚ್ಚಾದ ತಾಪಮಾನದಿಂದಾಗಿ ಜನಜೀವನ ಸಂಕಷ್ಟಕ್ಕೆ ಒಳಗಾಗಿತ್ತು. ಕುಡಿಯುವ ನೀರಿನ ಆತಂಕವೂ ಕೂಡಾ ಎದುರಾಗಿತ್ತು. ಈಗ ಸುರಿದಿರುವ ಈ ಮಳೆ ವಾತಾವರಣ ತಂಪಾಗಿಸಿ ಮುದ ನೀಡಿದೆ.





ತಾಲೂಕಿನ ಕೆಲವೆಡೆ ಸಣ್ಣಪುಟ್ಟ ಮಳೆ ಹಾನಿ

ಕಾರ್ಕಳ ತಾಲೂಕಿನ ಕಲ್ಯ ಗ್ರಾಮದ ಅಶೋಕನಗರ ಎಂಬಲ್ಲಿ ಚಂದ್ರಶೇಖರ್ ಆಚಾರ್ಯ ಎಂಬರವರ ಮನೆಗೆ ಸಿಡಿಲು ಬಡಿದು ಹಾನಿಯಾಗಿದೆ. ಬಂಗ್ಲೆಗುಡ್ಡೆ ಸದ್ಭಾವನ ನಗರ ನಿವಾಸಿ ಮಾಧವ ರವರ ಮನೆಗೆ ಮರ ಬಿದ್ದ ಪರಿಣಾಮ ಬಾರಿ ನಷ್ಟ ಸಂಭವಿಸಿದೆ. ಕಡ್ತಲ ಗ್ರಾಮದ ಆನಂದ ನಾಯಕ್ ರವರ ಅಡಿಕೆ ತೋಟದ ಅಡಿಕೆ ಮರಗಳು ತುಂಡಾಗಿ ಒಂದಿಷ್ಟು ನಷ್ಟ ಉಂಟಾಗಿದೆ.

ಕುಸಿದು ಬೀಳುವ ಸ್ಥಿತಿಯಲ್ಲಿದೆ ಇಲ್ಲಿನ ಮಲೆನಾಡು ಹೆದ್ದಾರಿ ಬದಿಯ ಈ ಗುಡ್ಡ

ತಡೆಗೋಡೆ ನಿರ್ಮಿಸಿ ಭದ್ರತೆ ಒದಗಿಸಲು ನಾಗರಿಕರ ಆಗ್ರಹ

ಮಂಜೇಶ್ವರ: ಇಲ್ಲಿನ ವಿದ್ಯಾನಗರ – ನಂದರಪದವು ಮಲೆನಾಡ ಹೆದ್ದಾರಿಯ ಮೀಯಪದವು ಪರಿಸರದ ಪ್ರದೇಶದಲ್ಲಿ ಗುಡ್ಡೆ ಜರಿದು ಬೀಳುವ ಸ್ಥಿತಿಯಲ್ಲಿದ್ದು ತಡೆ ಗೋಡೆ ನಿರ್ಮಿಸಿ ಭದ್ರತೆ ಒದಗಿಸಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಇನ್ನು ಮಳೆಗಾಲ ಸಮೀಪಿಸುತ್ತಿದ್ದು ಮತ್ತೆ ಗುಡ್ಡೆ ಜರಿದು ಬೀಳುವ ಆತಂಕ ಜನರನ್ನು ಕಾಡುತ್ತಿದೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗುಡ್ಡೆ ಜರಿದು ಬೀಳುವ ಪ್ರದೇಶವನ್ನು ಪರಿಶೀಲಿಸಿ ಅದಕ್ಕೆ ತಕ್ಷಣವೇ ಕಾಂಕ್ರೀಟ್‌ನಿಂದ ತಡೆಗೋಡೆ ನಿರ್ಮಿಸಿ ಈ ಭಾಗದ ಭದ್ರತೆಯನ್ನು ಒದಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಕಳೆದ ಮಳೆಗಾಲದಲ್ಲಿ ಇಲ್ಲಿ ಸಮಸ್ಯೆ ಆಗಿತ್ತು...

ಕಳೆದ ಮಳೆಗಾಲದಲ್ಲಿ ಮೀಯಪದವು ಸಮೀಪದ ತಿರುವಿನಲ್ಲಿ ಬೃಹತ್ ಗುಡ್ಡೆ ಜರಿದು ರಸ್ತೆಗೆ ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾದ ಘಟನೆ ನಡೆದಿತ್ತು. ಇದೀಗ ಮಳೆಗಾಲ ಮತ್ತೆ ಹತ್ತಿರವಾಗುತ್ತಿದ್ದು, ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಲು ಜನತೆ ಆಗ್ರಹಿಸಿದ್ದಾರೆ.

ಅಂತರ್ ಕಾಲೇಜು ಸಾಫ್ಟ್ ಬಾಲ್ ಪಂದ್ಯ ಆಳ್ವಾಸ್, ಶ್ರೀ ಮಹಾವೀರ ಪ್ರಥಮ 2
ಉಪ್ಪಳ ಹೊಸಂಗಡಿಯಲ್ಲಿ ಹೆಚ್ಚಿದ ಬೀದಿ ನಾಯಿಗಳ ಕಾಟ: ಸ್ಥಳೀಯರಲ್ಲಿ ಆತಂಕ 3
ಅನಧಿಕೃತ ಹೋಂ-ಸ್ಟೇ ವಿರುದ್ಧ ಕ್ರಮ: ಉಪ ವಿಭಾಗಾಧಿಕಾರಿ ಖಡಕ್ ಎಚ್ಚರಿಕೆ 4
180ರಷ್ಟು ಪಕ್ಷಿಗಳ ಗುರುತಿಸಿ ಸಾಧನೆ ಮೆರೆದ ಹನ್ನೆರಡರ ಬಾಲಕಿ ನೆಹಾರಿಕಾ 5

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಶನಿವಾರ 09, ಮೇ 2026

ಮಂಗಳೂರು ವಿವಿ, ಬನ್ನಡ್ಕ ವಿವಿ ಕಾಲೇಜು ಆಶ್ರಯದಲ್ಲಿ ಅಂತರ್ ಕಾಲೇಜು ಸಾಫ್ಟ್ ಬಾಲ್ ಪಂದ್ಯಾಟ

ಮೂಡುಬಿದಿರೆ ಆಳ್ವಾಸ್, ಶ್ರೀ ಮಹಾವೀರ ಕಾಲೇಜು ಪ್ರಥಮ

ಮೂಡುಬಿದಿರೆ: ಮಂಗಳೂರು ವಿವಿ ಹಾಗೂ ವಿಶ್ವವಿದ್ಯಾನಿಲಯ ಕಾಲೇಜು ಬನ್ನಡ್ಕ ಇವುಗಳ ಸಂಯುಕ್ತ ಆಶ್ರಯದಲ್ಲಿ ಶ್ರೀ ಮಹಾವೀರ ಕಾಲೇಜು ಮೈದಾನದಲ್ಲಿ ನಡೆದ ಅಂತರ ಕಾಲೇಜು ಸಾಫ್ಟ್ ಬಾಲ್ ಪಂದ್ಯಾಟದಲ್ಲಿ ಮಹಿಳಾ ವಿಭಾಗ ಮೂಡುಬಿದಿರೆಯ ಆಳ್ವಾಸ್ ಕಾಲೇಜು ಮತ್ತು ಪುರುಷರ ವಿಭಾಗದಲ್ಲಿ ಶ್ರೀ ಮಹಾವೀರ ಕಾಲೇಜು ಪ್ರಥಮ ಬಹುಮಾನವನ್ನು ಪಡೆದುಕೊಂಡಿದೆ.

ಮಹಿಳೆಯರ ವಿಭಾಗದಲ್ಲಿ ವಿಶ್ವವಿದ್ಯಾನಿಲಯ ಕಾಲೇಜು ಬನ್ನಡ್ಕ ದ್ವಿತೀಯ ತೃತೀಯ ಸ್ಥಾನವನ್ನು, ಮಂಗಳೂರು ವಿಶ್ವವಿದ್ಯಾನಿಲಯ ಕೊಣಾಜೆ ತೃತೀಯ ಸ್ಥಾನವನ್ನು ಪಡೆದುಕೊಂಡಿದೆ.

ಪುರುಷರ ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಾಮದಪದವು, ತೃತೀಯ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಗಳಿಸಿಕೊಂಡಿದೆ.

ಮಹಿಳಾ ವಿಭಾಗದ ವೈಯಕ್ತಿಕ ಪ್ರಶಸ್ತಿಗಳು

(ಮಹಿಳಾ ವಿಭಾಗ): ಅತ್ಯುತ್ತಮ ಪಿಚರ್: ಜನನಿ (ಆಳ್ವಾಸ್ ಕಾಲೇಜು). ಅತ್ಯುತ್ತಮ ಕ್ಯಾಚರ್: ಸಂಗೀತ (ಬನ್ನಡ್ಕ ಕಾಲೇಜು). ಉತ್ತಮ ಬ್ಯಾಟರ್: ನಳಿನಾಕ್ಷಿ (ಆಳ್ವಾಸ್ ಕಾಲೇಜು). ಸರಣಿ ಶ್ರೇಷ್ಠ ಆಟಗಾರ್ತಿ: ಶರಣ್ಯ ಪುತ್ರಾಯ (ಎಂ.ಪಿ.ಎಂ. ಕಾಲೇಜು ಕಾರ್ಕಳ).





ಪುರುಷರ ವಿಭಾಗದ ವೈಯಕ್ತಿಕ ಪ್ರಶಸ್ತಿ

ಅತ್ಯುತ್ತಮ ಪಿಚ್ಚರ್: ಶಶಿಧರ್ (ಶ್ರೀ ಮಹಾವೀರ ಕಾಲೇಜು). ಅತ್ಯುತ್ತಮ ಕ್ಯಾಚರ್: ಪವನ್ (ವಾಮದಪದವು). ಉತ್ತಮ ಬ್ಯಾಟರ್: ಪವನ್ ಕುಮಾರ್ (ಬೆಳ್ತಂಗಡಿ). ಸರಣಿ ಶ್ರೇಷ್ಠ ಆಟಗಾರನಾಗಿ ಅಭಿಶಿತ್ (ಮಹಾವೀರ ಕಾಲೇಜು) ಮೂಡಿ ಬಂದರು.

■ ಮಹಿಳೆಯರ ವಿಭಾಗದಲ್ಲಿ ವಿವಿ ಕಾಲೇಜು ಬನ್ನಡ್ಕ, ಪುರುಷರ ವಿಭಾಗದಲ್ಲಿ ವಾಮದಪದವು, ದ್ವಿತೀಯ

ಸಮಾರೋಪ ಸಮಾರಂಭ, ಬಹುಮಾನ ವಿತರಣೆ

ಸಮಾರೋಪ ಸಮಾರಂಭದಲ್ಲಿ ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ರಾಧಾಕೃಷ್ಣ ಎಚ್.ಬಿ. ಮುಖ್ಯ ಅತಿಥಿಯಾಗಿ ಪಾಲ್ಗೊಂಡು ವಿಜೇತ ತಂಡಗಳಿಗೆ ಪ್ರಶಸ್ತಿ ವಿತರಿಸಿದರು. ಬನ್ನಡ್ಕ ವಿಶ್ವವಿದ್ಯಾನಿಲಯ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ರತ್ನಾಕರ ಪುತ್ರಾಯ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿಶ್ವಕಪ್ ಕಬಡ್ಡಿ ವಿಜೇತ ಆಟಗಾರ್ತಿ ಕು|| ಧನಲಕ್ಷ್ಮಿ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಕಾರ್ಕಳದ ಎಂ.ಪಿ.ಎಂ. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಡಾ. ಜಯಭಾರತಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ಸುಧಾಕರ್ ಕಾರ್ಯಕ್ರಮ ನಿರೂಪಿಸಿದರು. ಸಂತೋಷ್ ವಂದಿಸಿದರು.

ಸುತ್ತ ಮುತ್ತ

ಎಸೆಸೆಲ್ಸಿಯಲ್ಲಿ ಕ್ಷವಿಗೆ ಶೇ. 98.40



ಮಂಗಳೂರು: ಮುಂಬೈಯ ರೀಟಾ ಮೆಮೋರಿಯಲ್ ಹೈಸ್ಕೂಲ್ ಶಾಲೆಯ ವಿದ್ಯಾರ್ಥಿನಿ ಕ್ಷವಿ ಶಿವಪ್ರಸಾದ್‌ಶೆಟ್ಟಿ ಮಹಾರಾಷ್ಟ್ರ ಸ್ಟೇಟ್ ಬೋರ್ಡ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 98.40 ಶೇ. ಅಂಕ ಪಡೆದು ಉತ್ತೀರ್ಣರಾಗಿದ್ದಾರೆ. ಈಕೆ ನ್ಯಾಯವಾದಿ ಕೊರಂಗ್ರಪಾಡಿ ದೊಡ್ಡಮನೆ ಶಿವಪ್ರಸಾದ್ ಶೆಟ್ಟಿ ಮತ್ತು ನಿಡ್ಡೋಡಿ ಪಾತ್ರಬೈಲುಗುತ್ತು ಸೌಮ್ಯ ಶೆಟ್ಟಿ ಅವರ ಮಗಳು.

ನಾಳೆ ಕಟೀಲು ಕಲಾ ಉತ್ಸವ

ಕಟೀಲು: ಇಲ್ಲಿನ ಸರಸ್ವತೀ ಸದನದಲ್ಲಿ ಶ್ರೀ ಕಟೀಲು ಪ್ರತಿಷ್ಠಾನದ ಸಂಯೋಜನೆಯಲ್ಲಿ ಮೇ 10ರಂದು ಶ್ರೀ ಕಟೀಲು ಕಲಾ ಉತ್ಸವ ನಡೆಯಲಿದೆ. ಅಂದು ಬೆಳಗ್ಗೆ 7.30ಕ್ಕೆ ಪಲಿಮಾರು ಶ್ರೀ ವಿದ್ಯಾಧೀಶ ಸ್ವಾಮೀಜಿ, ಕೊಂಡೆವೂರು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ, ಡಾ. ಎಂ.ಎನ್. ರಾಜೇಂದ್ರ ಕುಮಾರ್, ಡಾ. ಎಂ. ಮೋಹನ ಆಳ್ವ ಮುಂತಾದವರ ಉಪಸ್ಥಿತಿಯಲ್ಲಿ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದ್ದು ಬಳಿಕ ಕುಟುಂಬ ಭಜನೆ, 16 ವರ್ಷಕ್ಕಿಂತ ಕೆಳಗಿನವರ, ಹಾಗೂ ಮೇಲಿನವರಿಗೆ ಹೋಗೆ ಮೂರು ಭಜನಾ ಸ್ಪರ್ಧೆ ನಡೆಯಲಿದೆ. ಸಂಜೆ ಗಂಟೆ 5ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮುಂಬೈನ ವಾಮಯ್ಯ ಶೆಟ್ಟಿ ದಂಪತಿಗೆ ಕಟೀಲು ಪ್ರತಿಷ್ಠಾನ ಸಮ್ಮಾನ ನಡೆಯಲಿದೆ. ಕಾಣಿಯೂರು ಮಠಾಧೀಶ ಶ್ರೀ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ, ಡಾ. ಪ್ರಕಾಶ್ ಶೆಟ್ಟಿ ಬಂಜಾರ, ಡಿ.ಯು. ಮಲ್ಲಿಕಾರ್ಜುನ, ಡಾ. ಎನ್. ಕೆ. ವೆಂಕಟ್ರಮಣ, ಶಶಿಧರ ಶೆಟ್ಟಿ ಬರೋಡ, ಮಿಜಾರು ರಾಜೇಶ್ ಶೆಟ್ಟಿ ಅತ್ತೂರು ರಾಜೇಶ್ ಶೆಟ್ಟಿ ಮುಂತಾದವರ ಉಪಸ್ಥಿತಿಯಲ್ಲಿ ಸಭೆ ನಡೆಯಲಿದೆ. ಭಜನಾ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, ಸಂಗೀತ, ಭರತನಾಟ್ಯ, ಹಾರ್ಮೋನಿಯಂ ವಾದನ, ಪೌರಾಣಿಕ ನಾಟಕ ಅಗ್ನಿ ಆಹುತಿ ಪ್ರದರ್ಶನಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ನೋಟ್ ಬುಕ್, ಪೆನ್ನು ವಿತರಣೆ

ಪುತ್ತೂರು: ಆರ್‌ಕೆ ಸ್ಪೋರ್ಟ್ಸ್ ಅಂಡ್ ಆರ್ಟ್ಸ್ ಕ್ಲಬ್ ಪುತ್ತೂರು ವತಿಯಿಂದ 200 ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ಮತ್ತು ಪೆನ್ನು ವಿತರಣೆ ಮೇ 10ರಂದು ಬೆಳಗ್ಗೆ 10.30ಕ್ಕೆ ಕಮ್ಮಾಯಿ ಜಂಕ್ಷನ್‌ನಲ್ಲಿ ನಡೆಯಲಿದೆ ಎಂದು ಕ್ಲಬ್‌ನ ಸದಸ್ಯ ಆಶಿರ್ ಕುಂತೂರು ತಿಳಿಸಿದ್ದಾರೆ. ಅವರು ಪುತ್ತೂರು ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆರ್‌ಕೆ ಸ್ಪೋರ್ಟ್ಸ್ ಅಂಡ್ ಆರ್ಟ್ಸ್ ಕ್ಲಬ್ ವತಿಯಿಂದ 3ನೇ ವರ್ಷದ ಪುಸ್ತಕ ವಿತರಣೆ ಕಾರ್ಯಕ್ರಮಗಳು ನಡೆಯುತ್ತಿದ್ದು, ಮೊದಲ ವರ್ಷದಲ್ಲಿ 50 ವಿದ್ಯಾರ್ಥಿಗಳಿಗೆ, 2ನೇ ವರ್ಷದಲ್ಲಿ 100 ವಿದ್ಯಾರ್ಥಿಗಳಿಗೆ ಹಾಗೂ ಈ ಬಾರಿ 2500ರಿಂದ 300ರಷ್ಟು ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಪೆನ್ ವಿತರಣೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ವಿ.14ರಂದು ಕರ್ನಾಟಕ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಉದ್ಘಾಟಿಸಲಿದ್ದಾರೆ. ಮೇ 10ರಂದು ನಡೆಯುವ ಕಾರ್ಯಕ್ರಮದಲ್ಲಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ನಗರಸಭಾ ನಿಕಟಪೂರ್ವ ಅಧ್ಯಕ್ಷ ಲೀಲಾವತಿ ಅಣ್ಣು ನಾಯ್ಕ, ನಿಕಟಪೂರ್ವ ಸದಸ್ಯ ಸುಂದರ ಪೂಜಾರಿ ಬಡಾವು, ಮಾಜಿ ಶಾಸಕ ಮೊಯ್ದೀನ್ ಬಾವ, ಯು.ಟಿ. ಫರೀದ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಆರ್ ಕೆ ಸ್ಪೋರ್ಟ್ಸ್ ಅಂಡ್ ಆರ್ಟ್ಸ್ ಕ್ಲಬ್‌ನ ಸ್ಥಾಪಕ ನಾಝಿಮ್ ಕಮ್ಮಾಯಿ, ಸದಸ್ಯರಾದ ಇರ್ಷಾದ್ ಕೋಲ್ಪೆ, ನೌಫಲ್ ಕಮ್ಮಾಯಿ, ಇಕ್ಬಾಲ್ ಕಮ್ಮಾಯಿ, ಹುಸೈನಾರ್ ಕಮ್ಮಾಯಿ ಉಪಸ್ಥಿತರಿದ್ದರು.

ಮೆಸ್ಕಾಂ ಜನಸಂಪರ್ಕ ಸಭೆ ಮುಂದೂಡಿಕೆ

ಪುತ್ತೂರು: ಮೇ 12ರಂದು ನಿಗದಿಯಾಗಿದ್ದ ಪುತ್ತೂರು ನಗರ ಉಪವಿಭಾಗ ಮತ್ತು ಪುತ್ತೂರು ಗ್ರಾಮಾಂತರ ಉಪವಿಭಾಗಗಳಿಗೆ ಸಂಬಂಧಿಸಿದ ಜನ ಸಂಪರ್ಕ ಸಭೆಯನ್ನು ಮೇ 13ಕ್ಕೆ ಮುಂದೂಡಲಾಗಿದೆ. ಅ ದಿನ ಸಮಯ ಬೆಳಗ್ಗೆ 11ರಿಂದ 12 ಗಂಟೆಯವರೆಗೆ ಪುತ್ತೂರು ನಗರ ಉಪವಿಭಾಗ ಕಚೇರಿಯಲ್ಲಿ ಸಭೆ ನಡೆಯಲಿದ್ದು, ಮೆಸ್ಕಾಂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂರವಾಣಿ ಸಂಖ್ಯೆ 08251-230393ರ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಜನಜಾಗೃತಿ ವೇದಿಕೆ ಪುತ್ತೂರು ತಾಲೂಕು ಪದಾಧಿಕಾರಿಗಳ ಸಭೆ



ಪುತ್ತೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಂಗ ಸಂಸ್ಥೆಯಾದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಇದರ ಪುತ್ತೂರು ತಾಲೂಕು ವೇದಿಕೆ ಪದಾಧಿಕಾರಿಗಳ ಸಭೆಯು ಪುತ್ತೂರು ಯೋಜನ ಕಚೇರಿ ಸಭಾಂಗಣದಲ್ಲಿ ನಡೆಯಿತು.

ತಾಲೂಕು ಅಧ್ಯಕ್ಷ ಲೋಕೇಶ್ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯನ್ನು ದ.ಕ. ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಪದ್ಮನಾಭ ಶೆಟ್ಟಿ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಪುತ್ತೂರು ತಾಲೂಕು ಯೋಜನಾಧಿಕಾರಿ ಶಶಿಧರ್ ವಾರ್ಷಿಕ ವರದಿ ವಾಚಿಸಿದರು. ಜಿಲ್ಲಾ ಜನಜಾಗೃತಿ ವೇದಿಕೆಯ ಮಾಜಿ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ ಮಾತನಾಡಿ, ಜನಜಾಗೃತಿ ಕಾರ್ಯಕ್ರಮ ಅಚ್ಚುಮೆಚ್ಚಿನ ಕಾರ್ಯಕ್ರಮ. ಇದರಲ್ಲಿ ನಾವು ಭಾಗಿಯಾಗಿರುವುದು ನಮ್ಮ ಭಾಗ್ಯ ಎಂದರು.

ದ.ಕ. ಜಿಲ್ಲೆ-2 ನಿರ್ದೇಶಕ ಬಾಬು ನಾಯ್ಕ ಮಾತನಾಡಿ, ಜನಜಾಗೃತಿ ಕಾರ್ಯಕ್ರಮಗಳಾದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಇನ್ನಷ್ಟು ಪರಿಣಾಮಕಾರಿ ಆಗಿ ನಡೆಯಬೇಕು ಎಂದರು. ಜನಜಾಗೃತಿ ವಿಭಾಗದ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಅವರು 2026-27ನೇ ಸಾಲಿನ ಕ್ರಿಯಾ ಯೋಜನೆಯ ಗುರಿ ಸಾಧನೆ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭ ಪುತ್ತೂರು ತಾಲೂಕು ಜನಜಾಗೃತಿ ವೇದಿಕೆ ನೂತನ ಅಧ್ಯಕ್ಷರಾಗಿ ಸತೀಶ್ ನ್ಯಾಕ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕಳೆದ 3 ವರ್ಷಗಳಿಂದ ಜನಜಾಗೃತಿ ವೇದಿಕೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಲೋಕೇಶ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು. ಸಭೆಯಲ್ಲಿ ಪುತ್ತೂರು ಯೋಜನಾ ಕಚೇರಿ ವ್ಯಾಪ್ತಿಯ ವಲಯವಾರು ಸಾಧನ ವರದಿಯನ್ನು ಮಂಡಿಸಲಾಯಿತು. ಸಭೆಯಲ್ಲಿ ಜನಜಾಗೃತಿ ವೇದಿಕೆ ಪದಾಧಿಕಾರಿಗಳು, ಜನಜಾಗೃತಿ ಮೇಲ್ವಿಚಾರಕ ನಿತೇಶ್ ಕೆ., ಇದ್ದರು. ಯೋಜನಾಧಿಕಾರಿ ಶಶಿಧರ್ ಸ್ವಾಗತಿಸಿ, ಕೃಷಿ ಮೇಲ್ವಿಚಾರಕ ಹರೀಶ್ ನಿರ್ವಹಿಸಿದರು.

ಬಂಟ್ವಾಳ ಬಿಜೆಪಿ ಸ್ಥಳಾಂತರಿತ ಕಾರ್ಯಾಲಯದ ಉದ್ಘಾಟನೆ



ಬಂಟ್ವಾಳ: ಬಿ.ಸಿ.ರೋಡಿನ ಗಾಣದಪಡ್ಪು ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಸಮೀಪ ಇರುವ ಗುರುಕೃಪಾ ಕಾಂಪ್ಲೆಕ್ಸ್ ನಲ್ಲಿ ಬಿಜೆಪಿ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಸ್ಥಳಾಂತರಿತ ಕಾರ್ಯಾಲಯವನ್ನು ಶುಕ್ರವಾರ ಉದ್ಘಾಟಿಸಲಾಯಿತು.

ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿ, ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಕಾರ್ಯದರ್ಶಿ ದೇವಪ್ಪ ಪೂಜಾರಿ, ದಿನೇಶ್ ಅಮ್ಟೂರು, ಮಂಡಲ ಅಧ್ಯಕ್ಷ ಆರ್. ಚೆನ್ನಪ್ಪ ಕೋಟ್ಯಾನ್ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್ ಶೆಟ್ಟಿ ಸುದರ್ಶನ ಬಜ, ಮಾಜಿ ಸಚಿವರಾದ ನಾಗರಾಜ ಶೆಟ್ಟಿ ಮಾಜಿ ಶಾಸಕರಾದ ರುಕ್ಮಯ ಪೂಜಾರಿ, ಪದ್ಮನಾಭಕೊಟ್ಟಾರಿ, ಪ್ರಮುಖರಾದ ಹರಿಕೃಷ್ಣ ಬಂಟ್ವಾಳ, ವಿಕಾಸ್ ಪುತ್ತೂರು, ಸಂತೋಷ್ ಶೆಟ್ಟಿ ದಳಂದಿಲ, ರಾಮದಾಸ ಬಂಟ್ವಾಳ, ಗೋವಿಂದ ಪ್ರಭು, ಮಾಧವ ಮಾವೆ, ಸಂದೇಶ್ ಶೆಟ್ಟಿ ಅರೆಬೆಟ್ಟು, ವಸಂತ ಅಣ್ಣಳಿಕೆ ಹರೀಶ್ ಶೆಟ್ಟಿ ಪಡು ಅರುಣ್ ರೋಶನ್ ಡಿಸೋಜ, ಪ್ರಕಾಶ ಅಂಚನ್, ಸಂತೋಷ್ ರಾಯಿಬೆಟ್ಟು,ದಿನೇಶ್ ಭಂಡಾರಿ, ಕರುಣೇಂದ್ರ ಪೂಜಾರಿ, ಪುರುಷೋತ್ತಮ ಶೆಟ್ಟಿ ವಾಮದಪದವು ಮತ್ತು ಪಕ್ಷದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಎಸ್.ಕೆ.ಗೋಲ್ಡ್‌ಸ್ಮಿತ್ಸ್ ಸೊಸೈಟಿ 'ವಿಶ್ವಸೌಧ'ಕ್ಕೆ ಡಾ.ಕೆ.ಎಸ್.ರಾಜಣ್ಣ ಭೇಟಿ



ಮಂಗಳೂರು: ಎಸ್.ಕೆ.ಗೋಲ್ಡ್‌ಸ್ಮಿತ್ಸ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಲಿ., ಮಂಗಳೂರು ಇದರ ಆಡಳಿತ ಕಚೇರಿ 'ವಿಶ್ವಸೌಧ'ಕ್ಕೆ ಜನಪರ ಸೇವಾ ವಿಶ್ವರೂಪಿ ಸಾಧಕ ರಾಜ್ಯ ಮತ್ತು ರಾಷ್ಟ್ರದ ಮೊಟ್ಟ ಮೊದಲ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ರಾಜ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ, 2024ರಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಕೆ.ಎಸ್. ರಾಜಣ್ಣ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಪಿ. ಉಪೇಂದ್ರ ಆಚಾರ್ಯ, ಉಪಾಧ್ಯಕ್ಷ ಎ. ಆನಂದ ಆಚಾರ್ಯ, ಪ್ರಧಾನ ವ್ಯವಸ್ಥಾಪಕ ಯಜ್ಞೇಶ್ವರ, ನಿರ್ದೇಶಕರಾದ ಕೆ. ಯಜ್ಞೇಶ್ವರ ಆಚಾರ್ಯ, ವೈ.ವಿ. ವಿಶ್ವಜ್ಞಮೂರ್ತಿ, ಎ.ಜಯ ಆಚಾರ್ ಉಪಸ್ಥಿತಿಯಲ್ಲಿ ಗೌರವ ಪೂರ್ವಕವಾಗಿ ಅಭಿನಂದಿಸಲಾಯಿತು. ಡಾ.ಕೆ. ಎಸ್. ರಾಜಣ್ಣ ಇವರು ಸಂಸ್ಥೆ ವಜ್ರಮಹೋತ್ಸವದ ಪ್ರಯುಕ್ತ ಆಯೋಜಿಸಿರುವ ಅರವತ್ತು ಸಾಮಾಜಿಕ ಕಾರ್ಯ ಚಟುವಟಿಕೆ ಗಳನ್ನು ಪರಿಶೀಲಿಸಿ ಪ್ರಶಂಸಿಸಿದರು.

ಮಣ್ಣಗುಡ್ಡ ವಾರ್ಡ್: ವನಿತಾವನ ನಿರ್ಮಾಣಕ್ಕೆ ಶಾಸಕರಿಂದ ಗುದ್ದಲಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 28ನೇ ಮಣ್ಣಗುಡ್ಡ ವಾರ್ಡ್ ವನಿತಾವನ ಪಾರ್ಕಿನ ಅಲಂಕಾರಿಕ ವಿದ್ಯುತ್ ದೀಪ, ಜಿಮ್ ಸಲಕರಣೆಗಳು, ಹಾಗೂ ಪಾರ್ಕ್‌ನ ಅಗತ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಯು ರೂ. 12 ಲಕ್ಷ ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಈ ಪಾರ್ಕಿಗೆ ದಿನನಿತ್ಯ ಬರುವ ಸಾರ್ವಜನಿಕರ ಅನುಕೂಲಕ್ಕಾಗಿ ಹಲವು ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಅಭಿವೃದ್ಧಿ ಕಾಮಗಾರಿಯು ಸರ್ವರ ಸಹಕಾರದಿಂದ ನಡೆಯುತ್ತಿದ್ದು ಎಲ್ಲರಿಗೂ ಉಪಯೋಗವಾದರೆ ಅದೇ ಸಂತೋಷ. ಅಭಿವೃದ್ಧಿ ವಿಷಯದಲ್ಲಿ ಯಾವುದೇ ರಾಜಕೀಯಕ್ಕೆ ಆಸ್ಪದವಿಲ್ಲ ಎಂದರು.

ಈ ಸಂದರ್ಭದಲ್ಲಿ ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ನಿಕಟ ಪೂರ್ವ ಪಾಲಿಕೆ ಸದಸ್ಯರಾದ ಸಂಧ್ಯಾ ಮೋಹನ್ ಆಚಾರ್, ಮಾಜಿ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಜಯರಾಮ್ ಶೆಟ್ಟಿ ವೆಂಕಟೇಶ್ ಆಚಾರ್, ರಘುನಾಥ್ ಪ್ರಭು, ಮೋಹನ್ ಆಚಾರ್, ಮಾಲಾ, ಸೀತಾ, ಯಶ್ ರಾಜ್, ಗಣೇಶ್ ಕಾಮತ್, ಮೂಡ ಅಧಿಕಾರಿಗಳು ಹಾಗೂ ಪ್ರತಿನಿತ್ಯ ವಾಕಿಂಗ್ ಮಾಡುವ ಜನರು ಉಪಸ್ಥಿತರಿದ್ದರು.

ರೆಡ್‌ಕ್ರಾಸ್ ಉದಾತ್ತ ಸೇವಾ ಕಾರ್ಯಗಳಿಗೆ ಪ್ರೇರಣೆ: ಕಾಮತ್



ಮಂಗಳೂರು: ಸೇವೆಯಲ್ಲಿ ತೊಡಗಿಸಿ ಕೊಳ್ಳಲು ವಿದ್ಯಾರ್ಥಿಗಳಿಗೆ ಮತ್ತು ಯುವ ಜನತೆಗೆ ಪ್ರೇರಣೆಯಾಗಿದೆ ಎಂದು ಶಾಸಕ ಡಿ. ವೇದವ್ಯಾಸ ಕಾಮತ್ ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ. ಜಿಲ್ಲಾ ಘಟಕದ ವತಿಯಿಂದ ಯೂತ್ ರೆಡ್‌ಕ್ರಾಸ್ ಮಂಗಳೂರು ವಿವಿ ಸಹಯೋಗದಲ್ಲಿ ನಗರದ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ಶುಕ್ರವಾರ ನಡೆದ ವಿಶ್ವ ರೆಡ್‌ಕ್ರಾಸ್ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಲಾದ ಯೂತ್ ರೆಡ್ ಕ್ರಾಸ್ ವಿಚಾರ ಸಂಕಿರಣದಲ್ಲಿ ಸುರತ್ಕಲ್ ಎನ್‌ಐಟಿಕೆಯ ಸಹ ಪ್ರಾಧ್ಯಾಪಕಿ ಡಾ.ರಶ್ಮಿ ಸುಧೀರ್ ಉಚ್ಚಿಲ್ ಮತ್ತು ಡಿ. ಅಡಿಕ್ಷನ್ ಸಮಾಲೋಚಕಿ ಡಾ.ಕುಸುಮ್ ತಂತ್ರಿ ಡೆಸಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ರೆಡ್‌ಕ್ರಾಸ್ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ. ಬಿ.ಸಚ್ಚಿದಾನಂದ ರೈ, ಖಜಾಂಜಿ ಗುರುದತ್ ನಾಯಕ್, ನಿರ್ದೇಶಕರಾದ ಡಾ.ಸತೀಶ್ ರಾವ್, ಪಿ.ಬಿ.ಹರೀಶ್ ರೈ, ರಾಘವೇಂದ್ರ ರಾವ್ ಉಪಸ್ಥಿತರಿದ್ದರು. ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನ ಬಿ. ಸ್ವಾಗತಿಸಿ, ಮಂಗಳೂರು ವಿ.ವಿ. ಯೂತ್ ರೆಡ್‌ಕ್ರಾಸ್‌ನ ನೋಡಲ್ ಅಧಿಕಾರಿ ಡಾ.ಗಾಯತ್ರಿ ಎನ್. ವಂದಿಸಿದರು. ವಿದ್ಯಾರ್ಥಿನಿ ರಕ್ಷಾ ನಿರೂಪಿಸಿದರು.

ಯೂತ್ ರೆಡ್‌ಕ್ರಾಸ್ ವಿಚಾರ ಸಂಕಿರಣದಲ್ಲಿ ನಡೆದ ಯೂತ್ ರೆಡ್‌ಕ್ರಾಸ್ ವಿಚಾರ ಮಂಡನೆ ಸ್ಪರ್ಧೆಯಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಥಮ ಸ್ಥಾನ ಸುನೈನಾ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುಂಜಾಲಕಟ್ಟೆ), ದ್ವಿತೀಯ : ಝೀನತ್ ಝುಲ್ಫಾ (ಯೆನೆಪೋಯ ಆಯುರ್ವೇದ ಮೆಡಿಕಲ್ ಕಾಲೇಜ್, ಮಂಗಳೂರು), ತೃತೀಯ ಸ್ಥಾನವನ್ನು ಕೌಶಿಕ್ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು) ಪಡೆದರು.

'ಎಸೆಸೆಲ್ಸಿ, ಪಿಯುಸಿ ನಂತರ ಮುಂದೇನು?' ಕಾರ್ಯಾಗಾರ



ಉಪ್ಪಿನಂಗಡಿ: ವಿದ್ಯಾರ್ಥಿಗಳು ತಮ್ಮ ಪ್ರೌಢ ಹಂತದಲ್ಲೇ ತಮ್ಮ ಮುಂದಿನ ಕಲಿಕೆ, ಓದು, ಬದುಕಿನ ಬಗ್ಗೆ ನಿಖರ ಗುರಿ ಹೊಂದಿರಬೇಕು. ಹೀಗಾದಾಗ ಮಾತ್ರ ತಾನು ಬದುಕಿನಲ್ಲಿ ಏನಾದರೊಂದು ಸಾಧನೆ ಮಾಡಲು ಸಾಧ್ಯ ಎಂದು ಉಪ್ಪಿನಂಗಡಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಇಬ್ರಾಹಿಂ ಹೇಳಿದರು.

ಅವರು ಉಪ್ಪಿನಂಗಡಿಯಲ್ಲಿ ಉಬಾರ್ ಸ್ಪೋರ್ಟಿಂಗ್ ಕ್ಲಬ್ ವತಿಯಿಂದ 'ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ನಂತರ ಮುಂದೇನು?' ಎಂಬ ಕಾರ್ಯಕ್ರಮ ಮತ್ತು ಉಪ್ಪಿನಂಗಡಿ ಪರಿಸರದ ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದ ಸಾಧಕ ವಿದ್ಯಾರ್ಥಿಗಳ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಯಚೂರು ವಿವಿ ಪ್ರೊ. ರಝೀಯಾ ಬಾನು, ಶೈಕ್ಷಣಿಕ ತರಬೇತುದಾರರಾದ ವತ್ಸಲಾ ನಾಯಕ್, ಹನೀಫ್ ಪುತ್ತೂರು, ಉಬಾರ್ ಸ್ಪೋರ್ಟಿಂಗ್ ಕ್ಲಬ್ ಗೌರವ ಸಲಹೆಗಾರ ಯು.ಟಿ. ಮಹಮ್ಮದ್ ತೌಸೀಫ್ ಪೋಷಕರೊಂದಿಗೆ ಮಕ್ಕಳು ಮತ್ತು ಪೋಷಕರ ಸಂಬಂಧ ಹಾಗೂ ಶಿಕ್ಷಣದ ಆಯ್ಕೆಯಲ್ಲಿ ಪೋಷಕರ ಪಾತ್ರ ಎಂಬ ವಿಷಯದಲ್ಲಿ ಮಾತನಾಡಿದರು.

ಉಬಾರ್ ಸ್ಪೋರ್ಟಿಂಗ್ ಕ್ಲಬ್ ಉಪ್ಪಿನಂಗಡಿ ಇದರ ಅಧ್ಯಕ್ಷ ಶಬೀರ್ ಕೆಂಪಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪ್ಪಿನಂಗಡಿ ಇಂಡಿಯನ್ ಸ್ಕೂಲ್ ಅಧ್ಯಕ್ಷ ಎಚ್. ಯೂಸುಫ್ ಹಾಜಿ, ಇಂಡಿಯನ್ ಸ್ಕೂಲ್ ಪ್ರಾಂಶುಪಾಲರಾದ ಶಂಶಾದ್ ಬಾನು, ಸರಳೀಕಟ್ಟೆ ಸರಕಾರಿ ಪ್ರೌಢ ಶಾಲೆ ಅಧ್ಯಾಪಕರಾದ ಮಹಮ್ಮದ್ ಹನೀಫ್ ಮಾತನಾಡಿದರು.

ಇಂಡಿಯನ್ ಸ್ಕೂಲ್ ಕಾರ್ಯದರ್ಶಿ ಹಾಜಿ ಶುಕೂರ್ ಶುಕ್ರಿಯಾ, ದೈಹಿಕ ಶಿಕ್ಷಣ ಶಿಕ್ಷಕ ರಫೀಕ್ ಮಾಸ್ಟರ್ ಉಪ್ಪಿನಂಗಡಿ, ಯು.ಟಿ. ರಹೀನಾರುಝ್ ಅಂಡೆತ್ತಡ್ಕ, ರಿಜ್ವಾನ್ ಮಂಗಳೂರು, ಅರಫಾ ವಿದ್ಯಾ ಕೇಂದ್ರದ ಶಫೀಕ್ ಅರಫಾ, ಜ್ಞಾನ ಭಾರತಿ ವಿದ್ಯಾ ಸಂಸ್ಥೆಯ ರವೂಫ್ ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರ

ಕಾರ್ಯಕ್ರಮದಲ್ಲಿ ಇಂಡಿಯನ್ ಸ್ಕೂಲ್, ಜ್ಞಾನಭಾರತಿ ವಿದ್ಯಾ ಕೇಂದ್ರ, ಇಂದ್ರಪ್ರಸ್ಥ ವಿದ್ಯಾಲಯ, ಉಪ್ಪಿನಂಗಡಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆ, ಅರಫಾ ವಿದ್ಯಾ ಕೇಂದ್ರ, ಆಯಿಷಾ ವಿದ್ಯಾ ಸಂಸ್ಥೆ ಆತೂರು, ಬದ್ರಿಯಾ ವಿದ್ಯಾ ಸಂಸ್ಥೆ ಆತೂರು, ಸರ್ಕಾರಿ ಪ್ರೌಢ ಶಾಲೆ ಸರಳೀಕಟ್ಟೆ, ಅಲ್ ಮುನವ್ವರ ಮೂಡಡ್ಕ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕೆ.ಎಸ್.ಎಸ್. ಪ್ರತಿಭಾ ಹಬ್ಬದಲ್ಲಿ ಚಲನಚಿತ್ರ ನಟ ದೀಕ್ಷಿತ್ ಕುಂತೂರು ಬಣ್ಣನೆ

ಜ್ಞಾನ ಜೊತೆ ಕಲಾ ಪ್ರೌಢಿಮೆ ಔನತ್ಯಕ್ಕೆ ಬುನಾದಿ

ಸುಬ್ರಹ್ಮಣ್ಯ: ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಗುಣ ಅತ್ಯಗತ್ಯ. ಕಾಲೇಜಿನಲ್ಲಿ ದೊರಕಿದ ಮಹೋನ್ನತ ಪ್ರೋತ್ಸಾಹ ನನ್ನನ್ನು ನಟನನ್ನಾಗಿ ಮಾಡಿದೆ. ವಿದ್ಯಾರ್ಥಿಗಳು ಜ್ಞಾನಾರ್ಜನೆಯೊಂದಿಗೆ ಕಲಾ ಪ್ರೌಢಿಮೆಯನ್ನು ಹೊಂದಿರಬೇಕು. ಇದು ಭವಿಷ್ಯದ ಔನತ್ಯಕ್ಕೆ ಬುನಾದಿಯಾಗುತ್ತದೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಮತ್ತು ಚಲನಚಿತ್ರ ನಟ ದೀಕ್ಷಿತ್ ಕುಂತೂರು ಹೇಳಿದರು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತಕ್ಕೊಳಪಟ್ಟ ಕೆ.ಎಸ್.ಎಸ್. ಕಾಲೇಜಿನಲ್ಲಿ ಶುಕ್ರವಾರ ನಡೆದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ ಪ್ರತಿಭಾ ಹಬ್ಬ ಉದ್ಘಾಟಿಸಿ ಅವರು ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ. ದಿನೇಶ್ ಪಿ.ಟಿ. ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಸಾಂಸ್ಕೃತಿಕ ಸಂಘದ ಸಂಚಾಲಕ ವಿನ್ಯಾಸ್ ಹೊಸೋಳಿಕೆ, ಐಕ್ಯುಎಸಿ ಸಂಯೋಜಕಿ ಲತಾ ಬಿ.ಟಿ., ಸಾಂಸ್ಕೃತಿಕ ಸಂಘದ ವಿದ್ಯಾರ್ಥಿ ನಾಯಕಿ ಚೈತನ್ಯ ಎನ್.ಎಸ್. ವೇದಿಕೆಯಲ್ಲಿದ್ದರು.



ಮಂಗಳೂರಿನಲ್ಲಿ ದ.ಕ. ಗ್ಯಾರೇಜ್ ಮಾಲಕರ ಸಂಘದ ಕ್ರಿಕೆಟ್ ಪಂದ್ಯಾಟ

ಜಿಎಂಎಸ್ ಪ್ರಥಮ, ದ್ವಿತೀಯ ನಮ್ಮ ಕುಡ್ಲ ತಂಡ

ಮಂಗಳೂರು: ದಕ್ಷಿಣ ಕನ್ನಡ ಗ್ಯಾರೇಜ್ ಮಾಲಕರ ಸಂಘ, ಮಂಗಳೂರು.(ದ. ಕ. ಮತ್ತು ಉಡುಪಿ ಜಿಲ್ಲೆ) ಗ್ಯಾರೇಜ್ ಮಾಲಕರ ಮತ್ತು ನೌಕರರ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾಟ ಮೀನುಗಾರಿಕಾ ಕಾಲೇಜು ಮೈದಾನ ಎಕ್ಕೂರು ಮಂಗಳೂರು ನಡೆಯಿತು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ ಮನೋಜ್ ಕುಮಾರ್ ಮಾತನಾಡಿ, ಆರೋಗ್ಯವೇ ಸಂಪತ್ತು ಕ್ರೀಡೆಯಿಂದ ಆರೋಗ್ಯ ವೃದ್ಧಿ ಎಂಬ ಸಂದೇಶವನ್ನು ನೀಡಿದರು

ವೇದಿಕೆಯಲ್ಲಿ ನಿಕಟ ಪೂರ್ವ ಮನಪಾ ಸದಸ್ಯರಾದ ಪ್ರವೀಣ್ ಚಂದ್ರ ಆಳ್ವ ಭರತ್ ಕುಮಾರ್, ರಿಲಾಯನ್ಸ್ ಲುಬ್ರಿಕೆಂಟ್ಸ್ ಮಂಗಳೂರು ಮಾಲಕ ಮೊಹಮ್ಮದ್ ಆಲಿ, ಮಂಗಳೂರು ನೆಹರೂ ಯುವ ಕೇಂದ್ರದ ಆಡಳಿತ ಅಧಿಕಾರಿ ಜಗದೀಶ್ ಕೆ., ಸಂಘದ ಅಧ್ಯಕ್ಷ ದಿನಕರ ಕುಲಾಲ್, ಚೇರ್ಮನ್ ಜನಾರ್ದನ್ ಎ., ಕೋಶಾಧಿಕಾರಿ ಕಿರಣ್ ರಾಜ್, ಉಪಾಧ್ಯಕ್ಷ ಅಬ್ದುಲ್ ಮೊಯ್ದಿನ್ ಕಾರ್ಕಳ, ಸತೀಶ್ ಗಟ್ಟಿ ಜಿಎಂಎಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಮುರಳಿ ಕೃಷ್ಣ ಉಪಸ್ಥಿತರಿದ್ದರು. ಪ್ರಥಮ ನಗದು ಬಹುಮಾನ ಮತ್ತು ಟ್ರೋಫಿಯನ್ನು ಟೀಮ್ ಜಿಎಂಎಸ್ ಮಂಗಳೂರು ತಂಡ ಹಾಗೂ ದ್ವಿತೀಯ ನಗದು ಬಹುಮಾನ ಮತ್ತು ಟ್ರೋಫಿಯನ್ನು ನಮ್ಮ ಕುಡ್ಲ ಮಂಗಳೂರು ತಂಡ ತಮ್ಮದಾಗಿಸಿಕೊಂಡರು.

ಪ್ರಧಾನ ಕಾರ್ಯದರ್ಶಿ ಕೆ.ಎ. ರಾಜ್‌ಗೋಪಾಲ್ ಸ್ವಾಗತಿಸಿ ಕ್ರೀಡಾ ಕಾರ್ಯದರ್ಶಿ ಪುಷ್ಪರಾಜ್ ಶೆಟ್ಟಿ ವಂದಿಸಿದರು. ಕೃಷ್ಣಶ್ರೀಯಾನ್ ನಿರೂಪಿಸಿದರು



ಸುತ್ತಮುತ್ತ

ಇಂದು ಶಿಮಂತೂರು-ಪಡಂಗ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ನೇಮ

ಮುಲ್ಕಿ: ಶಿಮಂತೂರಿನ ಬಾವದ ಮಣ್ಣು ಪಡಂಗದ ಕೊಟ್ಯ (ಗುಡಿ) ದಲ್ಲಿ ನೆಲೆಯಾಗಿರುವವರು ಎಂಬ ಮನ್ನಣೆಯನ್ನು ಪಡೆದಿರುವ ಧರ್ಮದೈವ ಶ್ರೀ ಬಬ್ಬು ಸ್ವಾಮಿ ಮತ್ತು ಪರಿವಾರ ದೈವಗಳಿಗೆ ನೇಮ ಮೇ 9 ರಂದು ರಾತ್ರಿ ನಡೆಯಲಿದೆ ಅಂದು ಮಧ್ಯಾಹ್ನ 2.30ಕ್ಕೆ ಚಪ್ಪರ ಏರುವುದು ಸಂಜೆ 6ಗಂಟೆಗೆ ಭಂಡಾರ ಇಳಿಯುವುದು ರಾತ್ರಿ ಗಂಟೆ 8ಕ್ಕೆ ಅನ್ನಸಂತರ್ಪಣೆ ರಾತ್ರಿ ಗಂಟೆ 9ರಿಂದ ಗಗ್ಗರ ಸೇವೆ, ದೈವರಾಜ ಕೋರ್ದಬ್ಬು ತನ್ನಿಮಾನಿಗ ನೇಮ ಹಾಗೂ ಧೂಮಾವತಿ ಬಂಟ ದೈವಗಳ ನೇ, ನಡೆಯಲಿದೆ ಎಂದು ಶಿಮಂತೂರು-ಪಡಂಗ ಶ್ರೀ ಕೋರ್ದಬ್ಬು ದೈವಸ್ಥಾನದ ಅಧ್ಯಕ್ಷರು ಮತ್ತು ಸದಸ್ಯರು ಆಡಳಿತ ಮಂಡಳಿ ದೈವದ ಗುರಿಕಾರರು ಮತ್ತು ಹತ್ತು ಸಮಸ್ತರ ಪ್ರಕಟಣೆ ತಿಳಿಸಿದೆ

ಶಿಮಂತೂರು: ಇಂದು ಬ್ರಹ್ಮಕಲಶದ ದಿನಾಚರಣೆ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶಿಮಂತೂರು ಶ್ರೀ ಆದಿ ಜನಾರ್ಧನ ದೇವಸ್ಥಾನದಲ್ಲಿ ಮೇ 9ರಂದು ಬ್ರಹ್ಮಕಲಶೋತ್ಸವ ದಿನಾಚರಣೆ ನಡೆಯಲಿದೆ. ಆ ಪ್ರಯುಕ್ತ ಶನಿವಾರ ಬೆಳಿಗ್ಗೆ ಗಂಟೆ 6.30ರಿಂದ ತುಲಾಭಾರ ಸೇವೆ, 8 ಗಂಟೆಗೆ 108 ತೆಂಗಿನಕಾಯಿಗಳ ಗಣಯಾಗ, ಮಧ್ಯಾಹ್ನ 12.ಕ್ಕೆ ಮಹಾಪೂಜೆ ನಂತರ ಗಂಟೆ 1 ರಿಂದ ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮೊಕ್ತೇಸರ ಉದಯ ಕುಮಾರ್ ಶೆಟ್ಟಿ ತಿಳಿಸಿದ್ದಾರೆ

ನಾಳೆ 'ಮೋಕ್ಷದಾಮ' ಶಿಲಾನ್ಯಾಸ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದಲ್ಲಿ ಮೇ 10ರಂದು ಬೆಳಿಗ್ಗೆ 7 ಕ್ಕೆ ಶ್ರೀ ಕ್ಷೇತ್ರದ ತಂತ್ರಿಗಳಾದ ವೇದವ್ಯಾಸ ತಂತ್ರಿಗಳ ನೇತೃತ್ವದಲ್ಲಿ ಮೋಕ್ಷದಾಮ ಶಿಲಾನ್ಯಾಸ ಕಾರ್ಯಕ್ರಮ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮೊಕ್ತೇಸರ ಉದಯ ಕುಮಾರ್ ಶೆಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ

ಕಾಸರಗೋಡು: ಕುಂಬಳೆಯಲ್ಲಿರುವ ಮಂಜೇಶ್ವರ ಕಾಲೇಜ್ ಆಫ್ ಅಪ್ಲೈಡ್ ಸಯನ್ಸ್‌ನಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳಿಗೆ ತಾತ್ಕಾಲಿಕ ನೇಮಕಾತಿಗಾಗಿ ಸಂದರ್ಶನಗಳನ್ನು ನಡೆಸಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು.
ಸಹಾಯಕ ಪ್ರಾಧ್ಯಾಪಕ ಹಿಂದಿ, ಮಲೆಯಾಳಂ, ಕನ್ನಡ ವಿಷಯಗಳಿಗೆ ಮೇ 14ರಂದು ಬೆಳಗ್ಗೆ 10 ಗಂಟೆಗೆ, ಸಹಾಯಕ ಪ್ರಾಧ್ಯಾಪಕ ಇಲೆಕ್ಟ್ರಾನಿಕ್ಸ್ (ಅರೆಕಾಲಿಕ) ಮೇ 14ರಂದು ಬೆಳಿಗ್ಗೆ 10 ಗಂಟೆಗೆ, ಸಹಾಯಕ ಪ್ರಾಧ್ಯಾಪಕ ಗಣಿತ ಮೇ 14ರಂದು ಬೆಳಗ್ಗೆ 10 ಗಂಟೆಗೆ, ಸಹಾಯಕ ಪ್ರಾಧ್ಯಾಪಕ ಇಂಗ್ಲಿಷ್ ಮೇ 14ರಂದು ಬೆಳಗ್ಗೆ 10 ಗಂಟೆಗೆ, ಸಹಾಯಕ ಪ್ರಾಧ್ಯಾಪಕ ವಾಣಿಜ್ಯ ಮೇ 16ರಂದು ಬೆಳಗ್ಗೆ 10 ಗಂಟೆಗೆ, ಸಹಾಯಕ ಪ್ರಾಧ್ಯಾಪಕ ಕಂಪ್ಯೂಟರ್ ವಿಜ್ಞಾನ ಮೇ 18ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 04998 215615 ಕರೆ ಮಾಡಬಹುದು.

ಸಂತ ಅಂತೋಣಿ ಚರ್ಚ್‌ನ ವಾರ್ಷಿಕ ಹಬ್ಬಕ್ಕೆ ಚಾಲನೆ

ಸುಂಟಿಕೊಪ್ಪ: ಸಂತ ಅಂತೋಣಿ ದೇವಾಲಯದ ನಡೆಯುತ್ತಿರುವ ವಾರ್ಷಿಕ ಮಹೋತ್ಸವವನ್ನು



ಮೈಸೂರು ಧರ್ಮಕ್ಷೇತ್ರದ ವಿದ್ಯಾಸಂಸ್ಥೆಗಳ ಕಾರ್ಯ ದರ್ಶಿ ರೆ.ಫಾ. ಎಡ್ವರ್ಡ್ ವಿಲಿಯಂ ಸಲ್ಡಾನಾ ರವರು ಧ್ವಜಾರೋಹಣ ವನ್ನು ನೇರವೇರಿಸುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು.
ದೇವಾಲಯದಲ್ಲಿ ಆಡಂಬರ ದಿವ್ಯ ಬಲಿಪೂಜೆ ಯನ್ನು ರೇ.ಫಾ. ಎಡ್ವರ್ಡ್ ವಿಲಿಯಂ ಸಲ್ಡಾನಾ ಹಾಗೂ ಮಡಿಕೇರಿ ವಲಯ ದರ್ಮಗುರು ಮತ್ತು ಸಂತ ಮೈಕಲರ ದೇವಾಲಯದ ಧರ್ಮಗುರು ಜಾರ್ಜ್ ದೀಪಕ್, ಬೆಂಗಳೂರಿನ ಧರ್ಮಗುರು ಗಳು ಹಾಗೂ ಸಂತ ಅಂತೋಣಿ ದೇವಾಲಯದ ಧರ್ಮಗುರುಗಳಾದ ವಿಜಯಕುಮಾರ್ ಅವರು ನೇರವೇರಿಸಿದರು. ಶುಕ್ರವಾರ ಬಲಿಪೂಜೆ ಹಾಗೂ ಆರಾಧನೆಯನ್ನು ಕೆ.ಆರ್.ಪೇಟೆಯ ಬಾಲ ಯೇಸುವಿನ ದೇವಾಲಯದ ಧರ್ಮಗುರು ಟಿ.ಪೌಲೂಸ್ ನೇರವೇರಿಸಿದರು.

ಹಿಂದಿನ ವರ್ಷ ಪ್ರಾಕೃತಿಕ ವಿಕೋಪಕ್ಕೆ ಶಿಥಿಲಗೊಂಡಿದ್ದ ಮನೆಯೂ ಧರಾಶಾಹಿ
ಬಡ ದಲಿತ ಮಹಿಳೆಗೆ ಆಸರೆಯಾದ ಭೀಮಘರ್ಜನೆ ಸಮಿತಿ

ಕುಂದಾಪುರ: ತಾಲೂಕಿನ ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಲ್ವಾಡಿ ಗ್ರಾ.ಪಂ. ಕೆರೆಮನೆ ಮನೆ ಎಂಬಲ್ಲಿ ಹಲವಾರು ದಶಕಗಳಿಂದ ನೆಲೆಸಿದ್ದ 55 ವರ್ಷ ಪ್ರಾಯದ ಬಡ ದಲಿತ ಮಹಿಳೆ ಗಿರಿಜಾ ಎನ್ನುವವರು ತಮ್ಮ ಆಸರೆಯಾಗಿದ್ದ ಮುರುಕಲು ಮನೆಯನ್ನು ಕಳೆದ ಮಳೆಗಾಲದಲ್ಲಿ ಕಳೆದುಕೊಂಡು ಅತಂತ್ರರಾಗಿದ್ದರು. ಇದನ್ನು ಮನಗಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಘರ್ಜನೆಯು ಉಡುಪಿ ಜಿಲ್ಲಾ ಸಮಿತಿಯಿಂದ ದಾನಿಗಳ ಸಹಕಾರದಲ್ಲಿ ಸೂರು ನಿರ್ಮಾಣಕ್ಕೆ ಮುಂದಾಗಿದ್ದಾರೆ.

ಕಷ್ಟದ ಜೀವನ ಸಾಗಿಸುವ ಗಿರಿಜಾ

ಲಚ್ಚು ಎನ್ನುವರ ಏಕೈಕ ಪುತ್ರಿ ಗಿರಿಜಾ ಮದುವೆಯಾದ 7 ತಿಂಗಳಿನಲ್ಲೆ ಪತಿಯನ್ನು ಕಳೆದುಕೊಂಡು ತಾಯಿ ಯೊಂದಿಗಿದ್ದರು. ಬೀಡಿ ಕಟ್ಟುವ ಕಾಯಕವೇ ಇವರ ಜೀವನೋಪಾಯವಾಗಿತ್ತು. 16-17 ವರ್ಷದ ಹಿಂದೆ ತಾಯಿ ಮೃತಪಟ್ಟ ಬಳಿಕ ಏಕಾಂಗಿಯಾಗಿ ಮುರುಕಲು ಮನೆಯಲ್ಲಿ ಬದುಕು ಸಾಗಿಸುತ್ತಿದ್ದರು. ಕಣ್ಣಿನ ಪೊರೆ ಸಮಸ್ಯೆ ಬೀಡಿ ಕಟ್ಟುವ ಕೆಲಸಕ್ಕೂ ತೊಂದರೆಯೊಡ್ಡಿ ಸದ್ಯ ವಿಧವಾ ವೇತನದ ಅಲ್ಪ ಮೊತ್ತ ಜೀವನ



ನಿರ್ವಹಣೆಗಾದರೆ ಪಡಿತರ ಅಕ್ಕಿ ದಿನದ ಕೂಳಿಗೆ ತೃಪ್ತಿಪಟ್ಟುಕೊಳ್ಳುವ ಜೀವನಸ್ಥಿತಿಯಲ್ಲಿದ್ದು ಗೃಹಲಕ್ಷ್ಮೀ ಹಣ ಬಂದರೆ ಅದುವೇ ಆ ತಿಂಗಳ ಭಾಗ್ಯ.

ಬಿದ್ದ ಮನೆ: ಬದುಕು ಅತಂತ್ರ

ತಾಯಿ ಕಾಲದಲ್ಲಿ ಮಣ್ಣಿನ ಇಟ್ಟಿಗೆಯಲ್ಲಿ ಕಟ್ಟಿದ ಮನೆಯೂ ಒಂದಷ್ಟು ದಶಕಗಳಾದ್ದರಿಂದ ಹಂತಹಂತವಾಗಿ ಶಿಥಿಲಗೊಂಡು ಕಳೆದ 2025 ಆಗಸ್ಟ್ ತಿಂಗಳಿನಲ್ಲಿ ಭಾಗಶಃ ಕುಸಿದಿದ್ದು ಇವರ ಜೀವನಕ್ಕೆ ದೊಡ್ಡ ಹೊಡೆತ ಕೊಟ್ಟಿತ್ತು. ಪ್ರಸ್ತುತ ಹಗಲು ಹಳೆ ಮನೆಯ ಬಳಿ ಬಂದು, ಅಲ್ಲೆ ಅನ್ನ ಬೇಯಿಸಿ ಉಂಡರೆ, ರಾತ್ರಿ ಅನತಿ ದೂರದ ಸಂಬಂಧಿಕರ ಮನೆಯಲ್ಲಿ ಆಶ್ರಯ. ಕಳೆದ ವರ್ಷ ಮಳೆಯಿಂದ ಬಿದ್ದಮನೆಗೆ ಪರಿಹಾರ ಒದಗಿಸಲು ಗುಲ್ವಾಡಿ ಗ್ರಾ.ಪಂ. ಸ್ಪಂದನೆ ನೀಡಿತ್ತಾದರೂ ಪ್ರಾಕೃತಿಕ ವಿಕೋಪ ನಿಧಿಯಿಂದ ಇನ್ನೂ ಹಣ ಬರಲು ಬಾಕಿಯಿದೆ. ಜಾಗದ ಸಮಸ್ಯೆ, ಹಕ್ಕು ಪತ್ರದ ಕೊರತೆಯಿಂದ ವಸತಿ ಯೋಜನೆಯ ಮನೆ ಲಭ್ಯತೆಯೂ ಅಸ್ಪಷ್ಟವಾಗಿದೆ.

ಸಹಕಾರಕ್ಕೆ ಬಂದ ಭೀಮಘರ್ಜನೆ

ಸೂರಿಲ್ಲದೆ ಒಂಟಿ ಬದುಕು ಸಾಗಿಸುತ್ತಿದ್ದ ದಲಿತ ಮಹಿಳೆ ಗಿರಿಜಾ ಅವರ ಬಗ್ಗೆ ಇತ್ತೀಚೆಗೆ ಮಾಹಿತಿ ತಿಳಿದ ದಸಂಸ ಭೀಮಘರ್ಜನೆ ಉಡುಪಿ ಜಿಲ್ಲಾ ಸಮಿತಿಯವರು ಸ್ಥಳಕ್ಕೆ ಭೇಟಿ ಕೊಟ್ಟು ದಾನಿಗಳ ನೆರವಿನಲ್ಲಿ ಗಿರಿಜಾ ಅವರಿಗೆ ಮನೆ ನಿರ್ಮಾಣದ ಭರವಸೆ ನೀಡುತ್ತಾರೆ. ಸೂರು ನಿರ್ಮಾಣಕ್ಕೆ ಚಾಲನೆ ನೀಡಿದ್ದು ಜಾತಿ-ಧರ್ಮಗಳ ಎಲ್ಲೆ ಮೀರಿ ವಸ್ತು ರೂಪದಲ್ಲಿ, ಯಥಾಶಕ್ತಿಯಂತೆ ನೀಡಿದ ನಗದು ಬಳಸಿ ತಳಪಾಯ ಸಹಿತ ಆರಂಭ ಹಂತದ ಕೆಲಸ ಮುಗಿಸಿದ್ದು, ಇನ್ನೂ ಬಹಳಷ್ಟು ಕೆಲಸ ಬಾಕಿಯಿದೆ.

> **ಸಹಕಾರ ನೀಡಿ**
> ಮನೆ ಕಳೆದುಕೊಂಡು ವರ್ಷವಾಗಿದೆ. ವ್ಯವಸ್ಥೆಗೆ ಅಲೆದಾಡುವವರುಯಾರೂ ಇಲ್ಲ. ಸಂಘಟನೆ ಬಂದು ಮನೆ ಕಟ್ಟಿಸಿ ಕೊಡುವ ಬಗ್ಗೆ ಖುಷಿಯಾಗಿದೆ. ಇವರಿಗೆ ದಾನಿಗಳು ಸಹಕಾರ ನೀಡಿದಲ್ಲಿ ಈ ಮಳೆಗಾಲವಾದರೂ ನೆಮ್ಮದಿಯ ಜೀವನ ಮಾಡಬಹುದು.
> ● ಗಿರಿಜಾ (ಮನೆ ಫಲಾನುಭವಿ)

> **ಮಹಿಳೆಯ ನೆರವಿಗೆ ಸ್ಪಂದಿಸಿ**
> ಸರಕಾರ, ಸಂಬಂದಪಟ್ಟ ಇಲಾಖೆಗಳು ಮುತುವರ್ಜಿವಹಿಸಿ ಮಾಡಬೇಕಿದ್ದ ಕಾರ್ಯವನ್ನು ಸಂಘಟನೆ ಯುವಕರು ಮಾಡುತ್ತಿದ್ದು ಇದಕ್ಕೆ ದಾನಿಗಳು ಕೈಜೋಡಿಸಿ ದ್ದಾರೆ. ದಲಿತ ಮಹಿಳೆಗೆ ಮನೆ ನಿರ್ಮಿಸಲು ಸಮಾನ ಮನಸ್ಕರು ಸಹಕರಿಸುತ್ತಿದ್ದಾರೆ. ಸರಕಾರ ಹಾಗೂ ಜಿಲ್ಲಾಡಳಿತವು ಆದ್ಯತೆ ಮೇರೆಗೆ ಮಹಿಳೆಯ ನೆರವಿಗೆ ಸ್ಪಂದಿಸಬೇಕು.
> ● ಉದಯಕುಮಾರ್ ತಲ್ಲೂರು (ಕರ್ನಾಟಕ ದಸಂಸ ಭೀಮ ಘರ್ಜನೆ ಸಂಸ್ಥಾಪಕ ರಾಜ್ಯ ಸಂಚಾಲಕ)

> **ಅಭಿಯಾನ- ಸ್ವಯಂ ಶ್ರಮದಾನ**
> ಬಡ ದಲಿತ ಮಹಿಳೆಯ ಸೂರಿಗೆ ಭೀಮಘರ್ಜನೆ ಬೆನ್ನೆಲುಬಾಗಿ ನಿಲ್ಲುತ್ತಿದೆ. ಜಿಲ್ಲಾ ಸಂಘಟನಾ ಸಂಚಾಲಕ ಶಶಿ ಬಳ್ಕೂರು ತಳಪಾಯ, ಕಾಂಕ್ರಿಟ್ ಬೆಡ್, ಕಲ್ಲು ಕಟ್ಟುವುದರಿಂದ ಹಿಡಿದು ಕಟ್ಟಡ ನಿರ್ಮಾಣದ ಕೆಲಸವನ್ನು ಶ್ರಮದಾನವಾಗಿ ಮಾಡುತ್ತಿದ್ದಾರೆ. ಇನ್ನೋರ್ವ ಸಂಘಟನಾ ಸಂಚಾಲಕ ರಾಘು ಶಿರೂರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಮನೆ ಕೆಲಸದ ಆರಂಭದಿಂದ ಹಿಡಿದು ಸದ್ಯದ ಪ್ರಗತಿಯ ಹಂತಗಳನ್ನು ಹಂಚಿಕೊಂಡು ಮನೆ ನಿರ್ಮಾಣದ ಅಭಿಯಾನ ಮಾಡುತ್ತಿದ್ದಾರೆ.

ಬೆಳ್ತಂಗಡಿ ಸರಕಾರಿ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ



ಬೆಳ್ತಂಗಡಿ: ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯನ್ನು ದಕ್ಷಿಣ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ತಂಗಡಿ ತಾಲೂಕು ಘಟಕವು ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿತು.
ಅಧ್ಯಕ್ಷತೆಯನ್ನು ಸಾಹಿತ್ಯ ಪರಿಷತ್ತಿನ ಬೆಳ್ತಂಗಡಿ ತಾಲೂಕು ಘಟಕದ ಅಧ್ಯಕ್ಷ ಡಿ. ಯದುಪತಿ ಗೌಡ ವಹಿಸಿ ಸಾಹಿತ್ಯಕ ಚಟುವಟಿಕೆಗಳಿಗೆ ಎಲ್ಲರೂ ಪ್ರೋತ್ಸಾಹ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಾಹಿತ್ಯದ ಪಾತ್ರ ಅತ್ಯಂತ ಮಹತ್ವದ್ದು

ಮುಖ್ಯ ಅತಿಥಿ ಉಜಿರೆ ಶ್ರೀ ಧ.ಮಂ. ಕಾಲೇಜಿನ ಕನ್ನಡ ಸಹಪ್ರಾಧ್ಯಾಪಕ ಡಾ. ದಿವ ಕೊಕ್ಕಡ ವಿಶೇಷ ಉಪನ್ಯಾಸ ನೀಡಿ ಶಾಂತಿಯುತ, ಸೌಹಾರ್ದಯುತ, ಸಮೃದ್ಧ ಸಮಾಜ ನಿರ್ಮಾಣದಲ್ಲಿ ಸಾಹಿತಿ ಮತ್ತು ಸಾಹಿತ್ಯದ ಪಾತ್ರ ಅತ್ಯಂತ ಮಹತ್ವದ್ದು. ಈ ನಿಟ್ಟಿನಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯ ಸಂರಕ್ಷಣೆಯ ಆಶಯ ಹೊಂದಿರುವ ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಅತ್ಯಂತ ಹೊಣೆಗಾರಿಕೆಯ ಕೆಲಸಗಳನ್ನು ನಿರಂತರ ಮಾಡುತ್ತಾ ಬಂದಿದೆ ಎಂದರು.
ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ, ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಪ್ರೊ. ಪದ್ಮನಾಭ ಕೆ. ಪ್ರಸ್ತಾವನೆಗೈದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸುಧಾರಾಣಿ ಎನ್. ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಿಸಿದ ಕನ್ನಡ ವಿಭಾಗದ ಮುಖ್ಯಸ್ಥ ಮಾರುತಿ ಜಿ. ಅತಿಥಿಗಳನ್ನುಪರಿಚಯಿಸಿದರು. ಪ್ರಾಧ್ಯಾಪಕ ಡಾ. ಕೃಷ್ಣಾನಂದ ಗರ್ಡಾಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ನಸೀಬಾ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕಿ ಡಾ. ಶೀಲಾವತಿ ಜಿ. ವಂದಿಸಿದರು.

ನೂತನ ಸದಸ್ಯರ ಸೇರ್ಪಡಿಸಿ ಸಂಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು: ರಾಮಕೃಷ್ಣ ಪಿ.ಕೆ.



ಮಂಗಳೂರು: ರೋಟರಿ ಸಂಸ್ಥೆಯ ಸದಸ್ಯರು ಸಂಸ್ಥೆಯಲ್ಲಿ ಕ್ರಿಯಾಶೀಲರಾಗಿ ಶ್ರಮಿಸಿ ಸಮಾಜಸೇವಾ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನೂತನ ಸದಸ್ಯರನ್ನು ಸೇರ್ಪಡಿಸಿ ಸಂಸ್ಥೆಯನ್ನು ಬಲಪಡಿಸಿ ಯಶಸ್ಸು ಸಾಧಿಸಬೇಕು ಎಂದು ರೋಟರಿ ಜಿಲ್ಲೆ 3181ರ ಗವರ್ನರ್ ರಾಮಕೃಷ್ಣ ಪಿ.ಕೆ. ಹೇಳಿದ್ದಾರೆ.
ನಗರದ ಮಂಗಳೂರು ಕ್ಲಬ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ ರೋಟರಿ ಮಂಗಳೂರು ಸಿಟಿ ಸಂಸ್ಥೆಯ ಸ್ಥಾಪನಾ ದಿನಾಚರಣೆಯಲ್ಲಿ ಸಂಸ್ಥೆಗೆ ಅಧಿಕೃತ ಭೇಟಿ ನೀಡಿ ಮಾತನಾಡಿದ ಅವರು, ರೋಟರಿ ಅಂತರಾಷ್ಟ್ರೀಯ ಪ್ರತಿಷ್ಠಾನಕ್ಕೆ ಉದಾರ ದಾನ ನೀಡಬೇಕು ಎಂದರು.
ಅತಿಥಿಯಾಗಿದ್ದ ರೋಟರಿ ಜಿಲ್ಲಾ ಸಹಾಯಕ ಗವರ್ನರ್ ರವಿಶಂಕರ್ ರಾವ್ ಅವರು, ಡಾ. ರಂಜನ್ ಸಂಪಾದಕತ್ವದ ಸಂಸ್ಥೆಯ ಗೃಹ ವಾರ್ತಾ ಪತ್ರಿಕೆ 'ಸಿಟಿ ಬಿಟ್ಸ್ ಆಂಡ್ ಬೈಟ್ಸ್' ಬಿಡುಗಡೆಗೊಳಿಸಿ ಶುಭ ಹಾರೈಸಿದರು.
ಸಂಸ್ಥೆಯ ಅಧ್ಯಕ್ಷೆ ಸಜ್ನಾ ಭಾಸ್ಕರ್ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಕಾರ್ಯದರ್ಶಿ ಪದ್ಮನಾಭ್ ನಾಯ್ಕ್ ವರದಿ ಮಂಡಿಸಿ, ವಂದಿಸಿದರು. ಸಂಸ್ಥೆಯ ಸಲಹೆಗಾರರಾದ ರಾಜೇಂದ್ರ ಕಲ್ಬಾವಿ, ವಲಯ ಪ್ರತಿನಿಧಿ ಪ್ರಶಾಂತ್ ರೈ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕೆನ್ಯೂಟ್ ಪಿಂಟೊ ಅತಿಥಿಗಳನ್ನು ಗೌರವಿಸಿದರು.

> **ಗೌರವ**
> ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ಥಾಪನಾ ಸದಸ್ಯರಾದ ಡಾ. ರಂಜನ್, ಸರಿತಾ ಡಿಸೋಜಾ, ಪ್ರಶಾಂತ್ ರೈ, ಬಸವ ಕುಮಾರ್, ಸುದೇಶ್ ಅವರನ್ನು ಗೌರವಿಸಲಾಯಿತು.

ಉಪ್ಪಳ ಹೊಸಂಗಡಿಯಲ್ಲಿ ಹೆಚ್ಚಿದ ಬೀದಿ ನಾಯಿಗಳ ಕಾಟ: ಸ್ಥಳೀಯರಲ್ಲಿ ಆತಂಕ

ಉಪ್ಪಳ: ಉಪ್ಪಳ ಹೊಸಂಗಡಿ ಸಹಿತ ವಿವಿಧ ಪ್ರದೇಶಗಳಲ್ಲಿ ಬೀದಿ ನಾಯಿಗಳ ಕಾಟ ದಿನದಿಂದ ದಿನಕ್ಕೆ ವ್ಯಾಪಕಗೊಳ್ಳುತ್ತಿರುವುದು ಸ್ಥಳೀಯರು ಆತಂಕಕ್ಕೀಡಾಗಿದ್ದಾರೆ. ಮಂಜೇ ಶ್ವರ ಪಂಚಾಯತ್ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಬೀದಿ ನಾಯಿಗಳ ಹಿಂಡುಗಳು ಸವಾರಿ ನಡೆಸುತ್ತಿರುವುದು ಸ್ಥಳೀಯರಲ್ಲಿ ಭೀತಿಯನ್ನು ಹುಟ್ಟಿಸುತ್ತದೆ.

ದ್ವಿಚಕ್ರ ಸವಾರರನ್ನು ಬೆನ್ನಟ್ಟುತ್ತಿದೆ

ಹೊಸಂಗಡಿ, ಉಪ್ಪಳ ಪೇಟೆ ಸಹಿತ ಒಳ ಪ್ರದೇಶದಲ್ಲಿ ಬೀದಿ ನಾಯಿಗಳ ಕಾಟ ವ್ಯಾಪಕಗೊಂಡಿರುವುದಾಗಿ ದೂರಲಾಗಿದೆ. ಪ್ರತಾಪನಗರದ ಶಿವಶಕ್ತಿ ಮೈದಾನ ಹಾಗೂ ಪರಿಸರ ಪ್ರದೇಶಗಳಲ್ಲಿ ರಾತ್ರಿ ಹಗಲೆನ್ನದೆ ನಾಯಿಗಳ ಗುಂಪು ನಿರಂತರವಾಗಿ ಈ ಪರಿಸರದ ಗಣೇಶ ಮಂದಿರ, ಗಾಯತ್ರಿ ಮಂದಿರ, ಗುಳಿಗ ಬನ ಪರಿಸರದಲ್ಲಿ ಬೀಡು ಬಿಟ್ಟು ಅಲೆದಾಡುತ್ತಿರುವುದು ಸ್ಥಳೀಯರನ್ನು ಭೀತಿಗೊಳಗಾಗುವಂತೆ ಮಾಡಿದೆ.
ಈ ನಾಯಿಗಳ ಹಿಂಡು ದ್ವಿಚಕ್ರ ವಾಹನ ಸವಾರರನ್ನು, ಪಾದಚಾರಿಗಳನ್ನು ಬೆನ್ನಟ್ಟುತ್ತಿರುವುದಾಗಿ ದೂರಲಾಗಿದೆ.



ಇದರಿಂದ ಈ ಪರಿಸರದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರ ಸಹಿತ ಊರವರು ಭೀತಿಯಿಂದ ತೆರಳುತ್ತಾರೆ. ಮೈದಾನ ದಲ್ಲಿ ಬೆಳಕು ನೀಡುತ್ತಿದ್ದ ದಾರಿದೀಪ ಉರಿಯದೆ ಇರುವುದರಿಂದ ರಾತ್ರಿ ಹೊತ್ತಲ್ಲಿ ಸಂಚರಿಸುವಾಗ ಇನ್ನಷ್ಟು ಭಯ ಉಂಟಾಗುತ್ತದೆ.

ಎಚ್ಚೆತ್ತುಕೊಳ್ಳಲು ಆಗ್ರಹ

ಈ ಪ್ರದೇಶದ ಜನರ ಭೀತಿಯನ್ನು ನಿವಾರಿಸಲು ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ನಿಗ್ರಹಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇಲ್ಲವಾದರೆ ಮುಂದಿನ ತಿಂಗಳಲ್ಲಿ ಶಾಲೆ ಆರಂಭಗೊಂಡರೆ ಶಾಲಾ ಮಕ್ಕಳು ಶಾಲೆಗೆ ತೆರಳಲು ಕಷ್ಟವಾಗಲಿದೆ. ಅದಕ್ಕಾಗಿ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಳ್ಳಬೇಕಾಗಿದೆ.

ಶಿಕ್ಷಕರ ನೇಮಕಾತಿ

ಕಾಸರಗೋಡು: ಎಡನೀರು ಜಿಎಚ್‌ಎಸ್‌ಎಸ್‌ನ ಹೈಯರ್ ಸೆಕೆಂಡರಿ ವಿಭಾಗದಲ್ಲಿ ವಾಣಿಜ್ಯ, ಇಂಗ್ಲಿಷ್, ಭೂವಿಜ್ಞಾನ (ಸೀನಿಯರ್), ಅರೇಬಿಕ್, ಸಂಖ್ಯಾಶಾಸ್ತ್ರ ಅರ್ಥಶಾಸ್ತ್ರ, ವಾಣಿಜ್ಯ (ಜೂನಿಯರ್) ವಿಭಾಗಗಳ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 28 ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9446369095 ಕರೆ ಮಾಡಬಹುದು.

ಬಿಎಸ್‌ವೈ ಅಭಿಮಾನೋತ್ಸವ: ಕಾರ್ಯಕರ್ತರಿಂದ ವಿಶೇಷ ಪೂಜೆ, ದೇವರಿಗೆ ಸೀಯಾಳ, ಕ್ಷೀರಾಭಿಷೇಕ



ಬಂಟ್ವಾಳ: ಬಿಜೆಪಿ ಹಿರಿಯ ನೇತಾರ ಬಿ.ಎಸ್.ಯಡಿಯೂರಪ್ಪ ಅವರು ಜನಸೇವೆಯಲ್ಲಿ ಸಾರ್ಥಕ 50 ವರ್ಷಗಳನ್ನು ಪೂರೈಸಿದ ಹಿನ್ನೆಲೆ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಪ್ರಯುಕ್ತ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳಿಂದ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮ ಪುಂಜಾಲಕಟ್ಟೆ ಶ್ರೀ ಗೋಪಾಲಕೃಷ್ಣ ದೇವಳದ ವಠಾರದಲ್ಲಿ ಶುಕ್ರವಾರ ನಡೆಯಿತು.
ದ.ಕ.ಜಿ.ಪಂ.ಮಾಜಿ ಉಪಾಧ್ಯಕ್ಷ ಎಂ. ತುಂಗಪ್ಪ ಬಂಗೇರ ನೇತೃತ್ವದಲ್ಲಿ ಯಡಿಯೂರಪ್ಪ ಅವರಿಗೆ ದೀರ್ಘಾಯುಷ್ಯ ಕೋರಿ ಶ್ರೀ ಗೋಪಾಲಕೃಷ್ಣ ದೇವರಿಗೆ ಕ್ಷೀರ, ಸೀಯಾಳಾಭಿಷೇಕ ನಡೆಸಿ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಲಾಯಿತು.
ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ತುಂಗಪ್ಪ ಬಂಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿಜೆಪಿಯನ್ನು ಕರ್ನಾಟಕದಲ್ಲಿ ಬೆಳೆಸಿ, ಸಮರ್ಥ ಅಡಿಪಾಯ ಹಾಕಿ, ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಅಧಿಕಾರಕ್ಕೆ ಬರುವಂತೆ ಮಾಡಿದ ಹುಟ್ಟು ಹೋರಾಟಗಾರ, ಯಡಿಯೂರಪ್ಪ ಅವರ ಸಾಮಾಜಿಕ ಸೇವಾ ಜೀವನಕ್ಕೆ 50 ವರ್ಷ ತುಂಬಿದ ಹಿನ್ನೆಲೆ ಅವರ ಶ್ರೇಯೋಭಿವೃದ್ಧಿಗೆ ದೇವರಿಗೆ ಪೂಜೆ ಸಲ್ಲಿಸಲಾಗಿದೆ ಎಂದರು.
ಬಿಜೆಪಿ ಹಿರಿಯ ಕಾರ್ಯಕರ್ತರಾದ ಗಂಗಾಧರ ಪೂಜಾರಿ ಕಜೆಕಾರು, ಸುಂದರ ನಾಯ್ಕ ಇರ್ವತ್ತೂರು, ಸರೋಜಾ ಡಿ.ಶೆಟ್ಟಿ ನಯನಾಡು, ರೋಹಿನಾಥ್ ಪೂಜಾರಿ ಕಂಬರ್ಡ್ಕ, ರಾಮಣ್ಣ ಗೌಡ ಕಡಬ, ಚಂದ್ರಶೇಖರ ಶೆಟ್ಟಿ ಕುಮಂಗಿಲ, ಮಡಂತ್ಯಾರು ಗ್ರಾ.ಪಂ. ಮಾಜಿ ಸದಸ್ಯ ವಿಶ್ವನಾಥ, ಶೇಷಗಿರಿ ಕಜೆಕಾರು ಅವರನ್ನು ತುಂಗಪ್ಪ ಬಂಗೇರ ಸನ್ಮಾನಿಸಿದರು. ಬಿಜೆಪಿಯಿಂದ ತುಂಗಪ್ಪ ಬಂಗೇರರನ್ನು ಸನ್ಮಾನಿಸಲಾಯಿತು. ದೇವಳ ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ್ ಪ್ರಭು ಮೂರ್ಜೆ, ಪ್ರಮುಖರಾದ ಕೌಶಿಕ್ ಶೆಟ್ಟಿ, ಹರೀಶ್ ಆನಿಲಡೆ, ಬಿ.ಎಸ್ಸೆನ್ನೆಲ್ ನಿವೃತ್ತ ಅಧಿಕಾರಿ ಜಾನಕಿ ಮತ್ತಿತರರಿದ್ದರು. ಬಂಟ್ವಾಳ ಬಿಜೆಪಿ ಕಾರ್ಯದರ್ಶಿ ತಾರಾನಾಥ ಕಜೆಕಾರು ಸ್ವಾಗತಿಸಿದರು.

ಮುತ್ತೂರ ನಟ್ಟಿಲ ಪಂಜುರ್ಲಿ ದೈವಗಳ ಪುನಃಪ್ರತಿಷ್ಠಾ ಕಲಶಾಭಿಷೇಕ, ನೇಮ



ಕೈಕಂಬ: ಮಂಗಳೂರು ತಾಲೂಕಿನ ಮುತ್ತೂರ ಗ್ರಾಮದ ಮುತ್ತೂರ ನಟ್ಟಿಲ ಪಂಜುರ್ಲಿ ಒಡ್ಡನೇಶ್ವರಿ, ಪರಿವಾರ ದೈವಗಳ ದೈವಸ್ಥಾನದಲ್ಲಿ ಶುಕ್ರವಾರ ನಡೆಯಲಿರುವ ಪ್ರತಿಷ್ಠಾ ಕಲಶಾಭಿಷೇಕ -ನೇಮದ ಪ್ರಯುಕ್ತ ದೈವದ ಹೊಸ ಮಂಚ , ಪರಿಕರಗಳು, ಹೊರೆ ಕಾಣಿಕೆ ಸಮರ್ಪಣೆ ಗುರುವಾರ ನಡೆಯಿತು.
ಮುತ್ತೂರಿನ ತಾರೆಮಾರ್‌ನಿಂದ ಆರಂಭವಾದ ಮೆರವಣಿಗೆಗೆ ಸ್ಥಳೀಯ ಮುಖಂಡರು ಕಾಯಿ ಒಡೆದು ಚಾಲನೆ ನೀಡಿದರು.
ಕಲಶ ಹಿಡಿದ ಸುಮಂಗಲಿಯರು, ಚೆಂಡೆ, ಗೊಂಬೆಗಳು, ಕೀಲು ಕುದುರೆ, ಯಕ್ಷಗಾನದ ಗೊಂಬೆಗಳು, ಡೋಲು ವಾದನ, ಕುಣಿತ ಭಜನೆ ಸಹಿತ ಭವ್ಯವಾದ ಮೆರವಣಿಯಲ್ಲಿ ನೋಣಾಲು ಮೂಲಕ ದೈವಸ್ಥಾನಕ್ಕೆ ತಲುಪಿತು.
ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಉಳಿಪಾಡಿಗುತ್ತು ಸುಬ್ಬಯ್ಯ ಮಾರ್ಲ, ಅಧ್ಯಕ್ಷ ಕೃಷ್ಣರಾಜ್ ಮಾರ್ಲ ಮುತ್ತೂರು, ಪ್ರತಿಷ್ಠಾ ಕಲಶಾಭಿಷೇಕ ಸಮಿತಿ ಅಧ್ಯಕ್ಷ ಶಿವಾನಂದ ಕುಲಾಲ್, ಹೊರೆ ಕಾಣಿಕೆ ಸಮಿತಿ ಅಧ್ಯಕ್ಷ ನಾಗೇಶ್ ಶೆಟ್ಟಿ ಮುತ್ತೂರು, ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳಾದ ಪವನ್ ಕುಮಾರ್, ರಿತೇಶ್ ಮಾರ್ಲ, ದೀಪಕ್ ಪೂಜಾರಿ, ಕುಸುಮಾಕರ ಶೆಟ್ಟಿ, ಹರಿಯಪ್ಪ ಮುತ್ತೂರು, ಶೇಖರ್ ಕುಲಾಲ್ ಮುತ್ತೂರು, ಚಂದ್ರಹಾಸ್ ಶೆಟ್ಟಿ ಮುತ್ತೂರು, ನಿತ್ಯಾನಂದ ಕೊಳವೂರು, ತಾರಾನಾಥ ಕುಲಾಲ್ ನಡುಮನೆ, ಪುರುಷೋತ್ತಮ ಪಂಬದ ಗೋಳಿಪಲ್ಕೆ, ಜೀರ್ಣೋದ್ಧಾರ ಮತ್ತು ಪುನಃ ಪ್ರತಿಷ್ಠಾ ಕಲಶಾಭಿಷೇಕ ಸಮಿತಿ ಸದಸ್ಯರು, ಮುತ್ತೂರು ಪಂ.ನಿ.ಪೂ. ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ ಮತ್ತಿತರರಿದ್ದರು.
ಶುಕ್ರವಾರ ಬೆಳಿಗ್ಗೆ ದೈವಗಳ ಪುನಃಪ್ರತಿಷ್ಠೆ ಕಲಶಾಭಿಷೇಕ, ಸಂಜೆ ಒಡ್ಡನೇಶ್ವರಿ ನೇಮ, ರಾತ್ರಿ ನಟ್ಟಿಲ ಕಲ್ಲುರ್ಟಿ -ತೂಕತ್ತೇರಿ ದೈವದ ಕೋಲ, ಗುಳಿಗ ದೈವದ ಕೋಲ ನಡೆಯಿತು. ಮೇ 9 ರಂದು ಸಂಜೆ 7ರಿಂದ ಮುತ್ತೂರ ನಟ್ಟಿಲ ಪಂಜುರ್ಲಿ ದೈವಕ್ಕೆ ಎಣ್ಣೆ ಬೂಳ್ಯ, ಅನ್ನಸಂತರ್ಪಣೆ ಬಳಿಕ 10ರಿಂದ ನಟ್ಟಿಲ ಪಂಜುರ್ಲಿ ದೈವದ ನೇಮ ನಡೆಯಲಿದೆ.

ಮೇ 13 ರಂದು ಎಲೆಕ್ಟ್ರಾನಿಕ್ಸ್ -ವೃತ್ತಿ ಅವಕಾಶಗಳ ಪ್ರಾಯೋಗಿಕ ಕಾರ್ಯಾಗಾರ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗ ಮೇ 13 ರಂದು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಎಲೆಕ್ಟ್ರಾನಿಕ್ಸ್ ಮತ್ತು ವೃತ್ತಿ ಅವಕಾಶಗಳ ಕುರಿತು ಪ್ರಾಯೋಗಿಕ ಕಾರ್ಯಾಗಾರವನ್ನು ಆಯೋಜಿಸಿದೆ.
ಕಾರ್ಯಾಗಾರ ಮುಖ್ಯ ಉದ್ದೇಶ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಂವಾದಾತ್ಮಕ ಕಲಿಕೆ ಮತ್ತು ಪ್ರಾಯೋಗಿಕ ಮಾನ್ಯತೆಯ ಮೂಲಕ ವಿದ್ಯುನ್ಮಾನ ಮತ್ತು ಸಂವಹನ ಇಂಜಿನಿಯರಿಂಗ್‌ನ ಮೂಲಭೂತ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುವುದಾಗಿದೆ.
ಕಾರ್ಯಾಗಾರದಲ್ಲಿ ಸರಳ ಸರ್ಕ್ಯೂಟ್ ನಿರ್ಮಾಣ, ಪ್ರಾಯೋಗಿಕ ಪ್ರಯೋಗಗಳು ಮತ್ತು ಪ್ರದರ್ಶನಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ ಮತ್ತು ವಿದ್ಯುನ್ಮಾನ ಮತ್ತು ಸಂವಹನ ವಿಭಾಗವನ್ನು ಏಕೆ ಆಯ್ಕೆ ಮಾಡಬೇಕು, ಐಒಟಿ, ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್ ಮತ್ತು ವಿ ಎಲ್ ಎಸ್ ಐ ನಂತಹ ಉದಯೋನ್ಮುಖ ಕ್ಷೇತ್ರಗಳ ಜೊತೆಗೆ ಕೋರ್ ಇಂಜಿನಿಯರಿಂಗ್ ಮತ್ತು ಐಟಿ ವಲಯಗಳಲ್ಲಿನ ವೃತ್ತಿ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಭವಿಷ್ಯದ ಶೈಕ್ಷಣಿಕ ಮಾರ್ಗಗಳ ಬಗ್ಗೆ ಉತ್ತಮ ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯಕವಾಗಿದೆ.
ಈ ಕಾರ್ಯಾಗಾರವು ಸಂಪೂರ್ಣ ಉಚಿತವಾಗಿದ್ದು, ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಬಸ್ ಸೌಲಭ್ಯ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಕೆಳಗಿನ ಲಿಂಕ್ ಬಳಸಿ ನೊಂದಾಯಿಸಿ ಕೊಳ್ಳಬಹುದು. https://forms.gle/NqS4Ty-wnHz7zDQV86> ಹೆಚ್ಚಿನ ಮಾಹಿತಿಗಾಗಿ ಈ ಮೊಬೈಲ್ ಸಂಖ್ಯೆ -9686323734 ಸಂಪರ್ಕಿಸುವಂತೆ ಕೋರಲಾಗಿದೆ.

ಮೇ 11: 'ಬಡಗು ಶಬರಿಮಲೆ' ಕ್ಷೇತ್ರದಲ್ಲಿ 18 ಮೆಟ್ಟಿಲುಗಳ ಲೋಕಾರ್ಪಣೆ

ಪುತ್ತೂರು: ಅಯ್ಯಪ್ಪ ವ್ರತಧಾರಿಗಳು ಶಬರಿಮಲೆ ಯಾತ್ರೆಗೈಯುವ ಸಂದರ್ಭ ದಕ್ಷಿಣ ಕನ್ನಡದ ವರು ಹೆಚ್ಚು ಭೇಟಿ ನೀಡುವ 'ಬಡಗು ಶಬರಿಮಲೆ' ಯಂದೇ ಪ್ರಸಿದ್ದಿ ಪಡೆದಿರುವ ಕಾಸರಗೋಡು ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ ಮೇ 11ರಂದು 101 ಚೆಂಡೆ ವಾದ್ಯಗಳೊಂದಿಗೆ ಹಿತ್ತಾಳೆಕವಚದ18 ಮೆಟ್ಟಿಲುಗಳಲೋಕಾರ್ಪಣೆಮತ್ತು ಶ್ರೀ ದೇವರ ಭವ್ಯ ಮಹೋತ್ಸವ ನಡೆಯಲಿದೆ ಎಂದು ಕ್ಷೇತ್ರ ಅಘೋಷ ಸಮಿತಿ ಅಧ್ಯಕ್ಷ ಹರಿನಾರಾಯಣ ಮಾಸ್ಟರ್ ತಿಳಿಸಿದ್ದಾರೆ.

2 ಸಾವಿರ ವರ್ಷಗಳ ಇತಿಹಾಸ

ಶುಕ್ರವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಕಾಸರಗೋಡು ಜಿಲ್ಲೆಯ ಕುಂಬಳೆ ಸೀಮೆಯ ಕುಂಬ್ಡಾಜೆ ಪಂಚಾಯತ್‌ನ ಉಬ್ರಂಗಳ ಗ್ರಾಮದ ಪ್ರಕೃತಿ ರಮಣೀಯ ಪ್ರದೇಶದಲ್ಲಿ ನೆಲೆಯಾಗಿರುವ 2 ಸಾವಿರ ವರ್ಷಗಳ ಇತಿಹಾಸವಿರುವ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ಕ್ಷೇತ್ರವು ಬಡಗು ಶಬರಿಮಲೆ ಎಂದೇ ಪ್ರಸಿದ್ಧವಾಗಿದೆ. ಶಬರಿಮಲೆ ಯಾತ್ರೆಗೈಯುವ ಸಾವಿರಾರು ಅಯ್ಯಪ್ಪ ವ್ರತಾಧಾರಿಗಳು ಇಲ್ಲಿ ಬಂದು ದೇವರ ಯಾತ್ರೆ ಕೈಗೊಳ್ಳುವುದು ರೂಢಿ ಎಂದರು.
ಕಾರ್ಯಕ್ರಮದಲ್ಲಿ ಮೇ 11ರಂದು ಸಂಜೆ 5ರಿಂದ ಧಾರ್ಮಿಕ ಸಭೆ, 6.30ಕ್ಕೆ 18 ಮೆಟ್ಟಿಲುಗಳ ದ್ವಾರ ಪೂಜೆ ಹಾಗೂ ಲೋಕಾರ್ಪಣೆ ನಡೆಯಲಿದೆ. ಹಿತ್ತಾಳೆಯ ಮೆಟ್ಟಿಲುಗಳನ್ನು ಶೃಂಗೇರಿ ಶ್ರೀ ಶಾರದಾ ಪೀಠಾಧೀಶ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿ ಮತ್ತು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀ ಪಾದಂಗಳವರು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ದೇಲಂಪಾಡಿ ಗಣೇಶ್ ತಂತ್ರಿ, ಕ್ಷೇತ್ರದ ಗೌರವ ಸಲಹೆಗಾರ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ, ಶಬರಿಮಲೆಯ ನಾರಾಯಣ ವರ್ಮ ಪಂದಳಂ ಸಹಿತ ಹಲವಾರು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



> ■ ಕಾಸರಗೋಡು ಉಬ್ರಂಗಳ ಶ್ರೀ ಮಹಾದೇವ ಪಾರ್ವತಿ ಶ್ರೀ ಶಾಸ್ತಾರ ದೇವಸ್ಥಾನದಲ್ಲಿ ಮೇ 11ರಂದು 101 ಚೆಂಡೆ ವಾದ್ಯಗಳೊಂದಿಗೆ ಹಿತ್ತಾಳೆ ಕವಚದ 18 ಮೆಟ್ಟಿಲುಗಳ ಲೋಕಾರ್ಪಣೆ
> ■ ರಾತ್ರಿ 8 ಗಂಟೆಗೆ ಶ್ರೀ ದೇವರ ಭವ್ಯ ಮಹೋತ್ಸವ

8 ಗಂಟೆಗೆ ಶ್ರೀ ದೇವರ ಭವ್ಯ ಮಹೋತ್ಸವ ಹಾಗೂ ಭೋಜನ ಪ್ರಸಾದ ನಡೆಯಲಿದೆ ಎಂದವರು ಹೇಳಿದರು.
ಸುದ್ದಿಗೋಷ್ಠಿಯಲ್ಲಿ ಪ್ರಚಾರ ಸಮಿತಿ ಅಧ್ಯಕ್ಷ ರಾಜೇಶ್ ಮಾಸ್ಟರ್ ಅಗಲ್ಪಾಡಿ, ಸ್ವಾಗತ ಸಮಿತಿಯ ಗೋವಿಂದರಾಜ್ ಮೈಲ್ತೊಟ್ಟು ರಾಜೇಶ್ ಪಂಜರಿಕೆ, ಸತೀಶ್ ಉಪಸ್ಥಿತರಿದ್ದರು.

ಕಬಡ್ಡಿ ಕೌಶಲ್ಯ ತರಬೇತಿ ಶಿಬಿರ ಉದ್ಘಾಟನೆ



ಕಡಬ: ಕುಂತೂರು ಶಾರದಾಂಬ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಕುಂತೂರು ಶಾರದಾಂಬ ಭಜನಾ ಮಂದಿರದ ಆವರಣದಲ್ಲಿ 1 ವಾರ ನಡೆಯಲಿ ರುವ ಉಚಿತ ಬೇಸಿಗೆ ಶಿಬಿರದಲ್ಲಿ ಉಚಿತ ಕಬಡ್ಡಿ ಕೌಶಲ್ಯ ತರಬೇತಿಯ ಉದ್ಘಾಟನಾ ಸಮಾರಂಭ ನಡೆಯಿತು.
ಭಜನಾ ಮಂದಿರದ ಶ್ರೀ ಶಾರದಾ ಮಾತೆಗೆ ದೀಪ ಬೆಳಗಿಸಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಮಂದಿರದ ಗೌರವಾಧ್ಯಕ್ಷ ನಾಗಪ್ಪ ಗೌಡ ಪಾಲೆಚ್ಚಾರು ಶಿಬಿರವನ್ನು ಉದ್ಘಾಟಿಸಿ ಶುಭ ಹಾರೈಸಿದರು.
ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷ ಯೋಗೀಶ್ ಮಾಪಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅತಿಥಿಯಾಗಿದ್ದ ಭಜನಾ ಮಂದಿರದ ಅಧ್ಯಕ್ಷ ಸುಬ್ರಮಣ್ಯ ಗೌಡ ಎರ್ಮಾಳ ಶುಭ ಹಾರೈಸಿದರು. ಪ್ರಮುಖರಾದ ಅಶೋಕ್ ರೈ ಗಾಣಜಾಲು, ಕುಂತೂರು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷ ಉದಯ್ ಬಾಣಬೆಟ್ಟು, ರಾಷ್ಟ್ರೀಯ ಕಬಡ್ಡಿ ತರಬೇತುದಾರ ಮೂರ್ತಿ, ಹಿಂಜಾವೇ ಮುಖಂಡ ರಾಜೇಶ್ ಪೂಂಜ, ಕ್ಲಬ್ ಸದಸ್ಯರಾದ ದೀಪಕ್ ಪಾಲೆಚ್ಚಾರು, ಚರಣ್ ರಾಜ್ ಪಾಲೆಚ್ಚಾರು, ಲೋಕೇಶ್ ಇಡಾಳ, ಭರತ್ ಕುಂಟ್ಯಾನ, ಧನ್ಯಶ್ರೀ ಚಾಮೇತಡ್ಕ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ಶಿಕ್ಷಕ ಗಣೇಶ್ ಕೇವಳ ಸ್ವಾಗತಿಸಿ, ಶಿಕ್ಷಕ ಚಂದ್ರಹಾಸ ಕೆ.ಸಿ. ನಿರೂಪಿಸಿದರು.

ಸುತ್ತಮುತ್ತ

ಮೇ 12: ವಿದ್ಯುತ್ ವ್ಯತ್ಯಯ

ಕುಂದಾಪುರ: ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 12ರಂದು ಬೆಳಗ್ಗೆ 9.30ರಿಂದ ಸಂಜೆ 5ರ ವರೆಗೆ ಕುಂದಾಪುರ–ತಲ್ಲೂರು–ಗಂಗೊಳ್ಳಿ ಮುಖ್ಯ ಮಾರ್ಗ ಹಾಗೂ ತಲ್ಲೂರು ಉಪಕೇಂದ್ರದಿಂದ ಹೊರಡುವ ಹೆಮ್ಮಾಡಿ, ಗುಲ್ವಾಡಿ, ವಂಡ್ಸೆ, ನೇರಳಕಟ್ಟೆ, ಬಾಂಡ್ಯ, ಕೆಂಚನೂರು, ದೇವಲ್ಕುಂದ ಮತ್ತು ಸಬ್ಲಾಡಿ, ಕೆ.ವಿ ಗಂಗೊಳ್ಳಿ ಉಪಕೇಂದ್ರದಿಂದ ಹೊರಡುವ ಮುಳ್ಳಿಕಟ್ಟೆ, ತ್ರಾಸಿ, ಗಂಗೊಳ್ಳಿ ಹಾಗೂ ನಾವುಂದ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಕೆ.ವಿ ಆಲೂರು, ಬಡಾಕೆರೆ ಫೀಡರುಗಳ ಹೇರಿಕುದ್ರು, ದೇವಲ್ಕುಂದ, ಕಟ್‌ಬೇಲ್ತೂರು, ಗುಲ್ವಾಡಿ, ಹೆಮ್ಮಾಡಿ, ತಲ್ಲೂರು, ಹಟ್ಟಿಯಂಗಡಿ, ಕನ್ಯಾನ, ಉಪ್ಪಿನಕುದ್ರು, ಕೆಂಚನೂರು, ನೇರಳಕಟ್ಟೆ ಕೆರಾಡಿ ಚಿತ್ತೂರು, ವಂಡ್ಸೆ, ಬಾಂಡ್ಯ, ಮುಳ್ಳಿಕಟ್ಟೆ, ಗಂಗೊಳ್ಳಿ, ಹೊಸಾಡು, ಗುಜ್ಜಾಡಿ, ತ್ರಾಸಿ, ಆಲೂರು, ಬಡಾಕೆರೆ, ಸೇನಾಪುರ, ಹರ್ಕೂರು, ನಾಡಾ, ಹೆಮ್ಮುಂಜೆ ಮತ್ತು ನಾರ್ಕಳಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ಅಲ್ಪಸಂಖ್ಯಾತರ ಮಹಿಳಾ ಪಿಯು ಕಾಲೇಜಿನಲ್ಲಿ ದಾಖಲಾತಿ ಪ್ರಾರಂಭ

ಉಡುಪಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಬೈಂದೂರು ತಾಲ್ಲೂಕಿನಲ್ಲಿ ಪ್ರಾರಂಭಗೊಂಡಿರುವ ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ದಾಖಲಾತಿ ಪ್ರಾರಂಭವಾಗಿದ್ದು ಆಸಕ್ತ ವಿದ್ಯಾರ್ಥಿಗಳು ಎಲ್ಲಾ ಅಗತ್ಯ ದಾಖಲೆಗಳಾದ ಪರೀಕ್ಷೆಯ ಅಂಕಪಟ್ಟಿ, ಪಡಿತರ ಚೀಟಿ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರದ ದೃಢೀಕೃತ ಪ್ರತಿಯೊಂದಿಗೆ ಕುಂದಾಪುರದ ತಲ್ಲೂರು ಸೈಂಟ್ ಫ್ರಾನ್ಸಿಸ್ ಆಸಿಸ್ ಚರ್ಚ್ ಬಿಲ್ಡಿಂಗ್ ಇಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಉಚಿತ ಗುಣಮಟ್ಟದ ಶಿಕ್ಷಣ ಮತ್ತು ತಂತ್ರಜ್ಞಾನ ಆಧಾರಿತ ಬೋಧನೆ, ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಸಿ.ಇ.ಟಿ. ನೀಟ್ ಹಾಗೂ ಜೆಇಇಗೆ ಉಚಿತ ತರಬೇತಿ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ನಿರಂತರ ಪ್ರೋತ್ಸಾಹ ಹಾಗೂ ವಿದ್ಯಾರ್ಥಿ ವೇತನ ನೀಡಲಾಗುವುದು. ಒಟ್ಟು ಮಂಜೂರಾತಿ ಸೀಟುಗಳಲ್ಲಿ ಶೇ.75 ಅಲ್ಪಸಂಖ್ಯಾತರು ಮತ್ತು ಶೇ.25 ಇತರೆ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶವಿದ್ದು ಪ್ರಸ್ತುತ ವಿದ್ಯಾರ್ಥಿ ಪ್ರವೇಶ ಬಯಸುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷಗಳ ಒಳಗಿರಬೇಕು ಹಾಗೂ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರಾದ ಸಂತೋಷ್ ಬಿ.ಡಿ ಮೊಬೈಲ್ ಸಂಖ್ಯೆ 8762434245, ನೋಡೆಲ್ ಅಧಿಕಾರಿ ಮೊಬೈಲ್ ಸಂಖ್ಯೆ 8762388543, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ನೆಲ ಮಹಡಿ, ಮೌಲಾನಾ ಆಜಾದ್ ಭವನ, ಪಶು ಚಿಕಿತ್ಸಾಲಯದ ಹತ್ತಿರ, ಅಲೆವೂರು ರಸ್ತೆ, ಶಿವಳ್ಳಿ ಗ್ರಾಮ, ಮಣಿಪಾಲ ದೂರವಾಣಿ : 0820-2574596 ಅಥವಾ ಕಾರ್ಕಳ ದೂರವಾಣಿ : 08258-231101 ಹಾಗೂ ಕುಂದಾಪುರ ದೂ.ಸಂಖ್ಯೆ: 08254-230370 ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿ ಪ್ರಕಟಣೆ ತಿಳಿಸಿದೆ.

ವಾಣಿಜ್ಯ, ಮಳಿಗೆ, ವಸತಿ ಸಮುಚ್ಚಯಗಳಲ್ಲಿ ಅಗ್ನಿನಂದಕ: ಸೂಚನೆ

ಉಡುಪಿ: ನಗರಸಭಾ ವ್ಯಾಪ್ತಿಯಲ್ಲಿ ವಾಣಿಜ್ಯ ಮಳಿಗೆಗಳು ಹಾಗೂ ವಸತಿ ಸಮುಚ್ಚಯ ಗಳಲ್ಲಿ ಬೆಂಕಿ ಅನಾಹುತಗಳು ದಿನನಿತ್ಯ ಹೆಚ್ಚು ಹೆಚ್ಚಾಗಿ ಕಂಡು ಬರುತ್ತಿದ್ದು ಹಾಗೂ ಪ್ರಸ್ತುತ ನಗರದಲ್ಲಿ ತಾಪಮಾನವು ದಿನೇದಿನೇ ಹೆಚ್ಚಾಗುತ್ತಿದೆ. ಹಾಗಾಗಿ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ವಾಣಿಜ್ಯ ಮಳಿಗೆಗಳು, ವಸತಿ ಸಮುಚ್ಚಯಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಗುಜರಿ ಅಂಗಡಿಗಳು ಇತ್ಯಾದಿ ಸ್ಥಳಗಳಲ್ಲಿ ಅಗ್ನಿ ಅವಘಡಗಳನ್ನು ತಡೆಗಟ್ಟಲು ಅಗ್ನಿನಂದಕವನ್ನು ಅಳಡಿಸಿಕೊಳ್ಳುವುದು. ಅಲ್ಲದೇ ರಾಸಾಯನಿಕ ದ್ರವ್ಯಗಳು ಮತ್ತು ಇತರೆ ದ್ರವ್ಯ ಪ್ರದಾರ್ಥಗಳನ್ನು ಶೇಖರಣೆ ಮಾಡಿರುವಂತಹ ಗೋದಾಮುಗಳಲ್ಲಿ ಅಗ್ನಿ ಸುರಕ್ಷತೆಯ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡು, ಮಳಿಗೆಗಳಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ಅಗ್ನಿ ಸುರಕ್ಷತೆಯ ಬಗ್ಗೆ ತರಬೇತಿಯನ್ನು ನೀಡಿ ನಗರದಲ್ಲಿ ಅಗ್ನಿ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ನಗರ ಸಭೆ ಪೌರಾಯುಕ್ತರು, ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಜಿಲ್ಲಾಧ್ಯಕ್ಷ ನವೀನ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಉಡುಪಿ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಕಾರ್ಯ ತಂಡದ ಸಭೆ

ಎಸ್‌ಐಆರ್ ಅಭಿಯಾನದಲ್ಲಿ ಸಕ್ರಿಯ ಪಾಲ್ಗೊಳ್ಳಲು ಸೂಚನೆ

ಉಡುಪಿ: ರಾಜ್ಯದಲ್ಲಿ ಯಾವುದೇ ಸಮಯದಲ್ಲಿ ಘೋಷಣೆಯಾಗಲಿರುವ ಎಸ್.ಐ.ಆರ್. ಅಭಿಯಾನದಲ್ಲಿ ಪಕ್ಷದ ಬಿಎಲ್2 ಜವಾಬ್ದಾರಿ ಹೊಂದಿರುವ ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಂಡು ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ತಪ್ಪಿ ಹೋಗದಂತೆ ನಿಗಾ ವಹಿಸಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಕರೆ ನೀಡಿದರು.

ಅವರು ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಜಿಲ್ಲಾ ಕಾರ್ಯ ತಂಡದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಂಚರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಲ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವನ್ನು ಅಭಿನಂದಿಸಿದ ಅವರು ಈ ಫಲಿತಾಂಶ ಕರ್ನಾಟಕದ ಮುಂದಿನ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದರು.

ರಾಜ್ಯ ಕಂಡ ಧೀಮಂತ ನಾಯಕ, ಹಿರಿಯ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ಸಂವತ್ಸರಗಳ ಸಾರ್ಥಕ ಸೇವೆಯ ಸವಿ ನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ 'ಬಿ.ಎಸ್.ವೈ. ಅಭಿಮಾನೋತ್ಸವ'ದ ಸಂಭ್ರಮದ ಕಾರ್ಯಕ್ರಮದಲ್ಲಿ ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಕರೆ ನೀಡಿದರು.

ಮಂಡಲ ಪ್ರಶಿಕ್ಷಣ ವರ್ಗಗಳನ್ನು ಯಶಸ್ವಿಯಾಗಿ ಪೂರೈಸಿರುವ ಮತ್ತು ಮನ್ ಕೀ ಬಾತ್ ವೀಕ್ಷಣೆಯಲ್ಲಿ 100% ಪ್ರಗತಿ ದಾಖಲಿಸಿರುವ ಮಂಡಲಗಳನ್ನು ಅವರು ಅಭಿನಂದಿಸಿದರು.

ಪ್ರಶಿಕ್ಷಣ ವರ್ಗದ ಮಂಗಳೂರು ವಿಭಾಗ ಸಂಚಾಲಕ ಕೆ.ಉದಯ ಕುಮಾರ್ ಶೆಟ್ಟಿ ಮಾತನಾಡಿ ಮೇ 23 ಮತ್ತು 24ರಂದು ನಡೆಯುವ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದಲ್ಲಿ ಎಲ್ಲಾ ಅಪೇಕ್ಷಿತರು ಕಡ್ಡಾಯವಾಗಿ ಭಾಗವಹಿಸಿ ಅಗತ್ಯ ಮಾಹಿತಿ ಮಾರ್ಗದರ್ಶನ ಪಡೆಯಬೇಕು ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ದಿನಕರ ಶೆಟ್ಟಿ ಹೆರ್ಗ ಸ್ವಾಗತಿಸಿ, ಶ್ರೀಕಾಂತ್ ನಾಯಕ್ ಪಕ್ಷದ ಮುಂದಿನ ಕಾರ್ಯ ಚಟುವಟಿಕೆಗಳ ಮಾಹಿತಿ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀನಿಧಿ ಹೆಗ್ಡೆ ಕಾರ್ಯಕ್ರಮ ನಿರೂಪಿಸಿ, ಜಿಲ್ಲಾ ಎಸ್.ಸಿ. ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ ಡಿ.ಬಿ. ವಂದಿಸಿದರು.

ಪಕ್ಷದ ಪ್ರಮುಖರು, ಜಿಲ್ಲಾ ಪದಾಧಿಕಾರಿಗಳು, ರಾಜ್ಯ ಮೋರ್ಚಾ ಮತ್ತು ಪ್ರಕೋಷ್ಠಗಳ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾಗಳ ಹಾಗೂ ಮಂಡಲಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಪ್ರಕೋಷ್ಠಗಳ ಸಂಯೋಜಕರು ಉಪಸ್ಥಿತರಿದ್ದರು.



ಸಂಘಟನಾತ್ಮಕ ಬಲವರ್ಧನೆ ಆಗಬೇಕು

ಪಕ್ಷದ ಬುನಾದಿಯಂತಿರುವ ಬಿಎಲ್‌ಎ-2 ಜವಾಬ್ದಾರಿಯನ್ನು ಹೊತ್ತಿರುವ ಕಾರ್ಯಕರ್ತರು ಮುಂಬರುವ ಅಭಿಯಾನಗಳಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ಅರ್ಹ ಮತದಾರರ ಹೆಸರುಗಳು ಸೇರ್ಪಡೆಯಾಗುವಂತೆ ನೋಡಿಕೊಳ್ಳುವುದು ಸಂಘಟನೆಯ ದೃಷ್ಟಿಯಿಂದ ಬಹಳ ಮುಖ್ಯ. ಇತ್ತೀಚಿನ ಪಂಚರಾಜ್ಯಗಳ ಚುನಾವಣಾ ಫಲಿತಾಂಶವು ಕಾರ್ಯಕರ್ತರಲ್ಲಿ ಹೊಸ ಚೈತನ್ಯ ತುಂಬಿದ್ದು ಮುಂಬರುವ ಚುನಾವಣೆಗಳಿಗೆ ನಾವು ಈಗಿನಿಂದಲೇ ಸಿದ್ಧರಾಗಬೇಕಿದೆ ಎಂದು ನವೀನ್ ಶೆಟ್ಟಿ ತಿಳಿಸಿದರು. ರಾಜ್ಯದ ಹಿರಿಯ ನಾಯಕರಾದ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸುದೀರ್ಘ ಸೇವೆಯ ಸಂಭ್ರಮದ ಕಾರ್ಯಕ್ರಮ ಹಾಗೂ ಮುಂಬರುವ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗಗಳಲ್ಲಿ ಪಕ್ಷದ ಪ್ರತಿಯೊಬ್ಬ ಪದಾಧಿಕಾರಿಯೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಜಿಲ್ಲೆಯಲ್ಲಿ ಬಿಜೆಪಿಯನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದರು.

ನೀರಪಾದೆಯಲ್ಲಿ ಬ್ರಹ್ಮ ಶ್ರೀ ನಾರಾಯಣಗುರು ಮಂದಿರ ಲೋಕಾರ್ಪಣೆ

ಹಸಿರು ಹೊರೆಕಾಣಿಕೆ ಸಮರ್ಪಣೆ ಮೆರವಣಿಗೆ

ಬಂಟ್ವಾಳ: ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಟ್ರಸ್ಟ್ ನೀರಪಾದೆ ಇವರ ವತಿಯಿಂದ ನಿರ್ಮಾಣಗೊಂಡ ನೂತನ ಗುರುಮಂದಿರದ ಲೋಕಾರ್ಪಣೆ ಮತ್ತು ಬ್ರಹ್ಮ ಶ್ರೀ ನಾರಾಯಣ ಗುರುವರ್ಯರ ಮೂರ್ತಿ ಪ್ರತಿಷ್ಠಾ ಸಾನಿಧ್ಯ ಕಲಶಾಭಿಷೇಕದ ಹಿನ್ನಲೆಯಲ್ಲಿ ಶುಕ್ರವಾರ ಸಂಜೆ ದಾಸಕೋಡಿಯಿಂದ ನೀರಪಾದೆ ಮಂದಿರದವರೆಗೆ ಹಸಿರು ಹೊರೆಕಾಣಿಕೆ ಮೆರವಣಿಗೆ ನಡೆಯಿತು.

ದಾಸಕೋಡಿಯಲ್ಲಿ ವಿವೇಕಾನಂದ ಕಾಲೇಜಿನ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ,ಉದ್ಯಮಿ ರವಿಶಂಕರ್, ವಿಟ್ಲ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಎನ್ ನರ್ಸಪ್ಪ ಪೂಜಾರಿ ಅವರು ಹಸಿರು ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಗೆ ಮಕ್ಕಳ ಹಾಗೂ ಮಹಿಳೆಯರ ಕುಣಿತದ ಭಜನಾ ತಂಡ, ಕಲ್ಲಡ್ಕ ಶಿಲ್ಪಾ ಗೊಂಬೆ ಬಳಗದ ಗೊಂಬೆಗಳು,ವಿವಿಧ ವಾದ್ಯಗೋಷ್ಠಿ ಹಾಗೂ ಚೆಂಡೆ ವಿಶೇಷ ಮೆರಗು ನೀಡಿತು.

ಉದ್ಯಮಿ ತುಳಸಿದಾಸ್ ಬೆರ್ಕಳ, ಕೃಷಿಕೆ ಎಳ್ತಿಮಾರ್ ಪುಷ್ಪಾ ಬಿ.ಶೆಟ್ಟಿ ಅವರು ಉಗ್ರಾಣದ ಉದ್ಘಾಟನೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ರುಕ್ಮಯ ಪೂಜಾರಿ, ಉದ್ಯಮಿ ರಾಘವ ಪೂಜಾರಿ ಬೆಂಗಳೂರು, ನರಿಕೊಂಬು ನಾಲ್ಕೈತ್ತಾಯ ನೇಮೋತ್ಸವ ಸಮಿತಿ ಅಧ್ಯಕ್ಷ ಜಗನ್ನಾಥ ಬಂಗೇರ ನಿರ್ಮಲ್, ನರಿಕೊಂಬು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸಂತೋಷ್, ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಆರ್.ಕೋಟ್ಯಾನ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ಬ್ರಹ್ಮ ಶ್ರೀನಾರಾಯಣಗುರುಮಂದಿರದ ಅಧ್ಯಕ್ಷ ನಾರಾಯಣ ಪೂಜಾರಿ, ಕಾರ್ಯದರ್ಶಿ ಮೋಹನ್ ಪಿಎಸ್ ಟ್ರಸ್ಟಿಗಳಾದ ಶರತ್ ಕುಮಾರ್, ಜಯರಾಮ ಕಲ್ಲಪಾಪು ಜೀರ್ಣೋದ್ಧಾರ ಸಮಿತಿ ಪ್ರಮುಖರಾದ ಶಿವರಾಜ್ ಶೆಟ್ಟಿ ಕಾಂದಿಲ, ತಾರಾನಾಥ ಸೇಣೆರೆಕೋಡಿ, ಚಂದ್ರಶೇಖರ ಚೆಂಡೆ, ಲೋಕೇಶ್ ಅಮೀನ್, ಯಾದವ, ಕೃಷ್ಣಪ್ಪ ಸೇಣೆರೆಕೋಡಿ, ಕೃಷ್ಣಪ್ಪ ಪೂಜಾರಿ ತೋಟ, ಕೃಷ್ಣಪ್ಪ ಪೂಜಾರಿ ಬೆಮ್ಮರೆಕೋಡಿ, ಮಲ್ಲಿಕಾ ಸೇಣೆರೆಕೋಡಿ, ಶಶಿಕಲಾ ಪಿ.ಎಸ್.ಹಾಗೂ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.



- **ಬ್ರಹ್ಮ ಶ್ರೀ ನಾರಾಯಣ ಗುರುವರ್ಯರ ಮೂರ್ತಿ ಪ್ರತಿಷ್ಠಾ ಸಾನಿಧ್ಯ ಕಲಶಾಭಿಷೇಕ**
- **ದಾಸಕೋಡಿಯಿಂದ ನೀರಪಾದೆ ಮಂದಿರದವರೆಗೆ ಹಸಿರು ಹೊರಕಾಣಿಕೆ ಮೆರವಣಿಗೆ**
- **ಮೆರವಣಿಗೆಗೆ ಮಕ್ಕಳ ಹಾಗೂ ಮಹಿಳೆಯರ ಕುಣಿತದ ಭಜನಾ ತಂಡ, ಕಲ್ಲಡ್ಕ ಗೊಂಬೆ, ವಿವಿಧ ವಾದ್ಯಗೋಷ್ಠಿ ಹಾಗೂ ಚೆಂಡೆಯ ವಿಶೇಷ ಮೆರಗು**

ಶ್ರೀ ಕ್ಷೇತ್ರ ಸೋಮನಾಥ ಉಳಿಯದಲ್ಲಿ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ

ಕಲಶ ನೀರಿಗೆ ಅದ್ಭುತ ಶಕ್ತಿ ಇದೆ: ಅದಮಾರು ಶ್ರೀ

ಬಂಟ್ವಾಳ: ತಂತ್ರಿವರ್ಯರು ಮಂತ್ರಿಸಿ ದೇವರಿಗೆ ಸಮರ್ಪಿಸುವ ಕಲಶ ನೀರಿನಲ್ಲಿ ಅದ್ಭುತವಾದ ಶಕ್ತಿ ಇದೆ. ದೇವರಿಗೆ ಅರ್ಪಿಸಿದ ಸಾವಿರ ಕಲಶದ ನೀರಿನ ಸಂಪ್ರೋಕ್ಷಣೆಯಿಂದ ನಮ್ಮ ಜೀವನದಲ್ಲೂ ಸಾವಿರಜೀವನ, ಆರೋಗ್ಯ ಪ್ರಾಪ್ತವಾಗುತ್ತದೆ ಎಂದು ಉಡುಪಿ ಅದಮಾರು ಮಠದ ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ನುಡಿದರು.

ಮುನ್ನೂರು ಗ್ರಾಮದ ಶ್ರೀ ಕ್ಷೇತ್ರ ಸೋಮನಾಥ ಉಳಿಯದ ಶ್ರೀ ಸೋಮೇಶ್ವರೀ ದೇವಸ್ಥಾನ, ಶ್ರೀ ನಾಗದೇವರು ಹಾಗೂ ಶ್ರೀ ಅರಸು, ಧೂಮಾವತಿ ಬಂಟ ಮತ್ತು ಪರಿವಾರ ದೈವಸ್ಥಾನದ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಪ್ರಯುಕ್ತ ಶುಕ್ರವಾರ ದೇಗುಲಕ್ಕೆ ಭೇಟಿ ನೀಡಿದ ಶ್ರೀಗಳು ಬಳಿಕ ಆಶೀರ್ವಚನ ನೀಡಿದರು.

ಸಂಸದರ ಭೇಟಿ

ದೇವಳಕ್ಕೆ ಸಂಸದ ಕ್ಯಾ.ಬ್ರಿಜೇಶ್ ಚೌಟ ಅವರು ಭೇಟಿ ನೀಡಿ ಮಾತನಾಡಿ,ಸಣ್ಣ ಸಮುದಾಯವಾದರೂ ಸಾಧನೆ ಅಪಾರವಾಗಿದೆ. ತಮ್ಮ ಹಿಂದಿನ ಪರಂಪರೆ, ಹಿನ್ನಲೆಯನ್ನು ಅರಿತುಕೊಳ್ಳುವ ಆಸಕ್ತಿ ಹೊಂದಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಕ್ಷೇತ್ರಕ್ಕೆ ಬಹೇಟಿ ನೀಡಿದರು.ಕ್ಷೇತ್ರದ ವತಿಯಿಂದ ಅವರನ್ನು ಗೌರವಿಸಲಾಯಿತು. ಬಿಜೆಪಿ ಮುಖಂಡರಾದ ರವೀಂದ್ರ ಶೆಟ್ಟಿ,ಮೋಹನ್ ರಝ್, ಸತೀಶ್ ಪೂಜಾರಿ,ಕಿಶೋರ್, ಶಿವಾನಂದ ನಾಯಕ್ ಸೋಮನಾಥ ಉಳಿಯಕ್ಷೇತ್ರದ ಗಡಿಪ್ರದಾನ ಬಸಪ್ಪಯಾನೆ ಜೆ.ರವೀಂದ್ರ ನಾಯಕ್,ಆಡಳಿತ ಸಮಿತಿ ಅಧ್ಯಕ್ಷ ಉಮಾನಾಥ ನಾಯಕ್ ಉಳ್ಳಾಲ, ಗೌರವಾಧ್ಯಕ್ಷ ಯು.ದಯಾನಂದ ನಾಯಕ್, ಗಾಳದಕೊಂಕಣಿ ಅಭ್ಯುದಯ ಸಂಘದ ಅಧ್ಯಕ್ಷ ನರಸಿಂಹ ನಾಯಕ್ ಹರೇಕಳ, ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಜಯರಾಜ್ ನಾಯಕ್ ಮುಂಬೈ, ಉಳ್ಳಾಲ ಉಳಿಯ ಶ್ರೀ ಧರ್ಮರಸು ಕ್ಷೇತ್ರದ ಗುರಿಕಾರರಾದ ಅಂತಗುರಿಕಾರ, ಸಮಾಜದ ಹಿರಿಯರಾದ ವಿಶ್ವನಾಥ ನಾಯಕ್ ಕಲ್ಲಾಪು, ಶ್ರೀರಿಷ್ ನಾಯಕ್,ಕಾಪಿಕಾಡ್ , ಮಿಥಿಲೇಶ್ ನಾಯಕ್, ಪ್ರವೀಣ್ ನಾಯಕ್ ಬಂಟ್ವಾಳ, ಮುಂಬೈ ಸಜ್ಜನ್ ಸೇವಾ ಸಂಘದ ಕಾರ್ಯದರ್ಶಿ ಮನೋಜ್ ನಾಯಕ್ ಮುಂಬೈ, ಶ್ರೀಸೋಮೇಶ್ವರೀ ಮಹಿಳಾ ಮಂಡಲದ ಅಧ್ಯಕ್ಷೆ ಜಯಶೀಲ ನಾಯಕ್, ಯುವ ಉದ್ಯಮಿ ವಿಶಾಲ್ ಕೊಲ್ಯ ಮೊದಲಾದವರಿದ್ದರು. ಆಡಳಿತ ಸಮಿತಿ ಪ್ರಧಾನಕಾರ್ಯದರ್ಶಿ ವೆಂಕಟೇಶ್ ಬಂಟ್ವಾಳ ಸ್ವಾಗತಿಸಿ, ವಂದಿಸಿದರು.ಪ್ರಕಾಶ್ ಪುತ್ತೂರು ನಿರೂಪಿಸಿದರು.



ಪುನರ್ ಪ್ರತಿಷ್ಠೆ

ಕ್ಷೇತ್ರದ ತಂತ್ರಿವರ್ಯರಾದ ಕುಂಟಾರು ರವೀಶ್ ತಂತ್ರಿಯವರ ನೇತೃತ್ವದಲ್ಲಿ ಶ್ರೀಸೋಮೇಶ್ವರೀ, ಶ್ರೀಅರಸು, ಮೈಸಂದಾಯ, ಧೂಮಾವತಿ ಬಂಟ ದೈವ,ಪರಿವಾರ ದೈವಗಳು ಹಾಗೂ ಶ್ರೀ ನಾಗದೇವರ ಪುನರ್ ಪ್ರತಿಷ್ಠೆ ,ಬ್ರಹ್ಮಕಲಶ ನೆರವೇರಿತು. ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಕಣ್ತುಂಬಿಕೊಂಡರು.

ಸಾಲಿಗ್ರಾಮ ಶ್ರೀ ಗುರುನೃಸಿಂಹ ದೇವಸ್ಥಾನ: ಶ್ರೀ ಶಂಕರ ಜಯಂತಿ



ಕೋಟ: ಶ್ರೀ ಗುರುನೃಸಿಂಹ ದೇವಸ್ಥಾನ ಸಾಲಿಗ್ರಾಮ ಹಾಗೂ ಬ್ರಾಹ್ಮಣ ಮಹಾಸಭಾ ಸಾಲಿಗ್ರಾಮ ವಲಯದ ವತಿಯಿಂದ ಶ್ರೀ ಗುರು ನರಸಿಂಹ ದೇವಸ್ಥಾನದ ಜ್ಞಾನ ಮಂದಿರದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ ನಡೆಯಿತು.

ಶ್ರೀ ಗುರುನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯ ಕೆ.ತಾರಾನಾಥ ಹೊಳ್ಳ ಸಮಾರಂಭವನ್ನು ಉದ್ಘಾಟಿ ಮಾತನಾಡಿ, ಶ್ರೀ ಶಂಕರರು ಭಾರತದ ನಾಲ್ಕು ಕಡೆಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ ಭಾರತದಲ್ಲಿ ಅದ್ವೈತ ಸಿದ್ಧಾಂತವನ್ನು ಶಾಶ್ವತವಾಗಿ ನೆಲೆಗೊಳಿಸಿ, ಇಂದಿಗೂ ಜಗತ್ತಿನಲ್ಲಿ ವೇದಧರ್ಮ ಶ್ರೇಷ್ಠವಾಗಿಸುವಲ್ಲಿ ಮಾಡಿದ ಅಪ್ರತಿಮ ಸಾಧನಾ ಮೂರ್ತಿ. ಅವರ ಹೆಸರನ್ನು ಶಾಶ್ವತವಾಗಿರಿಸುವ ಕಾರ್ಯಕ್ರಮಗಳು ನಡೆಯಬೇಕಾಗಿದೆ ಎಂದರು.

ಯಡಾಡಿ ಮತ್ಯಾಡಿಯ ಸುಜ್ಞಾನ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕಿ ಸುದಕ್ಷಿಣ ಆರ್ ಉಡುಪ ಮಾತನಾಡಿ, ಶ್ರೀ ಶಂಕರರು ತಮ್ಮದೇ ಶಕ್ತಿಯಿಂದ ಸನಾತನ ಧರ್ಮಕ್ಕೆ ಮರುಜೀವ ನೀಡಿದ ದಿವ್ಯ ಶಕ್ತಿ ಎಂದರು.

ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ಪಟ್ಟಾಭಿರಾಮ ಸೋಮಯಾಜಿ ಅಧ್ಯಕ್ಷತೆ ವಹಿಸಿದ್ದರು. ಸಭಾದ ಗೌರವಾಧ್ಯಕ್ಷ ಯಂ. ಶಿವರಾಮ ಉಡುಪ, ಉಪಾಧ್ಯಕ್ಷ ಪಿ. ಸಿ. ಹೊಳ್ಳ , ಸಿ.ಸುಬ್ರಾಯ ಉರಾಳ ಮುಂತಾದವರು ಉಪಸ್ಥಿತರಿದ್ದರು. ಸಭಾದ ಕಾರ್ಯದರ್ಶಿ ಕೆ. ರಾಜಾರಾಮ ಐತಾಳ ನಿರೂಪಿಸಿದರು. ಕೋಶಾಧಿಕಾರಿ ನಾಗರಾಜ ಉಪಾಧ್ಯ ವಂದಿಸಿದರು.

ಎಸ್‌ಟಿಪಿಗಳ ನಿರ್ವಹಣೆಗೆ ಹೆಚ್ಚು ಅನುದಾನ ನೀಡಿ: ಡಾ. ಭರತ್ ಶೆಟ್ಟಿ

ಮಂಗಳೂರು: ಫಲ್ಗುಣಿ ನದಿಗೆ ಒಳಚರಂಡಿ ತ್ಯಾಜ್ಯ ನೀರನ್ನು ನೇರವಾಗಿ ಬಿಡುತ್ತಿರುವುದು ಹಾಗೂ ವಿವಿಧ ಭಾಗಗಳಲ್ಲಿ ಒಳಚರಂಡಿ ಸೋರಿಕೆ ಸಂಭವಿಸುತ್ತಿರುವ ಪರಿಣಾಮ ಮೀನುಗಳು ಸಾವನ್ನಪ್ಪುತ್ತಿದ್ದು ಸರಕಾರವೇ ಪರೋಕ್ಷ ಕಾರಣ ಎಂದು ಆರೋಪಿಸಿರುವ ಶಾಸಕ ಡಾ.ವೈ. ಭರತ್ ಶೆಟ್ಟಿ ಅವರು ಸರಕಾರ ಎಸ್‌ಟಿಪಿ ಗಳ ನಿರ್ವಹಣೆಗೆ ಹೆಚ್ಚಿನ ಅನುದಾನ ಪಾಲಿಕೆಗಳಿಗೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಸರಕಾರಕ್ಕೆ ಪತ್ರ ಬರೆದಿದ್ದಾರೆ.



ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಸ್‌ಟಿಪಿಗಳನ್ನು (ಮಲಿನ ನೀರು ಶುದ್ಧೀಕರಣ ಘಟಕ) ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದರಿಂದ ಈ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದೆ.

ಸರ್ಕಾರದಿಂದ ನಿರ್ವಹಣಾ ವೆಚ್ಚಕ್ಕೆ ಅಗತ್ಯ ಅನುದಾನ ಬಿಡುಗಡೆ ಆಗದೇ ಇರುವುದರಿಂದ ಘಟಕಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ ಎಂದು ಅವರು ಆರೋಪಿಸಿದ್ದಾರೆ.

ಬಹುತೇಕ ಎಸ್‌ಟಿಪಿಗಳಲ್ಲಿ ಅಳವಡಿಸಲಾದ ಜನರೇಟರ್‌ಗಳು ಸಕಾಲದಲ್ಲಿ ದುರಸ್ತಿ ಆಗದೇ ಇರುವ ಕಾರಣ, ವಿದ್ಯುತ್ ವ್ಯತ್ಯಯ ಉಂಟಾದ ಸಂದರ್ಭಗಳಲ್ಲಿ ಒಳಚರಂಡಿ ನೀರನ್ನು ಸಂಸ್ಕರಿಸದೇ ನೇರವಾಗಿ ನದಿಗಳಿಗೆ ಬಿಡಲಾಗುತ್ತಿದೆ. ಇದು ಪರಿಸರಕ್ಕೆ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಗಂಭೀರ ಅಪಾಯ ಉಂಟುಮಾಡುತ್ತಿದೆ. ಇನ್ನೊಂದೆಡೆ ಜಲಚರಗಳು ಸಾವನ್ನಪ್ಪುತ್ತಿದೆ ಎಂದು ತಿಳಿಸಿದ್ದಾರೆ.

ಒಳಚರಂಡಿ ತ್ಯಾಜ್ಯ ನೀರನ್ನು ನದಿಗಳಿಗೆ ಹರಿಸುವ ಮೂಲಕ ಸರ್ಕಾರವೇ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವುದು ಖಂಡನೀಯ ಸಂಗತಿ. ತಕ್ಷಣವೇ ಎಸ್‌ಟಿಪಿಗಳ ಸಮರ್ಪಕ ನಿರ್ವಹಣೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ, ತಾಂತ್ರಿಕ ದೋಷಗಳನ್ನು ಸರಿಪಡಿಸಿ, ನದಿಗಳ ಮಾಲಿನ್ಯ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಭರತ್ ಶೆಟ್ಟಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

- **ಎಸ್‌ಟಿಪಿ ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದರಿಂದ ಈ ಸಮಸ್ಯೆ ಮತ್ತಷ್ಟು ಗಂಭೀರವಾಗುತ್ತಿದೆ**
- **ಸರ್ಕಾರದಿಂದ ನಿರ್ವಹಣಾ ವೆಚ್ಚಕ್ಕೆ ಅನುದಾನ ಬಿಡುಗಡೆ ಆಗುತ್ತಿಲ್ಲ**
- **ವಿದ್ಯುತ್ ಕಡಿತದ ವೇಳೆ ಒಳಚರಂಡಿ ನೀರನ್ನು ನೇರವಾಗಿ ನದಿಗಳಿಗೆ ಬಿಡಲಾಗುತ್ತಿದೆ**

ಯಶಸ್ವೀ ಕಲಾವೃಂದದ ಹೆರಿಯ ಮಾಸ್ಟರ್, ಗುಲಾಬಿಗೆ ಸನ್ಮಾನ



ಕೋಟ: ಇಪ್ಪತ್ತೈದು ವರ್ಷಗಳ ಕಾಲ ಯಶಸ್ವೀ ಕಲಾವೃಂದವನ್ನು ಮುನ್ನಡೆಸುವಲ್ಲಿ ಅತ್ಯುನ್ನತ ಸಹಕಾರ ನೀಡುತ್ತಾ ತಮ್ಮ ಕೇಂದ್ರದ ಮಕ್ಕಳಿಗೆ ಒಂದು ಅವಕಾಶವಾಗಲಿ ಎಂಬ ಕಾಳಜಿಯಿಂದ ಸಂಸ್ಥೆಗಳ ವಿವಿಧ ಪ್ರಕಾರಗಳ ಪ್ರದರ್ಶನಕ್ಕೆ ಅವಕಾಶ ಮಾಡುವ ಮನಸ್ಸು ಹೆರಿಯ ಮಾಸ್ಟರ್ ಅವರದ್ದು, ತನ್ನ ದುಡಿಮೆಯ ಒಂದು ಪಾಲನ್ನು ಇಂತಹ ಕಾರ್ಯಕ್ರಮಗಳಿಗೆ ವಿನಿಯೋಗಿಸಿ ಹೃದಯ ಶ್ರೀಮಂತಿಕೆ ಮೆರೆದಿದ್ದಾರೆ ಎಂದು ಕಲಾ ಪೋಷಕ ಆಂಡ್ರ್ಯೂ ಡಿಸಿಲ್ವಾ ಹೇಳಿದರು.

ತೆಕ್ಕಟ್ಟೆ ದೇವಾಡಿಗರ ಬೆಟ್ಟುವಿನಲ್ಲಿ ಆಯೋಜಿಸಿದ ಯಶಸ್ವೀ ಕಲಾವೃಂದದ ಕಾರ್ಯಕ್ರಮದಲ್ಲಿ ಹೆರಿಯ ಮಾಸ್ಟರ್ ಹಾಗೂ ಗುಲಾಬಿ ಅವರನ್ನು ಗೌರವಿಸಿ ಆಂಡ್ರ್ಯೂ ಡಿಸಿಲ್ವಾ ಮಾತನ್ನಾಡಿದರು.

ಜಿ.ಪಂ. ಮಾಜಿ ಸದಸ್ಯ ಗಣಪತಿ ಟಿ. ಶ್ರೀಯಾನ್ ಮಾತನಾಡಿ, ಕಲೆಯು ನಿಂತ ನೀರಲ್ಲ, ಮಕ್ಕಳಿಗೆ ಕಲೆಯನ್ನು ಕಲಿಸಿ ಮುಂದಿನ ಜನಾಂಗಕ್ಕೆ ಕೈ ದಾಟಿಸುವ ಕೆಲಸ ಶ್ಲಾಘನೀಯ ಎಂದರು.

ಗುರು ದೇವದಾಸ್ ರಾವ್ ಕೂಡ್ಲಿ, ಶ್ರೀನಿವಾಸ ಮಾಸ್ಟರ್, ಉದ್ಯಮಿ ಗೋಪಾಲ ಪೂಜಾರಿ, ಕಾರ್ಯದರ್ಶಿ ವೆಂಕಟೇಶ ವೈದ್ಯ, ಪ್ರಣಮ್ಯ, ಮನೀಶ್ ಇದ್ದರು.

ಯಕ್ಷಗಾನ ವೈಭವ

ಬಳಿಕ ಸಂಗೀತ ಸಂಜೆ, ಯಕ್ಷ ಗಾನ ವೈಭವ, ಯಕ್ಷಗಾನ ಸುಧನ್ವಾರ್ಜುನ ರಂಗಪ್ರಸ್ತುತಿಗೊಂಡಿತು.

ಅನಧಿಕೃತ ಹೋಂ-ಸ್ಟೇಗಳ ವಿರುದ್ಧ ಕಠಿಣ ಕ್ರಮ: ಮಡಿಕೇರಿ ಉಪ ವಿಭಾಗಾಧಿಕಾರಿ ಎಚ್ಚರಿಕೆ

ಮಡಿಕೇರಿ: ಪ್ರವಾಸಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಂ-ಸ್ಟೇಗಳು ಅಧಿಕೃತ ಅನುಮೋದನೆ ಪಡೆಯುವುದು ಕಡ್ಡಾಯವಾಗಿದೆ. ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ನೋಂದಣಿ ಪತ್ರ ಪಡೆಯದೇ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂ-ಸ್ಟೇ ಮಾಲಕರು ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ, ನೋಂದಣಿ ಪತ್ರ ಪಡೆದ ನಂತರವೇ ಹೋಂ-ಸ್ಟೇಗಳನ್ನು ನಡೆಸುವಂತೆ ಸೂಚಿಸಲಾಗಿದೆ.

ನೋಂದಣಿ ಮಾಡಿಸದೇ ಅನಧಿಕೃತವಾಗಿ ಹೋಂ-ಸ್ಟೇಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಅಂತಹ ಹೋಂ-ಸ್ಟೇಗಳ ವಿರುದ್ಧ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ-2015ರಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಹೋಂ-ಸ್ಟೇ ನಡೆಸುವ ಮಾಲೀಕರು ಕಡ್ಡಾಯವಾಗಿ ಷರತ್ತು ಪಾಲಿಸುವುದು. ಎಲ್ಲಾ ಅಸ್ತಿತ್ವದಲ್ಲಿರುವ ಮತ್ತು ಹೊಸ ಹೋಂಸ್ಟೇಗಳು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ನೋಂದಾಯಿತ ಹೋಂಸ್ಟೇಗಳ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರದರ್ಶಿಸಲಾಗುತ್ತದೆ.

ಸಮಯದ ಹಂಚಿಕೆಯ ಆಧಾರದ ಮೇಲೆ ಯಾವುದೇ ಕೊಠಡಿಗಳನ್ನು ಬಾಡಿಗೆಗೆ ನೀಡುವಂತಿಲ್ಲ. ಹೋಂ-ಸ್ಟೇ ಪ್ರವೇಶಿಸುವ ಮುಖ್ಯ ದ್ವಾರದಲ್ಲಿ ಅನುಮತಿ ಪತ್ರ ಹಾಗೂ ಪರವಾನಗಿ ಪತ್ರಗಳನ್ನು ಪ್ರದರ್ಶಿಸಬೇಕು. ಬಾಡಿಗೆ ಅಥವಾ ಲೀಸ್ ಅಥವಾ ಉಪ ಬಾಡಿಗೆ ಮನೆಗಳನ್ನು ಹೋಂ-ಸ್ಟೇಗಳಾಗಿ ನೋಂದಾಯಿಸಲು ಅವಕಾಶವಿಲ್ಲ. ಹೋಂ-ಸ್ಟೇ ಮಾಲಕರು ಕಡ್ಡಾಯವಾಗಿ ಈ ಸ್ಥಳದಲ್ಲಿ ವಾಸವಿರತಕ್ಕದ್ದು. ಹೋಂ-ಸ್ಟೇನಲ್ಲಿ ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಬೇಕು. ಸಿಸಿ ಟಿವಿಯು 24/7 ಚಾಲ್ತಿಯಲ್ಲಿರುವುದು ಹಾಗೂ 30 ದಿನಗಳ ಫುಟೇಜ್ ಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಹಾಗೂ ಸಿಸಿ ಟಿವಿಯನ್ನು ಸರಿಯಾಗಿ ನಿರ್ವಹಿಸಬೇಕು

ಹೋಂ-ಸ್ಟೇಗೆ ನೇಮಿಸಿಕೊಳ್ಳುವ ಸಿಬ್ಬಂದಿಗಳ ಹಿನ್ನಲೆ ಪರಿಶೀಲನೆ ಅನ್ನು ಪೊಲೀಸ್ ಇಲಾಖೆಯ ಮುಖಾಂತರ ಕಡ್ಡಾಯವಾಗಿ ನಡೆಸುವುದು. ಅತಿಥಿಗಳ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಹೋಂ-ಸ್ಟೇ ಸ್ವಾಗತದಲ್ಲಿ ಈಜಜಜ ಃಚಿಥಿಜ ರಿಜಿಸ್ಟರ್, ದೂರು ರಿಜಿಸ್ಟರ್ ಮತ್ತು ಪ್ರತಿಕ್ರಿಯೆ ಪುಸ್ತಕ ನಿರ್ವಹಿಸುವುದು. ಹೋಂ-ಸ್ಟೇ ನಡೆಸುವ ಮಾಲೀಕರು ಕಡ್ಡಾಯವಾಗಿ ಬಂದಂತಹ ಅತಿಥಿಗಳಿಗೆ ಬೆಳಗ್ಗಿನ ಉಪಹಾರವನ್ನು ನೀಡುವುದು. ಸ್ವಚ್ಛತೆ, ಆರೋಗ್ಯ, ನೈರ್ಮಲ್ಯ ಮತ್ತು ಅಗ್ನಿ ಸುರಕ್ಷತೆಗೆ ಸೇರಿದಂತೆ ಸುರಕ್ಷತಾ ಕ್ರಮಗಳನ್ನು ತಪ್ಪದೇ ಅನುಸರಿಸಬೇಕು. ಕಡ್ಡಾಯವಾಗಿ ಒಣತ್ಯಾಜ್ಯ ಹಾಗೂ ಹಸಿ ತ್ಯಾಜ್ಯಗಳ ಸಂಗ್ರಹಣೆಗೆ ಪ್ರತ್ಯೇಕ ಕಸದ ಬುಟ್ಟಿಗಳನ್ನು ಇಡುವುದು. ಮರುಬಳಕೆ, ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ ಮತ್ತು ತ್ಯಾಜ್ಯದ ಸರಿಯಾದ ವಿಲೇವೇರಿಯನ್ನು ಕಡ್ಡಾಯವಾಗಿ ಪ್ರೋತ್ಸಾಯಿಸುವುದು.

ಹೋಂಸ್ಟೇ ಕನಿಷ್ಠ 1 (ಒಂದು) ಮತ್ತು ಗರಿಷ್ಠ 6 (ಆರು) ಬಾಡಿಗೆ ಕೊಠಡಿಗಳನ್ನು ಒದಗಿಸಬೇಕು. ಹೋಂಸ್ಟೇ ಗರಿಷ್ಠ 12 (ಹನ್ನೆರಡು) ಹಾಸಿಗೆಗಳನ್ನು ಹೊಂದಿರಬಹುದು. ಮಕ್ಕಳಿಗಾಗಿ ಹಾಸಿಗೆಗಳನ್ನು ಹೊರತುಪಡಿಸಿ ಒಂದು ಕೋಣೆಯಲ್ಲಿ 3 (ಮೂರು) ಕ್ಕಿಂತ ಹೆಚ್ಚು ಹಾಸಿಗೆಗಳು ಇರುವಂತಿಲ್ಲ, ಹೋಂಸ್ಟೇಯಲ್ಲಿ ಯಾವುದೇ ಕೊಠಡಿಯನ್ನು ಡಾರ್ಮಿಟರಿಯಾಗಿ ನಿರ್ವಹಿಸಲಾಗುವುದಿಲ್ಲ ಮತ್ತು ಹೋಂಸ್ಟೇಯಲ್ಲಿ ಬಂಕ್ ಹಾಸಿಗೆಗಳನ್ನು ಒದಗಿಸಲಾಗುವುದಿಲ್ಲ, ಯಾವುದೇ ಸಮಯದಲ್ಲಿ ಗರಿಷ್ಠ 12 ವಯಸ್ಕರು ಹೋಂಸ್ಟೇಯಲ್ಲಿ ಅತಿಥಿಗಳಾಗಿ ಉಳಿಯಬಹುದು. ಹೋಂ-ಸ್ಟೇನಲ್ಲಿ ಅತಿಥಿಗಳು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುವುದು ಕಂಡುಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದು. ಪ್ರವಾಸೋದ್ಯಮ ಇಲಾಖೆಯ ಅನುಮೋದನೆ ಅಥವಾ ನೋಂದಣಿ ಇಲ್ಲದೇ ಹೋಂ-ಸ್ಟೇಗಳು ಕಾರ್ಯನಿರ್ವಹಿಸುತ್ತಿರುವ ಕಾನೂನುಬಾಹಿರವೆಂದು ಪರಿಗಣಿಸಲಾಗಿ ಹೋಂ-ಸ್ಟೇ ಮಾಲೀಕರು ಮತ್ತು ಪ್ರವರ್ತಕರ ವಿರುದ್ಧ ಕೆ.ಟಿ.ಟಿ.ಎಫ್ ಕಾಯ್ದೆ-2015ರಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅತಿಥಿಗಳು ಬಂದಾಗ ನೋಂದಣಿ ಪುಸ್ತಕದಲ್ಲಿ ಎಲ್ಲ ಮಾಹಿತಿ ಕಡ್ಡಾಯವಾಗಿ ನಮೂದಿಸಬೇಕು. (ಎಲೆಕ್ಟ್ರಾನಿಕ್ ಮಾಧ್ಯಮ ಅಥವಾ ಭೌತಿಕವಾಗಿ) ವಿದೇಶಿಯರ ಮಾಹಿತಿಯನ್ನು ಪೊಲೀಸ್ ಇಲಾಖೆಗೆ (ಸಿ' ಫಾರಂ ನಲ್ಲಿ ನೀಡುವುದು) ಅಥವಾ ನಿಗಧಿತ ಮಾರ್ಗಸೂಚಿಗಳ ಪ್ರಕಾರ ಸಲ್ಲಿಸಬೇಕು. ಮಾಹಿತಿ ಇಲ್ಲದೆ ಅನಧೀಕೃತವಾಗಿ ನಡೆಸುತ್ತಿರುವಂತಹ ಹೋಂ-ಸ್ಟೇಗಳ ಬಗ್ಗೆ ಹಾಗೂ ಹೋಂ-ಸ್ಟೇ ನೋಂದಣಿ ಮಾಡಿಕೊಳ್ಳುವ ಬಗ್ಗೆ ಸಾರ್ವಜನಿಕರು ದೂರು, ಮಾಹಿತಿ ಇದ್ದಲ್ಲಿ ಅವುಗಳ ವಿವರಗಳನ್ನು ಪತ್ರ ಮುಖೇನ ಉಪ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಸ್ಟುವರ್ಟ್ ಹಿಲ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ-571201 ದೂರವಾಣಿ ಸಂಖ್ಯೆ: 08272-200519 ಇ-ಮೇಲ್: ddkodagutourism@gmail.com ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ: 08272-229000 ಇ-ಮೇಲ್ ಅಥವಾ dcmcr@ksp.gov.in ಅಥವಾ spmcr@ksp.gov.in ಮುಖಾಂತರ ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರೂ ಆಗಿರುವ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ತಿಳಿಸಿದ್ದಾರೆ.

ಸುತ್ತ ಮುತ್ತ

ಇಂದು ಶೇಷವನ ಶ್ರೀ ಸುಬ್ರಹ್ಮಣ್ಯ ಸ್ವಾಮೀ ಕ್ಷೇತ್ರ: ಪ್ರತಿಷ್ಠಾ ದಿನಾಚರಣೆ

ಕಾಸರಗೋಡು: ಶೇಷವನ ಬಾದಾರ ಶ್ರೀ ಸುಬ್ರಹ್ಮಣ್ಯ ಸ್ವಾಮೀ ಕ್ಷೇತ್ರದಲ್ಲಿ ಪ್ರತಿಷ್ಠಾ ದಿನಾಚರಣೆ ಮತ್ತು ಸಾಮೂಹಿಕ ರಂಗಪೂಜೆ ಮೇ 9ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಮೇ 9ರಂದು ಬೆಳಗ್ಗೆ 6 ಗಂಟೆಗೆ ಗಣಪತಿ ಹವನ, 8ಕ್ಕೆ ಕಲಶಪೂಜೆ, ಕಲಶಾಭಿಷೇಕ, 8.30ರಿಂದ ಶ್ರೀದೇವಿ ಕಾಲಭೈರವ ಮಕ್ಕಳ ಭಜನಾ ಸಂಘದವರಿಂದ ಭಜನೆ, 10.30ರಿಂದ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದವರಿಂದ ತಾಳಮದ್ದಳೆ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಕೂಡ್ಲು ವೃಂದಾವನ ಭಜನಾ ಸಂಘದವರಿಂದ ಭಜನೆ, ರಾತ್ರಿ 7 ಗಂಟೆಗೆ ಸಾಮೂಹಿಕ ರಂಗಪೂಜೆ, ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ.

ನಾಳೆ ಅಭಿನಂದನಾ ಸಮಾರಂಭ

ಕಾಸರಗೋಡು: ವಿದ್ಯಾಭಾರತಿ ವಿದ್ಯಾಲಯ ಮತ್ತು ಶ್ರೀರಾಮೋತ್ಸವ ಸಮಿತಿ ಅಡೂರು ಉರ್ಡೂರು ಇದರ ಆಶ್ರಯದಲ್ಲಿ ಭಾರತೀಯ ಭೂಸೇನೆಯಲ್ಲಿ 30 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸುಬೇದಾರ್ ಸಂಪತ್‌ಕುಮಾರ್ ಕೆ. ಹಾಗೂ ನಿರಂತರ 24 ಗಂಟೆಗಳ ಕಾಲ ಭಾರತೀಯ ನೃತ್ಯಕಲೆ ಕೂಚುಪುಡಿ ಪ್ರದರ್ಶನಗೈದು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದ ಯುವ ಪ್ರತಿಭೆ ಅಭಿಷೇಕ್ ಕಣೆಮರಡ್ಕ ಅವರಿಗೆ ಅಭಿನಂದನಾ ಸಮಾರಂಭವು ಮೇ 10ರಂದು ಅಪರಾಹ್ನ 3 ಗಂಟೆಗೆ ಅಡೂರು ವಿದ್ಯಾಭಾರತಿ ವಿದ್ಯಾಲಯದಲ್ಲಿ ಜರಗಲಿದೆ. ಸಮಾರಂಭವನ್ನು ಭಾರತೀಯ ವಾಯುಪಡೆಯ ನಿವೃತ್ತ ಅಧಿಕಾರಿ ಸಾರ್ಜೆಂಟ್ ಬಾಲಚಂದ್ರನ್ ಆರ್. ಉದ್ಘಾಟಿಸುವರು. ಅಡೂರು ವಿದ್ಯಾಭಾರತಿ ವಿದ್ಯಾಲಯ ಸಮಿತಿ ಅಧ್ಯಕ್ಷೆ ಸತ್ಯಪ್ರೇಮಾ ಎಂ. ಬಾರಿತ್ತಾಯ ಅಧ್ಯಕ್ಷತೆ ವಹಿಸುವರು. ಪುತ್ತೂರು ವಿವೇಕಾನಂದ ಕಾನೂನು ಮಹಾ ವಿದ್ಯಾಲಯದ ಪ್ರಾಧ್ಯಾಪಕ ಶ್ರೀಕೃಷ್ಣ ಭಟ್ ಆಕಿರೆಕಾಡು ಅತಿಥಿಯಾಗಿ ಭಾಗವಹಿಸುವರು.

ನಾಳೆ ರಂಗಚಿನ್ನಾರಿ 20ನೇ ವಾರ್ಷಿಕೋತ್ಸವ

ಕಾಸರಗೋಡು: ಸಾಮಾಜಿಕ – ಸಾಂಸ್ಕೃತಿಕ – ಸಾಹಿತ್ಯಕ ಸಂಸ್ಥೆ ಕಾಸರಗೋಡಿನ ರಂಗಚಿನ್ನಾರಿಯ 20ನೇ ವಾರ್ಷಿಕೋತ್ಸವ ಮತ್ತು ರಂಗಚಿನ್ನಾರಿ ಪ್ರಶಸ್ತಿ ಪ್ರದಾನ ಸಮಾರಂಭ 'ವಿಂಶತಿ ಹಬ್ಬ' ಮೇ 10ರಂದು ಅಪರಾಹ್ನ 2ರಿಂದ ಕಾಸರಗೋಡು ಬೀರಂತಬೈಲು ಲಯನ್ಸ್ ಸೇವಾ ಮಂದಿರದಲ್ಲಿ ಜರಗಲಿದೆ.
ಕಳೆದ ಹಲವು ವರ್ಷಗಳಿಂದ ಕಾಸರಗೋಡಿನಲ್ಲಿ ನಾರಿ ಚಿನ್ನಾರಿ ಎಂಬ ಮಹಿಳಾ ಘಟಕ ಮತ್ತು ಸ್ವರಚಿನ್ನಾರಿ ಎಂಬ ಸಂಗೀತ ಘಟಕ ರಚಿಸಿ ಕನ್ನಡದ ಚಟುವಟಿಕೆ ನಡೆಸುವುದರ ಜೊತೆಗೆ ಹಿರಿಯ ಕಿರಿಯ ಪ್ರತಿಭೆಗಳಿಗೆ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ ಸ್ಮರಣಾರ್ಥ ಪ್ರಶಸ್ತಿ, ರಂಗ ಚಿನ್ನಾರಿ ಪ್ರಶಸ್ತಿ, ರಂಗ ಚಿನ್ನಾರಿ ಯುವ ಪ್ರಶಸ್ತಿ ನೀಡಿ ಪ್ರತಿಭೆಗಳನ್ನು ಗೌರವಿಸುತ್ತಿದೆ.
2025–26ನೇ ಸಾಲಿನ ಪ್ರಶಸ್ತಿಯನ್ನು ಘೋಷಿಸಲಾಗಿದ್ದು, ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ ಸ್ಮರಣಾರ್ಥ ಪ್ರಶಸ್ತಿಗೆ ಯಕ್ಷಗಾನ ಕ್ಷೇತ್ರದ ಪದ್ಮನಾಭ ಶೆಟ್ಟಿ ಮಜಕಾರ್, ರಂಗ ಚಿನ್ನಾರಿ ಪ್ರಶಸ್ತಿಗೆ ಜಯಪ್ರಕಾಶ ತೂಮಿನಾಡು (ರಂಗಭೂಮಿ–ಚಲನಚಿತ್ರ ಕ್ಷೇತ್ರ) ಹಾಗೂ ಮಂಜುಳಾ ಗುರುರಾಜ್ ಇರಾ(ಹರಿಕಥೆ ಕ್ಷೇತ್ರ), ರಂಗ ಚಿನ್ನಾರಿ ಯುವ ಪ್ರಶಸ್ತಿಗೆ ದೇವಾಂಶ ರೈ (ಕ್ರೀಡಾಕ್ಷೇತ್ರ) ಮತ್ತು ಅನ್ವಿತಾ ಟಿ. (ಸಂಗೀತ ಕ್ಷೇತ್ರ) ಆಯ್ಕೆಯಾಗಿದ್ದಾರೆ. ಅಪರಾಹ್ನ 2 ಗಂಟೆಗೆ ನಡೆಯುವ ಸಮಾರಂಭದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಖ್ಯಾತ ಪತ್ರಕರ್ತ ರವೀಂದ್ರ ಜೋಷಿ ಮೈಸೂರು, ಪ್ರಖ್ಯಾತ ವಿಮರ್ಶಕ ನಾಟಕ ನಿರ್ದೇಶಕ, ಚಿತ್ರ–ಸಾಹಿತಿ ವಿಜಯಕುಮಾರ್ ಕೋಡಿಯಾಲ್‌ಬೈಲ್, ರಾಷ್ಟ್ರ ಪ್ರಶಸ್ತಿ ವಿಜೇತ, ಚಲನಚಿತ್ರ ಪತ್ರಕರ್ತ ಬಾ.ನಾ.ಸುಬ್ರಹ್ಮಣ್ಯ, ಕಾಸರಗೋಡು ನಗರಸಭಾ ಸದಸ್ಯ ಅರುಣ್‌ಕುಮಾರ್ ಶೆಟ್ಟಿ ಅತಿಥಿಗಳಾಗಿ ಭಾಗವಹಿಸುವರು.

ಕಿರುಚಿತ್ರ ಸ್ಪರ್ಧೆ ವ್ಯವಸ್ಥೆ

ಕಾಸರಗೋಡು: ಮಾನವ ಹಕ್ಕುಗಳ ಆಯೋಗವು ಮಾನವ ಹಕ್ಕುಗಳ ರಕ್ಷಣೆಯನ್ನು ಆಧರಿಸಿ ಮೂರರಿಂದ ಹತ್ತು ನಿಮಿಷಗಳ ಕಿರುಚಿತ್ರ ಸ್ಪರ್ಧೆಯನ್ನು ಆಯೋಜಿಸುತ್ತಿದೆ. ವಿಶ್ವವಿದ್ಯಾಲಯಗಳು, ಸರಕಾರಿ ಮತ್ತು ಅನುದಾನಿತ ಕಾಲೇಜುಗಳು, ಗ್ರಾ.ಪಂ.ಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ಇನ್ನಿತರ ಸಂಸ್ಥೆಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಆಸಕ್ತರು ಜೂನ್ 30ರೊಳಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಅರ್ಜಿಗಳ ಸಲ್ಲಿಸಬೇಕು. ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ 2,00,000 ರೂ., 1,50,000ರೂ. ಮತ್ತು 1,00,000 ರೂ. ನೀಡಲಾಗುತ್ತದೆ. ಮಾಹಿತಿಗೆ 04994 255010 ಅಥವಾ 255211 ಕರೆ ಮಾಡಬಹುದು.

ಶಿಕ್ಷಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಇರಿಯಣ್ಣಿ ಸರಕಾರಿ ವಿಎಚ್‌ಎಸ್‌ಎಸ್‌ನ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 29 ರಂದು ಬೆಳಗ್ಗೆ 10 ಗಂಟೆಗೆ ಹೈಯರ್ ಸೆಕೆಂಡರಿ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಎಚ್‌ಎಸ್‌ಎಸ್‌ಟಿ – ಇಂಗ್ಲಿಷ್, ಹಿಂದಿ, ಅಂಕಿ ಅಂಶಗಳು, ಕಂಪ್ಯೂಟರ್ ವಿಜ್ಞಾನ, ವಾಣಿಜ್ಯ, ಪ್ರಾಣಿಶಾಸ್ತ್ರ ಅರ್ಥಶಾಸ್ತ್ರ ಭೌತಶಾಸ್ತ್ರ ವಿಷಯಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿಯಿವೆ. ಹೆಚ್ಚಿನ ವಿವರಗಳಿಗೆ 9446128661 ಕರೆ ಮಾಡಬಹುದು.



ಕಾಸರಗೋಡು ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಮೂರನೇ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಡಾ.ಸಂಪ್ರೀತಾ ಕೇಶವನ್ ಅವರಿಂದ ಮೋಹಿನಿಯಾಟ್ಟಂ ಪ್ರದರ್ಶನಗೊಂಡಿತು.

ಕಾಸರಗೋಡು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ | ಅಧಿಕಾರಿಗಳಿಗೆ ಡೀಸಿ ಸೂಚನೆ

ಮಳೆಗಾಲಕ್ಕೆ ಮುಂಚಿತ ಸಕಲ ಸಿದ್ಧತೆಗಳ ಪೂರ್ಣಗೊಳಿಸಿ



ಕಾಸರಗೋಡು: ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ಜರಗಿತು. ಸಭೆಯಲ್ಲಿ ವಿವಿಧ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಮಳೆಗಾಲಕ್ಕೆ ಮುಂಚಿತವಾಗಿ ಜಿಲ್ಲೆಯಲ್ಲಿ ವಿಪತ್ತು ನಿರ್ವಹಣಾ ಸಿದ್ಧತೆಗಳನ್ನು ತ್ವರಿತಗೊಳಿಸಿ ಪೂರ್ಣಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.
ಸ್ಥಳೀಯಾಡಳಿತ ಇಲಾಖೆ, ಕಂದಾಯ ಮತ್ತು ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ನಡೆಸುತ್ತಿರುವ ಮಳೆಗಾಲ ಪೂರ್ವಸಿದ್ಧತಾ ಚಟುವಟಿಕೆಗಳನ್ನು ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ಕಾಮಗಾರಿ ಅಂಗವಾಗಿ ಮುಚ್ಚಲಾಗಿದ್ದ ಚೆರ್ಕಳ ಬೇವಿಂಜೆ ರಾಷ್ಟ್ರೀಯ ಹೆದ್ದಾರಿ 66ನ್ನು ಮೇ 11ರಂದು ತೆರೆಯಲಾಗುವುದೆಂದು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಗುತ್ತಿಗೆ ಕಂಪೆನಿ ಪ್ರತಿನಿಧಿಗಳು ತಿಳಿಸಿದರು. ಕಳೆದ ಮಳೆಗಾಲದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಂದರ್ಭ ಭೂಕುಸಿತ ಮತ್ತು ನೀರು ನಿಲ್ಲುವ ಪ್ರದೇಶಗಳಲ್ಲಿ ಜಾಗರೂಕರಾಗಿರಲು ಜಿಲ್ಲಾಧಿಕಾರಿ ಸೂಚಿಸಿದರು. ಹಿಂದಿನ ವರ್ಷಗಳಲ್ಲಿ ಮಳೆಗಾಲದಲ್ಲಿ ಅಪಘಾತಗಳು ಸಂಭವಿಸಿದ ಪ್ರದೇಶಗಳನ್ನು ಪರಿಶೀಲಿಸಿ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಕಾಸರಗೋಡು ಮತ್ತು ಕಾಞಂಗಾಡು ಆರ್‌ಡಿಒಗಳಿಗೆ ಅರ್ಜುನ್ ಪಾಂಡ್ಯನ್ ನಿರ್ದೇಶಿಸಿದರು. ಶಾಲೆಗಳಿಗೆ ಫಿಟ್‌ನೆಸ್ ಒದಗಿಸುವ ಬಗ್ಗೆ ಸಂಬಂಧಿತ ಇಲಾಖೆಗಳ ಜಿಲ್ಲಾ ಮಟ್ಟದ ಸಭೆ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು. ಹಿಂದಿನ ವರ್ಷಗಳಲ್ಲಿ ನೈಸರ್ಗಿಕ ವಿಕೋಪಗಳು ಸಂಭವಿಸಿದ ಪ್ರದೇಶಗಳಲ್ಲಿ ಜಾಗರೂಕತೆ ಕಾಪಾಡಿಕೊಳ್ಳಲು ಮತ್ತು ಪರಿಹಾರ ಶಿಬಿರಗಳ ಸಿದ್ಧಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಎಲ್ಲಾ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಸ್ವಯಂಸೇವಕ ತಂಡಗಳ ರಚಿಸಿ ತರಬೇತಿ ನೀಡಲಾಗುವುದು. ಅಪಾಯವನ್ನುಂಟು ಮಾಡುವ ಮರಗಳು ಮತ್ತು ಜಾಹೀರಾತು ಫಲಕಗಳ ತೆಗೆದುಹಾಕಲಾಗುವುದು. ರಸ್ತೆಗಳು ಮತ್ತು ಹೊಳೆಗಳನ್ನು ಸ್ವಚ್ಛಗೊಳಿಸಲು ವಿಶೇಷ ಆದ್ಯತೆ ನೀಡಲಾಗುವುದೆಂದು ಸಭೆಗೆ ತಿಳಿಸಲಾಯಿತು.
ಕಳೆದ ಮಳೆಗಾಲದಲ್ಲಿ ಭೂಕುಸಿತದಿಂದ ಹಾನಿಗೊಳಗಾದ ವೀರಮಲ ಬೆಟ್ಟ ಪರಿಸರದಲ್ಲಿ ರಾಷ್ಟ್ರೀಯ ಹೆದ್ದಾರಿ ಕೆಲಸ ಪೂರ್ಣಗೊಳಿಸುವ ನಿಟ್ಟಿನಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ ಶೀಘ್ರ ಆದೇಶ ಹೊರಡಿಸಲಿದೆ, ಆದಕ್ಕೆಸಂಬಂಧಿಸಿದಕಾಮಗಾರಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಿರ್ದೇಶಿಸಿದರು.
ಸ್ಥಳೀಯಾಡಳಿತ ಇಲಾಖೆಯಡಿ 32 ವಿಪತ್ತು ನಿರ್ವಹಣಾ ಯೋಜನೆಗಳಿಗೆ 41,60,000 ರೂ. ಒದಗಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಎಲ್‌ಎಸ್‌ಜಿಡಿ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.
ಶಾಲೆಗಳ ಕಟ್ಟಡ ಫಿಟ್‌ನೆಸ್ ಪರಿಶೀಲಿಸಲು ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್‌ರನ್ನು ನಿಯೋಜಿಸಲಾಗಿದೆ. ಕೆಎಸ್‌ಇಬಿ, ಮೋಟಾರ್ ವಾಹನ ಇಲಾಖೆ, ಅಗ್ನಿಶಾಮಕ ದಳ ಮತ್ತು ಸುರಕ್ಷತೆ, ಅರಣ್ಯ ಮುಂತಾದ ಇಲಾಖೆಗಳಿಂದ ಸುರಕ್ಷತಾ ಪ್ರಮಾಣಪತ್ರಗಳು ಸಹ ಅತ್ಯಗತ್ಯ ವಾಗಿದೆ. ಅತಿಥಿ ಕಾರ್ಮಿಕರು ವಾಸಿಸುವ ಕಟ್ಟಡ ಪರಿಶೀಲಿಸಲಾಗುವುದು. ಮೀನುಗಾರಿಕೆ ಇಲಾಖೆ ಯಲ್ಲಿ ಹೆಚ್ಚಿನ ರಕ್ಷಣಾ ಕಾರ್ಯಕರ್ತರ ನೇಮಿಸಲು ಒಪ್ಪಂದಗಳ ಆಹ್ವಾನಿಸಲಾಗಿದೆ. ಎಲ್ಲಾ ಕಚೇರಿಗಳಿಂದ ಇ-ತ್ಯಾಜ್ಯ ಸೇರಿದಂತೆ ವಿವಿಧ ತ್ಯಾಜ್ಯ ತೆರವುಗೊಳಿಸಲು ಸೂಚನೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಈ ಬಾರಿ ಮೇ 23 ರೊಳಗೆ ಮುಂಗಾರು ಮಳೆ ಕೇರಳವನ್ನು ತಲುಪುವ ಸಾಧ್ಯತೆಯಿದೆ ಎಂದು ಮಾಹಿತಿ ನೀಡಲಾಯಿತು.
ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ, ಎಡಿಎಂ ಕೆ.ವಿ. ಶ್ರುತಿ, ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕಿ ಜೇಸನ್ ಮ್ಯಾಥ್ಯೂ, ಡಿವೈಎಸ್‌ಪಿ ಸುನಿಲ್ ಕುಮಾರ್, ವಿವಿಧ ಇಲಾಖೆಗಳ ಮುಖ್ಯಸ್ಥರು, ಸ್ಥಳೀಯಾಡಳಿತ ಸಂಸ್ಥೆಗಳ ಅಧಿಕಾರಿ ಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರತಿನಿಧಿಗಳು ಸಭೆಯಲ್ಲಿದ್ದರು.

> **ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಿ**
> **ಜಿಲ್ಲೆಯ ಕರಾವಳಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ದುರಂತಗಳ ಸಾಧ್ಯತೆ ಪರಿಗಣಿಸಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪ್ರದೇಶದಲ್ಲಿ ಭೂಕುಸಿತ ತಪ್ಪಿಸಲು ಎಚ್ಚರಿಕೆ ವಹಿಸಬೇಕು. ಕಡಲ್ಕೊರೆತ ತಡೆಗಟ್ಟುವ ಕೆಲಸವು ಮೇ 12ರಿಂದ ತೃಕ್ಕನ್ನಾಡಿನಲ್ಲಿ ಕಿರು ನೀರಾವರಿ ಇಲಾಖೆ ನೇತೃತ್ವದಲ್ಲಿ ಪ್ರಾರಂಭವಾಗಲಿದೆ.**
> ● **ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ**

ಗೋಶಾಲೆಯಲ್ಲಿ ಮನಸೂರೆಗೊಂಡ ದೇವಿಚಂದನಾರ 'ಶ್ರೀಕೃಷ್ಣ ಚರಿತಂ' ನೃತ್ಯ



ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಜರಗುತ್ತಿರುವ 3ನೇ ಆವೃತ್ತಿಯ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಖ್ಯಾತ ಚಲನಚಿತ್ರ ಹಾಗೂ ಕಿರುತೆರೆ ಕಲಾವಿದೆ ದೇವಿಚಂದನಾ ಅವರು ಪ್ರಸ್ತುತಪಡಿಸಿದ 'ಶ್ರೀಕೃಷ್ಣ ಚರಿತಂ' ಆಧಾರಿತ ಭರತನಾಟ್ಯವು ಭಕ್ತಿಪರವಶತೆಯನ್ನು ಮೂಡಿಸಿತು.
ಧೇನು ಮಂಟಪದಲ್ಲಿ ನಡೆದ ಈ ಪ್ರದರ್ಶನದಲ್ಲಿ ಕಲಾವಿದೆ ಪೂತನಿ, ಪಾಂಚಾಲಿ ಹಾಗೂ ಯಶೋಧೆಯ ಪಾತ್ರಗಳಿಗೆ ಜೀವ ತುಂಬುವ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಆರೋಗ್ಯದ ಕಾರಣಗಳಿಂದಾಗಿ ಸುದೀರ್ಘ ಕಾಲ ನೃತ್ಯರಂಗದಿಂದ ದೂರವಿದ್ದ ದೇವಿಚಂದನಾ ಅವರಿಗೆ ಈ ಎರಡು ಗಂಟೆಗಳ ಸುದೀರ್ಘ ನೃತ್ಯ ಪ್ರದರ್ಶನವು ಕಲಾಕ್ಷೇತ್ರಕ್ಕೆ ನೀಡಿದ ಪ್ರಬಲ ಪುನರಾಗಮನದ ಮುದ್ರೆ ಎನಿಸಿತು. ಭಾಗ್ಯಲಕ್ಷ್ಮಿ ಗುರುವಾಯೂರು ಅವರ ಗಾಯನ ನೃತ್ಯದ ಮೆರುಗನ್ನು ಇಮ್ಮಡಿ ಗೊಳಿಸಿತು.

ಸಾಂಸ್ಕೃತಿಕ ಕಳೆ ಹೆಚ್ಚಿತು

ಇದೇ ವೇದಿಕೆಯಲ್ಲಿ ಪ್ರಸಿದ್ಧ ನೃತ್ಯಗಾರ್ತಿ ಪ್ರಶೀಜಾ ಗೋಪಿನಾಥ್ ಅವರ ಮೋಹಿನಿಯಾಟ್ಟಂ ಪ್ರದರ್ಶನವು ಕಲಾಭಿಮಾನಿಗಳ ವಿಶೇಷ ಗಮನ ಸೆಳೆಯಿತು. ನಂತರ ಚೆನ್ನೈನ ಸಾತ್ವಿಕಾ ಗೋಪಿನಾಥ್ ಅವರು ತಮ್ಮ ತಂದೆಯವರು ಗೋಶಾಲೆಗೆ ವಿಶೇಷವಾಗಿ ರಚಿಸಿ ಸಿದ್ಧಪಡಿಸಿದ ವರ್ಣಂಗೆ ಚರಣಗಳನ್ನಿಡುವ ಮೂಲಕ ಧೇನು ಮಂಟಪಕ್ಕೆ ಸಾಂಸ್ಕೃತಿಕ ಕಳೆ ನೀಡಿದರು.

ಕಾನತ್ತೂರು ನೆಯ್ಯಂಗಯ ಜೀವ ವೈವಿಧ್ಯ ಕೇಂದ್ರ ಸಂರಕ್ಷಣೆಗೆ ನಾಗರಿಕರ ಒತ್ತಾಯ



ಕಾಸರಗೋಡು: ಜಿಲ್ಲೆಯ ಮೊದಲ ಜೀವ ವೈವಿಧ್ಯ ಪರಂಪರೆ ಕೇಂದ್ರವಾದ ಕಾನತ್ತೂರು ನೆಯ್ಯಂಗಯವನ್ನು ಸಂರಕ್ಷಿಸಬೇಕು ಎಂಬ ಬೇಡಿಕೆ ಹೆಚ್ಚಿದೆ.
ಕಾನತ್ತೂರಿನ ನೆಯ್ಯಂಗಯ ಪಯಸ್ವಿನಿ ಹೊಳೆಯ ಅತ್ಯಂತ ಜನಸಮೃದ್ಧವಾದ ಪ್ರದೇಶವಾಗಿದೆ. ಹೊಳೆಯಿಂದ ಅರ್ಧ ಎಕರೆಯಷ್ಟು ವಿಸ್ತೀರ್ಣದಲ್ಲಿ ಆಳವಾದ ನೀರು ನಿಲ್ಲುವ ಹೊಂಡ ಇದಾಗಿದೆ. ಬೇಸಿಗೆಯಲ್ಲಿ ಹೊಳೆ ಬತ್ತಿದರೂ ನೆಯ್ಯಂಗಯ ಜಲಸಮೃದ್ಧವಾಗುತ್ತಿತ್ತು. ಹೊಳೆ ಬತ್ತುವಾಗ ಅದರಲ್ಲಿನ ಜೀವಿಗಳೆಲ್ಲಾ ಈ ಹೊಂಡ ಸೇರುತ್ತವೆ.
ಜೀವವೈವಿಧ್ಯ ಮಂಡಳಿ ನೇತೃತ್ವದಲ್ಲಿ ಇಲ್ಲಿ ನಡೆಸಲಾದ ತಪಾಸಣೆಯಲ್ಲಿ ಅಪೂರ್ವ ಐದು ತಳಿಯ ಮೀನುಗಳು ಸಹಿತ 30 ತಳಿಯ ಮೀನುಗಳನ್ನು, ಪಾಲಪ್ಪೊವನ್ ಆಮೆ (ಭೀಮಾಕಾರದ ಆಮೆ)ಗಳ ಆವಾಸ ಕೇಂದ್ರವನ್ನು ಪತ್ತೆಹಚ್ಚಲಾಗಿದೆ.ಈ ನಿಟ್ಟಿನಲ್ಲಿ ನೆಯ್ಯಂಗಯವನ್ನು ಪ್ರಾದೇಶಿಕ ಕೇಂದ್ರವಾಗಿ ಘೋಷಿಸಲಾಗಿತ್ತು. ಆದರೆಕಳೆದ ನಾಲ್ಕೈದು ದಶಕಗಳಿಂದ ತೀವ್ರ ಬರಗಾಲವನ್ನು ನೆಯ್ಯಂಗಯ ಎದುರಿಸುತ್ತಿದೆ.
2019ನೇ ಮೇ ತಿಂಗಳ ತೀವ್ರ ಬರಗಾಲದಲ್ಲಿ ಸಾವಿರಾರು ಮೀನುಗಳು ಸತ್ತು ಬಿದ್ದಿತ್ತು. ರಾಜ್ಯ ಜೀವ ವೈವಿಧ್ಯ ಮಂಡಳಿಯ ಹಾಗೂ ನಾಗರಿಕರ ತೀವ್ರವಾದ ಮಧ್ಯಸ್ಥಿಕೆಯಿಂದ ವಂಶನಾಶವು ಇಲ್ಲವಾಯಿತು. ಇದರ ಬೆನ್ನಲ್ಲೇ 2020ರಲ್ಲಿ ಮುಳಿಯಾರು ಪಂಚಾಯತ್‌ನ ಈ ಜೀವ ವೈವಿಧ್ಯ ಕೇಂದ್ರವನ್ನು ಸಂರಕ್ಷಿಸಲು ವಿವಿಧ ಯೋಜನೆಗಳನ್ನು ಘೋಷಿಸಲಾಗಿತ್ತಾದರೂ ಬಳಿಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಾಗರಿಕರು ಹೇಳುತ್ತಾರೆ.

> **ಕೃಷಿಕರಿಗೆ ಉಪಕಾರಿ**
> **ನೆಯ್ಯಂಗಯ ಪ್ರದೇಶದ ಕೆಳಭಾಗದಲ್ಲಿ ಅಣೆಕಟ್ಟು ಸಂರಕ್ಷಿಸಲು ಸಾಧ್ಯವಾಗು ವುದರೊಂದಿಗೆ ಮುಳಿಯಾರು ಬೇಡಡ್ಕ ಪಂಚಾಯತ್‌ಗಳ ಕೃಷಿಕರಿಗೆ ಹೆಚ್ಚು ಪ್ರಯೋಜನವಾಗಲಿದೆ ಎಂದು ಪರಿಸರ ನಿವಾಸಿಗಳು ಅಭಿಪ್ರಾಯಪಟ್ಟಿದ್ದಾರೆ.**

ಮೇ 21ರಿಂದ ಶ್ರೀ ದೈವಗಳ ಪುನರ್ ಪ್ರತಿಷ್ಠೆ: ಆಮಂತ್ರಣ ಪತ್ರಿಕೆ ಬಿಡುಗಡೆ



ಬದಿಯಡ್ಕ: ಶ್ರೀ ಧರ್ಮದೈವ ಮೂಕಾಂಬಿ ಗುಳಿಗ ಮತ್ತು ಕೊರಗತನಿಯ ದೈವ ಸನ್ನಿಧಿ ಕಾರ್ಲೆ ಬೆಳ್ಳಿಗೆ ಕ್ಷೇತ್ರದಲ್ಲಿ ಮೇ 21 ರಿಂದ 23ರ ವರೆಗೆ ಶ್ರೀ ದೈವಗಳ ಪುನರ್ ಪ್ರತಿಷ್ಠೆ ಮತ್ತು ನೇಮ ಜರಗಲಿದೆ.
ಇದರ ಆಮಂತ್ರಣ ಪತ್ರ ಬಿಡುಗಡೆ ಕಾರ್ಯಕ್ರಮವು ಬೆಳ್ಳಿಗೆ ಕಾರ್ಲೆಯಲ್ಲಿ ಜರಗಿತು. ಕಾರಡ್ಕ ಗ್ರಾಮ ಪಂಚಾಯತ್ ಸದಸ್ಯೆ ಸವಿತಾ ಕರೀಂಬಳಪ್ಪು, ಮಾಜಿ ಸದಸ್ಯ ಸಂತೋಷ್ ಮುಳ್ಳೇರಿಯ, ಕುಂಬ್ಡಾಜೆ ಗ್ರಾ.ಪಂ. ಸದಸ್ಯ ಕೊರಗಪ್ಪ ಬೆಳ್ಳಿಗೆ, ಶ್ರೀದೇವಿ ಮೂಕಾಂಬಿಕಾ ಅಮ್ಮನವರ ಪಾತ್ರಿ ಸುಂದರ ಪರಪ್ಪೆ ಫ್ರೆಂಡ್ಸ್ ಕ್ಲಬ್ ಬೆಳ್ಳಿಗೆ ಇದರ ಅಧ್ಯಕ್ಷ ಸೋಮಪ್ಪ ರೈ, ಕಾರ್ಯದರ್ಶಿ ಅಶೋಕ್ ಬೆಳ್ಳಿಗೆ, ಕಾಸರಗೋಡು ಜಿಲ್ಲಾ ಮೊಗೇರ ಸಂಘದ ಕಾರ್ಯದರ್ಶಿ ಗೋಪಾಲ ಡಿ., ರಾಜೇಂದ್ರ, ಮಧು, ರಮ್ಯಾ, ವನಜಾ ಕುಂಬಳೆ, ಐತ್ತಪ್ಪ ಶಿವ ಕಾರ್ಲೆ ಮತ್ತು ಭಾಗಿ ಮಾರ್ಪನಡ್ಕ ಉಪಸ್ಥಿತರಿದ್ದರು. ಶಂಕರ ಕಾರ್ಲೆ ಸ್ವಾಗತಿಸಿ, ನೇಮದ ಸಂಚಾಲಕ ಸುಧಾಕರ ಬೆಳ್ಳಿಗೆ ವಂದಿಸಿದರು.

ಬೆಂಗಳೂರಿನ ಶ್ರೀವಿದ್ಯಾ ಕಲಾಶ್ರಮದ ತಂಡದಿಂದ ಭರತನಾಟ್ಯ ಪ್ರದರ್ಶನ



ಕಾಸರಗೋಡು: ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವಮೂರನೇವೈಶಾಖನಟನಂರಾಷ್ಟ್ರೀಯ ನೃತ್ಯೋತ್ಸವದಲ್ಲಿ ಬೆಂಗಳೂರಿನ ಶ್ರೀವಿದ್ಯಾ ಕಲಾಶ್ರಮದ ನಿರ್ದೇಶಕಿಯರಾದ ವಿದುಷಿ ಸ್ವಾತಿ ಗೌಡ ಮತ್ತು ಸ್ನೇಹ ಗೌಡ ಅವರ ಶಿಷ್ಯೆಯಂದಿರು ಭಾಗವಹಿಸಿ ತಮ್ಮ ಅದ್ಭುತ ನೃತ್ಯ ಕೌಶಲ್ಯ ಹಾಗೂ ಭಾವಾಭಿನಯದ ಮೂಲಕ ಪ್ರೇಕ್ಷಕರ ಮನ ಗೆದ್ದರು.
ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಭಕ್ತರು ಮತ್ತು ಕಲಾಭಿಮಾನಿಗಳು ವಿದ್ಯಾರ್ಥಿನಿಯರ ಅಭಿನಯ ಹಾಗೂ ನೃತ್ಯ ಕೌಶಲ್ಯವನ್ನು ಪ್ರಶಂಸಿಸಿದರು. ವಿದ್ಯಾರ್ಥಿನಿಯರಾದ ಸಂಚನ, ರಚನಾ, ಸೌರಭಿ, ಆಧ್ಯಾ, ಶ್ರೇಯಾ ಹಾಗೂ ಮೇಹನಾ ಪಾಲ್ಗೊಂಡಿದ್ದರು. ಗೋಶಾಲೆಯ ಸಂಸ್ಥಾಪಕರು ಹಾಗೂ ಪರಂಪರಾ ವಿದ್ಯಾಪೀಠದ ಆಚಾರ್ಯರಾದ ವಿಷ್ಣು ಹೆಬ್ಬಾರ್ ದಂಪತಿಗಳು ಎಲ್ಲಾ ವಿದ್ಯಾರ್ಥಿನಿಯರನ್ನು ಅಭಿನಂದಿಸಿದರು.



ಕಾಸರಗೋಡು ಪೆರಿಯ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಮೂರನೇ ವೈಶಾಖ ನಟನಂ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಭರತಾಂಜಲಿ ದಾವಣಗೆರೆ ತಂಡದವರಿಂದ ನೃತ್ಯ ಪ್ರದರ್ಶನ ನಡೆಯಿತು.

ಮಂಜೇಶ್ವರದಲ್ಲಿ ಎಡರಂಗ ಅಭ್ಯರ್ಥಿಗೆ ಸೋಲು ಮಾತ್ರವಲ್ಲ ಠೇವಣಿಯೂ ನಷ್ಟ

ಮಂಜೇಶ್ವರ: ವಿಧಾನಸಭಾ ಚುನಾವಣೆಯ ಅಂಗವಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎಡರಂಗ ಒಕ್ಕೂಟಕ್ಕೆ ಹೀನಾಯ ಸೋಲುಮಾತ್ರವಲ್ಲಇಡುಗಂಟು (ಠೇವಣಿ) ಕೂಡಾ ನಷ್ಟವಾಗಿರುವುದು ಅಂಕಿ ಅಂಶಗಳಿಂದ ಕಂಡುಬರುತ್ತಿದೆ.

ಶೇಕಡಾ 11.29ರಷ್ಟು ಮಾತ್ರ



ಒಟ್ಟು ಚಲಾಯಿಸಲ್ಪಟ್ಟ ಮತಗಳಲ್ಲಿ ಓರ್ವ ಅಭ್ಯರ್ಥಿಗೆ ಕನಿಷ್ಠ ಆರರಲ್ಲಿ ಒಂದು ಅಂದರೆ ಶೇಕಡಾ 16.67 ಪಾಲು ಮತ ಲಭಿಸದಿದ್ದಲ್ಲಿ ಅಂತಹ ಅಭ್ಯರ್ಥಿಗೆ ಇಡುಗಂಟು ಸಹಜವಾಗಿ ನಷ್ಟಗೊಳ್ಳಲಿದೆ.
ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಎಡರಂಗದ ಅಭ್ಯರ್ಥಿ, ಸಿಪಿಎಂ ಕಾಸರಗೋಡು ಜಿಲ್ಲಾ ಸೆಕ್ರೆಟರಿಯೇಟ್ ಸದಸ್ಯ ಕೆ.ಆರ್.ಜಯಾನಂದರಿಗೆ 21,212 ಮತಗಳು ದೊರಕಿದ್ದು ಇದು ಆ ಕ್ಷೇತ್ರದಲ್ಲಿ ಒಟ್ಟು ಚಲಾಯಿಸಲ್ಪಟ್ಟ ಮತಗಳ ಪೈಕಿ ಶೇಕಡಾ 11.29ರಷ್ಟು ಮಾತ್ರ ಆಗಿದೆ. ಇದರಿಂದಾಗಿ ಚುನಾವಣೆ ವೇಳೆ ಅವರು ಠೇವಣಿ ಇರಿಸಿದ್ದ ಇಡುಗಂಟು ನಷ್ಟಗೊಂಡು ತೀರಾ ಕಳಪೆ ಪ್ರದರ್ಶನ ನೀಡಿದಂತಾಗಿದೆ.
ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1,87,801 ಮತಗಳು ಚಲಾವಣೆಯಾಗಿದ್ದವು. ಇದರಲ್ಲಿ 31,300 ಮತಗಳು ಲಭಿಸಿದಲ್ಲಿ ಮಾತ್ರ ಅದು ಒಂದು ಪಾಲು ಆಗಲಿದೆ. ಈ ಕ್ಷೇತ್ರದಲ್ಲಿ ಐಕ್ಯರಂಗದ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್‌ಗೆ 96,948 ಮತಗಳು ದೊರಕಿವೆ. ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್‌ಗೆ 67,696 ಮತಗಳು ಲಭಿಸಿವೆ. ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆ ವೇಳೆ ಮುಂಗಡವಾಗಿ 10,000 ರೂ. ಠೇವಣಿ ಇಡಬೇಕಾಗಿದೆ. ಪರಿಶಿಷ್ಟ ವಿಭಾಗಕ್ಕೆ ಸೇರಿದವರಿಗೆ 5,000ರೂ. ಇಡುಗಂಟು ಆಗಿದೆ.

ಬಹುಮತ ಲಭಿಸಿಲ್ಲ

2021ರಲ್ಲಿ ಈ ಕ್ಷೇತ್ರದಲ್ಲಿ ನಡೆದ ಚುನಾವಣೆಯಲ್ಲಿ ಎಡರಂಗಕ್ಕೆ 40,639 ಮತಗಳು ಲಭಿಸಿದ್ದವು.
ಈ ಮಧ್ಯೆ ಕೆ.ಆರ್. ಜಯಾನಂದರಿಗೆ ತಮ್ಮ ಸ್ವಂತ ಮತಗಟ್ಟೆಯಲ್ಲಿ ಕೂಡಾ ಬಹುಮತ ಲಭಿಸಿಲ್ಲ. ಅವರ ಸ್ವಂತ ಮತಗಟ್ಟೆಯಾದ ಮಂಜೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ವಾಮಂಜೂರು ಜಿಎಲ್‌ಪಿ ಶಾಲೆಯ 35ನೇ ನಂಬ್ರದ ಮತಗಟ್ಟೆಯಲ್ಲಿ ಎ.ಕೆ.ಎಂ.ಅಶ್ರಫ್‌ಗೆ 661 ಮತಗಳು ದೊರೆತರೆ, ಕೆ.ಸುರೇಂದ್ರನ್‌ರಿಗೆ 164 ಮತಗಳು ಲಭಿಸಿದ್ದವು. ಕೆ.ಆರ್. ಜಯಾನಂದರಿಗೆ 93 ಮತಗಳು ಮಾತ್ರವೇ ದೊರಕಿವೆ. ಇನ್ನೊಂದೆಡೆ ಎಡರಂಗದ ಮತಗಳು ಐಕ್ಯರಂಗದತ್ತ ವಾಲಿರುವುದು ಇಲ್ಲಿ ಸ್ಪಷ್ಟವಾಗುತ್ತಿದೆ.

ಶೃಂಗೇರಿ ಶ್ರೀಗಳಿಂದ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರ ಲೋಕಾರ್ಪಣೆ

ಕಾಸರಗೋಡು: ದಕ್ಷಿಣಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪರಿಪೂರ್ಣ ಕೃಪಾಶೀರ್ವಾದದೊಂದಿಗೆ ತತ್ಕರ ಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳವರು ಮೇ 12ರಂದು ಸಂಜೆ 4 ಗಂಟೆಗೆ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರವನ್ನು ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಿದ್ದಾರೆ.

ಕೊಡುಗೆ ನೀಡಿದ ಮಹಾಪುರುಷರು

ಹಿಂದಿನ ಎಡನೀರು ಮಠಾಧೀಶ ಬ್ರಹ್ಮೈಕ್ಯ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಸಿರಿಬಾಗಿಲು ಪ್ರತಿಷ್ಠಾನದ ಸಾಂಸ್ಕೃತಿಕ ಭವನದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾಂಸ್ಕೃತಿಕ ಭವನಕ್ಕೆ ಮತ್ತು ಪ್ರತಿಷ್ಠಾನಕ್ಕೆ ಆಶೀರ್ವದಿಸಿ ಬೆಳಗುವಂತಾಗಲು ಪ್ರಧಾನ ಕಾರಣೀಕರ್ತರು. ಯಕ್ಷಗಾನ, ಕಲೆ, ಸಂಸ್ಕೃತಿ ಇತ್ಯಾದಿಗಳನ್ನು ಉಳಿಸಿ ಬೆಳೆಸುವಲ್ಲಿ ಗಡಿನಾಡು ಕಾಸರಗೋಡಿನಲ್ಲಿ ಬಹುದೊಡ್ಡ ಕೊಡುಗೆ ನೀಡಿದ ಮಹಾಪುರುಷರು.

> **ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಂದಿರ ನಿರ್ಮಾಣ**
> **ಪೂಜ್ಯರ ಹೆಸರಿನಲ್ಲಿ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ನಿರಂತರ ಸಾಂಸ್ಕೃತಿಕ ಸಾಹಿತ್ಯ ಕಾರ್ಯಕ್ರಮ ನಡೆಸಲು ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರ ನಿರ್ಮಿಸಿದೆ. ಸಂಪೂರ್ಣನಿರ್ಮಾಣ ಕಾಮಗಾರಿ ವೆಚ್ಚವನ್ನು ಮಂಗಳೂರಿನ ನವ ಮಂಗಳೂರು ಪೋರ್ಟ್ ಆಥೋರಿಟಿ (ಎನ್‌ಎಂಪಿಎ) ಸಂಸ್ಥೆ ಪ್ರಾಯೋಜಕತ್ವ ವಹಿಸಿದೆ.**



ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ವಿಜೇತರಾದ ಐಕ್ಯರಂಗ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಶ್ರೀ ಎಡನೀರು ಮಠಕ್ಕೆ ಆಗಮಿಸಿ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರನ್ನು ಭೇಟಿಯಾದರು.

ಪಕ್ಷಿಗಳ ಬಗ್ಗೆ ಅಧ್ಯಯನ ಜೊತೆ 'ಬರ್ಡ್ಸ್‌ದ ಹಿಡೆನ್ ವರ್ಲ್ಡ್ ಇನ್ ಅವರ್ ಕ್ಯಾಂಪಸ್' ಕೃತಿ ರಚನೆ

180ರಷ್ಟು ಪಕ್ಷಿಗಳ ಗುರುತಿಸಿ ಸಾಧನೆ ಮೆರೆದ ಹನ್ನೆರಡರ ಬಾಲಕಿ ನೆಹಾರಿಕಾ




ಕಾಸರಗೋಡು: ಪರಿಸರದೊಂದಿಗೆ ಒಡನಾಟ ಮೆರೆಯುತ್ತಾ ಎಳೆಯ ಪ್ರಾಯದಲ್ಲೇ ಪಕ್ಷಿಗಳ ಬಗ್ಗೆ ಅಧ್ಯಯನ ನಿರತಳಾಗಿರುವ ಪುಟಾಣಿಯೊಬ್ಬಳು ತನ್ನ ಹನ್ನೆರಡರ ಹರೆಯದಲ್ಲಿ 180ರಷ್ಟು ಪಕ್ಷಿಗಳನ್ನು ಗುರುತಿಸುವ ಮೂಲಕ ಸಾಧನೆ ಮೆರೆದಿದ್ದಾಳೆ.
ಕುಂಬಳೆ ಸಮೀಪದ ಬೇಳ ಧರ್ಬೆತ್ತಡ್ಕ ನಿವಾಸಿ ಕೃಷಿಕ ಗೋಪಾಲಕೃಷ್ಣ ಹಾಗೂ ಚಾಯ್ಯೋತ್ ಹೈಯರ್ ಸೆಕಂಡರಿ ಶಾಲಾ ಅಧ್ಯಾಪಿಕೆ ಆಶಾಕಿರಣ ದಂಪತಿಯ ಪುತ್ರಿ ಹಾಗೂ ಬೇಳ ಸಂತ ಬಾರ್ತಲೋಮಿಯ ಹಿರಿಯ ಬುನಾದಿ ಶಾಲಾ ವಿದ್ಯಾರ್ಥಿನಿ ನೆಹಾರಿಕಾ ಡಿ. ಈ ಸಾಧನೆಗೈದ ಬಾಲಕಿ. ಐದನೇ ತರಗತಿಯಿಂದ ಏಳನೇ ತರಗತಿ ವರೆಗಿನ ಕಾಲಾವಧಿಯಲ್ಲಿ ನೆಹಾರಿಕಾ ಈ ಸಾಧನೆ ಮಾಡಿದ್ದಾಳೆ.
ಮಕ್ಕಳೆಲ್ಲ ಮೊಬೈಲ್ ಹಿಡಿದು ವಿಡಿಯೋ ಗೇಮ್‌ಗಳಲ್ಲಿ ರಜಾ ಅವಧಿ ಕಳೆದರೆ ನೆಹಾರಿಕಾ ಮಾತ್ರ ಹೆಗಲಿಗೆ ಕ್ಯಾಮರಾ ಏರಿಸಿ ಗುಡ್ಡೆ, ಬಯಲು ನಡೆಯುತ್ತಾಳೆ. ಅಲ್ಲಿ ಮರ, ರೆಂಬೆಗಳ ಮಧ್ಯೆ ಪಕ್ಷಿಗಳನ್ನು ತನ್ನ ಕ್ಯಾಮರಾ ಕಣ್ಣಿನಿಂದ ಹುಡುಕಾಡುವ ಮೂಲಕ ಸುಂದರ ಫೋಟೋ ಕ್ಲಿಕ್ಕಿಸುವುದರ ಜೊತೆಗೆ ಅವುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ದಾಖಲಿಸಿಕೊಳ್ಳುವ ಬಾಲಕಿ ನೆಹಾರಿಕಾಳ ಹವ್ಯಾಸ ಇಂದು ಆಕೆಯನ್ನು ಪಕ್ಷಿ ಶೋಧಕಿಯನ್ನಾಗಿ ಬೆಳೆಸಿದೆ. ಅಲ್ಲದೆ ತಾನು ಕ್ಯಾಮರಾದಲ್ಲಿ ಕ್ಲಿಕ್ಕಿಸಿದ ಅಪರೂಪದ ಪಕ್ಷಿಗಳ ಬಗ್ಗೆ ಸಮಗ್ರ ವಿವರಣೆ ಒಳಗೊಂಡ ಪಕ್ಷಿ ಜಾಲದ ಕೃತಿಯೊಂದನ್ನು ರಚಿಸಿದ್ದಾಳೆ. 'ಬರ್ಡ್ಸ್‌ದ ಹಿಡೆನ್ ವರ್ಲ್ಡ್ ಇನ್ ಅವರ್ ಕ್ಯಾಂಪಸ್' ಎಂಬ ಈ ಕೃತಿಯನ್ನು ತಾತ್ಕಾಲಿಕವಾಗಿ ಮುದ್ರಣ ಮಾಡಿ ಕೆಲವೊಂದು ಪ್ರತಿಗಳನ್ನು ಶಾಲಾ ಸಮಾರಂಭದಲ್ಲಿ ಹಂಚಿದ್ದಾಳೆ.

> **ಪ್ರೋತ್ಸಾಹ ಅಗತ್ಯ**
> **ಪಕ್ಷಿಗಳ ಪ್ರಾದೇಶಿಕ ಹೆಸರು, ವೈಜ್ಞಾನಿಕ ಹೆಸರು, ಅವುಗಳ ವೈಶಿಷ್ಟ್ಯ ಇತ್ಯಾದಿಗಳನ್ನೆಲ್ಲಾ ಟಿಪ್ಪಣಿ ಮಾಡಿ 180 ಪಕ್ಷಿ ಮಾಹಿತಿಗಳ ಕಾಫಿ ಟೇಬಲ್ ಬುಕ್‌ಸಿದ್ಧಪಡಿಸಿಕೊಂಡಿದ್ದಾಳೆ. ಅಧ್ಯಯನಶೀಲ ಪರಿಸರದ ಸಂಬಂಧಿ ಕೃತಿ ಯನ್ನು ಸರ್ಕಾರವೇ ಮುಂದೆ ಬಂದು ವ್ಯವಸ್ಥಿತವಾಗಿ ಮುದ್ರಣಗೊಳಿಸಿ ಹಂಚುವ ಮೂಲಕ ಬಾಲಕಿಯ ಹವ್ಯಾಸವನ್ನು ಪೋಷಿಸುವ ಕಾರ್ಯ ನಡೆಸುವಂತೆ ಪರಿಸರವಾದಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.**

> **ಬಾಲಕಿಯ ಸಾಧನೆಗೆ ಹೆತ್ತವರ ಸಹಕಾರ**
> **ಪುತ್ರಿ ನೆಹಾರಿಕಾಳ ಪರಿಸರ , ಪಕ್ಷಿಪ್ರೇಮ ಗುರುತಿಸಿದ ತಂದೆ ಗೋಪಾಲಕೃಷ್ಣ– ತಾಯಿ ಆಶಾ ಕಿರಣ ಅವರು ಎಸ್‌ಎಲ್‌ಆರ್ ಕ್ಯಾಮರಾ ಖರೀದಿಸಿಕೊಟ್ಟಿದ್ದರು. ಇದೇ ಕ್ಯಾಮರಾ ಮೂಲಕ ಏಳೆಂಟು ಎಕರೆ ವಿಸ್ತಾರದ ತನ್ನ ಶಾಲಾ ವಠಾರದಲ್ಲಿ ಪಕ್ಷಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾಳೆ. 4ನೇ ತರಗತಿ ಪಠ್ಯವೊಂದರಲ್ಲಿ ಪಕ್ಷಿಗಳ ಬಗೆಗಿನ ಪಾಠವೊಂದು ನೆಹಾರಿಕಾಳನ್ನು ಪಕ್ಷಿಗಳ ಅಧ್ಯಯನದತ್ತ ಪ್ರೇರೇಪಿಸಿದೆ. ನೆಹಾರಿಕಾಳ ಪಕ್ಷಿ ಪ್ರೇಮಕ್ಕೆ ಪರಿಸರ ಪ್ರೇಮಿ, ಪಕ್ಷಿ ನಿರೀಕ್ಷಕ, ಶಿಕ್ಷಕ ರಾಜು ಕಿದೂರು ಬೆಂಬಲ ನೀಡಿ ಆಕೆಯನ್ನು ಮತ್ತಷ್ಟು ಎತ್ತರಕ್ಕೆ ಬೆಳೆಯುವಂತೆ ಮಾಡಿದ್ದಾರೆ.**

ಸುತ್ತಮುತ್ತ

ಮೇ 12ರಂದು ವಿದ್ಯುತ್ ವ್ಯತ್ಯಯ

ಕಾರ್ಕಳ: ಫೀಡರ್ ಗಳ ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಮೇ 12ರಂದು ಬೆಳಿಗ್ಗೆ 9 ರಿಂದ ಸಂಜೆ 05:30 ಗಂಟೆಯವರೆಗೆ ಕಾರ್ಕಳ ವಿದ್ಯುತ್ ಕೇಂದ್ರದಿಂದ ಹೊರಡುವ ಬಂಡಿಮಠ, ಹಿರ್ಗಾನ, ನೆಲ್ಲಿಕಟ್ಟೆ ಜಾರ್ಕಳ ಫೀಡರ್‌ಗಳು, ಬಜಗೋಳಿ ವಿದ್ಯುತ್ ಕೇಂದ್ರದಿಂದ ಹೊರಡುವ ಕರ್ಮಾರ್ ಕಟ್ಟೆ ಚೌಕಿ ನೆಲ್ಲಿಕಾರು, ಹೊಸ್ಮಾರು ಎಕ್ಸ್ ಪ್ರೆಸ್, ಮಲ್ಲಾರು, ಬಜಗೋಳಿ ಟೌನ್ ಮತ್ತು ಕೆರ್ವಾಶೆ ಫೀಡರ್ ಗಳಲ್ಲಿ ಮತ್ತು ಹೆಬ್ರಿ ಮತ್ತು ಅಜೆಕಾರು ವಿದ್ಯುತ್ ಉಪಕೇಂದ್ರ ದಿಂದ ಹೊರಡುವ ಎಲ್ಲಾ ಫೀಡರ್ ಗಳ ಕಾರ್ಕಳ ತಾಲೂಕಿನ ಶಬರಿ ಆಶ್ರಮ, ಸದ್ಭಾವನ ನಗರ, ತೆಳ್ಳಾರು, ಕಲ್ಲೊಟ್ಟೆ ಕುಕ್ಕುಂದೂರು, ಪಿಲಿಚಂಡಿ ಸ್ಥಾನ, ಕುಂದೇಶ್ವರ, ಕಾನಂಗಿ, ಹಿರ್ಗಾನ, ಚಿಕ್ಕಲ್ ಬೆಟ್ಟು ಮಂಗಿಲಾರು, ನೆಲ್ಲಿಕಟ್ಟೆ ಕಾಂತರಗೋಳಿ, ಎರ್ಲಪಾಡಿ, ಗೋವಿಂದೂರು, ಅಯ್ಯಪ್ಪ ನಗರ, ಮಂಗಳಕಲ್ಲು, ಗಣಿತನಗರ, ಜಾರ್ಕಳ, ಬೈಲೂರು, ನೀರೆ, ಕೌಡೂರು, ಬಜಗೋಳಿ, ಕೆರ್ವಾಶೆ, ಮುಡ್ರಾಲು, ಕಡಾರಿ, ಮುಲ್ಲೂರು, ಮಾಳ, ಗುರ್ಗಲ್ ಗುಡ್ಡೆ ಚೌಕಿ, ಹುಕ್ರಟ್ಟೆ ನೆಲ್ಲಿಕಾರು, ಚೆಂಡೆ ಬಸದಿ, ಪುಚ್ಚೆಬೆಟ್ಟು ಜ್ಯೋತಿನಗರ, ಪೇರಲ್ಕೆ, ಪೆರ್ನೊಡಿ, ಹೊಸ್ಮಾರು, ಈದು, ನಲ್ಲೂರು, ನೆಲ್ಲಿಗುಡ್ಡೆ, ನೂರಾಳ್ ಬೆಟ್ಟು ಏರಿಯಾ ಮತ್ತು ಹೆಬ್ರಿ ತಾಲೂಕಿನ ಹೆಬ್ರಿ, ಹೆಬ್ರಿ ಪೇಟೆ, ತಾಣ, ಮುದ್ರಾಡಿ, ಮುನಿಯಾಲು, ಬಚ್ಚಪ್ಪು, ಕಬ್ಬಿನಾಲೆ, ಮಂಡಾಡಿಜೆಡ್ಡು ಕಳ್ತೂರು, ಸಂತೆಕಟ್ಟೆ ಕರ್ಜೆ, ಕುರ್ಪಾಡಿ, ಬೆಳೆಂಜೆ, ಮಡಾಮಕ್ಕಿ ಕಾಸನಮಕ್ಕಿ ಶಿವಪುರ, ಕೆರೆಬೆಟ್ಟು ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ವರಂಗ, ಮಾತಿಬೆಟ್ಟು ಪಡುಕುಡೂರು, ಅಂಡಾರು, ಶಿರ್ಲಾಲು, ಮುಂಡ್ಲಿ ರೋಡ್, ಕಾಡುಹೊಳೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಇಂದ್ರಾಳಿ, ಮೂಡುಬೆಳ್ಳೆ

ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಇಂದ್ರಾಳಿ, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ಹಾಗೂ ಹಿರಿಯಡ್ಕ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ಮಣ್ಣು, ಪುತ್ತಿಗೆ ಪಕ್ಕಾಲು, ಪೆರ್ಡೂರು, ಪಾಡಿಗಾರ ಪೇಟೆ, ಮಸ್ತೂರ್ಮೆ, ಕುಕ್ಕೆಹಳ್ಳಿ, ಪಾಡಿಗಾರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 12ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಡಿ.ಇಎಲ್.ಇಡಿ ಕೋರ್ಸಿಗೆ ಪ್ರವೇಶಾತಿ : ಅರ್ಜಿ ಆಹ್ವಾನ

ಉಡುಪಿ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ವತಿಯಿಂದ ಪ್ರಸಕ್ತ ಸಾಲಿನಲ್ಲಿ ಡಿ.ಎಲ್.ಇಡಿ ಕೋರ್ಸಿಗೆ ಸರಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆಫ್‌ಲೈನ್ ಮೂಲಕ ಜೂ.1ರ ವರೆಗೆ ಅರ್ಜಿ ಆಹ್ವಾನಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ www.school-education.kar.nic.in ನಲ್ಲಿ ಪ್ರಕಟಿಸಲಾದ ಅಧಿಸೂಚನೆಯಲ್ಲಿ ಅರ್ಹತೆ, ಮೀಸಲಾತಿ ಕುರಿತ ವಿವರಗಳು ಹಾಗೂ ಜಿಲ್ಲಾವಾರು ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಅಧಿಸೂಚನೆಯಂತೆ ಅರ್ಜಿಯನ್ನು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಅಂತಿಮ ದಿನಾಂಕದ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೀಪಾ ಶೆಟ್ಟಿ ಎಚ್, ಡಯಟ್ ಉಪನ್ಯಾಸಕರು, ಮೊ.ನಂ: 9591475489 ಅನ್ನು ಸಂಪರ್ಕಿಸ ಬಹುದಾಗಿದೆ ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಕೃತಕ ಕೆರೆ ಸೃಷ್ಟಿ!

ಈ ಭಾಗದ ಜನರ ಸಮಸ್ಯೆ ಹೇಳುವವರು ಕೇಳುವವರು ಯಾರು ಇಲ್ಲದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಸ್ತೆ ಕೆಸರುಮಯವಾಗಿ ಸಂಚಾರ ದುಸ್ತರವಾಗಿ ಪರಿಣಮಿಸಿದೆ ಎಂದು ಹೇಳಿರುವ ಅವರು ಕೂಡಲೇ ಪಂಚಾಯತ್ ಆಡಳಿತ ಎಚ್ಚೆತ್ತು ರಸ್ತೆಗೆ ಸೂಕ್ತ ಚರಂಡಿ ನಿರ್ಮಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಅವರು ಆಗ್ರಹಿಸಿದ್ದಾರೆ.

ಆನೆಗುಂದಿ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಪಟ್ಟಾಭಿಷೇಕ ಮಹೋತ್ಸವದ ವರ್ಧಂತ್ಯುತ್ಸವ

ಮೇ 12ಕ್ಕೆ ಚಂಡಿಕಾ ಯಾಗ, ಪ್ರಶಸ್ತಿ ಪ್ರದಾನ, ಅಭಿನಂದನೆ

ಕಾಪು: ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನದ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಅವರ 16ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವದ ವರ್ಧಂತ್ಯುತ್ಸವವು ಮೇ 12ರಂದು ಪಡುಕುತ್ಯಾರಿನ ಮಹಾಸಂಸ್ಥಾನದಲ್ಲಿ ನಡೆಯಲಿದೆ.



ವರ್ಧಂತಿ ಉತ್ಸವದ ಅಂಗವಾಗಿ ಸಾಮೂಹಿಕ ಚಂಡಿಕಾ ಯಾಗ ಸೇರಿದಂತೆ ವಿವಿಧ ವೈದಿಕ ಕಾರ್ಯಕ್ರಮಗಳು, ಧಾರ್ಮಿಕ ಸಭೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಸಾಧಕರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ, ಆನೆಗುಂದಿಶ್ರೀ ಪ್ರಶಸ್ತಿ ವಿತರಣೆ ಹಾಗೂ ಯುವ ಶಿಲ್ಪಿಗಳಿಗೆ ಅಭಿನಂದನಾ ಕಾರ್ಯಕ್ರಮಗಳು ನಡೆಯಲಿವೆ.

ಅಂದು ಬೆಳಿಗ್ಗೆ ಕಟಪಾಡಿಯ ಶ್ರೀ ಮಹಾಸಂಸ್ಥಾನದಲ್ಲಿ ಜಗದ್ಗುರುಗಳಿಂದ ಪಟ್ಟಾಭಿಷೇಕ ವರ್ಧಂತಿಗೆ ಸಂಬಂಧಿಸಿದ ವೈದಿಕ ವಿಧಿವಿಧಾನಗಳು ನೆರವೇರಲಿವೆ. ಶ್ರೀಕರಾರ್ಚಿತ ದೇವತಾ ಪೂಜೆಯ ಬಳಿಕ, ಅನಂತಶ್ರೀ ವಿಭೂಷಿತ ನಾಗಧರ್ಮೇಂದ್ರ ಸರಸ್ವತೀ ಮಹಾಸ್ವಾಮಿಗಳವರ ವೃಂದಾವನದಲ್ಲಿ ಪೂಜೆ ನಡೆಯಲಿದೆ. ನಂತರ ಪಡುಕುತ್ಯಾರಿನ ಶ್ರೀ ಸರಸ್ವತೀ ಯಾಗಶಾಲೆಯಲ್ಲಿ ಶ್ರೀ ವಿಶ್ವಕರ್ಮ ಯಜ್ಞ, ಶ್ರೀ ದಕ್ಷಿಣಾಮೂರ್ತಿ ಯಜ್ಞ, ಶ್ರೀ ರುದ್ರ ಯಜ್ಞ ಹಾಗೂ ಸಾಮೂಹಿಕ ಶ್ರೀ ಚಂಡಿಕಾ ಯಾಗ ಪೂರ್ಣಾಹುತಿ ನಡೆಯಲಿದೆ.

ಇದೇ ಸಂದರ್ಭ ಜಗದ್ಗುರುಗಳವರ 50ನೇ ಜನ್ಮವರ್ಧಂತಿ ವರ್ಷಾಚರಣೆಯ ಅಂಗವಾಗಿ ಒಂದು ವರ್ಷದ ಕಾಲ ನಡೆಯಲಿರುವ ವಿವಿಧ ಮಹತ್ವದ ಕಾರ್ಯಕ್ರಮಗಳಿಗೆ ಔಪಚಾರಿಕ ಚಾಲನೆ ನೀಡಲಾಗುವುದು. ಕುಲಗುರು ಪೀಠ ಜಾಗೃತಿ ಹಾಗೂ ಸಾಂಸ್ಕೃತಿಕ ಪಂಚಪ್ರಬೋಧನ ಸಂಕಲ್ಪದ 'ಸುವರ್ಣ ಸಂಕಲ್ಪ ಅಭಿಯಾನ' ಪ್ರಾರಂಭೋತ್ಸವವೂ ನಡೆಯಲಿದೆ. ಪಡುಕುತ್ಯಾರು ಸಮೀಪದಲ್ಲಿ ನಿರ್ಮಾಣಗೊಳ್ಳುತ್ತಿ ರುವ ಶ್ರೀ ಸರಸ್ವತೀ ಹೌಸಿಂಗ್ ಸೊಸೈಟಿ ಯೋಜನೆಯ ಲೋಕಾರ್ಪಣೆಯೂ ಇದೇ ಸಂದರ್ಭದಲ್ಲಿ ನೆರವೇರಲಿದೆ.

ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಚಾಳುಕ್ಯ ಶಿಲ್ಪಿ ಲಿಪಿಕಾರ ಅಕ್ಷರಮೇರು ದಾಮೋದರಾಚಾರಿ ಸಾಹಿತ್ಯ ಸರಸ್ವತೀ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿ, ಹುಬ್ಬಳ್ಳಿ, ಈ. ಭೀಮಸೇನ ಬಡಿಗೇರ, ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ, ಮಹಾಶಿಲ್ಪಿ ಶ್ರೀ ಗುಂಡನ್ ಅನಿವಾರಿತಾಚಾರಿ ತ್ರಿಭುವನಾಚಾರಿ ರಾಷ್ಟ್ರೀಯ ಪ್ರಶಸ್ತಿ ಡಾ. ಮಾನಯ್ಯ ಎನ್. ಬಡಿಗೇರ, ಹಿರಿಯ ಶಿಲ್ಪಿ ಸ್ಥಪತಿಗಳು, ಕೊತ್ತನೂರು, ಕಲ್ಬುರ್ಗಿ, ಹೊಯ್ಸಳ ಮಹಾಶಿಲ್ಪಿ ಮಲ್ಲಿಂತಮ ರಾಷ್ಟ್ರೀಯ ಪ್ರಶಸ್ತಿ: ಶ್ರೀ ಹೊನ್ನಪ್ಪಾಚಾರ್, ಲೋಹ ಶಿಲ್ಪಿ, ಬೆಂಗಳೂರು ವಾಸ್ತು ಪಿತಾಮಹ ಸ್ವರ್ಣಸಿದ್ಧಿ ಆಚಾರಿ ರಾಷ್ಟ್ರೀಯ ಪ್ರಶಸ್ತಿ: ಡಾ. ಪ್ರಭಾಕರ ಗೋವಿಂದ ಆಚಾರ್ಯ, ಅಂತರಾಷ್ಟ್ರೀಯ ಖ್ಯಾತಿಯ ಸ್ಥಪತಿಗಳು, ಕುಂಭಕೋಣಂ ಅವರಿಗೆ ಪ್ರದಾನ ಮಾಡಲಾಗುವುದು. ಈ ಪ್ರಶಸ್ತಿಗಳನ್ನು ಎಸ್.ಕೆ.ಎಫ್. ಸಮೂಹ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಕಳೆದ ಎರಡು ವರ್ಷಗಳಿಂದ ಪ್ರದಾನ ಮಾಡಲಾಗುತ್ತಿದ್ದು, ಡಾ. ಜಿ. ರಾಮಕೃಷ್ಣ ಆಚಾರ್ ಅವರ ಅಧ್ಯಕ್ಷತೆಯ ರಾಷ್ಟ್ರೀಯ ಪ್ರಶಸ್ತಿ ಸಮಿತಿ ಮತ್ತು ಡಾ. ಬಿ. ಶ್ರೀಕಂಠಾಚಾರ್ ಸಂಚಾಲಕತ್ವದಲ್ಲಿ ಆಯ್ಕೆ ಮಾಡಲಾಗಿದೆ.

ಗುರುಕಾಣಿಕೆ ಸಮರ್ಪಣೆ

ಮೇ 16ರಂದು ಆನೆಗುಂದಿ ಪ್ರತಿಷ್ಠಾನದ ವತಿಯಿಂದ ಜಗದ್ಗುರುಗಳವರ ಪಾದಪೂಜೆ ಬಳಿಕ, ಮಹಾಸಂಸ್ಥಾನದ ಪ್ರಥಮ ವಿಶ್ವಸ್ಥರಾಗಿರುವ ದೇವಸ್ಥಾನಗಳ ಧರ್ಮದರ್ಶಿಗಳಿಂದ ಆಯಾ ದೇವಸ್ಥಾನಗಳ ವಾರ್ಷಿಕ ಗುರುಕಾಣಿಕೆ ಸಮರ್ಪಣೆ, ಫಲ ನ್ಯಾಸ ಕಾರ್ಯಕ್ರಮಗಳು ವಾಡಿಕೆಯಂತೆ ನಡೆಯಲಿವೆ.

ಆನೆಗುಂದಿಶ್ರೀ ಪ್ರಶಸ್ತಿ ಪ್ರದಾನ

ಮಹಾಸಂಸ್ಥಾನದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವೇದಬ್ರಹ್ಮ ನಾಗಭೂಷಣ ಆಚಾರ್ಯ, ತುಮಕೂರು (ಶಿಲ್ಪ), ಜ್ಯೋತಿಷಿ ಸಿ.ವಿ. ಪೊದುವಾಳ್, ಮಂಗಳೂರು (ಜ್ಯೋತಿಷ್ಯ), ವಾದಿರಾಜ ಆಚಾರ್ಯ, ನೇಜಾರು (ಸಾಮಾಜಿಕ ಸೇವೆ), ಡಾ. ಎಸ್.ಪಿ. ಗುರುದಾಸ್, ಮಂಗಳೂರು (ಹರಿದಾಸ ಸೇವೆ), ವೇದಬ್ರಹ್ಮ ಶ್ರೀ ವಿಘ್ನೇಶ್ವರ ಪುರೋಹಿತ್, ಮೂಡುಬಿದಿರೆ (ವೈದಿಕ), ಡಾ. ಕೃಷ್ಣ ಆಚಾರ್ಯ ನಕ್ರೆ ಕಾರ್ಕಳ (ಶಿಲಾ ಶಿಲ್ಪ ವಿಭಾಗ), ಶಿಲ್ಪಿ ದೇವಿದಾಸ್ ಆಚಾರ್ಯ, ತ್ರಿಶೂರು, ಕೇರಳ (ವಾಸ್ತುಶಿಲ್ಪ) ಆನೆಗುಂದಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಯುವ ಪ್ರತಿಭೆಗಳಿಗೆ ಅಭಿನಂದನೆ

ಯುವ ಪ್ರತಿಭೆಗಳಾದ ಪ್ರಮೋದ್ ಸಿ.ಕೆ. ಕಡೂರು, ಮನೋಜ್ಞ ಟಿ. ಆಚಾರ್ಯ ಪುತ್ತೂರು ಅವರನ್ನು ಮತ್ತು ಮಹಾದಾನಿಗಳನ್ನು ಅಭಿನಂದಿಸಲಾಗುವುದು. ಧಾರ್ಮಿಕ ಸಭೆಯಲ್ಲಿ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿಗಳು ಆಶೀರ್ವಚನ ನೀಡುವರು. ಅಧ್ಯಕ್ಷತೆಯನ್ನು ವಿ. ಶ್ರೀಧರ ಆಚಾರ್ಯ ವಹಿಸುವರು. ಪಿ. ಸುಜ್ಞಾನ ಮೂರ್ತಿ, ಶಾಸಕಸುರೇಶ್ ಶೆಟ್ಟಿ ಗುರ್ಮೆ, ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಮಾಜಿ ಸಚಿವರು, ಡಾ. ನಿಲೇಶ್ ವಿಶ್ವಕರ್ಮ, ಪ್ರೊ. ಪ್ರಿಯಾಂಕ ನಿಲೇಶ್ ವಿಶ್ವಕರ್ಮ ಭಾಗವಹಿಸಲಿದ್ದಾರೆ ಎಂದು ಆನೆಗುಂದಿ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಂ.ಬಿ. ಆಚಾರ್ ಕಂಬಾರು ತಿಳಿಸಿದ್ದಾರೆ.

ಡಾ. ಬಿ.ಬಿ. ಹೆಗ್ಡೆ ಕಾಲೇಜಿನಲ್ಲಿ ಪ್ರತಿಭಾ ಪ್ರದರ್ಶನ 'ಸಂಭ್ರಮ' ಉದ್ಘಾಟನೆ



ಕುಂದಾಪುರ: ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರ್ಷಿಕೋತ್ಸವ ಪ್ರಯುಕ್ತ ಆಯೋಜಿಸಿದ ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರತಿಭಾ ಪ್ರದರ್ಶನ 'ಸಂಭ್ರಮ'ದ ಉದ್ಘಾಟನೆ ಕಾಲೇಜಿನ ಬಿ. ಎಂ. ಎಸ್. ಕ್ರೀಡಾಂಗಣದ ತೆರೆದ ವೇದಿಕೆಯಲ್ಲಿ ನಡೆಯಿತು.

ಕಲಾ ಚಿಗುರು ತಂಡದ ಸಂಸ್ಥಾಪಕ ಚೇತನ್ ನೈಲಾಡಿ ಪ್ರತಿಭಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ಇಂತಹ ಪ್ರತಿಭಾ ಪ್ರದರ್ಶನ ವಿದ್ಯಾರ್ಥಿಗಳ ಭವಿಷ್ಯದ ಕಲಾಬದುಕಿಗೆ ಒಳ್ಳೆಯ ವೇದಿಕೆ. ಈ ಮೌಲ್ಯಪೂರ್ಣ ವೇದಿಕೆಯನ್ನು ವಿದ್ಯಾರ್ಥಿಗಳು ಚೆನ್ನಾಗಿ ಬಳಸಿಕೊಳ್ಳಿ ಎಂದು ಹೇಳಿ ಕುಂದಗನ್ನಡ ಭಾಷೆಯ ಅನನ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಪ್ರಾಂಶುಪಾಲ ಪ್ರೊ. ಡಾ.ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಉಪ ಪ್ರಾಂಶುಪಾಲ ಡಾ.ಚೇತನ್ ಶೆಟ್ಟಿ ಕೋವಾಡಿ, ತೀರ್ಪುಗಾರ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ನಾಗೇಂದ್ರ ಕುಮಾರ್, ಸುಜ್ಞಾನ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರಮೋದ್ ಶೆಟ್ಟಿ ಹಾಗೂ ಬೈಂದೂರು ಸರಕಾರಿ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ಉಪನ್ಯಾಸಕ ಶಶಿಕಲಾ ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಯೋಜಕ ರಕ್ಷಿತ್ ರಾವ್ ಗುಜ್ಜಾಡಿ ಸ್ವಾಗತಿಸಿ, ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಸುರೇಶ್ ಕುಮಾರ್ ಅತಿಥಿಗಳನ್ನು ಪರಿಚಯಿಸಿ, ಕಾರ್ಯಕ್ರಮ ಸಂಯೋಜಕಿ ಹಾಗೂ ಐಕ್ಯೂಎಸಿ ಸಂಯೋಜಕ ದೀಕ್ಷಾ ಜಿ. ವಂದಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರಿಥ್ವಿ ಜಿ.ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿನಿ ಶ್ರೇಯಾ ಪಾರ್ವಿ ಪ್ರಾರ್ಥಿಸಿದರು.

ಟಿಪ್ಪರ್‌ನಲ್ಲಿ ಅವೈಜ್ಞಾನಿಕವಾಗಿ ಮಣ್ಣು ಸಾಗಾಟ: ಹೆದ್ದಾರಿಯಲ್ಲಿ ಧೂಳಿನ ಸಮಸ್ಯೆ



ಕುಂದಾಪುರ: ರಾಷ್ಟ್ರೀಯ ಹೆದ್ದಾರಿ ಹಾಗೂ ಗ್ರಾಮೀಣ ಪ್ರದೇಶದ ರಸ್ತೆಗಳಲ್ಲಿ ಟಿಪ್ಪರ್ ಲಾರಿಗಳು ಅವೈಜ್ಞಾನಿಕ ರೀತಿಯಲ್ಲಿ ಮಣ್ಣು ಸಾಗಾಟ ಮಾಡುತ್ತಿರುವುದರಿಂದ ದ್ವಿಚಕ್ರ ವಾಹನ ಸವಾರರಿಗೆ ಮತ್ತು ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಗ್ಗಿಲ್ಲದೆ ಕೆಂಪು ಮಣ್ಣು ಸಾಗಾಟದ ಟಿಪ್ಪರ್ ಲಾರಿಗಳು ಪ್ರತಿನಿತ್ಯ ಸಂಚರಿಸುತ್ತಿದ್ದು ಈ ಲಾರಿಗಳಲ್ಲಿ ಅವೈಜ್ಞಾನಿಕವಾಗಿ ಮಣ್ಣು ಸಾಗಾಟ ಮಾಡಲಾಗುತ್ತಿದೆ. ಮಣ್ಣಿನ ಧೂಳು ಹಾರದಂತೆ ಟಾರ್ಪಲ್ ಹೊದಿಸಬೇಕೆಂದು ಜಿಲ್ಲಾಡಳಿತ ಆದೇಶ ನೀಡಿದ್ದರೂ, ಕೆಲವು ಟಿಪ್ಪರ್ ಲಾರಿಗಳಲ್ಲಿ ಕೋರಿಕೆಗಷ್ಟೇ ಟಾರ್ಪಲ್ ಸೀಮಿತವಾಗಿದೆ. ಕೆಂಪು ಮಣ್ಣು ಸಾಗಾಟ ಮಾಡುವ ಟಿಪ್ಪರ್ ಲಾರಿಗಳಿಂದ ಧೂಳು ಹಾರುತ್ತಿದ್ದು ಮಣ್ಣು ರಸ್ತೆಯ ಮೇಲೆಲ್ಲ ಚೆಲ್ಲುತ್ತಾ ಹೋಗುತ್ತಿದೆ. ಇದರಿಂದ ಟಿಪ್ಪರ್ ಲಾರಿಗಳ ಹಿಂದಿನಿಂದ ಬರುವ ದ್ವಿಚಕ್ರ ವಾಹನ ಸವಾರರ ಕಣ್ಣಿಗೆ ಧೂಳು ಹಾರುತ್ತಿದ್ದು, ರಸ್ತೆ ತುಂಬೆಲ್ಲ ಬಿದ್ದಿರುವ ಮಣ್ಣಿನ ಧೂಳು ಪ್ರಯಾಣಿಕರ ಮತ್ತು ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಸಂಚಾರಿ ನಿಯಮಗಳನ್ನು ಉಲ್ಲಂಘಿಸಿ ಭಾರಿ ಗಾತ್ರದ ಟಿಪ್ಪರ್ ಲಾರಿಗಳು ರಾಷ್ಟ್ರೀಯ ಹೆದ್ದಾರಿ, ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದು ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜನರು ಆಗ್ರಹಿಸಿದ್ದಾರೆ.

ಕಠಿಣ ಕ್ರಮಕ್ಕೆ ಆಗ್ರಹ

ಅನೇಕ ಟಿಪ್ಪರ್ ಲಾರಿಗಳಿಗೆ ನಂಬರ್ ಪ್ಲೇಟ್ ಇಲ್ಲ, ಅನೇಕ ಲಾರಿಗಳಿಗೆ ಸಿಗ್ನಲ್ ಲೈಟ್ ಇಲ್ಲ, ಇದರಿಂದ ಅನೇಕ ಅಪಘಾತಗಳು ಸಂಭವಿಸುತ್ತಿದೆ. ಯಾವುದೇ ಸೂಚನೆ ನೀಡದೆ ಹಠಾತ್ತನೆ ರಸ್ತೆಯ ಅಲ್ಲಲ್ಲಿ ನಿಲ್ಲಿಸುವ ಟಿಪ್ಪರ್ ಲಾರಿಗಳು ಅಪಘಾತಕ್ಕೆ ಕಾರಣವಾಗುತ್ತಿದ್ದು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿ ಸಂಚರಿಸುವ ಮಣ್ಣು ಸಾಗಾಟದ ಲಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಾಷ್ಟ್ರೋತ್ಥಾನ ಪಿಯು ಕಾಲೇಜು ವಿಭಾಗದ ಹೊಸ ಕಟ್ಟಡ ಉದ್ಘಾಟನೆ



ಬ್ರಹ್ಮಾವರ: ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜು ವಿಭಾಗದ ಹೊಸ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವು ಚೇರ್ಕಾಡಿ ಆಕೃತ ನಗರದಲ್ಲಿ ನಡೆಯಿತು.

ಮುಖ್ಯ ಪುರೋಹಿತ ಪ್ರವೀಣ್ ತಂತ್ರಿ ಪೂಜಾ ವಿ. ವಿಧಾನಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು. ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಹಾಗೂ ಪಿಯು ಕಾಲೇಜಿನ ವ್ಯವಸ್ಥಾಪನ ಸಮಿತಿ ಸದಸ್ಯ ಯೋಗೀಶ್ ನಾಯಕ್, ಪಲ್ಲವಿ ದಂಪತಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗಡೆ, ಆರ್‌ಎಸ್‌ಎಸ್ ಉಡುಪಿ ನಗರ ಸಮಿತಿಯ ಸಂಘ ಚಾಲಕ ಮಟ್ಟು ಲಕ್ಷ್ಮೀನಾರಾಯಣ ರಾವ್, ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ಸಂಚಾಲಕ ವಸಂತ ಕುಮಾರ್ ಎಂ.ಎಸ್, ಸಂಚಾಲನಾ ಸಮಿತಿ ಕಾರ್ಯದರ್ಶಿ ರಿತಿರಾಜ್, ಸದಸ್ಯರಾದ ರಾಘವೇಂದ್ರ ಕುಂದರ್, ಪದವಿ ಪೂರ್ವ ಕಾಲೇಜಿನ ಪ್ರಧಾನಾಚಾರ್ಯ ಭಾಗ್ಯಶ್ರೀ ಐತಾಳ್, ವಿದ್ಯಾ ಕೇಂದ್ರದ ಪ್ರಧಾನಾಚಾರ್ಯ ಪೂರ್ಣಿಮಾ ಇದ್ದರು.

'ವೀರ ಬಬ್ರುವಾಹನ' ಯಕ್ಷಗಾನ ಪ್ರದರ್ಶನ



ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ 6ನೇ ಸೆಮಿಸ್ಟರ್ ಬಿಟೆಕ್ ವಿದ್ಯಾರ್ಥಿಗಳು 'ಯಕ್ಷಗಾನದ ಪರಿಚಯ' ಐಚ್ಛಿಕ ಕೋರ್ಸ್ ಸೆಮಿಸ್ಟರ್ ಮೌಲ್ಯಮಾಪನದ ಭಾಗವಾಗಿ 'ವೀರ ಬಬ್ರುವಾಹನ' ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಿದರು. ರಸಾಯನಶಾಸ್ತ್ರವಿಭಾಗದ ಪ್ರಾಧ್ಯಾಪಕ ಹಾಗೂ ಯಕ್ಷಗಾನ ಕಲಾವಿದ ಡಾ. ಜನಾರ್ದನ ನಾಯಕ್ ತರಬೇತಿ ನೀಡಿದ್ದರು.

ನಾಡ ಪಶು ಚಿಕಿತ್ಸಾಲಯದ ನಿವೃತ್ತ ನೌಕರ ಕೃಷ್ಣಗೆ ಬೀಳ್ಕೊಡುಗೆ



ಕುಂದಾಪುರ: ನಾಡದಲ್ಲಿರುವ ಪಶು ಚಿಕಿತ್ಸಾಲಯದಲ್ಲಿ ಹಲವು ವರ್ಷಗಳ ಕಾಲ ನೌಕರರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಕೃಷ್ಣ ಅವರಿಗೆ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಬೀಳ್ಕೊಡುಗೆ ಹಾಗೂ ಸನ್ಮಾನ ಕಾರ್ಯಕ್ರಮ ಇತ್ತೀಚೆಗೆ ನಾಡ ಗ್ರಾ.ಪಂ. ಸಭಾಭವನದಲ್ಲಿ ನಡೆಯಿತು.

ಬೈಂದೂರು ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ವೈ.ಕೆ. ಅರುಣ್ ಕುಮಾರ್ ಸನ್ಮಾನಿಸಿ ಮಾತನಾಡಿ, 94ರಲ್ಲಿ ಗುಜ್ಜಾಡಿ ಪಶು ಚಿಕಿತ್ಸಾಲಯದಲ್ಲಿ ತನ್ನ ವೃತ್ತಿ ಜೀವನ ಆರಂಭಿಸಿದ ಕೃಷ್ಣ ಅವರು, ಅನಂತರ ಹೆಮ್ಮಾಡಿ, ಬೈಂದೂರು ಹಾಗೂ ನಾಡ ಪಶು ಚಿಕಿತ್ಸಾಲಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸುದೀರ್ಘ 32 ವರ್ಷಗಳ ಕಾಲ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ನಾಡ ಗ್ರಾಮದ ಕುರುವಿನ ಹಿತ್ತಲಿನಲ್ಲಿ ಜನಿಸಿದ ಕೃಷ್ಣ ಅವರು, 5 ವರ್ಷಗಳ ಕಾಲ ನಾಡ ಗ್ರಾ.ಪಂ.ನ ಪಂಪು ಚಾಲಕನಾಗಿ, ಪಡುಕೋಣೆ ಯುವಜನ ಸಂಘಟನೆಯಲ್ಲಿ ಹಲವಾರು ವರ್ಷಗಳ ಕಾಲ ಜನಪರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಕ್ಷರತಾ ಆಂದೋಲನ ಕಾರ್ಯಕ್ರಮದಲ್ಲೂ ಸಕ್ರಿಯರಾಗಿದ್ದರು. ಅವರನ್ನು ಇಲಾಖೆ, ನಾಡ ಗ್ರಾಮಸ್ಥರು, ಹೈನುಗಾರರಿಂದ ಸನ್ಮಾನಿಸಲಾಯಿತು. ನಾಡ ಗ್ರಾ.ಪಂ. ಆಡಳಿತಾಧಿಕಾರಿ ನಾಗೇಶ್, ಪಿಡಿಒ ಹರೀಶ್, ಹೆಮ್ಮಾಡಿ ಪಶು ಚಿಕಿತ್ಸಾಲಯದ ವೈದ್ಯ ಡಾ. ನಾಗರಾಜ, ಗುಜ್ಜಾಡಿ ಪಶು ಚಿಕಿತ್ಸಾಲಯದ ವೈದ್ಯ ಡಾ. ಅರುಣ್ ಕುಮಾರ್, ಸಹಾಯಕ ರಾಘವೇಂದ್ರ ಉಪಸ್ಥಿತರಿದ್ದರು. ಡಾ. ಹರೀಶ್ ಸ್ವಾಗತಿಸಿ, ವಂದಿಸಿದರು.

ಜಗತ್ತಿನ ಸೇವೆಯಲ್ಲಿ ರೆಡ್‌ಕ್ರಾಸ್ ಅನನ್ಯ : ಡಾ. ಅಶೋಕ್‌ಕುಮಾರ್



ಉಡುಪಿ: ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಕಳೆದ ಒಂದೂವರೆ ಶತಮಾನಗಳಿಂದ ಜಗತ್ತಿನ ವಿವಿಧೆಡೆ ಮಾನವೀಯ ಸೇವೆ ಸಲ್ಲಿಸಿದೆ. ಪ್ರಕೃತಿ ವಿಕೋಪ ಮತ್ತು ಯುದ್ಧ ಸಂದರ್ಭದಲ್ಲಿ ಅದು ಸಲ್ಲಿಸಿದ ಸೇವೆ ಅನನ್ಯವಾದುದು. ಈ ದೃಷ್ಟಿಯಿಂದಲೇ ಅರ್ಹವಾಗಿಯೇ ನಾಲ್ಕು ಬಾರಿ ನೊಬೆಲ್ ಪ್ರಶಸ್ತಿ ಪಡೆದಿದೆ. ಉಡುಪಿ ಜಿಲ್ಲಾ ರೆಡ್ ಕ್ರಾಸ್ ರಾಜ್ಯದಲ್ಲೆ ಪ್ರತಿಷ್ಠಿತವಾಗಿದೆ ಎಂದು ಜಿಲ್ಲಾ ರೆಡ್‌ಕ್ರಾಸ್ ಉಪಸಭಾಪತಿ ಡಾ. ಅಶೋಕ್ ಕುಮಾರ್ ವೈ.ಜಿ. ಹೇಳಿದರು.

ಅವರು ಜಿಲ್ಲಾ ರೆಡ್‌ಕ್ರಾಸ್ ಘಟಕದಲ್ಲಿ ರೆಡ್‌ಕ್ರಾಸ್ ದಿನಾಚರಣೆಯ ಅಂಗವಾಗಿ ರೆಡ್‌ಕ್ರಾಸ್ ಸ್ಥಾಪಕ ಹೆನ್ರಿ ಡ್ಯುನಾಂಟ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಜಿಲ್ಲಾ ರೆಡ್ ಕ್ರಾಸ್ ಕಾರ್ಯದರ್ಶಿ ಡಾ. ಗಣನಾಥ ಎಕ್ಕಾರು ಸ್ವಾಗತಿಸಿದರು. ರೆಡ್ ಕ್ರಾಸ್ ಇತಿಹಾಸವನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಫಲಾನುಭವಿಗಳಿಗೆ ಶ್ರವಣ ಸಾಧನ ಮತ್ತು ಗೃಹಪಯೋಗಿ ಸಾಮಾಗ್ರಿಗಳನ್ನು ವಿತರಿಸಲಾಯಿತು. ಹೈಕೋರ್ಟ್ ವಕೀಲ ಶ್ರೀಕಾಂತ್ ಶಂಕರನಾರಾಯಣ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ನೋಡಲ್ ಅಧಿಕಾರಿ ಜಯಶ್ರೀ, ರೆಡ್ ಕ್ರಾಸ್, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಮತ್ತು ವಾರ್ತಾ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು. ಜಿಲ್ಲಾ ರೆಡ್ ಕ್ರಾಸ್ ಖಜಾಂಚಿ ರಮಾದೇವಿ ವಂದಿಸಿದರು.

ಕೋಟ: ನಾದ ಸಂಗೀತ ಲಹರಿ ಬೇಸಿಗೆ ಸಂಗೀತ ಶಿಬಿರ ಸಂಪನ್ನ



ಕೋಟ: ಸಂಗೀತ ಶಿಕ್ಷಕಿ ಭಾಗ್ಯೇಶ್ವರಿ ಜಿ. ಮಯ್ಯ ನೇತೃತ್ವದ ಛಾಯಾತರಂಗಿಣಿ ಸಂಗೀತ ಶಾಲೆ ವತಿಯಿಂದ ಮೂರು ದಿನಗಳ ನಾದ ಸಂಗೀತ ಲಹರಿ ಬೇಸಿಗೆ ಸಂಗೀತ ಶಿಬಿರ ಕೋಟದ ಮಹಿಳಾ ಮಂಡಳಿಯಲ್ಲಿ ಸಂಪನ್ನಗೊಂಡಿತು.

ಉಡುಪಿಯ ವಿದ್ವಾನ್ ಮಧೂರು ಪಿ. ಬಾಲಸುಬ್ರಹ್ಮಣ್ಯಂ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಿದ್ಧಾಪುರದ ಕೃಷಿಕ ರಂಗನಾಥ ಉಡುಪ ವಹಿಸಿದ್ದರು. ಕೋಟ ಮಹಿಳಾ ಮಂಡಳಿ ಅಧ್ಯಕ್ಷೆ ಗೀತಾ ಎ. ಕುಂದರ್, ಖಜಾಂಚಿ ಸುಶೀಲಾ ಸೋಮಶೇಖರ್ ಇದ್ದರು. ಮಣಿಪಾಲದ ವಿದುಷಿ ಉಷಾ ಹೆಬ್ಬಾರ್, ಕೋಟೇಶ್ವರದ ಸಂಗೀತ ಶಿಕ್ಷಕಿ ಸುಧಾ ರಾಜಗೋಪಾಲ, ಬ್ರಹ್ಮಾವರದ ಸಂಗೀತ ಶಿಕ್ಷಕಿ ಪಲ್ಲವಿ ಕೆದ್ಲಾಯ, ಸಂಗೀತ ಶಿಕ್ಷಕಿ ಆಶಾ ತಿಮ್ಮಪ್ಪ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಜಿ. ಗೋಪಾಲಕೃಷಷ್ಣ ಮಯ್ಯ ನಿರ್ವಹಿಸಿದರು. ಸ್ಮಿತಾ ರಾವ್, ಜ್ಯೋತಿ ಕೆದ್ಲಾಯ, ಸಂಧ್ಯಾ ಪೈ ಸಹಕರಿಸಿದರು.

ಬೆಳಪು ವ್ಯವಸಾಯ ಸಹಕಾರಿ ಸಂಘದಲ್ಲಿ ದಾಖಲೆಯ ಲಾಭಾಂಶ: ಡಾ. ದೇವಿಪ್ರಸಾದ್ ಶೆಟ್ಟಿ

ಪಡುಬಿದ್ರಿ: ಬೆಳಪು ವ್ಯವಸಾಯ ಸಹಕಾರಿ ಸಂಘದಲ್ಲಿ 2025-26ನೇ ಸಾಲಿನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಿನ ಪ್ರಗತಿ ದಾಖಲಿಸಿ ಗ್ರಾಮೀಣ ಪ್ರದೇಶದಲ್ಲಿ ಉನ್ನತವಾದ ಸಾಧನೆಯನ್ನು ಮಾಡಿದೆ. ಮುಂದಿನ ವರ್ಷ ರೂ. ಒಂದು ಸಾವಿರ ಕೋಟಿ ವಾರ್ಷಿಕ ವ್ಯವಹಾರವನ್ನು ನಡೆಸುವ ಗುರಿ ಹೊಂದಿದೆ. ಪ್ರಸಕ್ತ ವರ್ಷ 8.55 ಕೋಟಿ ಸಾರ್ವಕಾಲಿಕ ಲಾಭ ಗಳಿಸಿದ್ದು, ವಾರ್ಷಿಕ ಲಾಭ ರೂ. 2,24,78,306 ಆಗಿದೆ. ಸದಸ್ಯರಿಗೆ ಶೇ. 14 ಡಿವಿಡೆಂಡ್ ನೀಡಲಾಗುವುದೆಂದು ಬೆಳಪು ಸಹಕಾರಿ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ತಿಳಿಸಿದ್ದಾರೆ.



ಉಚ್ಚಿಲದ ಸ್ವಂತ ಜಾಗದಲ್ಲಿ 3.70 ಕೋಟಿ ವೆಚ್ಚದಲ್ಲಿ ಬಹುಮಹಡಿ ಕಟ್ಟಡದಲ್ಲಿ ವಿವಿಧೋದ್ದೇಶ ಸಹಕಾರಿ ಮಹಲ್ ಸ್ಥಾಪನೆಯಾಗಿದ್ದು, ಇದರಲ್ಲಿ ಶಾಪಿಂಗ್ ಮಹಲ್, ಎರಡು ವಿಶಾಲವಾದ ಸಹಕಾರಿ ಸಭಾಂಗಣಗಳು, ಡಾ. ಎಂ.ಎನ್.ಆರ್ ಕಾನ್ಫರೆನ್ಸ್ ಹಾಲ್, ರೈತರ ದಾಸ್ತಾನು ಕೊಠಡಿ ಮೂಲಕ ಸಂಘಕ್ಕೆ ಆದಾಯದ ಮೂಲ ಹಾಗೂ ನೂರಾರು ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದೆ. ಇದರೊಂದಿಗೆ ಉಚ್ಚಿಲದಲ್ಲಿ ವಿಶಾಲವಾದ ಹವಾನಿಯಂತ್ರಿತ ಬ್ಯಾಂಕಿಂಗ್ ಶಾಖೆಯಲ್ಲಿ ಅತ್ಯುತ್ತಮ ವ್ಯವಹಾರ ನಡೆಸುತ್ತಿದೆ. ಈಗ ಸಾರ್ವಜನಿಕರ ಅನುಕೂಲತೆಗಾಗಿ ಸಭಾಂಗಣಕ್ಕೆ ಲಿಫ್ಟ್ ವ್ಯವಸ್ಥೆಗೊಳಿಸಲಾಗಿದೆಂದರು.

ಮೂಳೂರು ಶಾಖೆಯ ನವೀಕರಣ

ಮೂಳೂರು ರಾಷ್ಟ್ರೀಯ ಹೆದ್ದಾರಿ 66ಕ್ಕೆ ತಾಗಿಕೊಂಡಿರುವ ಬ್ಯಾಂಕಿನ ಸ್ವಂತ ಜಾಗದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣಗೊಂಡಿದೆ. ಈಗ ಕೆಳ ಅಂತಸ್ತಿನಲ್ಲಿ ಹವಾನಿಯಂತ್ರಿತ ಬ್ಯಾಂಕಿಂಗ್ ಶಾಖೆ ನವೀಕರಣಗೊಳಿಸಿ ಗ್ರಾಹಕರಿಗೆ ಅನುಕೂಲವಾಗುವ ರೀತಿಯಲ್ಲಿ ಮಾರ್ಪಡಿಸಲಾಗಿದೆ. ಎಲ್ಲೂರು ಗ್ರಾ.ಪಂ. ವ್ಯಾಪ್ತಿಯಲ್ಲಿ ಸ್ವಂತ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಿ ಬ್ಯಾಂಕಿಂಗ್ ವ್ಯವಹಾರ ಮತ್ತು ಪಡಿತರ ವಿತರಣಾ ಕೇಂದ್ರ ಸ್ಥಾಪಿಸಲಾಗಿದೆ. ಬೆಳಪುವಿನಲ್ಲಿ ಸ್ವಂತ ಜಾಗದಲ್ಲಿ ಹವಾನಿಯಂತ್ರಿತ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಪಡಿತರ ವಿತರಣಾ ಕೇಂದ್ರ ಕಾರ್ಯಾಚರಿಸುತ್ತಿದೆ.

ದಾಖಲೆಯ ಸಾಧನೆ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆ ಮತ್ತು ಮನೆ ಬಾಗಿಲಿಗೆ ಬ್ಯಾಂಕಿಂಗ್ ವ್ಯವಸ್ಥೆ ಅನುಷ್ಠಾನಗೊಳಿಸಲಾಗಿದ್ದು ಬ್ಯಾಂಕಿನ ಸದಸ್ಯರಿಗೆ 24 ಗಂಟೆಯಲ್ಲಿ ತುರ್ತು ಸಾಲದ ಯೋಜನೆಯನ್ನು ಕೃಷಿ ಮತ್ತು ಹೈನುಗಾರರಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯದ ವ್ಯವಸ್ಥೆ ಕಲ್ಪಿಸಲಾಗಿದೆ.

ನವೋದಯ ಸ್ವಸಹಾಯ ಸಂಘಗಳ ಸಶಕ್ತೀಕರಣ ಸುಮಾರು 309ಕ್ಕೂ ಮಿಕ್ಕಿ ನವೋದಯ ಸ್ವಸಹಾಯ ಸಂಘಗಳನ್ನು ರಚಿಸಿ ಅದರ ಸದಸ್ಯರ ಬೇಡಿಕೆಗೆ ಅನುಗುಣವಾಗಿ 3.20 ಕೋಟಿ ಸಾಲ ಸೌಲಭ್ಯ ಹಾಗೂ ಇತರ ಸೇವೆಗಳನ್ನು ನೀಡಲಾಗುತ್ತಿದೆ. ಠೇವಣಿದಾರರಿಗೆ ಆಕರ್ಷಕ ಬಡ್ಡಿದರದೊಂದಿಗೆ ವಿಮಾ ಸೌಲಭ್ಯವನ್ನೂ ನೀಡಲಾಗುತ್ತಿದೆ. ಸಂಪೂರ್ಣ ಕಂಪ್ಯೂಟರೀಕೃತ ಬ್ಯಾಂಕಿಂಗ್ ವ್ಯವಸ್ಥೆ, ದಿನದ 24 ಗಂಟೆಯೂ ಆಧುನಿಕ ಶೈಲಿಯ ತಂತ್ರಜ್ಞಾನ ಭದ್ರತಾ ವ್ಯವಸ್ಥೆ, ಗ್ರಾಹಕರ ಸೌಲಭ್ಯಕ್ಕೆ ಹೊಂದುವಂತೆ ಬಡಾ ಉಚ್ಚಿಲ ಮತ್ತು ಪಣಿಯೂರಿನ ಪ್ರಧಾನ ಕಛೇರಿಯಲ್ಲಿ ಸೇಫ್ ಲಾಕರ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಯುವಕರಿಗೆ ಮಹಿಳೆಯರಿಗೆ ಸ್ವ ಉದ್ಯೋಗ, ಕೈಗಾರಿಕೆಗೆ ಸಾಲದ ಸೌಕರ್ಯ, ಚಿನ್ನಾಭರಣ, ವಸತಿ ಸಹಿತ ಎಲ್ಲಾ ರೀತಿಯ ಸಾಲದ ಸೌಲಭ್ಯವನ್ನು ಗ್ರಾಹಕರಿಗೆ ನೀಡಲಾಗುತ್ತಿದೆ. ಸಂಘದ ಎಲ್ಲಾ ಶಾಖೆಗಳಲ್ಲಿ ಪಡಿತರ ವಿತರಣಾ ಕೇಂದ್ರ ಪ್ರಧಾನ ಕಛೇರಿಯಲ್ಲಿ ರೈತರಿಗಾಗಿ ರಾಸಾಯನಿಕ ಗೊಬ್ಬರ ಮಾರಾಟದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸರ್ಕಾರ ಅಥವಾ ಯಾವುದೇ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಪಡೆಯದೇ ನಮ್ಮ ಸಂಘ ಸ್ವತಂತ್ರವಾಗಿ ವ್ಯವಹಾರಗಳನ್ನು ನಡೆಸುತ್ತಿದೆ. ಸಂಘವು 2001-02ರಿಂದ ನಿರಂತರವಾಗಿ ಉತ್ತಮ ಪ್ರಗತಿಯನ್ನು ಸಾಧಿಸುತ್ತಾ ಬಂದಿದ್ದು ಲೆಕ್ಕಪರಿಶೋಧನಾ ಇಲಾಖೆಯವರಿಂದ 'ಎ' ಶ್ರೇಣಿಯ ಸಹಕಾರಿ ಸಂಘವಾಗಿ ಪರಿವರ್ತನೆಗೊಂಡಿದೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಕಳೆದ 11 ವರ್ಷಗಳಿಂದ ಅತ್ಯುತ್ತಮ ಸಹಕಾರಿ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಳ್ಳುತ್ತಿದೆ. ಸಂಘವು ಅತ್ಯುತ್ತಮ ಲಾಭದೊಂದಿಗೆ ಸಾಲ ವಸೂಲಾತಿಯಲ್ಲಿ ಶೇ. 98 ಸಾಧನೆಯನ್ನು ದಾಖಲಿಸಿದೆ.

ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗುತ್ತಿದೆ. ಸ್ಥಳೀಯ ಉಚ್ಚಿಲ, ಬೆಳಪು ಮತ್ತು ಪಣಿಯೂರಿನ ಸರಕಾರಿ ಶಾಲೆಯ ತಲಾ ಒಂದು ಅಧ್ಯಾಪಕರಿಗೆ ಸಂಭಾವನೆ ನೀಡುತ್ತಾ ಬಂದಿದೆ. ಹಿರಿಯ ನಾಗರಿಕರಿಗೆ ಠೇವಣಾತಿಯಲ್ಲಿ 0.5% ಹೆಚ್ಚಿನ ಬಡ್ಡಿ ಮತ್ತು ಫೋನ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ನೀಡುವುದರ ಮೂಲಕ ವಯೋವೃದ್ಧರಿಗೆ ಶಕ್ತಿ ನೀಡುವ ವ್ಯವಸ್ಥೆ ರೂಪಿಸಲಾಗಿದೆ. ಸಂಘದ ಸದಸ್ಯರಿಗೆ ಪ್ರತೀ ವರ್ಷವೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಸಂಘದ ಉಪಾಧ್ಯಕ್ಷೆ ದ್ಯುಮಣಿ ಆರ್. ಭಟ್ ಉಚ್ಚಿಲ, ನಿರ್ದೇಶಕರಾದ ಪಾಂಡು ಶೆಟ್ಟಿ ಎಲ್ಲೂರು, ಅಲಿಯಬ್ಬ ಉಚ್ಚಿಲ, ಸೈಮನ್ ಡಿಸೋಜ ಮಣಿಯೂರು, ಪಾಂಡು ಶೇರಿಗಾರ ಪಣಿಯೂರು, ಗೋಪಾಲ ಪೂಜಾರಿ ಬೆಳಪು, ಸಾಧು ಶೆಟ್ಟಿ ಕುಂಜೂರು, ಅನಿತಾ ಆನಂದ, ಮೀನ ಪೂಜಾರ್ತಿ, ವಿಮಲಾ ಅಂಚನ್, ಸುಂದರಿ ಕುಲಾಲ್ ಹಾಗೂ ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರತಿನಿಧಿ ಬಾಲ ಗೋಪಾಲ್ ಬಲ್ಲಾಳ್ ಮತ್ತು ಬ್ಯಾಂಕಿನ ಸಿಇಒ ಸುಲೋಚನಾ ಹಾಗೂ ಎಲ್ಲಾ ಶಾಖೆಯ ವ್ಯವಸ್ಥಾಪಕರು ಸಹಕಾರ ಸಂಘದ ಯಶಸ್ಸಿಗೆ ಕಾರಣವೆಂದು ಡಾ. ದೇವಿಪ್ರಸಾದ್ ಶೆಟ್ಟಿ ತಿಳಿಸಿದ್ದಾರೆ.